"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೈದನೆಯ ಅಧಿವೇಶನ

## ವಿಷಯಾನುಕ್ರಮಣಿಕೆ (Index)

ದಿನಾಂಕ:14ನೇ ಡಿಸೆಂಬರ್ 2021
ಮಂಗಳವಾರ

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**214+176-ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಜಾಗದಲ್ಲಿ ವಸ್ತು ಸಂಗ್ರಹಾಲಯ ನಿರ್ಮಿಸುತ್ತಿರುವ ಬಗ್ಗೆ**
-ಶ್ರೀ ಕಾಂತರಾಜ್(ಬಿಎಂಎಲ್)
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**179- ಸ್ಮಾರ್ಟ್‌ಸಿಟಿ ಯೋಜನೆ ಕುರಿತು**
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು) (ಬೆಂಗಳೂರುಹೊರತುಪಡಿಸಿ)

**209- ಉಡುಪಿ ನಗರಕ್ಕೆ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆಯ ಕುರಿತು**
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
-ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು) (ಬೆಂಗಳೂರು ಹೊರತುಪಡಿಸಿ)

**169-ಹಾಸನ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನ ಸದಸ್ಯತ್ವ ಪಡೆಯುವ ಬಗ್ಗೆ**
-ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
ಶ್ರೀ ಎಂ.ಎ.ಗೋಪಾಲಸ್ವಾಮಿಯವರ ಪರವಾಗಿ
-ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)

**221-ಬೀದರ ಜಿಲ್ಲೆಯ ಕೈಗಾರಿಕೆಗಾಗಿ ಮೀಸಲಿಡಲಾದ ನಿವೇಶನ/ಶೆಡ್‌ಗಳ ಕುರಿತು**
-ಶ್ರೀ ಅರವಿಂದ ಕುಮಾರ್ ಅರಳಿ
-ಶ್ರೀ ಎನ್.ನಾಗರಾಜ(ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**161-ಕಸ ವಿಲೇವಾರಿ ಘಟಕದಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಕುರಿತು**

-ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
-ಶ್ರೀ ಎನ್.ನಾಗರಾಜ(ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು)

**192-ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಪರಿಸರ ಪುನಶ್ಚೇತನ ಕುರಿತು**

-ಶ್ರೀ ಪಿ.ಆರ್.ರಮೇಶ್
-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**235+240-ಸೋಮನಹಳ್ಳಿ ಕೈಗಾರಿಕೆ ಪ್ರದೇಶದಲ್ಲಿ ಅನಧಿಕೃತ ವಸತಿ ಬಡಾವಣೆ ರಚಿಸಿದ ಬಗ್ಗೆ**

-ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
-ಶ್ರೀ ಮರಿತಿಬ್ಬೇಗೌಡ
-ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**228-ಎಸ್.ಸಿ.ಪಿ/ಟಿ.ಎಸ್.ಪಿ. ಅನುದಾನ ಕುರಿತು**

-ಶ್ರೀ ಶಶೀಲ್ ಜಿ.ನಮೋಶಿ
-ಎನ್.ನಾಗರಾಜು(ಎಂ.ಟಿ.ಬಿ)(ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**195-ಕೊಡಗು ಜಿಲ್ಲೆಯಲ್ಲಿ ಮರಳು ಪೂರೈಕೆ ಕುರಿತು**

-ಶ್ರೀಮತಿ ಎಸ್.ವೀಣಾ ಅಚ್ಚಯ್ಯ
-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**237+236-ಶಾಸಕರ ಅನುದಾನದಲ್ಲಿ ವಿಕಲಚೇತನರಿಗಾಗಿ ಉದ್ಯೋಗಕ್ಕೆ ಅನುದಾನ ಒದಗಿಸುವ ಕುರಿತು**

-ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
-ಶ್ರೀ ಅರುಣ ಶಹಾಪುರ
--ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**229-ನಿರುದ್ಯೋಗಿ ಪದವೀಧರರಿಗೆ ಸ್ವಯಂ ಉದ್ಯೋಗ ಪ್ರಾರಂಭಿಸಲು ಪ್ರೋತ್ಸಾಹಿಸಲು ಹಮ್ಮಿಕೊಂಡಿರುವ ಯೋಜನೆಗಳ ಕುರಿತು ಮಾಹಿತಿ ನೀಡುವ ಬಗ್ಗೆ**

-ಶ್ರೀ ಎಸ್.ವ್ವಿ.ಸಂಕನೂರ
-ಎನ್.ನಾಗರಾಜು(ಎಂ.ಟಿ.ಬಿ)(ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**251-ರಾಜ್ಯದ ಅಂಗನವಾಡಿಗಳಲ್ಲಿ ಪೂರೈಕೆ ಆಗುತ್ತಿರುವ ಆಹಾರ ಪದಾರ್ಥಗಳ ಕುರಿತು**

-ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಪ್ರಕಟಣೆಗಳು**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಕೆ.ಪಿ.ಎಸ್.ಸಿ. ಮೂಲಕ ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ಹುದ್ದೆಗಳಿಗೆ ಇಂದು ನಡೆಸುವ ಪರೀಕ್ಷೆಯನ್ನು ರೈಲು ವಿಳಂಬದಿಂದಾಗಿ ಮುಂದೂಡುವ ಬಗ್ಗೆ.**

-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**ಆ)ಬಂಜಾರದ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಮೂಲ ಸೌಕರ್ಯ ಒದಗಿಸುವ ಕುರಿತು.**

-ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀ ಆರ್. ಅಶೋಕ(ಕಂದಾಯ ಸಚಿವರು)

**ಇ) ಮಂಗಳೂರು ವಿಮಾನ ನಿಲ್ದಾಣಕ್ಕೆ ಕೋಟಿ ಚನ್ನಯ್ಯರ ಹೆಸರನ್ನು ಮರುನಾಮಕರಣ ಮಾಡುವ ಬಗ್ಗೆ.**

-ಶ್ರೀ ಕೆ.ಹರೀಶ್ ಕುಮಾರ್
-ಶ್ರೀ ಆರ್.ಅಶೋಕ(ಕಂದಾಯ ಸಚಿವರು(ಮುಖ್ಯಮಂತ್ರಿಗಳ ಪರವಾಗಿ)

**ಈ) ಅಕಾಲಿಕ ಮಳೆಯಿಂದಾಗಿ ಅತಿವೃಷ್ಟಿ ಪ್ರವಾಹದಿಂದ ಬೆಳೆ ನಷ್ಟ ಅನುಭವಿಸುತ್ತಿರುವ ರೈತರುಗಳಿಗೆ ಎನ್.ಡಿ.ಆರ್.ಎಫ್. ಪರಿಹಾರದ ಜೊತೆಗೆ ಹೆಚ್ಚುವರಿ ಪರಿಹಾರ ನೀಡುವ ಬಗ್ಗೆ**

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**ಉ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳ ಸೇವೆಗೆ ಭದ್ರತೆ ನೀಡುವ ಕುರಿತು.**

- ಶ್ರೀ ಅರುಣ ಶಹಾಪುರ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)(ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಊ) ಕಡ್ಡಾಯ ಸೇವೆ ಸೇರಿರುವ ಕಿರಿಯ ವೈದಾಧಿಕಾರಿಗಳಿಗೆ ವೇತನ ಬಿಡುಗಡೆ ಕುರಿತು**

- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಋ) ಅತಿಥಿ ಮತ್ತು ಅರೆಕಾಲಿಕ ಉಪನ್ಯಾಸಕರುಗಳಿಗೆ ಕಳೆದ ಒಂದು ವರ್ಷದಿಂದ ವೇತನ ಮಂಜೂರಾಗದಿರುವ ಕುರಿತು.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಮುರುಗೇಶ್ ಆರ್.ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಎ) ರಾಜ್ಯದಲ್ಲಿ ನಾಡು ನುಡಿ ಮತ್ತು ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸುತ್ತಿರುವ ಸಂಘ-ಸಂಸ್ಥೆಗಳ ನಿವೇಶನಗಳು/ಕಟ್ಟಡಗಳ ನವೀಕರಣಕ್ಕೆ ಶೇಕಡ 10ರಷ್ಟು ಗುತ್ತಿಗೆ ಶುಲ್ಕ ವಿಧಿಸುತ್ತಿರುವ ಕುರಿತು.**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಮುರುಗೇಶ್ ಆರ್.ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**ಏ) ಹಂಪಿ ಕನ್ನಡ ವಿಶ್ವವಿದ್ಯಾಲಯದ ಬಗ್ಗೆ.**

- ಡಾ: ತಳವಾರ ಸಾಬಣ್ಣ
- ಶ್ರೀ ಮುರುಗೇಶ್ ಆರ್.ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)

**4. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**5.ವರದಿಗಳನ್ನೊಪ್ಪಿಸುವುದು**

**6. ಸದನ ಸಮಿತಿ ಹಾಗೂ ವಿಶೇಷ ಜಂಟಿ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವನೆಗಳು**

**7. ಕೆ.ಪಿ.ಎಸ್.ಸಿ. ಪರೀಕ್ಷೆ ಬರೆಯಬೇಕಾಗಿದ್ದ ಅಭ್ಯರ್ಥಿಗಳಿಗೆ ರೈಲು ವಿಳಂಬದಿಂದ ಪರೀಕ್ಷೆ ಬರೆಯಲು ಸಾಧ್ಯವಾಗದೇ ಇರುವ ಬಗ್ಗೆ.**

- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ಪ್ರಶ್ನೆಗಳಿಗೆ ಹಾಗೂ ನಿಯಮ 330ರ ಅಡಿಯಲ್ಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಇಲಾಖೆಗಳಿಂದ ಉತ್ತರ ಬಾರದಿರುವ ಬಗ್ಗೆ.**

-ಶ್ರೀ ಕೆ.ಟಿ.ಶ್ರೀಕಂಠೇಗೌಡ

-ಶ್ರೀ ಎಸ್.ಎಲ್.ಭೋಜೇಗೌಡ
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**9. ಗಮನ ಸೆಳೆಯುವ ಸೂಚನೆ**

**"ಬೆಂಗಳೂರು ಉತ್ತರ ತಾಲ್ಲೂಕಿನ "ಚಾಗಲಟ್ಟಿ" ಗ್ರಾಮದ ಕೆರೆಯ ಮಧ್ಯಭಾಗದಲ್ಲಿ ಕೆಲವು ಭೂಗಳ್ಳರು ರಸ್ತೆಯನ್ನು ನಿರ್ಮಿಸಿ ಕೆರೆಯ ಸ್ವರೂಪವನ್ನು ವಿರೂಪಗೊಳಿಸಿ ಭೂಕಬಳಿಕೆ ಮಾಡಿರುವ ಗಂಭೀರ ವಿಷಯದ ಕುರಿತು."**

-ಡಾ: ವೈ.ಎ.ನಾರಾಯಣಸ್ವಾಮಿ
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಎಸ್.ಎಲ್.ಭೋಜೇಗೌಡ
-ಶ್ರೀ ಪಿ.ಆರ್.ರಮೇಶ್
-ಡಾ: ತೇಜಸ್ವಿನಿಗೌಡ
-ಶ್ರೀ ಸಿ.ಎಂ.ಇಬ್ರಾಹಿಂ
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
-ಶ್ರೀ ನಸೀರ್ ಅಹ್ಮದ್
-ಶ್ರೀ ಬಿ.ಕೆ.ಹರಿಪ್ರಸಾದ್

**10. ನಿಯಮ 330ರ ಮೇರೆಗೆ ಚರ್ಚೆ**

**ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 2004ರಲ್ಲಿ ನಿರ್ಮಾಣಗೊಂಡಿರುವ ಕೇಂದ್ರ ಕಛೇರಿಯ ಆವರಣದಲ್ಲಿರುವ ಕಟ್ಟಡಗಳನ್ನು ಕೆಡವಿ ಬಹುಮಹಡಿಯ "ಬಿ.ಡಿ.ಎ. ಅಭಿವೃದ್ಧಿ ಭವನ"ವನ್ನು ನಿರ್ಮಾಣ ಮಾಡುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ಬಗ್ಗೆ.**

-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯ ಮಂತ್ರಿಗಳ ಪರವಾಗಿ)
-ಶ್ರೀ ಪಿ.ಆರ್.ರಮೇಶ್
-ಶ್ರೀ ನಸೀರ್ ಅಹ್ಮದ್
-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಯು.ಬಿ.ವೆಂಕಟೇಶ್

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಆ)ಅನುದಾನ ಮತ್ತು ಅನುದಾನರಹಿತ ಶಾಲೆಗಳ ಮಾನ್ಯತೆ ನವೀಕರಣ ಮಾಡುವ ಸಂಬಂಧ ಇಲಾಖೆಯಿಂದ ರೂಪಿಸಿರುವ ನಿಯಮಾವಳಿಗಳ ಕುರಿತು.**

-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಎಸ್.ಎಲ್.ಭೋಜೇಗೌಡ
-ಶ್ರೀ ಮರಿತಿಬ್ಬೇಗೌಡ
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
-ಶ್ರೀ ಎನ್.ರವಿಕುಮಾರ್
-ಶ್ರೀ ಪುಟ್ಟಣ್ಣ
-ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು)
-ಶ್ರೀ ಅರುಣ ಶಹಾಪುರ
-ಶ್ರೀ ಶಶೀಲ್ ಜಿ.ನಮೋಶಿ
-ಡಾ:ತೇಜಸ್ವಿನಿ ಗೌಡ
-ಡಾ: ವೈ.ಎ.ನಾರಾಯಣಸ್ವಾಮಿ
-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

~~~~~~~~~~

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~~~~

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

**ಮಂಗಳವಾರ, 14ನೇ ಡಿಸೆಂಬರ್ 2021**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 01 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1057) 14-12-2021 KH/BNS 11-00

## 01. ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 214+176**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕಾಂತರಾಜ್ (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿರುವ ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಬಗ್ಗೆ ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಕಳೆದ ಅಧಿವೇಶನದಲ್ಲಿಯೂ ಕೂಡ ಈ ಪ್ರಶ್ನೆಯನ್ನು ಕೇಳಿದ್ದೆನು. ಸರ್ಕಾರ ಟ್ರಸ್ಟ್ ಮಾಡಬೇಕೆಂದು ಚಿಂತನೆ ಮಾಡುತ್ತಿದೆ. ಇದನ್ನು ಟ್ರಸ್ಟ್ ಮಾಡಬೇಡಿ, ಸರ್ಕಾರ ತನ್ನ ಅಧೀನದಲ್ಲಿಯೇ ಇಟ್ಟುಕೊಳ್ಳಿ. ಯಾವುದೇ ಕಾರಣಕ್ಕೂ ಟ್ರಸ್ಟ್ ಮಾಡಬಾರದು. ಟ್ರಸ್ಟ್ ಮಾಡಿದರೆ ಪ್ರಯೋಗವಾಗುವಂತಹ ಸಂದರ್ಭಗಳು ಹೆಚ್ಚು ಇರುತ್ತದೆ. ಹಾಗಾಗಿ ಟ್ರಸ್ಟ್ ಮಾಡಬೇಡಿ ಎಂದು ಕೊಟ್ಟಿದ್ದೇವೆ. ಕಳೆದ ಅಧಿವೇಶನದಲ್ಲಿ ಇದಕ್ಕೆ 5 ಜನ ಶ್ರೇಷ್ಠ ವ್ಯಕ್ತಿಗಳನ್ನು ಮಾಡಿ, ಟ್ರಸ್ಟ್ ಮಾಡುತ್ತೇವೆ ಎಂದು ಹೇಳಿದ್ದರು. ನಂತರ ಕೈಗಾರಿಕಾ ವ್ಯವಸ್ಥೆಯಲ್ಲಿ ಮ್ಯೂಜಿಯಂ ರೀತಿ ಮಾಡುತ್ತೇವೆ. ಅಲ್ಲಿ ಒಂದು ಷೋಕೇಸ್ ವ್ಯವಸ್ಥೆ ಮಾಡುತ್ತೇವೆ ಎಂದು ಮಾನ್ಯ ಸಚಿವರು ಮಾಹಿತಿಯನ್ನು ಕೊಟ್ಟಿದ್ದರು. ಕಸ್ತೂರಿಬಾ ರಸ್ತೆಯಲ್ಲಿ ವೆಂಕಟಪ್ಪ ಗ್ಯಾಲರಿ ಎನ್ನುವ ಮ್ಯೂಜಿಯಂ ಇದೆ. ಅಲ್ಲಿ ವರ್ಷಕ್ಕೆ 50 ಜನರು ಸಹ ಸರಿಯಾಗಿ ಹೋಗುವುದಿಲ್ಲ. ನಾನು ಸರ್ಕಾರದಲ್ಲಿ ವಿಶೇಷವಾಗಿ ಮನವಿ ಮಾಡುವುದೇನೆಂದರೆ, ತಾವು ಯಾವುದೇ ಕಾರಣಕ್ಕೂ ಟ್ರಸ್ಟ್ ಮಾಡಬೇಡಿ. ಹಾರ್ಟ್ ಆಫ್ ದಿ ಸಿಟಿ ಇದೆ. ತಾವು ಈಗ greenery ಗೆ ಒತ್ತು ಕೊಡಿ. ಇಲ್ಲದಿದ್ದರೆ ಪಾರ್ಕ್ ಮಾಡಿ. ಇಲ್ಲದಿದ್ದರೆ ಸಾರ್ವಜನಿಕರಿಗೆ ಅನುಕೂಲವಾಗುವ ಹಾಗೆ ಏನಾದರೂ ಮಾಡಿ. ಈಗಾಗಲೇ ಬೆಂಗಳೂರು ನಗರದಲ್ಲಿ ಟ್ರಾಫಿಕ್ ಜಾಸ್ತಿಯಾಗಿದೆ. ತಾವು ಇಂಡಸ್ಟ್ರಿ ವ್ಯವಸ್ಥೆ ಏನೇ ಮಾಡಬೇಕಾದರೂ ಕೂಡ ತುಮಕೂರಿನಲ್ಲಿ ಮಾಡಿ. ಇಲ್ಲದಿದ್ದರೆ ನೆಲಮಂಗಲದಲ್ಲಿರುವ ದಾಬಸ್‌ಪೇಟೆಯಲ್ಲಿ ಮಾಡಿ. ಬಿಡದಿಯಲ್ಲಿರುವ industrial estate ನಲ್ಲಿ ಮಾಡಿ. ದಯಮಾಡಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಶ್ರೇಷ್ಠ ವ್ಯಕ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಕೊಟ್ಟಿಲ್ಲ. ಮಾನ್ಯ ಸಚಿವರಲ್ಲಿ ವಿಶೇಷವಾಗಿ ಮನವಿ ಮಾಡುತ್ತೇನೆ. ಆ ವ್ಯಕ್ತಿಗಳ ಹೆಸರುಗಳನ್ನು ಹೇಳಬೇಕು. ಯಾವ ರೀತಿ ಮಾನದಂಡ ಮಾಡುತ್ತೀರಿ ಎಂಬುದರ ಬಗ್ಗೆ ಮಾಹಿತಿಯನ್ನು ತಿಳಿಸಬೇಕು. ಅದಕ್ಕಿಂತ ಹೆಚ್ಚಾಗಿ ಟ್ರಸ್ಟ್ ಮಾಡಬೇಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಇದರ ಬದಲು ಆಸ್ಪತ್ರೆಗಳು, ಇಂಜಿನಿಯರಿಂಗ್ ಕಾಲೇಜುಗಳನ್ನು ಮಾಡಿ. ಸರ್ಕಾರದ ವ್ಯವಸ್ಥೆಗೇ ಜಾಗಗಳು ಇಲ್ಲ. ಎಷ್ಟೋ ಸರ್ಕಾರಿ ಕಛೇರಿಗಳು

---

ಬಾಡಿಗೆಯಲ್ಲಿ ನಡೆಯುತ್ತಿದೆ. ನ್ಯಾಷನಲ್ ಹೈವೇನವರು ಯಾವುದೋ ಮೂಲೆಯಲ್ಲಿ ಬಾಡಿಗೆಯಲ್ಲಿ ಇದ್ದಾರೆ. ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ. ಬೇರೆ ಬೇರೆ ಸರ್ಕಾರದ ವ್ಯವಸ್ಥೆಯಲ್ಲಿಯೇ ಇದೆ. ಇದರ ಬಗ್ಗೆ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾದ ಮಾನ್ಯ ಕಾಂತರಾಜ್ (ಬಿಎಂಎಲ್) ರವರು ಸಂಪೂರ್ಣವಾಗಿ ಆ ಟ್ರಸ್ಟ್ ಬಗ್ಗೆ ತಿಳಿದುಕೊಂಡಿಲ್ಲ ಎಂದು ನಾನು ಭಾವಿಸುತ್ತೇನೆ. ಆ ಟ್ರಸ್ಟ್‌ಗೆ ಯಾವುದೇ ರೀತಿಯಲ್ಲಿ ಜಮೀನನ್ನು ಹಸ್ತಾಂತರ ಮಾಡುವುದಿಲ್ಲ. ಮೊದಲನೆಯದಾಗಿ, ಆ ಟ್ರಸ್ಟ್‌ನಲ್ಲಿ ಇರುವಂತಹವರು 7 ಜನ ಸೀನಿಯರ್ ಐ.ಎ.ಎಸ್. ಆಫೀಸರ್‌ಗಳು ಇರುತ್ತಾರೆ. ಈಗಾಗಲೇ ಅವರ designation ಅನ್ನು ನಿಗದಿ ಮಾಡಿದ್ದೇವೆ. ಇದಕ್ಕೆ ನಮ್ಮ ಮುಖ್ಯ ಕಾರ್ಯದರ್ಶಿಯವರು ಅಧ್ಯಕ್ಷರಾಗಿರುತ್ತಾರೆ. ಇದರಲ್ಲಿ Development Commissioner ರವರು ಸದಸ್ಯರಿರುತ್ತಾರೆ. Urban Development Department ನ Additional Chief Secretary ರವರು ಇರುತ್ತಾರೆ. ಬಿ.ಬಿ.ಎಂ.ಪಿ., ಕಮೀಷನರ್ ಇರುತ್ತಾರೆ. Environment ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಇರುತ್ತಾರೆ. ನಮ್ಮ Commerce and Industries Department ನ ಕಮೀಷನರ್ ಇರುತ್ತಾರೆ. ಈ ರೀತಿ ಟ್ರಸ್ಟ್‌ನಲ್ಲಿ 7 ಜನ designation-wise nominated Members ಇರುತ್ತಾರೆ. ನಂತರ ನಮ್ಮ ರಾಜ್ಯದಲ್ಲಿರುವಂತಹ 5 ಜನ ಪ್ರತಿಷ್ಠಿತ ವ್ಯಕ್ತಿಗಳನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಈಗಾಗಲೇ ಇಬ್ಬರನ್ನು ನಾಮಿನೇಟ್ ಮಾಡಲಾಗಿದೆ. ಇದರಲ್ಲಿ ಶ್ರೀ ಪ್ರಕಾಶ್ ಎನ್ನುವಂತಹವರು ಒಂದು ದೊಡ್ಡ ಕಂಪನಿಯ ಸಿ.ಇ.ಓ., ಆಗಿದ್ದಾರೆ. ಅವರ ಹತ್ತಿರ guidance ತೆಗೆದುಕೊಳ್ಳುವ ಸಲುವಾಗಿ ಇವರನ್ನು ನೇಮಕ ಮಾಡಿದ್ದೇವೆ. ಮತ್ತು ಶ್ರೀ ನರಸಿಂಹನ್ ಎನ್ನುವವರು entire design ಮಾಡುವುದಕ್ಕೆ Architect ಇದ್ದಾರೆ. ಇವರು ಬೋರ್ಡ್‌ನಲ್ಲಿ ಇದ್ದರೆ ಗೈಡ್ ಮಾಡುವುದಕ್ಕೆ ಸರಿ ಇರುತ್ತದೆ ಎನ್ನುವುದನ್ನು ಮಾಡಿದ್ದೇವೆ. ಈಗ ಇರುವಂತಹದ್ದನ್ನು ಮಾರಾಟ ಮಾಡುವುದಾಗಲೀ, ಹಸ್ತಾಂತರ ಮಾಡುವುದಾಗಲೀ ಯಾವುದೇ ರೀತಿ ಇರುವುದಿಲ್ಲ. ಇಲ್ಲಿ ಟ್ರಸ್ಟ್‌ಗೂ ಸಹಿತ ಜಮೀನು ಇರುವುದಿಲ್ಲ ಎಂದು ನಾನು ಈ ಸದನಕ್ಕೆ ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಹೆಸರಿನಲ್ಲಿಯೇ ಇದೆ. ಮೈಸೂರು ಲ್ಯಾಂಪ್ಸ್ ಹೆಸರಿನಿಂದಲೇ ಮುಂದುವರೆಯುತ್ತದೆ. NGEF ಹೆಸರಿನಲ್ಲಿಯೇ ಮುಂದುವರೆಯುತ್ತದೆ. ಇದನ್ನು development ಮಾಡುವುದಕ್ಕೆ ಮಾತ್ರ ಈ ಟ್ರಸ್ಟ್ ಇರುತ್ತದೆ. ಇದನ್ನು ಖಾಸಗಿಯವರಿಗೆ ಮಾರಾಟ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎನ್ನುವಂತಹದ್ದನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ಈಗಾಗಲೇ site improvement ಮಾಡುವುದಕ್ಕೆ ಮಾತ್ರ ಇದರಲ್ಲಿ ಅನುಕೂಲತೆ ಇರುತ್ತದೆ. ಇನ್ನೊಂದು ಬಹಳ ಮುಖ್ಯವಾಗಿ ಹೇಳುವುದೇನೆಂದರೆ, ನಮ್ಮ ಆ ಜಾಗದಲ್ಲಿ greenery development ಮಾಡುವುದಕ್ಕೆ ಒಂದು garden ಮಾಡುವಂತಹದ್ದು ಆಗಿರಬಹುದು. ಸಂಪೂರ್ಣವಾದಂತಹ ಬೆಂಗಳೂರನ್ನು ಷೋಕೇಸ್

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಮಾಡುವಂತಹದ್ದು ಇದೆ. ನಾವು ಬೇರೆ ಬೇರೆ ಮುಂದುವರೆದ ದೇಶಗಳಿಗೆ ಹೋದಾಗ ಚೈನಾ, ಜಪಾನ್ ಇರಬಹುದು. ಒಂದೇ ಕಟ್ಟಡದಲ್ಲಿ entire area ದ್ದು with scale ಅವರು ಮಾಡೆಲ್ ಮಾಡಿ ಇಡುತ್ತಾರೆ. ಇದಕ್ಕೆ ನಾವು ಬಿ.ಬಿ.ಎಂ.ಪಿ. ಕಡೆಯಿಂದ ಕ್ಲಿಯರೆನ್ಸ್ ಕೊಡುತ್ತೇವೆಯಲ್ಲವೇ, ಆ ಕ್ಲಿಯರೆನ್ಸ್ ಕೊಡುವಂತಹ ಸಂದರ್ಭದಲ್ಲಿ ಆ ಮಾಡೆಲ್ ಯಾವ ಸ್ಥಳದಲ್ಲಿ ಬರುತ್ತದೆಯೆಂದು ಗುರುತಿಸಿ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ನೇರವಾಗಿ ಉತ್ತರವನ್ನು ಹೇಳಿ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಇದರ ಸಲುವಾಗಿ ಯಾವುದೇ ರೀತಿಯಲ್ಲಿ ಹಸ್ತಾಂತರ ಮಾಡುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ನನ್ನ ಪ್ರಶ್ನೆ ಕೂಡ ಆಗಿದ್ದು, ಇದನ್ನು ಕ್ಲಬ್ ಮಾಡಲಾಗಿದೆ.

**ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ ಇಲ್ಲ.

**ಡಾ:ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದು ಮಹತ್ವಪೂರ್ಣ ವಿಚಾರವಾಗಿರುವುದರಿಂದ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ನಾನು ಯಾರಿಗೂ ಅವಕಾಶ ಕೊಡುವುದಿಲ್ಲ.

**ಶ್ರೀ ಕಾಂತರಾಜ್ (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಟ್ರಸ್ಟ್ ಮಾಡುತ್ತೇವೆ ಎಂದು ಹೇಳಿದ್ದಾರೆಯಲ್ಲವೇ, ಅದರಲ್ಲಿ ಇವರು clause ಹಾಕಿಲ್ಲ. ಇವರು rent ಗೆ ಕೊಡುವುದಕ್ಕೆ ಆಗುವುದಿಲ್ಲ, long time lease ಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು clause ಹಾಕಿಲ್ಲ. ದಯಮಾಡಿ ಇದನ್ನು ಹಾಕಬೇಕು. ಯಾವುದೇ ಕಾರಣಕ್ಕೂ ಬಿಡಬಾರದು. ಸ್ಥಳೀಯ ವ್ಯಾಪ್ತಿಯಲ್ಲಿರುವಂತಹ ಶಾಸಕರು, ಎಂ.ಎಲ್.ಸಿ., ಮತ್ತು ರಾಜ್ಯಸಭಾ ಸದಸ್ಯರುಗಳನ್ನು ಹಾಕಿಕೊಳ್ಳಿ. ಏಕೆಂದರೆ ಸ್ಥಳೀಯ ಶಾಸಕರಾದ ಅಶ್ವಥ್ ನಾರಾಯಣ್‌ರವರು ಇದ್ದಾರೆ. ತಮ್ಮ ಸಚಿವರು ಇದ್ದಾರೆ. ಇದರಲ್ಲಿ ಅವರನ್ನು ಹಾಕಿಕೊಳ್ಳಿ. ನನ್ನ ಪ್ರಕಾರ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಬೆಂಗಳೂರಿನಲ್ಲಿರುವಂತಹ ಮಾಲಿನ್ಯ ಎಲ್ಲಿಯೂ ಇಲ್ಲ. 22 ಎಕರೆ ಜಮೀನನ್ನು ಏಕೆ ಜಿದ್ದಿಗೆ ಬಿದ್ದು ತೆಗೆದುಕೊಳ್ಳುತ್ತೀರಿ. ಎಲ್ಲಿಯಾದರೂ ಬೇರೆ ಕಡೆಗೆ ಮಾಡಿ. ದಯಮಾಡಿ, ಇದರಿಂದ ಗ್ರಾಮೀಣ ಪ್ರದೇಶದವರಿಗೆ ಅನುಕೂಲವಾಗುತ್ತದೆ ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಹೇಳಲಿ.

**ಶ್ರೀ ಕಾಂತರಾಜ್ (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ನಾವು ಟ್ರಸ್ಟ್ ಬೇಡ ಎಂದು ಹೇಳುತ್ತಿದ್ದೇವೆ. ತಾವು ಆ ಜಾಗದಲ್ಲಿ ಒಂದು ಹೈಟೆಕ್ ಪಾರ್ಕ್ ಅನ್ನು ಮಾಡಿ. ಎರಡನೇ ಲಾಲ್‌ಭಾಗ್, ಕಬ್ಬನ್ ಪಾರ್ಕ್ ರೀತಿಯಲ್ಲಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರ ಬಂದಿದೆ. ಇದರಲ್ಲಿ ಸುಮಾರು . . .

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸದಸ್ಯರೇ ಇದು ನನ್ನ ಪ್ರಶ್ನೆ ಕೂಡ ಆಗಿದೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಇದರಲ್ಲಿ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರ ಪ್ರಶ್ನೆ ಕೂಡ ಇದೆ. ನಾನು ನೋಡಿದ್ದೇನೆ. ತಾವು ಕುಳಿತುಕೊಳ್ಳಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಸುಮಾರು 11 ಪ್ರಕರಣಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ employees ಗೆ ತೀರುವಳಿ ಮಾಡುವುದಕ್ಕೆ ಬಾಕಿ ಇದೆ. ಚಾರಿಟಬಲ್ ಟ್ರಸ್ಟ್‌ಗೂ ಸರ್ಕಾರಕ್ಕೂ ಏನು ಸಂಬಂಧ? ನಾವು ಮಾಡುವಂತಹ ಎಲ್ಲಾ ಕಾರ್ಯಕ್ರಮಗಳು ಚಾರಿಟಬಲ್ ಆಗಿರುತ್ತದೆ. ಸರ್ಕಾರ ಚಾರಿಟಬಲ್ ಟ್ರಸ್ಟ್ ಅನ್ನು ಏಕೆ ಮಾಡಬೇಕು? ಇದಕ್ಕೂ ಅದಕ್ಕೂ ಏನು ಸಂಬಂಧ? ನಾಳೆ ದಿವಸ ಟ್ರಸ್ಟ್‌ನಲ್ಲಿ fraud ಆದರೆ, breach of trust ಆದರೆ ಅದನ್ನು ನೋಡುವವರು ಯಾರು? ತಾವು ದಯಮಾಡಿ ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ. ಇದಕ್ಕೆ ಎನ್.ಜಿ.ಇ.ಎಫ್.ನವರು ಒಂದು ಅರ್ಜಿಯನ್ನು ಹಾಕಿದ್ದಾರೆ. ಇದು windup ಆಗಿದೆ. Recall ಮಾಡುತ್ತಾರೆ. 120 ಎಕರೆ ಜಾಗವನ್ನು ತೆಗೆದುಕೊಂಡು ಈ ಟ್ರಸ್ಟ್‌ಗೆ ಕೊಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ಕೆಲಸ ಮಾಡಿ. Half an hour discussion ಗೆ convert ಮಾಡಲು ಒಂದು ಪತ್ರವನ್ನು ಕೊಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಇದನ್ನು convert ಮಾಡಿ. ಚರ್ಚೆ ಮಾಡಲು ಎಲ್ಲರಿಗೂ ಅವಕಾಶ ಮಾಡಿಕೊಡಿ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದನ್ನು convert ಮಾಡಿ. ಇದು ಬಹಳ ಪ್ರಮುಖವಾದ ವಿಷಯವಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, agreed. Half an hour discussion ಗೆ convert ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 179**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳಿದ ಮೂಲ ಉದ್ದೇಶವೇನೆಂದರೆ, ಸ್ಮಾರ್ಟ್ ಸಿಟಿಯನ್ನು ಸುಂದರ ನಗರಗಳು, ಕನಸಿನ ನಗರಗಳು ಹಾಗೂ ಅಚ್ಚುಕಟ್ಟು ನಗರಗಳನ್ನು ಈ ರೀತಿಯಾಗಿ ಅಭಿವೃದ್ಧಿಪಡಿಸುತ್ತಾರೆ. ಅದರಲ್ಲಿಯೂ ಕೂಡ ಬೆಳಗಾವಿಗೆ ಸಂಬಂಧಪಟ್ಟಂತೆ ಇರುವಂತಹ ಈ ಸ್ಮಾರ್ಟ್ ಸಿಟಿಯನ್ನು ಈ ರೀತಿ ಆಗುವುದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ ಎನ್ನುವ ದೃಷ್ಟಿಯಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಇದರ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ, ಇದು ತಾತ್ಕಾಲಿಕವಾಗಿ ಒಂದು ಸಾರಿ ಆಗಬಾರದು. ನಾನು ಕೇಳಿದ ಮಟ್ಟಿಗೆ ಕೆಲವೊಂದು ಬಾರಿ ಏನು ಆಗುತ್ತದೆಯೆಂದರೆ, ಎಲ್ಲಾ ಅಭಿವೃದ್ಧಿಗಳು ಕೂಡ ಸಮನ್ವಯವಾಗುವುದಿಲ್ಲ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಷ್ಟು ಮಾತ್ರ ರಸ್ತೆ ಮತ್ತು ಒಳಚರಂಡಿಗಳನ್ನು ಮಾಡುತ್ತಾರೆ. ಎಲ್ಲಾ ರೀತಿಯ ಸರ್ವಾಂಗೀಣ ಅಭಿವೃದ್ಧಿ ಆಗುವುದಿಲ್ಲ. Retrofitting ದೃಷ್ಟಿಯಲ್ಲಿ ಮಾಡುತ್ತಿದ್ದಾರೆ. ಈ ದೃಷ್ಟಿಯಲ್ಲಿ ನಾನೇನು ಹೇಳುತ್ತಿದ್ದೇನೆಂದರೆ, ಈ ಸ್ಮಾರ್ಟ್ ಸಿಟಿ ಯೋಜನೆ ಇರುವವರೆಗೂ ಮಾತ್ರ ನಡೆಯುತ್ತದೆ.

(ಮುಂದು)

(1058) ಎಸ್‌ಪಿಆರ್/ಬಿಎನ್‌ಎಸ್ 11:10 14/12/2021

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಒಂದು ಬಾರಿ ಸ್ಮಾರ್ಟ್ ಸಿಟಿ ಯೋಜನೆ ಪೂರ್ಣಗೊಂಡ ನಂತರ ಅಭಿವೃದ್ಧಿಪಡಿಸಿರುವ ಮೂಲಭೂತ ಸೌಕರ್ಯಗಳ ನಿರ್ವಹಣೆ ಮತ್ತು ಅವುಗಳನ್ನು ಕಾಪಾಡಿಕೊಳ್ಳುವ ದೃಷ್ಟಿಯಲ್ಲಿ ಸರ್ಕಾರದ ಬೇರೆ ಬೇರೆ ಇಲಾಖೆಗಳಾದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿದ್ಯುತ್ ಸರಬರಾಜು ಮಾಡುವ ಎಸ್ಕಾಂ ಸಂಸ್ಥೆ, ತೋಟಗಾರಿಕೆ, ಅರಣ್ಯ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಥವಾ ಪೊಲೀಸ್ ಯಾವುದೇ ಇರಬಹುದು; 'ಸ್ಮಾರ್ಟ್ ಸಿಟಿ' ಯೋಜನೆಯು ಪೂರ್ಣವಾಗಿ ಅನುಷ್ಠಾನಗೊಂಡ ನಂತರ ಇಂತಹ ವ್ಯವಸ್ಥೆಗಳನ್ನು ಮುಂದುವರೆಸುವುದಕ್ಕಾಗಿ ಸರ್ಕಾರವು ವ್ಯವಸ್ಥೆಗಳನ್ನು ಮಾಡಿದೆಯೇ ಎನ್ನುವ ಮಾಹಿತಿಯನ್ನು ನೀಡಬೇಕೆಂದು ನಾನು ಕೋರಿಕೊಳ್ಳುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವ ಪ್ರಶ್ನೆಗೆ ವಿಸ್ತೃತವಾಗಿ ಉತ್ತರವನ್ನು ಒದಗಿಸಲಾಗಿದೆ. ಸದಸ್ಯರು ಕೇವಲ ಬೆಳಗಾವಿ ನಗರಕ್ಕೆ ಸೀಮಿತವಾಗಿ

ಮಾತ್ರವೇ ಪ್ರಶ್ನೆಯನ್ನು ಕೇಳಿದ್ದಾರೆ. 'ಸ್ಮಾರ್ಟ್ ಸಿಟಿ' ಯೋಜನೆಯ ಕಾಮಗಾರಿಗಳು ಪೂರ್ಣಗೊಂಡು ಇವುಗಳನ್ನು ಯಾವ ರೀತಿಯಾಗಿ ನಿರ್ವಹಣೆ ಮಾಡಲಾಗುತ್ತದೆ ಎಂಬ ಬಗ್ಗೆ ಕೇಳಿದ್ದಾರೆ; ಇದರ ಬಗ್ಗೆ ನನಗೆ ಯಾವುದೇ ರೀತಿಯಾದ ಮಾಹಿತಿಯು ಇಲ್ಲ. 'ಸ್ಮಾರ್ಟ್ ಸಿಟಿ' ಯೋಜನೆಯ ಕಾಮಗಾರಿಗಳು ಶೇಕಡಾ 73 ರಷ್ಟು ಇನ್ನೂ ಪ್ರಗತಿಯಲ್ಲಿವೆ. ಒಂದು ಬಾರಿ ಇವುಗಳು ಪೂರ್ಣಗೊಂಡ ನಂತರ ಇದರ ಬಗ್ಗೆ ಯಾವ ರೀತಿಯಾದ ತೀರ್ಮಾನವನ್ನು ಸರ್ಕಾರವು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನಿಸಲಾಗುವುದು. ಸ್ಮಾರ್ಟ್ ಸಿಟಿ ಯೋಜನೆಯಡಿ ಹಲವಾರು ರಸ್ತೆಗಳನ್ನು ಸುಂದರೀಕರಣ ಮಾಡಿ, ವಿದ್ಯುದ್ದೀಪಗಳನ್ನು ಅಳವಡಿಸಲಾಗಿದೆ. ಹೀಗಾಗಿ ಇವುಗಳನ್ನು ಯಾರು ನಿರ್ವಹಣೆ ಮಾಡುತ್ತಾರೆಂಬುದರ ಬಗ್ಗೆ ಸದಸ್ಯರು ಕೇಳಿದ್ದಾರೆ. ಇವತ್ತಿನ ದಿನ ಮಹಾನಗರ ಪಾಲಿಕೆಗಳು ಬಹಳ ವೇಗವಾಗಿ ಬೆಳೆಯುತ್ತಿವೆ ಹಾಗೂ ಇವುಗಳಿಗೆ ಹೆಚ್ಚು ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡುತ್ತಿದೆ. ಹೀಗಾಗಿ ಇವುಗಳ ನಿರ್ವಹಣೆಯನ್ನು ಮಹಾನಗರ ಪಾಲಿಕೆಗಳಿಗೆ ವಹಿಸಬೇಕೆಂಬ ಚಿಂತನೆಯನ್ನು ನಡೆಸಲಾಗುತ್ತಿದೆ. ಸದಸ್ಯರು ಪ್ರಸ್ತಾಪಿಸಿರುವುದು ಸಮಂಜಸವಾಗಿದೆ. ಅಗತ್ಯವಿರುವಂತೆ ಮುಂದಿನ ದಿನಗಳಲ್ಲಿ ಸರ್ಕಾರವು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. 'ಸ್ಮಾರ್ಟ್ ಸಿಟಿ' ಯೋಜನೆಯಡಿ ರಾಜ್ಯದ 7 ನಗರಗಳು ಆಯ್ಕೆಗೊಂಡಿವೆ. ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಇಡೀ ದೇಶದಲ್ಲಿ 'ಸ್ಮಾರ್ಟ್ ಸಿಟಿ' ಯೋಜನೆಯಡಿ 110 ನಗರಗಳನ್ನು ಆಯ್ಕೆ ಮಾಡಿದ್ದಾರೆ. ದೇಶದ ಎಲ್ಲಾ ನಗರಗಳು ಅತ್ಯುತ್ತಮವಾಗಬೇಕು ಎನ್ನುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೊಳಿಸಿದ್ದು, ಇದು ಪ್ರಧಾನ ಮಂತ್ರಿಗಳ ಕನಸಿನ ಕೂಸಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನವನ್ನು ಬಿಡುಗಡೆ ಮಾಡಿವೆ. ಬೆಳಗಾವಿ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳಿಗಾಗಿ ಸರ್ಕಾರವು ಈಗಾಗಲೇ 580 ಕೋಟಿ ರೂಪಾಯಿಗಳನ್ನು ವ್ಯಯಿಸಿದೆ. ಇನ್ನುಳಿದ ಕಾಮಗಾರಿಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಬೇಕೆಂಬ ಸೂಚನೆಗಳನ್ನೂ ಸಹ ನೀಡಲಾಗಿದೆ. ಈ ವಿಚಾರದಲ್ಲಿ ನಾನು ಹತ್ತು ಬಾರಿ ಪರಿಶೀಲಿಸಿದ್ದೇನೆ ಹಾಗೂ ಆಯ್ಕೆಗೊಂಡ ಪ್ರತಿಯೊಂದು ಸ್ಮಾರ್ಟ್ ಸಿಟಿಗೆ 4-5 ಬಾರಿ ಭೇಟಿ ನೀಡಿ, ಅಲ್ಲಿನ ಅಧಿಕಾರಿಗಳೊಂದಿಗೆ ಚರ್ಚಿಸಿ, ಎಲ್ಲಾ ರೀತಿಯ ಸೂಚನೆಗಳನ್ನು ನೀಡಿದ್ದೇನೆ. ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಂತೆ ಶ್ರೀ ಕೆ.ಎಸ್.ಈಶ್ವರಪ್ಪರವರೂ ಸಹ ನಮ್ಮೊಂದಿಗೆ ಇದ್ದು, ಈ ಸಂಬಂಧ ಎಲ್ಲಾ ರೀತಿಯ ಸೂಚನೆಗಳನ್ನು ಅವರೂ ಸಹ ನೀಡಿದ್ದಾರೆ. ಯೋಜನೆಯ ಕಾಮಗಾರಿಗಳಲ್ಲಿ ಯಾವುದೇ ವಿಳಂಬವಾಗದಂತೆ, ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಸೂಚನೆಗಳನ್ನು ನೀಡಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಸುಮಾರು 199.67 ಕೋಟಿ ರೂಪಾಯಿಗಳ ವೆಚ್ಚದ ಯೋಜನೆಯ ಇನ್ನೂ 6 ಕಾಮಗಾರಿಗಳು ಬಾಕಿ ಇದ್ದು, ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ಎಂದು ಕೇಳಬಯಸುತ್ತೇನೆ. ಸ್ಮಾರ್ಟ್ ಸಿಟಿ ಯೋಜನೆಯು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಪೂರ್ಣಗೊಂಡ ನಂತರ ಬೆಳಗಾವಿ ನಗರ ಪಾಲಿಕೆಯನ್ನು ಆರ್ಥಿಕವಾಗಿ ಸದೃಢಗೊಳಿಸಲು ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ? ಏಕೆಂದರೆ, ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳ ನಿರ್ವಹಣೆ ಮಾಡದಿದ್ದರೆ, ಅವುಗಳು ಹಾಳಾಗಿ ಹೋಗುತ್ತವೆ. ನಗರ ಪಾಲಿಕೆಗಳ ಆಡಳಿತವನ್ನು ಸದೃಢಗೊಳಿಸಲು ಯಾವ ರೀತಿಯ ವ್ಯವಸ್ಥೆ ಅಥವಾ ಯೋಜನೆಗಳನ್ನು ಮಾಡಿಕೊಂಡಿದೆ ಎನ್ನುವುದೇ ನನ್ನ ಪ್ರಶ್ನೆಯ ಮೂಲೋದ್ದೇಶವಾಗಿದೆ. ಏಕೆಂದರೆ, ಸ್ಮಾರ್ಟ್ ಸಿಟಿಯಾಗಿ ಆಯ್ಕೆಗೊಂಡ ಎಲ್ಲಾ ನಗರಗಳಿಗೂ ಸಹ ಇದು ಅನ್ವಯಿಸುತ್ತದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿದಂತೆ, ಯೋಜನೆಯ ಇನ್ನೂ 4 ಕಾಮಗಾರಿಗಳು ಬಾಕಿಯಿವೆ. ಏಕೆಂದರೆ, ಕೆಲವು ಯೋಜನೆಗಳಿಗೆ ಸಂಬಂಧಪಟ್ಟಂತೆ ಸೇನೆಯವರೊಂದಿಗೆ ಕೆಲವು ನ್ಯೂನತೆಗಳಿದ್ದು, ಅವರು ನಮಗೆ ಅನುಮತಿ ನೀಡಿರಲಿಲ್ಲ. ಈಗ ಕಾಮಗಾರಿಗಳನ್ನು ಚಾಲನೆಗೊಳಿಸಲು ನಮಗೆ ಅನುಮತಿ ದೊರೆತಿದ್ದು, ನಾವು ಕಾಮಗಾರಿಗಳನ್ನು ಪ್ರಾರಂಭಿಸಿದ್ದೇವೆ. ಅತೀ ಶೀಘ್ರದಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸುವ ಕೆಲಸಗಳನ್ನು ಸರ್ಕಾರವು ಮಾಡುತ್ತಿದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಕಾಮಗಾರಿಗಳನ್ನು ಯಾವ ರೀತಿಯಾಗಿ ನಿರ್ವಹಣೆ ಮಾಡಬೇಕೆಂದು ಸದಸ್ಯರು ಸಲಹೆ ನೀಡಿದ್ದಾರೆ. ಈ ಬಗ್ಗೆ ನಾನು ಸರ್ಕಾರದ ಮತ್ತು ಅಧಿಕಾರಿಗಳ ಹಂತದಲ್ಲಿ ಚರ್ಚೆ ಮಾಡಿ, ಮುಂದಿನ ದಿನಗಳಲ್ಲಿ ಸೂಕ್ತವಾದ ನಿರ್ಧಾರವನ್ನು ಸರ್ಕಾರವು ತೆಗೆದುಕೊಳ್ಳುತ್ತದೆ ಎಂದು ತಿಳಿಯಬಯಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 209**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಉತ್ತರಿಸಿದೆ. ಆದರೆ ಲಿಖಿತ ಉತ್ತರದಲ್ಲಿ ತಿಳಿಸಿರುವ ಮೂರು ಕಾಮಗಾರಿಗಳು ಯಾವುವು ಎಂದು ತಿಳಿಸಿದರೆ ಒಳ್ಳೆಯದು.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲೆಗೆ ಶುದ್ಧ ಕುಡಿಯುವ ನೀರಿನ ಯೋಜನೆಗಾಗಿ ಈಗಾಗಲೇ ಸುಮಾರು 290.04 ಕೋಟಿ ರೂಪಾಯಿಗಳ ಅಂದಾಜು ವೆಚ್ಚವನ್ನು ಯೋಜನೆಯ ಸಂದರ್ಭದಲ್ಲಿ ಮಾಡಲಾಗಿದ್ದು, 2023 ನೇ ವರ್ಷಕ್ಕೆ ಇದರ ಅವಧಿಯು ಪೂರ್ಣಗೊಳ್ಳಬೇಕು ಎನ್ನುವ ತೀರ್ಮಾನವನ್ನು ಅಂದಿನ ಸರ್ಕಾರಗಳು ತೆಗೆದುಕೊಂಡಿತ್ತು. ಹಾಲಿ ಟೆಂಡರ್‌ನ ಮೊತ್ತ 277.39 ಕೋಟಿ ರೂಪಾಯಿಗಳಷ್ಟಾಗಿದೆ. ಕುಡಿಯುವ ನೀರಿನ ಯೋಜನೆಗಾಗಿ ವಾರಾಹಿ ನದಿಯಿಂದ ಯಾವ ಕಾರಣಕ್ಕಾಗಿ ನೀರನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಸದಸ್ಯರು ಪ್ರಶ್ನಿಸಿದ್ದಾರೆ. ವಾರಾಹಿ ನದಿಯ ನಾಲೆಯಿಂದ ಯೋಜನೆಗಾಗಿ ನೀರನ್ನು ತೆಗೆದುಕೊಳ್ಳಲಾಗುತ್ತಿದೆ. ಏಕೆಂದರೆ, ವಾರಾಹಿ ನದಿಯ ನೀರು ಬೇಸಿಗೆಯ ಸಂದರ್ಭದಲ್ಲಿ ಬತ್ತಿ ಹೋಗುತ್ತಿದೆ. ಆಗ ಉಡುಪಿ ನಗರ ಸಭೆಗೆ ನೀರನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಈ ಕಾರಣಕ್ಕಾಗಿ ಯೋಜನೆಯ ಅನುಷ್ಠಾನಕ್ಕಾಗಿ ನದಿಯ ನೀರಿನ ಮೂಲದಿಂದ ನೀರನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಿಕೊಂಡಿದೆ. ಉಡುಪಿ ನಗರ ಸಭೆಗೆ ಸಮರ್ಪಕವಾಗಿ ನೀರು ಸರಬರಾಜು ಮಾಡುವುದು ಸರ್ಕಾರದ ಉದ್ದೇಶವಾಗಿದೆ. ಇದರಿಂದ ಖಾಸಗಿ ವಿದ್ಯುತ್ ಉತ್ಪಾದನೆಗೆ ಸಹಾಯ ಮಾಡುವ ಉದ್ದೇಶ ಸರ್ಕಾರದ್ದಾಗಿದೆ ಎಂದು ಸದಸ್ಯರು ಹೇಳುತ್ತಿದ್ದಾರೆ. ಆದರೆ ಈ ರೀತಿಯಾದ ಯಾವುದೇ ಉದ್ದೇಶಗಳು ಸರ್ಕಾರದ ಮುಂದಿಲ್ಲ, ಹಾಗೂ ಯಾವುದೇ ಪ್ರಸ್ತಾವನೆಗಳೂ ಸಹ ಇಲ್ಲ. ಇವತ್ತಿನ ದಿವಸ ಯೋಜನೆಯ ಮಾರ್ಗ ಮಧ್ಯದಲ್ಲಿರುವ 23 ಗ್ರಾಮಗಳಿಗೆ ಕುಡಿಯುವ ನೀರನ್ನು ಸರ್ಕಾರವು ಸರಬರಾಜು ಮಾಡುತ್ತಿದೆ. ನೀರಿನ ಲಭ್ಯತೆಯ ಆಧಾರದ ಮೇಲೆ ಯೋಜನೆಯನ್ನು ರೂಪಿಸಲಾಗಿದೆ. ಲಿಖಿತ ಉತ್ತರದಲ್ಲಿ ತಿಳಿಸಿದಂತೆ ಕೆ.ಯು.ಐ.ಡಿ.ಎಫ್.ಸಿ. ಸಂಸ್ಥೆಯ ವತಿಯಿಂದ ಉಡುಪಿ ನಗರಕ್ಕೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಯೋಜನೆಯ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸದರಿ ಮೂರು ಕಾಮಗಾರಿಗಳು ಯಾವುವು ಎಂದು ತಿಳಿಸಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮೂರು ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

(1) ಉಡುಪಿ ನಗರಕ್ಕೆ ನೀರು ಮೂಲದ ಅಭಿವೃದ್ಧಿ ಕಾಮಗಾರಿ (ವಾರಾಹಿ ನದಿ ಮೂಲದಿಂದ)

(2) ಉಡುಪಿ ನಗರಕ್ಕೆ ಸಗಟು ನೀರಿನ ಅಭಿವೃದ್ಧಿ ಕಾಮಗಾರಿ (45 ಎಂಎಲ್‌ಡಿ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ ನಿರ್ಮಾಣ)

(3) ಉಡುಪಿ ನಗರಕ್ಕೆ ಕುಡಿಯುವ ನೀರು ಸರಬರಾಜುಗಾಗಿ ವಿತರಣಾ ಜಾಲಗಳ ಅಭಿವೃದ್ಧಿ ಮತ್ತು ವಿಸ್ತರಣೆ ಕಾಮಗಾರಿ

ಉಡುಪಿ ನಗರ ಭಾಗದಲ್ಲಿಯೇ 45 ಎಂಎಲ್‌ಡಿ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕದ ನಿರ್ಮಾಣ ಮಾಡಲಾಗುವುದು. ಮೇಲ್ಕಂಡ ಮೂರು ಯೋಜನೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಕೆಲಸಗಳನ್ನು ಸರ್ಕಾರವು ಮಾಡುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಪ್ರಶ್ನಿತ ಯೋಜನೆಯ ಬಗ್ಗೆ ಸಚಿವರಿಗೆ ಯಾವುದೇ ಮಾಹಿತಿಯೂ ಇಲ್ಲ. ಹಾಗೆಯೇ ಅವುಗಳನ್ನು ನೋಡುವುದಕ್ಕೂ ಸಹ ಅವರು ಸ್ಥಳಗಳಿಗೆ ಭೇಟಿ ನೀಡಿಲ್ಲ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ಸ್ಥಳಕ್ಕೆ ಭೇಟಿ ನೀಡಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಪ್ರಶ್ನಿತ ಯೋಜನೆಯಲ್ಲಿ ವಾರಾಹಿ ಯೋಜನೆಯು ಒಳಗೊಂಡಿದೆ. ಅಲ್ಲಿ 1,100 ಕ್ಯೂಸೆಕ್ಸ್ ಪ್ರಮಾಣದಷ್ಟು ನೀರು ಪ್ರತಿನಿತ್ಯ ಹೊರಗೆ ಬರುತ್ತದೆ. ಈ ನೀರನ್ನು 10 ದಿನಗಳ ಕಾಲ ಶೇಖರಣೆ ಮಾಡುವ ಉದ್ದೇಶದಿಂದ ಆಣೆಕಟ್ಟೆಯೊಂದನ್ನು ನಿರ್ಮಿಸುತ್ತಾರೆ. ಅಲ್ಲಿನ ರೈತರಿಗೆ ನೀರು ಒದಗಿಸುವುದೇ ಈ ಅಣೆಕಟ್ಟೆಯ ಉದ್ದೇಶವಾಗಿದೆ. ಆದರೆ ಅಲ್ಲಿ ಎರಡು ವಿದ್ಯುತ್ ಉತ್ಪಾದನಾ ಘಟಕಗಳನ್ನು ನಿರ್ಮಿಸುತ್ತಾರೆ.

(ಮುಂದು)

(1059)11.20 14-12-2021 CS.GR

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಮುಂದು):-**

ಅದರಲ್ಲಿ ಎರಡು ವಿದ್ಯುತ್ ಉತ್ಪಾದನಾ ಘಟಕಗಳನ್ನು ಮಾಡುತ್ತಾರೆ, ಅದರಲ್ಲಿ ಒಂದು ಶಾಮಿಲಿ ವಿದ್ಯುತ್ ಘಟಕ, ಅದರಲ್ಲಿ 14 ಮೆ.ವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಾರೆ. ಇಲ್ಲಿ ಎರಡು ವಿದ್ಯುತ್ ಘಟಕಗಳನ್ನು ಖಾಸಗಿಯವರು ಮಾಡುತ್ತಿದ್ದಾರೆ. ಖಾಸಗಿ ವಿದ್ಯುತ್ ಘಟಕಕ್ಕೆ ನೀರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಹೋದರೆ ರೈತರಿಗೆ ನೀರು ಸಿಗುವುದಿಲ್ಲ. ರೈತರಿಗೆ ನೀರನ್ನು ಕೊಟ್ಟರೆ ಖಾಸಗಿಯವರಿಗೆ ವಿದ್ಯುತ್ ಉತ್ಪಾದನೆ ಮಾಡಲು ನೀರನ್ನು ನೀಡುವುದಕ್ಕೆ ಆಗುವುದಿಲ್ಲ. ಇದರಿಂದ ರೈತರ ಮತ್ತು ವಿದ್ಯುತ್ ಉತ್ಪಾದಕರ ನಡುವೆ ಸಂಘರ್ಷ ನಡೆಯುತ್ತಿದೆ. ಇದಕ್ಕೆಲ್ಲ ಪೂರಕವಾಗಿ ಈ ಯೋಜನೆಗಳನ್ನು ಹುಟ್ಟು ಹಾಕಲಾಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ ಬೇಕಾದಷ್ಟು ನೀರು ಲಭ್ಯವಿದೆ. ಅಲ್ಲಿ ಉದ್ಯಾವರ, ಮಡಿಸಾಲು, ಸ್ವರ್ಣ, ಸೀತಾ ನದಿಗಳಿವೆ.. ಆದರೆ ಉಡುಪಿ ಜಿಲ್ಲೆಯ ಸುತ್ತಲಿರುವ ನದಿಗಳ ನೀರನ್ನು ಬಳಸದೆ ಉಡುಪಿಯಿಂದ 39ಕಿ.ಮೀ ದೂರದಲ್ಲಿರುವ ವಾರಾಹಿಯಿಂದ ನೀರನ್ನು ತರುತ್ತಿದ್ದೀರಿ. ಕುಡಿಯುವ ನೀರನ್ನು ಆದ್ಯತೆಯ ಮೇರೆಗೆ ಎಲ್ಲಿಗಾದರೂ ಸಹ ಕೊಡಲೇ ಬೇಕು. ಅದಕ್ಕೆ ಅಡ್ಡಿಯಿಲ್ಲ. ಇಲ್ಲಿ ಹೊಳೆಯಿಂದ ನೀರು ಹರಿಸಿದರೆ ಏನು, ಕಾಲುವೆಯಿಂದ ನೀರನ್ನು ಹರಿಸಿದರೆ ಏನು ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಕಾಲುವೆಯಿಂದ ನೀರನ್ನು ಹರಿಸಿದರೆ, ಅಲ್ಲಿ ವಿದ್ಯುತ್ ಉತ್ಪಾದನೆ ಆಗುವುದಿಲ್ಲ, ಬದಲಿಗೆ ನೀರು natural flow ನಲ್ಲಿ Purification Yard ಗೆ ಹೋಗುತ್ತದೆ. ಹೊಳೆಯಿಂದ ನೀರನ್ನು ಹರಿಸುವುದಾದರೆ ನೀರನ್ನು ಲಿಫ್ಟ್ ಮಾಡಿ Purification Yard ಗೆ ಕಳುಹಿಸಬೇಕಾಗುತ್ತದೆ. ಹೊಳೆಯಿಂದ ಹರಿಸುವ ನೀರಿನಿಂದ ವಿದ್ಯುತ್ ಉತ್ಪಾದನೆ ಆಗುತ್ತದೆ. ಹಾಗಾಗಿ ವಿದ್ಯುತ್ ಉತ್ಪಾದನೆಗೆ ಪೂರಕವಾಗಿ ಸರ್ಕಾರ ಈ ಯೋಜನೆಯನ್ನು ಮಾಡಿದೆ. ಒಂದು ಖಾಸಗಿ ವಿದ್ಯುತ್ ಉತ್ಪಾದನೆಯ ಬಗ್ಗೆ ಸರ್ಕಾರ ಏನು ಹೇಳಿದೆ ಎಂದರೆ ನಾಲೆಯಲ್ಲಿ ನೀರು ಲಭ್ಯವಿಲ್ಲದ ಸಂದರ್ಭದಲ್ಲಿ ಮಾತ್ರ ನದಿಯಿಂದ ನೀರನ್ನು ಬಳಸಲಾಗುವುದು ಎಂದು ತನ್ನ ಉತ್ತರದಲ್ಲಿ ಹೇಳಿದೆ. ಹೊಳೆಯಲ್ಲಿ 10 ದಿವಸಗಳಿಗೆ ಆಗುವಷ್ಟು ನೀರಿನ ಸಂಗ್ರಹ ಇರುತ್ತದೆ, ಆ ನೀರು ನಿರಂತರವಾಗಿ ಕಾಲುವೆಗೆ ಬರುತ್ತದೆ, ಇದರ ಮೂಲಕ ಶುದ್ಧ ಕುಡಿಯುವ ನೀರಿಗಾಗಿ ಶುದ್ಧೀಕರಿಸಿ ಉಡುಪಿ ನಗರಕ್ಕೆ ನೀಡಬಹುದು. ಮೊದಲು 6 ತಿಂಗಳು ಕುಡಿಯುವ ನೀರು ಮತ್ತು ೬ ತಿಂಗಳು ವಿದ್ಯುತ್ ಉತ್ಪಾದನೆ ಎಂದಿದ್ದನ್ನು ಇವತ್ತು ನದಿಯಲ್ಲಿ ನೀರು ಇರುವ ತನಕ ಎಂದು ಹೇಳಿದ್ದೀರಿ, ಈ ಕಾಮಗಾರಿಯನ್ನು ವಾರಾಹಿ ನದಿ ಮೂಲದಿಂದ ಮಾಡಲಾಗುವುದು ಎನ್ನುವ ಉತ್ತರವನ್ನು ಸರ್ಕಾರ ನೀಡಿದೆ,

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಗಳೇ, ಖಾಸಗಿ ವಿದ್ಯುತ್ ಉತ್ಪಾದನೆಗಾಗಿ ವಾರಾಹಿ ನದಿಯ ನೀರಿನ ಬಳಕೆ ಮಾಡಲಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಖಾಸಗಿ ವಿದ್ಯುತ್ ಉತ್ಪಾದನೆಗಾಗಿ ನದಿಯ ನೀರಿನ ಬಳಕೆ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ. ಅವರಿಗೆ ಸರ್ಕಾರದಿಂದ ಸಹಕಾರ ನೀಡುವಂತಹ ಪ್ರಶ್ನೆಯೇ ಬರುವುದಿಲ್ಲ. ಹಾಗಾಗಿ ನಾನು ಕೂಡ ಉಡುಪಿ ಜಿಲ್ಲೆಗೆ ಹೋಗಿದ್ದೇನೆ. ಉಡುಪಿಯಲ್ಲಿ ಸ್ಥಳೀಯ ಶಾಸಕರ ಸಹಯೋಗದೊಂದಿಗೆ ಅವರ ಜೊತೆಯಲ್ಲಿ ನಾನು ಸ್ಥಳಕ್ಕೆ ಹೋಗಿದ್ದೇನೆ. ಆ ಸಂದರ್ಭದಲ್ಲಿ ಇನ್ನೂ ಕಾಮಗಾರಿ ನಡೆಯುತ್ತಿದೆ. ಇದು 2023ನೇ ಸಾಲಿಗೆ ಪೂರ್ಣಗೊಳ್ಳುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಬಸವರಾಜುರವರೆ, ನೀವು ಮುಂದಿನ ಸಲ ಉಡುಪಿಗೆ ಹೋಗುವಾಗ ಮಾನ್ಯ ಸದಸ್ಯರನ್ನು ಕೂಡ ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ .

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**:- ಮಾನ್ಯ ಸಭಾಪತಿಯವರೆ, ವಿದ್ಯುತ್ ಉತ್ಪಾದನೆಗಾಗಿ ಇಲ್ಲಿ ನೀರನ್ನು ಬಿಡುತ್ತಿಲ್ಲ. ಉಡುಪಿಯ ಹೊಳೆಗೆ ನೀರನ್ನು ಬಿಟ್ಟರೆ ಇಲ್ಲಿ ವಿದ್ಯುತ್ ಉತ್ಪಾದನೆ ಆಗುತ್ತದೆ.

**ಶ್ರೀ ಬಿ.ಎ.ಬಸವರಾಜು**:- ಮಾನ್ಯ ಸಭಾಪತಿಗಳೇ, ಈ ಕಾಮಗಾರಿ 2023ಕ್ಕೆ ಪೂರ್ಣಗೊಳ್ಳುತ್ತದೆ. ವಿದ್ಯುತ್ ಕೊಡುತ್ತೇವೆಯೋ ಇಲ್ಲವೋ ಎನ್ನುವ ಪ್ರಶ್ನೆ ಕಾಮಗಾರಿ ಮುಗಿದ ಮೇಲೆ ಉದ್ಭವವಾಗುತ್ತದೆ. ಇನ್ನೂ ಕಾಮಗಾರಿ ಪ್ರಗತಿಯ ಹಂತದಲ್ಲಿದೆ. ನಾನು ಈ ವಿಚಾರವಾಗಿ ಉಡುಪಿಗೆ ಹೋಗುತ್ತೇನೆ. ಆಗ ಮಾನ್ಯ ಸದಸ್ಯರನ್ನು ಕೂಡ ಆಹ್ವಾನಿಸಿ, ಅಲ್ಲಿ ಏನಾದರೂ ಡಿಫೆಕ್ಟ್ ಇದ್ದಲ್ಲಿ ಅದನ್ನು ನನ್ನ ಗಮನಕ್ಕೆ ತಂದರೆ ಸರಿಪಡಿಸುವ ಕೆಲಸವನ್ನು ನಾನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಪ್ರಶ್ನೆ ಸಂಖ್ಯೆ 169
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎಂ.ನಾರಾಯಣ ಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)(ಶ್ರೀ ಎಂ.ಎ.ಗೋಪಾಲಸ್ವಾಮಿಯವರ ಪರವಾಗಿ):-** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು 6 ಪುಟಗಳ ಸುದೀರ್ಘವಾದ ಉತ್ತರವನ್ನು ನೀಡಿದ್ದಾರೆ. ಆದರೆ ಮುಖ್ಯವಾದ ವಿಚಾರವನ್ನೇ ಹೇಳಿರುವುದಿಲ್ಲ. ನಾನು ಕೇಳಿರುವ ಮೊದಲನೇ ಮತ್ತು ಎರಡನೆಯ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಚನ್ನರಾಯಪಟ್ಟಣ ತಾಲ್ಲೂಕಿನ ಅರೆಸೋಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ, ಜಂಬೂರು ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಮೂಡನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಗಳು ಒಂದೇ ತಿಂಗಳಿನಲ್ಲಿ ನೋಂದಣಿಯಾಗಿದ್ದು, ಎರಡು ಸಂಘಗಳಿಗೆ ಡಿ.ಸಿ.ಸಿ., ಬ್ಯಾಂಕಿನಿಂದ ಸದಸ್ಯತ್ವವನ್ನು ನೀಡುತ್ತಾರೆ. ಒಂದು ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೀಡುವುದಿಲ್ಲ. ಆ ಸಂಘಕ್ಕೆ ಏಕೆ ಕೊಡಲಿಲ್ಲ, ಅದಕ್ಕೆ ಕಾನೂನಿನಲ್ಲಿ ಏನಾದರೂ ತೊಂದರೆ ಆಗಿದೆಯಾ ಎಂದು ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಅದಕ್ಕೆ ಮಾನ್ಯ ಸಚಿವರು ನಾವು ನಮ್ಮ ಡಿ.ಸಿ.ಸಿ., ಬ್ಯಾಂಕಿನಲ್ಲಿ ಸಭೆಯನ್ನು ನಡೆಸಿ, ಅದರಲ್ಲಿ ಸಹಕಾರ ಪತ್ತಿನ ಸಂಘಗಳು ಲಗತ್ತಿಸಿರುವ ಅರ್ಜಿಯನ್ನು ಪರಿಶೀಲಿಸಿ ಸದಸ್ಯತ್ವವನ್ನು ನೀಡಲಾಗುವುದು ಎಂದು ಹೇಳಿದ್ದಾರೆ. ಒಂದೇ ದಿವಸ ನೋಂದಣಿಯಾಗಿರುವ ೩ ಸಹಕಾರ ಸಂಘಗಳಲ್ಲಿ 2 ಸಂಘಗಳಿಗೆ ಸದಸ್ಯತ್ವವನ್ನು ನೀಡಿ, ಸಾಲ ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೆ ಜಂಬೂರು ಕೃಷಿ ಪತ್ತಿನ ಸಹಕಾರಿ ಸಂಘವನ್ನು ಡಿ.ಸಿ.ಸಿ., ಬ್ಯಾಂಕಿಗೆ ನೋಂದಣಿ ಮಾಡಿಕೊಳ್ಳುವುದಿಲ್ಲ. ಜಂಬೂರು ಕೃಷಿ ಪತ್ತಿನ ಸಂಘದ ವ್ಯಾಪ್ತಿಯ ಅತ್ತಿಹಳ್ಳಿ, ಹುಲಿಕೆರೆ ಹಾಗೂ ತೆಂಕನಹಳ್ಳಿ ಗ್ರಾಮಸ್ಥರು ಸದರಿ ಜಂಬೂರು ಸಂಘವನ್ನು ರಾಜಕೀಯ ಕಾರಣಕ್ಕಾಗಿ ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿ ಸಾಕಷ್ಟು ಕೃಷಿ ಹಿಡುವಳಿ ಭೂಮಿ ಇಲ್ಲದೆ ಇದ್ದರೂ ಸಹ ಜಂಬೂರು ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸಿರುತ್ತಾರೆ. ಸದರಿ ಸಂಘದಲ್ಲಿ ಎಲ್ಲಾ ರೈತರಿಗೆ ಸದಸ್ಯತ್ವ ನೀಡಿರುವುದಿಲ್ಲ ಎನ್ನುವ ಆರೋಪಗಳನ್ನು ಮಾಡಿದ್ದಾರೆ. ಆದರೆ ಇದನ್ನೆಲ್ಲ ಒಂದು ಕೃಷಿ ಪತ್ತಿನ ಸಹಕಾರಿ ಸಂಘಕ್ಕಾಗಿ ಅರ್ಜಿಯನ್ನು ಹಾಕಿದಾಗಲೇ ಈ ಎಲ್ಲಾ ಮಾನದಂಡಗಳನ್ನು ನೋಡಿ ಅರ್ಜಿಯನ್ನು ರಿಜೆಕ್ಟ್ ಮಾಡಬಹುದಿತ್ತು. ಅದರೆ ಸಹಕಾರಿ ಪತ್ತಿನ ಸಂಘವನ್ನು ನೋಂದಣಿ ಮಾಡಿಕೊಂಡು, ಅವರು ಡಿ.ಸಿ.ಸಿ., ಬ್ಯಾಂಕಿನಲ್ಲಿ ತಮಗೆ ಸದಸ್ಯತ್ವವನ್ನು ನೀಡಬೇಕೆಂದು ಕೇಳಿದಂತಹ ಸಂದರ್ಭದಲ್ಲಿ "ಆ ಭಾಗದಲ್ಲಿ ಕೃಷಿ ಜಮೀನು ಸಾಕಷ್ಟು ಪ್ರಮಾಣದಲ್ಲಿ ಇಲ್ಲ, ಮತ್ತು ಎಲ್ಲಾ ರೈತರಿಗೆ ಸರಿಯಾದ ರೀತಿಯಲ್ಲಿ ಸದಸ್ಯತ್ವನ್ನು ನೀಡಿರುವುದಿಲ್ಲ, ರಾಜಕೀಯವಾಗಿ ಕೆಲವು ರೈತರನ್ನು ಮಾತ್ರ ನೋಂದಣಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ. ಆದರೆ ವಾಸ್ತವವಾಗಿ ಈ ಸಂಘದಲ್ಲಿ ಅರ್ಜಿ ಹಾಕಿದ ರೈತರೆಲ್ಲರಿಗೂ ಸದಸ್ಯತ್ವನ್ನು ನೀಡಲಾಗಿದೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾರನ್ನೂ ಸಹ ಹಿಂದಕ್ಕೆ ಕಳುಹಿಸಿಲ್ಲ . ಅದರೂ ಈ ಸಂಘಕ್ಕೆ ಏಕೆ ಈ ರೀತಿಯ ತಾರತಮ್ಯವನ್ನು ಮಾಡಲಾಗಿದೆ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೆ, ಒಂದೇ ದಿವಸ ನೋಂದಣಿಯಾದ ಸಂಘಗಳಲ್ಲಿ 2 ಸಂಘಕ್ಕೆ ಸದಸ್ಯತ್ವವನ್ನು ನೀಡಿ, ಒಂದು ಸಂಘಕ್ಕೆ ನೀಡಿಲ್ಲವೆಂದು ಮಾನ್ಯ ಸದಸ್ಯರು ತಿಳಿಸಿರುವ ವಿಚಾರವು ನನ್ನ ಗಮನಕ್ಕೆ ಬಂದಿದೆ. ಸಂಬಂಧ ಪಟ್ಟ ಡಿ.ಸಿ.ಸಿ., ಬ್ಯಾಂಕಿನ ಅಧ್ಯಕ್ಷರು ಹಾಗೂ ಎಂ.ಡಿ., ಯವರ ಜೊತೆ ಚರ್ಚಿಸಿ ಜಂಬೂರು ಸಹಕಾರ ಪತ್ತಿನ ಸಂಘಕ್ಕೆ ಡಿಸಿಸಿ ಬ್ಯಾಂಕಿನ ಸದಸ್ಯತ್ವವನ್ನು ಕೊಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 221**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಬಹಳ ಸಮರ್ಪಕವಾಗಿ ಉತ್ತರವನ್ನು ನೀಡಿದ್ದಾರೆ. ಆದರೆ ನನ್ನ ನೋವು ಏನೆಂದರೆ ಈ ಸಣ್ಣ ಕೈಗಾರಿಕೆ ಕ್ಷೇತ್ರದಲ್ಲಿ ಎಸ್.ಸಿ ಮತ್ತು ಎಸ್.ಟಿ ಜನಾಂಗದವರು ಅದಕ್ಕೆ ಸರಿಯಾದ ರೀತಿಯಲ್ಲಿ ಸ್ಪಂದನೆ ನೀಡುತ್ತಿಲ್ಲ. ಯಾರಿಗೂ ಸೈಟು ಸಿಗುತ್ತಿಲ್ಲ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

(ಮುಂದು)

(1060)/11-30/14-12-2021/ಎಲ್ಎಂ/ಜಿಆರ್

**ಶ್ರೀ ಅರವಿಂದ ಕುಮಾರ ಅರಳಿ(ಮುಂದು)**:-

ಎಸ್.ಸಿ./ಎಸ್.ಟಿ. ಜನಾಂಗದವರಿಗೆ ಸಿಂಗಲ್ ವಿಂಡೋ ರೀತಿಯ ವ್ಯವಸ್ಥೆಯನ್ನು ತಂದು ಡಿ.ಸಿ., ಯವರ ಅಧೀನದಲ್ಲಿಯೇ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎನ್.ನಾಗರಾಜ(ಎಂ.ಟಿ.ಬಿ)**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವಾಗಿ, ಬೀದರ್ ನಗರದ ಗಾಂಧಿಗಂಜನ ಕೆ.ಎಸ್.ಎಸ್.ಐ.ಡಿ.ಸಿ., ಕೈಗಾರಿಕಾ ಪ್ರದೇಶದಲ್ಲಿ ೧೯೭೧ ರಿಂದ ೨೦೦೦ ವರೆಗೆ ೩೪ ನಿವೇಶಗಳನ್ನು ಹಂಚಿಕೆ ಮಾಡಲಾಗಿದೆ. ೨೨ ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ. ೨೦೦೫ರಲ್ಲಿ ೨೨.೦೫ ಮೀಸಲಾತಿಯ reservation policy ಕಾನೂನು ಬಂದಿರುವುದು. ಆಗ ಭೀಮಪ್ಪ ಎನ್ನುವರೊಬ್ಬರು ಅರ್ಜಿಯನ್ನು ಹಾಕಿದ್ದರು, ಅವರಿಗೆ ಮನೆ ಹಂಚಿಕೆ ಮಾಡಿದ್ದೇವೆ. ೨೨.೦೫ ಮೀಸಲಾತಿಯನ್ನು ಅಳವಡಿಸಿಕೊಂಡು ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ. ಉದಾಹರಣೆಗೆ ೪೨೧ ನಿವೇಶನಗಳ ಪೈಕಿ ೧೨೪ ನಿವೇಶಗಳನ್ನು ಎಸ್.ಸಿ.,/ಎಸ್.ಟಿ., ಜನಾಂಗದವರಿಗೆ ಹಂಚಿಕೆ ಮಾಡಲಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ೨೨.೦೪ ಮೀಸಲಾತಿ ಕಾನೂನು ಬಂದ ಮೇಲೆ ಆ ಮೀಸಲಾತಿ ನಿಯಮಗಳನ್ನು ಅಳವಡಿಸಿಕೊಂಡು ನಿವೇಶನಗಳ ಹಂಚಿಕೆ ಮಾಡಲಾಗಿದೆ. ೨೦೧೧ನೇ ಸಾಲಿನ ನಂತರ ೩೦% ಸಬ್ಸಿಡಿಯನ್ನು,೨೦೧೪ರಿಂದ ೨೦೧೯ರವರೆಗೆ ಕೈಗಾರಿಕಾ ನೀತಿವಾರು ೭೫% ಸಬ್ಸಿಡಿಯನ್ನು ಘೋಷಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದಿರುತ್ತವೆ. ಅದರಲ್ಲಿ ೨೨.೦೫ ಮೀಸಲಾತಿ ನಿಯಮವನ್ನು ಅಳವಡಿಸಿಕೊಂಡು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಮಾನ್ಯ ಸದಸ್ಯರಿಗೆ ಹೆಚ್ಚಿನ ಮಾಹಿತಿ ಬೇಕಾದರೆ ಅವರಿಗೆ ಒದಗಿಸಿಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

--------------------------------------------------------------------------------

**ಶ್ರೀ ಅರವಿಂದ ಕುಮಾರ ಅರಳಿ:-** ಮಾನ್ಯ ಸಭಾಪತಿಗಳೆ, ಈಗಾಗಲೇ ಬಂದಿರುವ ಅರ್ಜಿಗಳು ಸಾಕಷ್ಟು ಪೆಂಡಿಂಗ್ ಇವೆ. ಅವುಗಳಿಗೆ ಸ್ಪಂದಿಸಿ ಆದಷ್ಟು ಬೇಗ ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ನಾಗರಾಜ(ಎಂ.ಟಿ.ಬಿ)**:- ಮಾನ್ಯ ಸಭಾಪತಿಗಳೆ, ಪೆಂಡಿಂಗ್ ಇರುವ ಅರ್ಜಿಗಳ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅವುಗಳನ್ನು ಕ್ಲಿಯರ್ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 161**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಗಳೆ, ಬೀದರ್ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಘನ ತ್ಯಾಜ್ಯ ವಸ್ತು ನಿರ್ವಹಣೆಗಾಗಿ ಬೀದರ್ ತಾಲ್ಲೂಕಿನ ಹೊರ ವಲಯದಲ್ಲಿ ಸುಲ್ತಾನಪೂರ ಎನ್ನುವ ಒಂದು ಗ್ರಾಮ ತೆಲಂಗಾಣದ ಸರಹದ್ದಿನಲ್ಲಿ ಬರುತ್ತದೆ. ಇದು ಬೀದರ್‌ನಿಂದ ಸುಮಾರು ೬ ಕಿ.ಮೀ ದೂರದಲ್ಲಿದೆ. ಅಲ್ಲಿ ಕಸ ವಿಲೇವಾರಿ ಮಾಡುವ ಘಟಕವನ್ನು ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಈಗಾಗಲೇ ಸುಮಾರು ೨೬೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು K.T.P.P., Act ನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ನಿರ್ಮಿತಿ ಕೇಂದ್ರದ ಮುಖಾಂತರ ಯಂತ್ರಗಳನ್ನು ಖರೀದಿ ಮಾಡಿದ್ದಾರೆ. ಆ ಘಟಕ ಸಂಪೂರ್ಣವಾಗಿ ವಿಫಲವಾಗಿದೆ. ಮಾನ್ಯ ಮಂತ್ರಿಗಳು ಖುದ್ದಾಗಿ ಬಂದು ಅಲ್ಲಿಯ ಪರಿಸ್ಥಿತಿಯನ್ನು ನೋಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲಿಯ ಪರಿಸ್ಥಿತಿ ಹೇಗೆ ಆಗಿದೆ ಎಂದರೆ, ಸುಲ್ತಾನಪೂರ ಗ್ರಾಮದ ಹುಡುಗರಿಗೆ ಯಾರು ಕನ್ಯೆ ಕೊಡುತ್ತಿಲ್ಲ. ಅಷ್ಟೊಂದು ಗಬ್ಬು ವಾಸನೆ ಅಲ್ಲಿ ಇದೆ. ಆ ಹಳ್ಳಿಯ ಸುತ್ತ-ಮುತ್ತ ವಾಸಿಸುವ ಜನರು ನಾವು ಯಾಕಾದರೂ ಈ ಊರಿನಲ್ಲಿ ಹುಟ್ಟಿದ್ದೇವು ಎನ್ನುತ್ತಿದ್ದಾರೆ. ಮಾನ್ಯ ಸಚಿವರು ಅಲ್ಲಿಗೆ ಬಂದು ಪರಿಸ್ಥಿತಿಯನ್ನು ನೋಡಿ ಸರಿಪಡಿಸಿಕೊಡಬೇಕು ಎನ್ನುವುದು ನನ್ನ ವಿನಂತಿ.

**ಶ್ರೀ ಎನ್.ನಾಗರಾಜ(ಎಂ.ಟಿ.ಬಿ)**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಪ್ರಶ್ನೆ ನನಗೆ ಅರ್ಥವಾಯಿತು. ಅಲ್ಲಿ ಇರುವ ಮೂಲ ಸಮಸ್ಯೆ ಎಂದರೆ, ಕಸದ ವಾಸನೆ ತುಂಬಾ ಬರುತ್ತದೆ ಅದನ್ನು ನಿಯಂತ್ರಣ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮೊದಲನೆಯ ಹಂತದಲ್ಲಿ ಟೆಂಡರ್ ಆಗಿ, ನಾಲ್ಕು ಕೋಟಿ ಇಪ್ಪತ್ತೊಂದು ಲಕ್ಷ ರೂಪಾಯಿಗಳನ್ನು ಈಗಾಗಲೆ ಖರ್ಚು ಮಾಡಿದ್ದಾರೆ. ಈಗ ಟೆಂಡರ್ processing ಆಗಿ ಐದು ಕೋಟಿ ರೂಪಾಯಿಗಳ ೨ನೇ ಟೆಂಡರ್ ಆಗಿದೆ. ಟೆಂಡರ್ ಓಪನ್ ಮಾಡಬೇಕಾಗಿದೆ. ಇನ್ನು ಸಾಕಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ. ಆ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೇನೆ. ಕಲ್ಯಾಣ ಕರ್ನಾಟಕದ ರಸ್ತೆಗಳ ರಿಪೇರಿಗಾಗಿ ೧೦ ಕೋಟಿ ರೂಪಾಯಿಗಳು ಬಿಡುಗಡೆಯಾಗಿ ೧೦ ತಿಂಗಳಾಗಿವೆ ಆದರೆ ಆ ಕಾಮಗಾರಿಯು ಇನ್ನು ಪ್ರಾರಂಭವಾಗಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಸಂಬಂಧಪಟ್ಟ ಇಲಾಖೆಯು ನಿರ್ದೇಶಕರ ಜೊತೆಯಲ್ಲಿ ಈಗಾಗಲೇ ಸಭೆ ಮಾಡಿದ್ದಾರೆ. ನಾವು ಸ್ಥಳ ಪರಿಶೀಲನೆ ಮಾಡಿ, ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅದನ್ನು ಸರಿಪಡಿಸಿಕೊಡುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಗಳೆ, ಬೆಂಗಳೂರಿನ ಮಾದೇವಪುರ ಎನ್ನುವ ಕ್ಷೇತ್ರದಲ್ಲಿ ಮಾವಳ್ಳಿಪುರ ಎನ್ನುವ ಗ್ರಾಮವಿದೆ. ಅಲ್ಲಿಯು ಇದೇ ಪರಿಸ್ಥಿತಿ ಇದೆ. ಮಾನ್ಯ

ಸಭಾಪತಿಯವರ ಅಧ್ಯಕ್ಷತೆಯಲ್ಲಿ ಆ ಗ್ರಾಮಕ್ಕೆ ಭೇಟಿ ಕೊಟ್ಟಿದ್ದೆವು. ಆ ಗ್ರಾಮಕ್ಕೂ ಯಾರು ಕನ್ಯೆ ಕೊಡುತ್ತಿಲ್ಲ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಸರಿಪಡಿಸಲು ಕೇಂದ್ರದ Smart Cities Mission ಅನುದಾನದಲ್ಲಿ 'ಸ್ವಚ್ಛ ಭಾರತ ಮಿಶನ್' ನಲ್ಲಿ ಈಗಾಗಲೇ ಆರುವರೆ ಕೋಟಿ ರೂಪಾಯಿಗಳು ಮಂಜೂರು ಆಗಿದೆ. ಆ ಕೆಲಸವು ಕೂಡಾ ಆಮೆ ಗತಿಯಲ್ಲಿ ನಡೆಯುತ್ತಿದೆ. ಆರು ತಿಂಗಳಿಂದ ಟೆಂಡರ್ ಓಪನ್ ಮಾಡಿ ಗುತ್ತಿಗೆದಾರರು ಯಾರು ಎನ್ನುವುದನ್ನು ತೀರ್ಮಾನ ಮಾಡಿರುವುದಿಲ್ಲ. ಇದರ ಜೊತೆಗೆ ಬೀದರ್ ನಗರವನ್ನು ಸುಂದರ ನಗರವಾಗಿ ಮಾಡಲು K.K.R.D.B., (Kalyana Karnataka Region Development Board) ಯಿಂದ ಹತ್ತು ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಆದರೆ ಆ ಕೆಲಸವು ಕೂಡಾ ಇಲಾಖೆಯಲ್ಲಿ ಪೆಂಡಿಂಗ್ ಇದೆ. ಅದಕ್ಕಾಗಿ ಇಲಾಖೆಯ ನಿರ್ದೇಶಕರನ್ನು ಕರೆದುಕೊಂಡು ಬೀದರ್ ಜಿಲ್ಲೆಗೆ ಬಂದು ಅಲ್ಲಿ ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸಬೇಕೆಂದು ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್.ನಾಗರಾಜ(ಎಂ.ಟಿ.ಬಿ)**:- ಮಾನ್ಯ ಸಭಾಪತಿಗಳೇ, ೬ ಕೋಟಿ ಮತ್ತು ೧೦ ಕೋಟಿ ರೂಪಾಯಿಗಳ ಟೆಂಡರ್ processing approval ಆಗಿದೆ. ಟೆಂಡರ್ ಓಪನ್ ಮಾಡಿ ಗುತ್ತಿಗೆದಾರರಿಗೆ Work Order ಕೊಟ್ಟು ಕಾಮಗಾರಿ ಪ್ರಾರಂಭ ಮಾಡುವಲ್ಲಿ ಸಮಯ ವಿಳಂಬವಾಗಿದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ವಿಚಾರವಾಗಿ ಈಗಾಗಲೇ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಎರಡು ಟೆಂಡರ್‌ಗಳ ಕಾಮಗಾರಿಗೆ ಗುತ್ತಿಗೆದಾರರಿಗೆ Work Order ಕೊಟ್ಟು ಕೆಲಸವನ್ನು ಮಾಡುವ ವಿಚಾರದಲ್ಲಿ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಈ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡಲು ನಾನು ಕ್ರಮ ತೆಗೆದುಕೊಳ್ಳುತ್ತೇನೆ.

**<u>ಪ್ರಶ್ನೆ ಸಂಖ್ಯೆ: 175</u>**

(ಮಾನ್ಯ ಸದಸ್ಯರಾದ ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.ರವರು ಗೈರು ಹಾಜರಿದ್ದರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 192**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ನಾನು ಕೇಳಿರುವ ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ಸರ್ಕಾರ ಕೊಟ್ಟಿರುವುದಿಲ್ಲ. ದಯಮಾಡಿ ಈ ಸಭೆಯ ಘನತೆ ಗೌರವವನ್ನು ಉಳಿಸಬೇಕಾದರೆ ಈ ಉತ್ತರವನ್ನು ಮತ್ತೊಮ್ಮೆ ಪರಿಶೀಲಿಸಬೇಕು. ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯ ಸಂಪೂರ್ಣ ಮಾಹಿತಿಯನ್ನು ನಾನು ಕೇಳಿದ್ದೇನೆ. ಸರ್ಕಾರ ಒಂದು ಶೀಟ್‌ನಲ್ಲಿ ಅನುಮೋದನೆಯನ್ನು ಸರ್ವೋಚ್ಚ ನ್ಯಾಯಾಲಯ ಕೊಡಬೇಕು ಎಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಅನುಮೋದನೆಯನ್ನು ಸರ್ಕಾರ ಕೊಡಬೇಕು. ಸರ್ವೋಚ್ಚ ನ್ಯಾಯಾಲಯ ಈ ಕಾರ್ಯಕ್ರಮಗಳಿಗೆ ಅನುಮೋದನೆ ಕೊಡಬೇಕು ಎಂದು ಹೇಳುತ್ತಾರೆ. ಇದು ನನಗೆ ಗೊತ್ತಿಲ್ಲ. ಅನುಮೋದನೆ ಎಂದರೆ 'approval'. ಸರ್ವೋಚ್ಚ ನ್ಯಾಯಾಲಯ ಯಾವುದಾದರೂ ಕಾಮಗಾರಿಗೆ ಅಪ್ರೂವಲ್ ಕೊಡುತ್ತದೆಯೇ? ಅದು ಒಂದು ಆದೇಶವನ್ನು ಅಥವಾ ನಿರ್ದೇಶನವನ್ನು, ಕಾನೂನಿನಲ್ಲಿ ತೊಂದರೆ ಇದ್ದರೆ ಕಾನೂನನ್ನು ಸರಿಪಡಿಸಿಕೊಳ್ಳಿ ಎಂದು ಸಲಹೆಯನ್ನು ಕೊಡಬಹುದು. ಬಹಳ ಗಂಭೀರವಾದ ಒಂದು ವಿಚಾರವನ್ನು ಹೇಳುತ್ತೇನೆ. ಶಿವಮೊಗ್ಗದಲ್ಲಿ ಬ್ಲಾಸ್ಟ್ ಆಗಿರುವ ವಿಚಾರ ಎಲ್ಲರಿಗೂ ಗೊತ್ತಿದೆ. ೨೦೧೮-೧೯ನೇ ಸಾಲಿನಲ್ಲಿ ೧೧೩ ಅಕ್ರಮ ಗಣಿಗಾರಿಕೆಯಲ್ಲಿ ಸುಮಾರು ೧೦೮ ಮೊಕದ್ದಮೆ ಮಾಡಿ ಒಟ್ಟು ೧೨.೧೩ ಕೋಟಿ ರೂಪಾಯಿಗಳ ದಂಡವನ್ನು ವಸೂಲಿ ಮಾಡಿದ್ದಾರೆ. ಅದೇ ರೀತಿ ೨೦೧೯-೨೦ನೇ ಸಾಲಿನಲ್ಲಿ ೨೬೬ ಅಕ್ರಮ ಗಣಿಗಾರಿಕೆಯಲ್ಲಿ ೧೭೭ ಮೊಕದ್ದಮೆಗಳನ್ನು ಮಾಡಿ ೧೦.೮ ಕೋಟಿ ರೂಪಾಯಿಗಳ ದಂಡವನ್ನು ವಸೂಲಿ ಮಾಡಿದ್ದಾರೆ. ಆದರೆ ಇವರು ಕೊಟ್ಟಿರುವ ಉತ್ತರದಲ್ಲಿ ಎಲ್ಲಿಯೂ ಶಿವಮೊಗ್ಗದ ಬಗ್ಗೆ ಉತ್ತರವನ್ನು ಕೊಟ್ಟಿರುವುದಿಲ್ಲ. ಇಷ್ಟೊಂದು ಗಂಭೀರವಾದ ವಿಚಾರವನ್ನು ಎಷ್ಟೊಂದು ಲೈಟ್ ಆಗಿ ತೆಗೆದುಕೊಂಡಿದ್ದಾರೆ ಎಂದರೆ, ಉತ್ತರವನ್ನು ಕೊಡಬೇಕು ಎನ್ನುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿರುವುದಿಲ್ಲ. ಏನೋ ಒಂದು ರೀತಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಪ್ಪಿಸಿಕೊಂಡರೆ ಸಾಕು ಎನ್ನುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇದು ಬಹಳ ಗಂಭೀರವಾದ ವಿಚಾರ ಇದಕ್ಕೆ ಉತ್ತರ ಕೊಡಿ. ಮತ್ತೆ ನಾನು clarification ಕೇಳುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ಕೇಳಿದರೆ ನನಗೂ ಆಶ್ಚರ್ಯವಾಗುತ್ತಿದೆ. ಅವರು ಕೇಳಿರುವುದು ಕೊಡಗು ಜಿಲ್ಲೆಯಲ್ಲಿ ಮರಳು ಗಣಿಗಾರಿಕೆಗೆ ಟೆಂಡರ್‌ನ್ನು ಕರೆಯಲಾಗಿದೆಯೇ? ಹಾಗಿದ್ದಲ್ಲಿ ಯಾವ ಏಜೆನ್ಸಿಗಳಿಗೆ ಟೆಂಡರ್ ಕೊಡಲಾಗಿದೆ? ಈ ಟೆಂಡರ್‌ದಾರರಿಗೆ ವಿಧಿಸಿರುವ ನಿಯಮ ಮತ್ತು ಷರತ್ತುಗಳು ಏನು? ಎಂದು ಕೇಳಿದ್ದಾರೆ. ನಾನು ಕೊಡಗಿನಲ್ಲಿ ಇರುವಂತಹ ಮರಳು ಗಣಿಗಾರಿಕೆಗೆ ಸಂಬಂಧಪಟ್ಟಂತಹ...

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೆ, ನಾನು ಕೊಡಗು ಜಿಲ್ಲೆಯ ವಿಚಾರವನ್ನು ನಾನು ಕೇಳ ಇಲ್ಲ. ನನ್ನ ಪ್ರಶ್ನೆ ಕಳೆದ ೫ ವರ್ಷಗಳಿಂದ ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಬಗ್ಗೆ ಮಂತ್ರಿಗಳು ಯಾವುದೊ ಬೇರೆ ಉತ್ತರವನ್ನು ಓದುತ್ತಿದ್ದಾರೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಗಳೆ, ನಾನು ಬೇರೆ ಉತ್ತರವನ್ನು ಓದುತ್ತಿಲ್ಲ. ಅವರಿಗೆ ಉತ್ತರವನ್ನು ಕಳುಹಿಸಿ ಕೊಡುತ್ತೇನೆ.

(ಮುಂದು)

(1061)141-12-2021(11-40)bsd-md

**ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಮುಂದು):-**

ಕ್ಷಮಿಸಿ, ನಾನು ಸುನಿಲ್ ಸುಬ್ರಮಣ್ಯ ರವರ ಪ್ರಶ್ನೆಗೆ ಉತ್ತರವನ್ನು ಹೇಳುತ್ತಿದ್ದೇನೆ. ಪ್ರಶ್ನೆಯಲ್ಲಿ ಕಳೆದ ೦೫ ವರ್ಷಗಳಿಂದ ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಇತರೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಂಡ ವಸೂಲು ಮಾಡಲಾಗಿದೆಯೇ, ಜಿಲ್ಲಾವಾರು ಮಾಹಿತಿ ನೀಡುವುದು, ವಸೂಲಾದ ದಂಡವನ್ನು ಸರ್ಕಾರದಿಂದ ಯಾವುದಾದರೂ ಗಣಿ ಪರಿಸರ ಪುನಃಶ್ಚೇತನ ಕಾರ್ಯಕ್ರಮಗಳ ಯೋಜನೆಗಳಿಗೆ ವಿನಿಯೋಗಿಸಲಾಗಿದೆಯೇ, ಎಂಬ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ತಮಗೆ ಗೊತ್ತಿರುವಂತೆ ಸದರಿ ಮೊತ್ತವನ್ನು ಗಣಿ ಪರಿಸರ ಪುನಃಶ್ಚೇತನಕ್ಕೆ ವಿನಿಯೋಗಿಸಲು ಅವಕಾಶವಿಲ್ಲ ಎಂದು ಹೇಳಿದ್ದಾರೆ. ಬಹುಶಃ ೨೦೧೫ ಗಣಿ ಇಲಾಖೆಯಿಂದ ಪರಿಸರ ಹಾನಿಯಾದ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸಂದರ್ಭದಲ್ಲಿ ಕೆಲವರು ಚಿತ್ರದುರ್ಗ, ಬಳ್ಳಾರಿ ಮತ್ತು ತುಮಕೂರು ಸೇರಿದಂತೆ ಒಟ್ಟು ೪ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ Supreme Court ಗೆ ಹೋದರು. KMERC (Karnataka Mining Environment Restoration Company) ಎಂಬ Corporation ಮುಖಾಂತರ ದೇಣಿಗೆ ಕಟ್ಟಬೇಕು ಹಾಗೂ ಹಾನಿಯಾದ ಎಲ್ಲಾ ಪರಿಸರವನ್ನು ಸರಿಮಾಡಲು ವಂತಿಕೆ collect ಮಾಡಬೇಕು, ಅಲ್ಲಿ ಅತಿಕ್ರಮಣವಾಗಿ ಖನಿಜಗಳು ಬಿದ್ದಿದ್ದರೆ, ಅವುಗಳನ್ನು ಮಾರಾಟ ಮಾಡಿ ಜಮಾ ಮಾಡಬೇಕೆಂದು ಹೇಳಿದ್ದರಿಂದ ಸರ್ವೋಚ್ಚ ನ್ಯಾಯಾಲಯದ ಬಗ್ಗೆ ಹೇಳಿದ್ದೇನೆ. ಮಾನ್ಯ ಸದಸ್ಯರು ಸರ್ಕಾರದ ಪುನಃಶ್ಚೇತನ ಕಾರ್ಯಕ್ರಮಗಳು ಹಾಗೂ ಉಲ್ಲಂಘನೆ ಬಗ್ಗೆ ಕೇಳಿದ್ದಾರೆ. ಗಣಿಗಾರಿಕೆಯಿಂದ ಉಲ್ಲಂಘನೆ ಮತ್ತು ದಂಡ ವಸೂಲಿ ಬಳ್ಳಾರಿ ಮತ್ತಿತ್ತರ ಕಡೆ ಆಗಿರುವ ಉದಾಹರಣೆ ಇಟ್ಟುಕೊಂಡು ಹೇಳಿದ್ದಾರೆ. ಆ ಮಾಹಿತಿಯನ್ನು ನೀಡಲಾಗಿದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಾಖಲೆ ನೋಡಿ ಹೇಳುತ್ತಿದ್ದು, ಅವರು ಕೊಟ್ಟಿರುವ ದಾಖಲೆಯನ್ನು ನೋಡಿಯೇ ನಾನು ಹೇಳುತ್ತಿದ್ದೇನೆ. ಉತ್ತರದಲ್ಲಿ ಒಂದು sheet ಕೊಟ್ಟಿದ್ದು, ಆ sheet ನಲ್ಲಿ ಶಿವಮೊಗ್ಗ ಜಿಲ್ಲೆ ಬಗ್ಗೆ ಏನಾದರೂ ಇದೆಯೇ ಎಂಬುದನ್ನು ನೋಡಿ ಹೇಳಬೇಕು. ಶಿವಮೊಗ್ಗದಲ್ಲಿ ೨೦೧೮-೧೯ ರಲ್ಲಿ ರೂ.೧೨.೧೩ ಕೋಟಿ ದಂಡವನ್ನು ವಸೂಲು ಮಾಡಿ ೧೧೮ ಮೊಕದ್ದಮ್ಮೆಗಳನ್ನು ಹಾಕಲಾಗಿದೆ. ಆ ವಿಷಯ ಪ್ರಸ್ತಾಪವಿಲ್ಲ. ೨೦೧೯-೨೦ ರಲ್ಲಿ ೧೧೭ ಮೊಕದ್ದಮೆ ಹಾಕಿ ರೂ.೯.೦೮ ಕೋಟಿ collect ಮಾಡಿರುವುದಕ್ಕೆ ನನ್ನ ಬಳಿ ದಾಖಲೆಗಳಿವೆ. ಆದರೆ ಉತ್ತರದಲ್ಲಿ ಶಿವಮೊಗ್ಗದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಬಳ್ಳಾರಿ ವಿಚಾರ ಬೇರೆ ಇದ್ದರೂ, ಇದು insufficient answer ಆಗಿದೆ. ಇಲ್ಲಿ ಕೊಟ್ಟಿರುವ answer ನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಎಂದು ತಿಳಿಸಲಾಗಿದೆ ಎಂದು ಹೇಳಿ ಎಲ್ಲಾ ಕಡೆ ನ್ಯಾಯಾಲಯದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮೋದನೆ ದೊರಕಬೇಕಾಗಿರುವುದರಿಂದ ಕಾಮಗಾರಿ ಯೋಜನೆಗಳನ್ನು ಕೈಗೊಂಡಿರುವುದಿಲ್ಲ. ಅನುಮೋದನೆ ದೊರೆತ ನಂತರ ನ್ಯಾಯಾಲಯ ನೀಡುವ ಆದೇಶದಂತೆ ಯೋಜನೆ ಮಾಡುವ ಬಗ್ಗೆ ಹೇಳಿದ್ದಾರೆ. ಸರ್ವೋಚ್ಚ ನ್ಯಾಯಾಲಯವು ಅನುಮೋದನೆ ಕೊಡುವುದಕ್ಕೆ ಬರುತ್ತದೆಯೇ? ನನಗೆ ಗೊತ್ತಿರುವಂತೆ ಯಾವ ಸರ್ವೋಚ್ಚ ನ್ಯಾಯಾಲಯವು ಅನುಮೋದನೆಯನ್ನು ಕೊಡುವುದಿಲ್ಲ. ಆದರೆ order ಕೊಡುತ್ತದೆ. ಅಂದರೆ ಅವರ ಪ್ರಕರಣವು ನ್ಯಾಯಾಲಯಕ್ಕೆ ಹೇಗೆ ಹೋಗಿದೆ ಎಂಬುದು ಗೊತ್ತಿಲ್ಲ. ೨೦೧೮ ರಿಂದ ಮೊಕದ್ದಮೆ ಇದ್ದು, ರೂ.೨೪ ಸಾವಿರ ಕೋಟಿಗಿಂತ ಹೆಚ್ಚು ಹಣದ ಯೋಜನೆಯನ್ನು ರೂಪಿಸಿದ್ದು, ಅದನ್ನು Corporation ಮೂಲಕ ಅನುಷ್ಠಾನಕ್ಕೆ ತರಬೇಕು. ಈ ಯೋಜನೆ ತಯಾರು ಮಾಡಿ ೩ ವರ್ಷಗಳು ಕಳೆದಿದ್ದು, ಅದಕ್ಕಿಂತ ಹಿಂದಿನ ೩ ವರ್ಷ ಸೇರಿ ಸುಮಾರು ೬

---

ವರ್ಷಗಳಿಂದ ಈ ಯೋಜನೆ ಬರೀ paper ನಲ್ಲಿದೆ. ಅವರು ದಂಡ ವಸೂಲಿ ಮಾಡಿರುವ ಮಾಹಿತಿಯನ್ನು ಕೊಟ್ಟಿಲ್ಲ.

**ಸಭಾಪತಿಯವರು**:- ಅದಕ್ಕೆ ಏನು ಮಾಡಬೇಕೆಂದು ಹೇಳಿ.

**ಶ್ರೀ ಪಿ.ಆರ್.ರಮೇಶ್**:- ಇದು ಬಹಳ ಗಂಭೀರವಾದ ವಿಚಾರವಾಗಿದೆ. ಇದು ಸರಿಯಾದ ಉತ್ತರ ಅಲ್ಲವೇ ಅಲ್ಲ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ**:- ಮಾನ್ಯ ಸಭಾಪತಿಯವರೇ, ಹಿಂದೆ ಒಬ್ಬರು PIL (Public Interest Litigation) ದಾವೆ ಹಾಕಿಕೊಂಡು Supreme Court ಗೆ ಹೋದರು. ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಇದರಿಂದ ಪರಿಸರ ಹಾಳಾಗುತ್ತಿದ್ದು, ಇದನ್ನು ಸರಿ ಮಾಡಬೇಕೆಂದು Supreme Court ಗೆ ಹೋದ ಸಂದರ್ಭದಲ್ಲಿ Supreme Court ಒಂದು ಆದೇಶ ಮಾಡಿತು. ಇದಕ್ಕೆ KMERC ಎನ್ನುವ Corporation ಅನ್ನು form ಮಾಡಿ, ಅದರ ಮೂಲಕ ವಂತಿಕೆ ಮತ್ತು ದಂಡ ಸೇರಿದಂತೆ ಎಲ್ಲವುಗಳನ್ನು ಮಾಡಲು ಹೇಳಿದೆ. ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು Supreme Court ನವರು direction ಬರುವವರೆಗೂ ಉಪಯೋಗ ಮಾಡಿಕೊಳ್ಳಬಾರದೆಂದು ಹೇಳಿದಾಗ State ನಿಂದ ನಾವು ಸುಮ್ಮನೆ ಕುಳಿತುಕೊಳ್ಳಲಿಲ್ಲ. State ನಿಂದ ಹಿರಿಯ ವಕೀಲರಿಂದ continuous ಆಗಿ ೩ ಬಾರಿ.......

**ಶ್ರೀ ಪಿ.ಆರ್. ರಮೇಶ್**:- ಮಾನ್ಯ ಸಭಾಪತಿಯವರೇ, Time waste ಮಾಡುತ್ತಿದ್ದಾರೆ. Point ಗೆ ಬಂದುಬಿಡಲಿ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರ ಹೇಳುವಾಗ ಮಧ್ಯೆ ಪ್ರವೇಶ ಮಾಡಬೇಡಿ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ**:- ನಾನು ಪಡೆದಿರುವ ಮಾಹಿತಿಯಂತೆ ಹೇಳುತ್ತಿದ್ದೇನೆ.

**ಸಭಾಪತಿಯವರು**:- ಮಾದಲು ಮಾನ್ಯ ಸಚಿವರು ಉತ್ತರ ಹೇಳಲಿ, ನಂತರ ನೀವು ಕ್ಲಾರಿಫಿಕೇಷನ್ ಕೇಳಿ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ**:- ಈಗ Supreme Court Action Plan ಅನ್ನು ಮಾಡಿ ಕಳುಹಿಸಿ ಎನ್ನುವ direction ಮೇಲೆ ಕಳುಹಿಸಲಾಗಿದೆ. ಈಗ ಸರ್ಕಾರದಿಂದ ಅದನ್ನು ಆದಷ್ಟು ಬೇಗ ತರಲು ಒತ್ತಾಯ ಮಾಡುತ್ತಿದ್ದೇವೆ. ನಂತರ ರೂ.೨೫ ಸಾವಿರ ಕೋಟಿಗಳಿಗೆ Action Plan ಮಾಡಿ ಆ ಭಾಗದ ಪುನಃಶ್ಚೇತನಕ್ಕೆ ಮೀಸಲಿಟ್ಟು ಖರ್ಚು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, Supreme Court ನ ಒಂದು Interim Order ಇದೆ ಎಂದು ಹೇಳುತ್ತಿದ್ದಾರೆಯೇ ವಿನಃ, ಅದನ್ನು ಓದುತ್ತಿಲ್ಲ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ನಾನು ಅದನ್ನು ಇಲ್ಲಿಗೆ ತಂದಿಲ್ಲ. ಇಲ್ಲಿ ತಂದಿದ್ದರೆ ಓದುತ್ತಿದ್ದೆನು.

**ಶ್ರೀ ಪಿ.ಆರ್.ರಮೇಶ್:-** ಉತ್ತರ ಕೊಡುವಾಗ Supreme Court order ಇದೆ ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಇದನ್ನು ತಾವು ಬೇರೆ ನಿಯಮದ ಅಡಿಯಲ್ಲಿ ತೆಗೆದುಕೊಂಡು ಬನ್ನಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ತಮ್ಮ ಅಧ್ಯಕ್ಷತೆಯಲ್ಲಿರುವ ಈ ಮನೆಯನ್ನು ಬಹಳ ಹಗುರವಾಗಿ ತೆಗೆದುಕೊಂಡರೆ ಹೇಗೆ?

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಯಾರೂ ಯಾವತ್ತು ಸದನವನ್ನು ಹಗುರವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನನಗೆ ದೊರೆತ ಮಾಹಿತಿಯನ್ನು ತಂದಿರುತ್ತೇವೆ. ಮಾನ್ಯ ಸದಸ್ಯರಿಗೆ ಹೆಚ್ಚಿನ ಮಾಹಿತಿ ಬೇಕೆಂದರೆ.....

**ಶ್ರೀ ಪಿ.ಆರ್. ರಮೇಶ್:-** ನಾನು ಕೇಳಿರುವ ಮಾಹಿತಿಯನ್ನು ಕೊಟ್ಟರೆ ಸಾಕು. ಅವರು ರಾಜ್ಯವನ್ನು ಹಾಳು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಅವರು ಅಂದುಕೊಂಡರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:-** ರಾಜ್ಯವನ್ನು ಹಾಳು ಮಾಡಿ ಕೂರಿಸಿದ್ದಾರೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಹಾಳು ಮಾಡುವುದಕ್ಕೆ ಯಾರೂ ಬಂದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಕೇಳಿ.

---

**ಪ್ರಶ್ನೆ ಸಂಖ್ಯೆ: 235 & 240**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಯವರೇ, ನನಗೆ ಉತ್ತರವು ಬಂದಿದ್ದು, ಮಂಡ್ಯ ಜಿಲ್ಲೆಯ ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ೧೯೭೫ನೇ ಸಾಲಿನಲ್ಲಿ ೧೫೫.೩೦ ವಿಸ್ತೀರ್ಣದಲ್ಲಿ ಕೈಗಾರಿಕಾ ಪ್ರದೇಶವನ್ನು develop ಮಾಡಲು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಅದರಲ್ಲಿ Survey No. ೨೯ರಲ್ಲಿ ೩.೧೬ ಗುಂಟೆ ಸರ್ಕಾರಿ ಜಮೀನನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ದಿನಾಂಕ ೨೯-೧೦-೨೦೦೪ರಲ್ಲಿ ಕಂದಾಯ ಇಲಾಖೆಗೆ ಕೊಡಬೇಕಾದ ಎಲ್ಲಾ ಶುಲ್ಕಗಳನ್ನು ಪಾವತಿಸಲಾಗಿದೆ. ಇದುವರೆಗೂ ಸ್ವಾಧೀನಕ್ಕೆ ತೆಗೆದುಕೊಳ್ಳದೇ, ಆ ಜಮೀನಿನಲ್ಲಿ ಖಾಸಗಿಯವರು ಬಡಾವಣೆ ಮಾಡಿ ನಿವೇಶನಗಳನ್ನು ಬೇರೆಯವರಿಗೆ ಪರಭಾರೆ ಮಾಡಿದ್ದಾರೆ. ಉತ್ತರದಲ್ಲಿ ದಿನಾಂಕ ೬-೧೧-೨೦೧೯ ರಂದು ಪತ್ರ ಬರೆದಿದ್ದಾರೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಕಂದಾಯ ಇಲಾಖಾಧಿಕಾರಿಗಳಿಗೆ ಸ್ವಾಧೀನ ವಹಿಸಿಕೊಡುವ ಬಗ್ಗೆ ಪತ್ರವನ್ನು ಬರೆದಿದ್ದಾರೆ. ೨೦೦೪ ರಲ್ಲಿ KIADB *(Karnataka Industrial Areas Development Board)* ಹಣ ಕಟ್ಟಿದೆ. ಆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು *develop* ಮಾಡದೇ ಇರುವುದರಿಂದ ಭೂಗಳ್ಳರು .... ಆ ಜಮೀನನ್ನು *KIADB* ಸ್ವಾಧೀನಪಡಿಸಿಕೊಂಡು ಹಣವನ್ನು ತುಂಬಿದ್ದಾರೆ. ಈ ೩-೧೬ ಗುಂಟೆಯಲ್ಲಿ ಯಾವರೀತಿ *develop* ಮಾಡಿ ನಿವೇಶನ ಹಂಚಿದ್ದಾರೆ. *KIADB* ಅಧಿಕಾರಿಗಳು ಏನು ಮಾಡುತ್ತಿದ್ದರು? ಕಂದಾಯ ಇಲಾಖೆ ಮತ್ತು *KIADB* ನ ಅಧಿಕಾರಿಗಳು ಶಾಮೀಲಾಗಿ ಈ ಕೆಲಸ ಮಾಡಿದ್ದಾರೆ. ಇದನ್ನು ಯಾವಾಗ ಸ್ವಾಧೀನಕ್ಕೆ ತೆಗೆದುಕೊಂಡು ಕೈಗಾರಿಕಾ ಪ್ರದೇಶದ ನಿವೇಶನಗಳನ್ನು ಹಂಚಿಕೆ ಮಾಡುತ್ತಾರೆ ಮತ್ತು ಎಷ್ಟು ದಿನಗಳ ಒಳಗಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾರೆ ಎಂದು ತಿಳಿಸಬೇಕು.

**ಶ್ರೀ ಮುರುಗೇಶ್ ಆರ್. ನಿರಾಣಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತೆ ನಾವು *Survey No. 27* ನ *acquisition* ಮಾಡಿರುವ *land* ನಲ್ಲಿ ಯಾವುದೇ ರೀತಿಯ ನಿವೇಶನಗಳು ಬಂದಿಲ್ಲ. ಅದನ್ನು *cross-check* ಮಾಡಿದ್ದೇವೆ. ಅದರ *map* ನನ್ನ ಕಡೆ ಇದೆ. *Survey No. 29 and railway track* ಗೆ ಮಧ್ಯದಲ್ಲಿ ಬರುವಂತಹ *private land* ನಲ್ಲಿ ನಿವೇಶನಗಳು ಬಂದಿವೆ. ನಾವು *acquisition* ಮಾಡುವ ೨೦೦೪ರ ಪೂರ್ವದಲ್ಲಿ ಅಂದಿನ *DC* ರವರು ಆಶ್ರಯ ಮನೆಗಳ ಸಲುವಾಗಿ *land allotment* ಮಾಡಿದ್ದಾರೆ. ಅವರು ೩ ಎಕರೆ ಹೇಳಿರುವ ವಿಷಯ ನಿಜವಿದೆ. ಅದರಲ್ಲಿ ಯಾವುದೇ ನಿವೇಶನಗಳು ಬಂದಿಲ್ಲ. ಈ ಬಗ್ಗೆ ೨೦೦೪ ರಿಂದ ೨೦೧೯ರವರೆಗೆ ನಮ್ಮ ಗಮನಕ್ಕೆ ಬಂದಿರಲಿಲ್ಲ. ನಮ್ಮ ಗಮನಕ್ಕೆ ಬಂದ ತಕ್ಷಣ *serious* ಆಗಿ ಅದನ್ನು *acquisition* ಮಾಡಿಕೊಂಡು *Industries* ಗೆ ಹಸ್ತಾಂತರ ಮಾಡುವ ಕೆಲಸ ಮಾಡುತ್ತಿದ್ದೇವೆ.

(ಮುಂದು)

---

(1062)/14.12.2021/11.50/ಹೆಚ್‌ವಿ:ಎಂಡಿ

**ಶ್ರೀ ಮುರುಗೇಶ್ ಆರ್.ನಿರಾಣಿ(ಮುಂದು)):-**

ಸನ್ಮಾನ್ಯ ಸಭಾಪತಿಯವರೇ, ಇರುವಂತಹ ಒಟ್ಟು ನಿವೇಶನಗಳಲ್ಲಿ 97 ನಿವೇಶನಗಳನ್ನು ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ. ಇವುಗಳ ಪೈಕಿ 87 ಘಟಕ್ಕಗಳು ಕಾರ್ಯನಿರ್ವಹಿಸುತ್ತಿವೆ. ಇನ್ನು ಉಳಿದ 10 ಘಟಕಗಳ ಪೈಕಿ 04 ಘಟಕಗಳು ಸ್ಥಗಿತಗೊಂಡಿವೆ. ಉಳಿದಂತೆ 06 ಘಟಕಗಳು ಇಂಪ್ಲಿಮೆಂಟ್ ಆಗದೇ ಇರುವುದರಿಂದ ಅವುಗಳನ್ನು 34(ಬಿ) ಅಡಿಯಲ್ಲಿ ವಿಚಾರಣೆ ಮಾಡಿ ಮರಳಿ ವಾಪಸ್ಸು ತೆಗೆದುಕೊಳ್ಳುವ ನಿಟ್ಟಿನಲ್ಲಿ ಗಮನಹರಿಸುತ್ತಿದ್ದೇವೆ. ಇದು 6 ಎಕರೆಗೆ ಸಂಬಂಧಪಟ್ಟ ಸಮಸ್ಯೆ ಆಗಿದೆ.

ಉಳಿದ 3 ಎಕರೆ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹೇಳಬೇಕಾದರೆ, ಅಧಿವೇಶನ ಮುಗಿದ ಮೇಲೆ ನಾನು ತಮಗೆ ಫೋನ್ ಮಾಡಿ ,ತಮ್ಮ ಜೊತೆಗೆ ಬರುತ್ತೇನೆ ಸ್ಥಳಕ್ಕೆ ಹೋಗಿ ಬರೋಣ. ಈ ಎಕರೆಯ ಸರ್ವೆ ನಂಬರ್ 29 ಎಲ್ಲಿ ಬರುತ್ತದೆ, ಅದರ ಚಕ್ಕುಬಂದಿ ಎಲ್ಲಿಯವರೆಗೆ ಇದೆ ಎನ್ನುವುದನ್ನು ನೋಡಿಕೊಂಡು ಬರೋಣ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, 3 ಎಕರೆ ಪ್ರದೇಶವನ್ನು ಸರ್ಕಾರ ಸ್ವಾಧೀನಕ್ಕೆ ಪಡೆದುಕೊಳ್ಳುವುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಆದರೆ, ಅಲ್ಲಿ ಹಂಚಿಕೆ ಮಾಡಿರುವಂತಹ ನಿವೇಶನಗಳಲ್ಲಿ ಸುಮಾರು 10 ಘಟಕಗಳು ಇನ್ನೂ ಕಾರ್ಯಾರಂಭ ಮಾಡಿಲ್ಲ. ಅಧಿಕಾರಿಗಳು ತಪ್ಪು ಉತ್ತರವನ್ನು ನೀಡಿದ್ದಾರೆ. ತಾವು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ. '.....ಉಳಿಕೆ 10 ಘಟಕಗಳಲ್ಲಿ ಪ್ರಸ್ತುತ 4 ಘಟಕಗಳು ಸ್ಥಗಿತಗೊಂಡಿದ್ದು, 6 ಘಟಕಗಳು ನಿಗದಿತ ಅವಧಿಯೊಳಗೆ ಹಂಚಿಕೆಯಾದ ಜಮೀನಿನಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಫಲರಾದ ಕಾರಣ, ಕೆ.ಐ.ಎ.ಡಿ. ಕಾಯ್ದೆ 1966ರನ್ವಯ ಕಲಂ 34(ಬಿ) ನೋಟೀಸ್ ಜಾರಿ ಮಾಡಿದ್ದು ಈ ಪ್ರಕರಣಗಳು ವಿಚಾರಣಾ ಹಂತದಲ್ಲಿದೆ.' ಎನ್ನುವ ಉತ್ತರವನ್ನು ನೀಡಿದ್ದೀರಿ. ನನಗೆ ತಿಳಿದ ಮಟ್ಟಿಗೆ ಈ ಉತ್ತರ ತಪ್ಪು ಉತ್ತರವಾಗಿದೆ. ಪ್ಲಾಟ್ ನಂಬರ್ 13 ಅನ್ನು 2001ರಲ್ಲಿ ಹಂಚಿಕೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಪ್ಲಾಟ್ ನಂಬರ್ 10 ಅನ್ನು 1998ರಲ್ಲಿ ಹಂಚಿಕೆ ಮಾಡಿದ್ದಾರೆ, ಪ್ಲಾಟ್ ನಂಬರ್ 5(ಎ) ಅನ್ನು 1995ರಲ್ಲಿ ಹಂಚಿಕೆ ಮಾಡಿದ್ದಾರೆ. ಇದೆಲ್ಲ ಒಂದು ಎಕರೆ ಪ್ರದೇಶಗಳಾಗಿವೆ. ಇಲ್ಲಿ ಕೈಗಾರಿಕೆಗಳೇ ಬಂದಿಲ್ಲ. ಸುಮಾರು 6 ಘಟಕಗಳಿಗೆ 34(ಬಿ) ಅಡಿಯಲ್ಲಿ ನೋಟೀಸ್ ನೀಡಲಾಗಿದೆ ಎಂದು ಉತ್ತರದಲ್ಲಿ ಹೇಳಲಾಗಿದೆ, ಘಟಕವನ್ನು ಪ್ರಾರಂಭ ಮಾಡದೇ ಇರುವವರಿಗೆ, ' ನೀವು 3 ವರ್ಷದೊಳಗೆ ಕೈಗಾರಿಕೆಯನ್ನು ಪ್ರಾರಂಭ ಮಾಡಿಲ್ಲ, ಆದ ಕಾರಣ ನಿಮಗೆ ಕೊಟ್ಟಿರುವಂತಹ ನಿವೇಶನವನ್ನು ರದ್ದುಪಡಿಸುತ್ತಿದ್ದೇವೆ' ಎನ್ನುವುದು 34(ಬಿ) ನೋಟೀಸ್‌ನ ಮೂಲ ಅಂಶವಾಗಿದೆ. ಮುಂದುವರೆದು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

'...ಪ್ರಕರಣಗಳು ವಿಚಾರಣೆಯ ಹಂತದಲ್ಲಿವೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ವಿಚಾರಣೆ ನಡೆಸುವುದಕ್ಕೆ ಇನ್ನೂ ಎಷ್ಟು ವರ್ಷಗಳ ಕಾಲಾವಕಾಶ ಬೇಕಾಗಿದೆ? ಇವರುಗಳು ನಿವೇಶನಗಳನ್ನು ತೆಗೆದುಕೊಂಡು ಸುಮಾರು ವರ್ಷಗಳು ಕಳೆದು ಹೋಗಿವೆ. 34(ಬಿ) ನೋಟೀಸ್ ಅನ್ನು ಜಾರಿ ಮಾಡಿ ಇನ್ನೂ ಅವರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಕೇವಲ ವಿಚಾರಣೆಯ ಹಂತದಲ್ಲಿಯೇ ಇರುವುದು ವಿಷಾದನೀಯ ಸಂಗತಿಯಾಗಿದೆ. 34(ಬಿ) ಅಡಿಯಲ್ಲಿ ನೋಟೀಸ್ ಇಶ್ಯೂ ಮಾಡಿದ ಮೇಲೆ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ, 20 ವರ್ಷಗಳಾಗಿದ್ದರೂ ಸಹ ಇನ್ನೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಅವರಿಗೆ ಹಂಚಿಕೆಯಾಗಿರುವ ನಿವೇಶನಗಳನ್ನು ರದ್ದುಪಡಿಸಿ, ಬೇರೆಯವರಿಗೆ ಹಂಚಿಕೆ ಮಾಡಬೇಕಾಗಿತ್ತು. ಆದರೆ, ಅಧಿಕಾರಿಗಳು ತಪ್ಪು ಮಾಹಿತಿಯನ್ನು ನೀಡಿದ್ದಾರೆ. ಪ್ಲಾಟ್ ನಂಬರ್, 13, 10 ಮತ್ತು 5(ಎ) ಇವುಗಳ ಬಗ್ಗೆ ಮಾಹಿತಿಯನ್ನೇ ಕೊಟ್ಟಿಲ್ಲ. ಕೆ.ಐ.ಎ.ಡಿ.ಬಿ. ನಿಯಮಾವಳಿಗಳ ಪ್ರಕಾರ ಯಾರು 3 ವರ್ಷಗಳೊಳಗೆ ಯೋಜನೆಯನ್ನು ಪ್ರಾರಂಭ ಮಾಡಿರುವುದಿಲ್ಲ ಮತ್ತು 34(ಬಿ) ಅಡಿಯಲ್ಲಿ ಯಾರಿಗೆ ನೋಟೀಸ್ ಇಶ್ಯೂ ಮಾಡಿರುತ್ತಾರೆ ಅವರುಗಳ ಮೇಲೆ ಕೂಡಲೇ ಕಾನೂನು ರೀತ್ಯಾ ಕ್ರಮ ಕೈಗೊಂಡು ಹಂಚಿಕೆಯಾಗಿರುವ ನಿವೇಶನವನ್ನು ರದ್ದುಪಡಿಸಿ ಬೇರೆಯವರಿಗೆ ನಿವೇಶನಗಳನ್ನು ನಿಯಮಾವಳಿಗಳ ಪ್ರಕಾರ ಹಂಚಿಕೆ ಮಾಡುವುದಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕಾಗಿದೆ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ನಿವೇಶನಗಳನ್ನು ತಡವಾಗಿಯೂ ಸ್ವಾಧೀನಪಡಿಸಿಕೊಳ್ಳದೇ ಇರುವಂತಹ ಪ್ರಕರಣಗಳು ಬೇರೆಬೇರೆ ಕೈಗಾರಿಕಾ ಪ್ರದೇಶಗಳಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸುಮಾರು 3-4 ವರ್ಷಗಳ ಹಿಂದಿನಿಂದ ಇಂತಹ ನಿವೇಶನಗಳನ್ನು ಗುರುತಿಸಿ ಅವುಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನಪಡುತ್ತಿದೆ. ಈಗಾಗಲೇ ಸುಮಾರು 500 ಎಕರೆಗಳಿಗೂ ಹೆಚ್ಚಿನ ನಿವೇಶನದಾರರಿಗೆ ನೋಟೀಸ್ ಕೊಟ್ಟಿದ್ದೇವೆ. ಮುಂದಿನ 3-4 ತಿಂಗಳುಗಳಲ್ಲಿ ಅವುಗಳನ್ನು ವಾಪಸ್ಸು ಪಡೆದುಕೊಂಡು ಯಾರು ಗಂಭೀರವಾಗಿ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬರುತ್ತಾರೆ ಅವರಿಗೆ ಆ ನಿವೇಶನಗಳನ್ನು ಹಂಚಿಕೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈ ಪ್ರದೇಶಕ್ಕೆ ನಾನು ಸಹ ಭೇಟಿ ನೀಡಬೇಕಾಗಿದೆ. ಜನವರಿ ಮೊದಲನೆಯ ವಾರದಲ್ಲಿ ನಾನು ಅಲ್ಲಿಗೆ ಭೇಟಿ ನೀಡುವುದಕ್ಕೂ ಹೋದಾಗ ಮಾನ್ಯ ಸದಸ್ಯರಿಗೆ ಫೋನ್ ಮಾಡಿ ತಿಳಿಸಿ ನಂತರ ಅಲ್ಲಿಗೆ ಭೇಟಿ ನೀಡುತ್ತೇನೆ ಎನ್ನುವ ಭರವಸೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:228**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್** ಜಿ.ನಮೋಶಿ:- ಸನ್ಮಾನ್ಯ ಸಭಾಪತಿಯವರೇ, 'ಕಳೆದ 3 ವರ್ಷಗಳಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ಎಸ್.ಸಿ.ಪಿ/ ಟಿ.ಎಸ್.ಪಿ. ಯೋಜನೆಯಡಿ ಮಂಜೂರಾದ ಅನುದಾನ ಎಷ್ಟು' ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಎರಡು ಯೋಜನೆಗಳಡಿಯಲ್ಲಿ ಅಂದರೆ, ನಗರೋತ್ಥಾನ ಯೋಜನೆ ಮತ್ತು ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಇದಕ್ಕೆ ನಿಗದಿತ ಮೊತ್ತ ಇರುತ್ತದೆ ಮತ್ತು ಹಣದ ಕೊರತೆ ಎನ್ನುವುದು ಇರುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಬೀದರ್, ಕಲಬುರಗಿ ,ರಾಯಚೂರು, ಯಾದಗಿರಿ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಪೈಕಿ ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳು ಸಣ್ಣ ಜಿಲ್ಲೆಗಳಾಗಿವೆ ಮತ್ತು ಕಲಬುರಗಿ ದೊಡ್ಡ ಜಿಲ್ಲೆಯಾಗಿದೆ. ಆದರೆ, ಅನುದಾನವನ್ನು ಹಂಚಿಕೆ ಮಾಡಿರುವುದನ್ನು ನೋಡಿದರೆ, ದೊಡ್ಡ ಜಿಲ್ಲೆಯಾಗಿರುವ ಕಲಬುರಗಿ ಜಿಲ್ಲೆಗೆ 1588.25 ಲಕ್ಷ ರೂಪಾಯಿಗಳನ್ನು ಸಣ್ಣ ಜಿಲ್ಲೆಗಳಾಗಿರುವ ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳಿಗೆ ಕ್ರಮವಾಗಿ 2473.84 ಲಕ್ಷ ಮತ್ತು 2387.1 ಲಕ್ಷ ರೂಪಾಯಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ದೊಡ್ಡ ಜಿಲ್ಲೆಯಾಗಿರುವ ಕಲಬುರಗಿಗೆ ಯಾವ ಕಾರಣಕ್ಕಾಗಿ ಅನುದಾನವನ್ನು ಕಡಿಮೆ ನೀಡಲಾಗಿದೆ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ.

ಇನ್ನು ಎರಡನೆಯದಾಗಿ, ಕಾಮಗಾರಿ ಆಗಿರುತ್ತದೆ ಹಣ ಇರುತ್ತದೆ. ಆದರೆ, ಯಾವ ಕಾರಣದ ಹಿನ್ನೆಲೆಯಲ್ಲಿ ಎಲ್.ಒ.ಸಿ.ಯನ್ನು ನೀಡುವುದನ್ನು ತಡ ಮಾಡುತ್ತಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಎಲ್.ಒ.ಸಿ.ಯನ್ನು ಸಮಯಕ್ಕೆ ಸರಿಯಾಗಿ ಕೊಟ್ಟರೆ, ಅವರಿಗೂ ಸಹ ಮುಂದಿನ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ತಕ್ಷಣ ರಿಲೀಸ್ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಯಾವ ರೀತಿಯಲ್ಲಿ ಮುಂದುವರಿಸಿದ ಕಾಮಗಾರಿಯೆಂದು ತೆಗೆದುಕೊಳ್ಳಲಾಗುತ್ತದೆ, ಆ ರೀತಿ ಇಲ್ಲಿ ಮಾಡುವುದಿಲ್ಲ, ಒಂದು ವರ್ಷ ಬಿಟ್ಟು ಮತ್ತೊಂದು ವರ್ಷಕ್ಕೆ ತೆಗೆದುಕೊಳ್ಳುತ್ತಾರೆ. ಯಾಕೆ ಈ ರೀತಿ ಮಾಡುತ್ತಾರೆ ಎನ್ನುವುದಕ್ಕೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕಾಗಿದೆ. ಮಹಾತ್ಮಗಾಂಧಿ ನಗರವಿಕಾಸ ಯೋಜನೆಯಡಿಯಲ್ಲಿ ಕಲಬುರಗಿ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಎರಡು ಯೋಜನೆಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಗಳಿಗೆ ನೂರಕ್ಕೆ ನೂರರಷ್ಟು ಅನುದಾನ ದೊರೆಯುತ್ತಿದೆಯೇ ಅಥವಾ ನಮ್ಮ ಪಾಲಿನ ಪ್ರಮಾಣವೆಷ್ಟು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ಒದಗಿಸಿಕೊಡಬೇಕಾಗಿದೆ.

---

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ):-** ಸನ್ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರುವಂತಹ 6 ಜಿಲ್ಲೆಗಳಿಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಉಳಿಕೆಯ ಹಣದ ಪ್ರಮಾಣವೆಷ್ಟು ಎನ್ನುವುದು ಮಾನ್ಯ ಸದಸ್ಯರ ಮೂಲ ಪ್ರಶ್ನೆಯಾಗಿದೆ. ಇದರಲ್ಲಿ 6 ಜಿಲ್ಲೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಮುಕ್ತನಿಧಿಯಡಿಯಲ್ಲಿ ಎಸ್.ಎಫ್.ಸಿ.ಎಫ್ ಅನುದಾನದ ಜೊತೆಗೆ ನಗರೋತ್ಥಾನ ಯೋಜನೆ ಇವುಗಳಿಗೆ 6 ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾಗಿರುವ ಹಣ, ವೆಚ್ಚವಾಗಿರುವ ಹಣ ಮತ್ತು ಉಳಿಕೆಯಾಗಿರುವ ಹಣದ ಮೊತ್ತ ಎಲ್ಲವನ್ನು ಸಂಗ್ರಹಿಸಿ ಜಿಲ್ಲಾವಾರು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡಲಾಗಿದೆ. ಕೊಟ್ಟಿರುವ ಹಣದಲ್ಲಿ ಇನ್ನೂ ಬಾಕಿ ಉಳಿದಿದೆ. ಉದಾಹರಣೆಗೆ ಹೇಳಬೇಕಾದರೆ, ನಿಗದಿಪಡಿಸಿದ ಹಣದಲ್ಲಿ ಎಸ್.ಎಫ್.ಸಿ. ಮುಕ್ತನಿಧಿಯಲ್ಲಿ 2858.41 ಲಕ್ಷ ರೂಪಾಯಿಗಳನ್ನು ನೀಡಿದ್ದೇವೆ. ಆದರೆ, ಬಿಡುಗಡೆಯಾಗಿರುವ ಹಣ ಕೇವಲ 2064.27 ಲಕ್ಷ ರೂಪಾಯಿಗಳಾಗಿವೆ. ಬಾಕಿ ಹಣವನ್ನು ಏತಕ್ಕೋಸ್ಕರ ಬಿಡುಗಡೆ ಮಾಡಿಲ್ಲವೆಂದರೆ, ಪೂರ್ತಿ ಪ್ರಮಾಣದ ಕಾಮಗಾರಿ ಮುಗಿದ ಮೇಲೆ 'ಕಾಮಗಾರಿ ಮುಗಿದಿದೆ, ಗುತ್ತಿಗೆದಾರರಿಗೆ ಹಣ ಪಾವತಿ ಮಾಡಬೇಕು' ಎಂದು ತಾವು ಹೇಳಿದಾಗ ಮಾತ್ರ ಹಣ ಬಿಡುಗಡೆಯಾಗುತ್ತದೆ. 2018-19,2019-20 ಮತ್ತು 2020-21ನೇ ಸಾಲಿನಲ್ಲಿ ಬಿಡುಗಡಯಾಗಿರುವ ಹಣದ ವಿವರವನ್ನು ಇದರೊಂದಿಗೆ ಮಾನ್ಯ ಸದಸ್ಯರಿಗೆ ಒದಗಿಸಿ ಕೊಡಲಾಗಿದೆ.

**ಶ್ರೀ ಶಶೀಲ್** ಜಿ.ನಮೋಶಿ:- ಸನ್ಮಾನ್ಯ ಸಭಾಪತಿಯವರೇ, ಸಣ್ಣ ಜಿಲ್ಲೆಗಳಿಗೆ ಹೆಚ್ಚು ಅನುದಾನವನ್ನು ದೊಡ್ಡ ಜಿಲ್ಲೆಗೆ ಕಡಿಮೆ ಅನುದಾನವನ್ನು ಒದಗಿಸಿಕೊಡಲಾಗಿದೆ ಇದಕ್ಕೆ ಕಾರಣವೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ):-** ಸನ್ಮಾನ್ಯ ಸಭಾಪತಿಯವರೇ, ಕಲಬುರಗಿ ಜಿಲ್ಲೆಗೆ ಕಡಿಮೆ ಅನುದಾನವನ್ನು ಒದಗಿಸಲಾಗಿದೆ ಎನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ. ಇದು ನಾವು ಕೊಟ್ಟಿರುವ ಅನುದಾನವಲ್ಲ, ಯಾವಯಾವ ಜಿಲ್ಲೆಗಳಿಗೆ ಎಷ್ಟು ಅನುದಾನವನ್ನು ಕೊಡಬೇಕೆನ್ನುವ ಅಲೋಕೇಶನ್ ಮೊದಲೇ ನಿಗದಿಯಾಗಿರುತ್ತದೆ. ಆ ಅಲೋಕೇಶನ್ ಪ್ರಕಾರ ಹಣವನ್ನು ಬಿಡುಗಡೆ ಮಾಡಲಾಗಿದೆ. ಅಲೋಕೇಶನ್‌ನಲ್ಲಿ ಹಣದ ಪ್ರಮಾಣ ಕಡಿಮೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಅಧಿಕಾರಿಗಳ ಜೊತೆಗೆ ಮಾತನಾಡಿ ಹೆಚ್ಚುವರಿ ಹಣವನ್ನು ಕೊಡುವುದಕ್ಕೆ ಅವಕಾಶವಿದ್ದರೆ ನೋಡೋಣ. ಉಳಿಕೆ ಹಣ ಇದೆ. ಕಲಬುರಗಿ ಜಿಲ್ಲೆಗೆ 1588.25 ಲಕ್ಷ ರೂಪಾಯಿಗಳನ್ನು ಮತ್ತು ಬಳ್ಳಾರಿ ಜಿಲ್ಲೆಗೆ ಅತೀ ಹೆಚ್ಚು 2942.51 ಲಕ್ಷ ರೂಪಾಯಿಗಳನ್ನು ನೀಡಲಾಗಿದೆ. ಇದರಲ್ಲಿ ಯಾವುದಾದರು ಉಳಿಕೆ ಹಣ ಇದ್ದರೆ, ಕಾನೂನಿನಲ್ಲಿ ಅದನ್ನು ಬದಲಾವಣೆ ಮಾಡುವುದಕ್ಕೆ ಅವಕಾಶವಿದ್ದರೆ, ಅಧಿಕಾರಿಗಳ ಜೊತೆಗೆ ಮಾತನಾಡಿ ಮಾಡಿಸಿಕೊಡುತ್ತೇನೆ ಎನ್ನುವ ಭರವಸೆಯನ್ನು ತಮ್ಮ ಮೂಲಕ ಈ ಸದನಕ್ಕೆ ನೀಡುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಡಾ||ತೇಜಸ್ವಿನಿಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 26(321)ನ್ನು ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ:195**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ನಡೆಯುವ ಮರಳು ವ್ಯವಹಾರಕ್ಕಿಂತ ಕೊಡಗಿನಲ್ಲಿ ನಡೆಯುವ ಮರಳು ವ್ಯವಹಾರ ವಿಭಿನ್ನವಾಗಿದೆ. ಕೊಡಗಿನಲ್ಲಿ ನಡೆಯುವ ಮರಳು ಗಣಿಗಾರಿಕೆಯ ಕೆಲವು ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಜಿಲ್ಲೆಯಲ್ಲಿ ಈಗಾಗಲೇ ಟೆಂಡರ್ ಕರೆದಿದ್ದು, ಮಾರ್ಚ್ 31ನೇ ತಾರೀಖಿಗೆ ಟೆಂಡರ್ ಪ್ರಕ್ರಿಯೆಗಳು ಮುಕ್ತಾಯಗೊಳ್ಳುತ್ತವೆ. ಹೊಸದಾಗಿ ಕರೆಯುವ ಟೆಂಡರ್‌ಗಳಲ್ಲಿ ಈಗಿರುವ ಎಲ್ಲಾ 14 ಬ್ಲಾಕ್‌ಗಳನ್ನು ಸೇರಿಸಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ.

(ಮುಂದು)

(1063) 14.12.2021 12.00 ಪಿಕೆ:ಎಕೆ

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ಮುಂದು)**

2019-20 ಮತ್ತು 2020-21 ನೇ ಸಾಲಿನಲ್ಲಿ ಸುಮಾರು 8 - 9 ತಿಂಗಳು ಮಳೆಯಾಗಿದೆ. ಹಾಗಾಗಿ ಕೊಡಗಿಗೆ ವಿಭಿನ್ನ ಮರಳು ನೀತಿಯನ್ನು ರೂಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಅತಿ ಹೆಚ್ಚು ಮಳೆ ಬೀಳುವುದರಿಂದ ಸಾಗಾಟಕ್ಕೆ ತೊಂದರೆ ಆಗುತ್ತದೆ. ಆದ್ದರಿಂದ ಕೊಡಗು ಜಿಲ್ಲೆಯ ಮಟ್ಟಿಗೆ ಷರತ್ತು ಹಾಗೂ ನಿಯಮಗಳನ್ನು ಸ್ವಲ್ಪ ಮಾರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮರಳು ಟೆಂಡರ್ ಪ್ರಕ್ರಿಯೆಯಲ್ಲಿ ಕೊಡಗು ಜಿಲ್ಲೆಯ ಟೆಂಡರ್‌ದಾರರಿಗೆ ಮೊದಲ ಆದ್ಯತೆ ಕೊಡಬೇಕು. ಹೊರ ಜಿಲ್ಲೆಯವರು ಬಂದು ಟೆಂಡರ್ ಕರೆದಾದ ಮೇಲೆ ಅದನ್ನು ಹೆಚ್ಚಿನ ಹಣಕ್ಕೆ ನಮ್ಮ ಸ್ಥಳೀಯರಿಗೆ ಕೊಟ್ಟು ಹೋಗುತ್ತಾರೆ. ಈ ಹಂತದಲ್ಲಿ ಸ್ವಲ್ಪ ಭ್ರಷ್ಟಾಚಾರ ನಡೆಯುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮರಳು ಬ್ಲಾಕ್‌ನಲ್ಲಿ ಟೆಂಡರ್ ಕರೆಯುವ ಮುನ್ನ ಹಳೆಯ ಮತ್ತು ಹೊಸ ಬ್ಲಾಕ್‌ಗಳನ್ನು ಸರಿಯಾಗಿ ಗುರುತಿಸಿ, ಉನ್ನತ ಅಧಿಕಾರಿಗಳಿಂದ ರಿವರ್ ಬೆಡ್‌ಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಕೊಡಗಿನ ಜಿಲ್ಲಾಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ಕೊಡಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಟಾಸ್ಕ್‌ಫೋರ್ಸ್ ಕಮಿಟಿಯನ್ನು ಮಾಡುವಾಗ ಸ್ಥಳೀಯರಿಬ್ಬರನ್ನಾದರೂ, ಎಲ್ಲಾ ವಿಚಾರಗಳನ್ನು ಗೊತ್ತಿರುವವರನ್ನೂ ಸದರಿ ಸಮಿತಿಯಲ್ಲಿ ಅವಕಾಶ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಗಳೆ, ನಮ್ಮ ಕಡೆ ತುಂಬಾ ಮಳೆ ಬರುವುದರಿಂದ ಸ್ಟಾಕಿಂಗ್ ಯಾರ್ಡ್‌ಗಳನ್ನು ನಮ್ಮ ಗುಡ್ಡ-ಗಾಡು ಪ್ರದೇಶಗಳ ಬದಲಾಗಿ ಹೋಬಳಿ ಮಟ್ಟದಲ್ಲಿ ಸ್ಟಾಕ್ ಮಾಡುವಂತಹ ವ್ಯವಸ್ಥೆ ಮಾಡಬೇಕು. ಇದರಿಂದ ಮಳೆಗಾಲದಲ್ಲೂ ಮರಳನ್ನು ಪೂರೈಕೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಕೊಡಗು ಜಿಲ್ಲೆಯಲ್ಲಿ ಅನೇಕ ನದಿಗಳು ಹರಿಯುತ್ತವೆ. ಹೇರಳವಾಗಿ ಮರಳು ಕೂಡ ದೊರೆಯುತ್ತದೆ. ನಮ್ಮ ಜಿಲ್ಲೆಗೆ ಬೇರೆ ಜಿಲ್ಲೆಯಿಂದ ಮರಳನ್ನು ತರುವ ಅವಶ್ಯಕತೆ ಖಂಡಿತವಾಗಿಯೂ ಇಲ್ಲ. ಸರ್ಕಾರದಿಂದ ಉನ್ನತ ಮಟ್ಟದ ಅಧಿಕಾರಿಗಳಿಂದ ವಿವರ ತರಿಸಿಕೊಂಡು ಅಲ್ಲಿ ವಿಭಿನ್ನ ಮರಳು ನೀತಿಯನ್ನು ಜಾರಿಗೆ ತರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೊಡಗಿನಲ್ಲಿ ಮರಳಿನ ಗಣಿಗಾರಿಕೆ ಮತ್ತು ಕೊರತೆ ಬಗ್ಗೆ ಪ್ರಸ್ತಾಪ ಮಾಡಿ ಅದನ್ನು ಹೇಗೆ ಸರಿಪಡಿಸುತ್ತೀರಿ ಎಂಬ ಮಾತನ್ನು ಕೇಳಿದರು. ಮೊನ್ನೆ ಸರ್ಕಾರ ಮರಳು ನೀತಿಯನ್ನು ಬದಲಾವಣೆ ಮಾಡಿದೆ. 2020ರಲ್ಲಿ ಉಪಖನಿಜ ರಿಯಾಯಿತಿ ತಿದ್ದುಪಡಿ ನಿಯಮದಂತೆ, 2021ರಲ್ಲಿ ನಿಯಮಗಳನ್ನು ರೂಪಿಸಿಕೊಂಡು ಕಳೆದ ವಾರ ಜಾರಿಗೊಳಿಸಲಾಗಿದೆ. ಸಣ್ಣ ಹಳ್ಳ, ಝರಿ ಮತ್ತು 1-2-3 ಶ್ರೇಣಿಯ ತೊರೆಗಳಿರುತ್ತವೆಯೋ ಅಥವಾ ಸಣ್ಣ ಸಣ್ಣ ಬ್ಲಾಕ್‌ಗಳಿರುತ್ತವೆಯೋ ಆ ಸಂಬಂಧಪಟ್ಟ ಪಂಚಾಯಿತಿಗೆ ಟನ್‌ಗೆ ರೂ. 300ರಂತೆ ಕೊಡಲಾಗುತ್ತಿದೆ. ಆ ಪಂಚಾಯಿತಿಯ ಮುಖಾಂತರ ಕೊಡುವುದಕ್ಕೆ ಸಂಬಂಧಪಟ್ಟಂತೆ ಹೊಸ ಮರಳು ನೀತಿಯನ್ನು ತಂದಿದ್ದೇವೆ. ಇದರಿಂದ ನಿಮಗೆ ಸಾಕಷ್ಟು ಅನುಕೂಲವಾಗುತ್ತದೆ. ದೊಡ್ಡ ಬ್ಲಾಕ್‌ಗಳೇನಿರುತ್ತದೆಯೋ ಅಲ್ಲಿಂದ ಕಾರ್ಪೋರೇಷನ್ ಮೂಲಕ ಕಲೆಕ್ಟ್ ಮಾಡಿ, ಆನ್‌ಲೈನ್ ಮುಖಾಂತರ ಬೇಡಿಕೆಗೆ ಅನುಗುಣವಾಗಿ ಪೂರೈಸುವ ವ್ಯವಸ್ಥೆ ಮಾಡಿದ್ದೇವೆ.

ಮಾನ್ಯ ಸಭಾಪತಿಗಳೆ, 17 ಮರಳು ಬ್ಲಾಕ್‌ಗಳಲ್ಲಿ ಮರಳು ಟೆಂಡರ್‌ಗಳು ಆಗಿವೆ. ಅವುಗಳಲ್ಲಿ ಕೆಲವು ವರ್ಕ್ ಆಗುತ್ತಿಲ್ಲ ಎನ್ನುವುದಾದರೆ ಅವುಗಳನ್ನೂ ಕೂಡ ರೀಟೆಂಡರ್ ಮಾಡುತ್ತೇವೆ. ಮತ್ತೆ, ಸರ್ಕಾರದ ಕಾಮಗಾರಿಗಳಿಗಾಗಿ 11 ಮರಳು ಬ್ಲಾಕ್‌ಗಳನ್ನು ಮೀಸಲಿರಿಸಲಾಗಿತ್ತು. ಅವುಗಳನ್ನೂ ಕೂಡ ಆದಷ್ಟು ಬೇಗ ಟೆಂಡರ್ ಮಾಡಿ ಮರಳು ಕೊಡುವುದಕ್ಕೆ, ಆ ಭಾಗದಲ್ಲಿ ಮರಳಿನ ಕೊರತೆ ಆಗದೇ ಇರುವ ಹಾಗೆ ಅನುಕೂಲ ಮಾಡಿಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಪ್ರಶ್ನೆ ಸಂಖ್ಯೆ: (237 + 236)
## (ಉತ್ತರ ಲಗತ್ತಿಸಲಾಗಿದೆ)

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿನ ವಿಕಲಚೇತನರಿಗೆ ಇಲಾಖೆಯ ವತಿಯಿಂದ ರೂಪಿಸಿದ ಯೋಜನೆಗಳಾವುವು; ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳಾವುವು; ಎಷ್ಟು ಯೋಜನೆಗಳು ಅನುಷ್ಠಾನಗೊಂಡಿಲ್ಲ ಎಂದು ಪ್ರಶ್ನೆ ಕೇಳಿದ್ದೇನೆ. ಈ ಕುರಿತಂತೆ ಸನ್ಮಾನ್ಯ ಸಚಿವರು ಸಾಕಷ್ಟು ಮಾಹಿತಿಯನ್ನು ಕೊಟ್ಟಿದ್ದಾರೆ. ಸುದೀರ್ಘವಾದ ಉತ್ತರವನ್ನೂ ಕೊಟ್ಟಿದ್ದಾರೆ. ಅಂಗವಿಕಲರ ಮಾಸಾಶನ ಮತ್ತು ಇನ್ನಿತರ ಸೌಲಭ್ಯಗಳನ್ನು ಕೊಡುವಂತಹ ಸಂದರ್ಭದಲ್ಲಿ, ಅಂಕವಿಕಲತೆ ಶೇಕಡ 75 ರಷ್ಟಿರುವುದನ್ನು ಗಣನೆಗೆ ತೆಗೆದುಕೊಳ್ಳುತ್ತಿದ್ದಾರೆ. ಈ ಪರ್ಸೆಂಟೇಜನ್ನು ಇಳಿಸಿ 50 ರಿಂದ 60ಕ್ಕೆ ಇಳಿಸಬೇಕೆಂದು ಸರ್ಕಾರವನ್ನು ಆಗ್ರಹ ಮಾಡುತ್ತೇನೆ. ಇದರ ಜೊತೆ, ಶಾಸಕರ ಅನುದಾನದಲ್ಲಿ ತ್ರಿಚಕ್ರ ವಾಹನಕ್ಕೆಂದು ಶೇಕಡ 10ರಷ್ಟು ಕೊಡುವುದು ನಡೆಯುತ್ತಿದೆ. ಅಂಗವಿಕಲರಿಗೆ 20-60 ವರ್ಷದ ವಯೋಮಿತಿಯಲ್ಲಿ ಒಂದು ಬಾರಿ ಮಾತ್ರ ಕೊಡುವ ಕೆಲಸ ಆಗುತ್ತಿದೆ. 40 ವರ್ಷದ ಅವಧಿಯಲ್ಲಿ ಒಂದೇ ವಾಹನದ ಮೂಲಕ ಓಡಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ಇನ್ನೊಂದು ವಾಹನವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಶಾಸಕರ ಅನುದಾನದಲ್ಲಿ ಅಂಗವಿಕಲರ ಮಹಿಳೆಯರಿಗೆ, ಅಂಗವಿಕಲ ನಿರುದ್ಯೋಗಿ ಯುವಕರಿಗೆ ಟೈಪಿಂಗ್ ಮೆಷಿನ್‌ಗಳನ್ನು, ಜೆರಾಕ್ಸ್ ಮೆಷಿನ್‌ಗಳನ್ನು ಅಥವಾ ಲ್ಯಾಪ್‌ಟಾಪ್ ನಂತರ ಸಣ್ಣ ಸಣ್ಣ ಉದ್ಯೋಗ ಮಾಡುವ ನಿಟ್ಟಿನಲ್ಲಿ ಬಳಕೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಂಗ ವೈಕಲ್ಯ ಹೊಂದಿರುವವರು ಮದುವೆ ಮಾಡಿಕೊಂಡಾಗ ರೂ.50 ಸಾವಿರ ಪ್ರೋತ್ಸಾಹ ಧನವನ್ನು ಸರ್ಕಾರ ಕೊಡುತ್ತಿದೆ. ಅಂತರ್ಜಾತಿ ವಿವಾಹವನ್ನು ಮಾಡಿಕೊಂಡರೆ ಸರ್ಕಾರ ಅವರಿಗೆ ರೂ. 5 ಲಕ್ಷಗಳನ್ನು ಕೊಡುತ್ತದೆ. ಅದೇರೀತಿ ಅಂಗವಿಕಲ ಮಕ್ಕಳನ್ನು ಮದುವೆ ಆದಾಗ ರೂ. 50 ಸಾವಿರ ಕೊಡುವುದನ್ನು ಹೆಚ್ಚು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಕೇಂದ್ರ ಸರ್ಕಾರದಿಂದ ದೀನದಯಾಳ್ ಉಪಾಧ್ಯಾಯ ಅವರ ಹೆಸರಿನಲ್ಲಿ ಪ್ರಾರಂಭಿಸಿರುವ ಯೋಜನೆ ಅಡಿ ಅಂಗವಿಕಲ ಮಕ್ಕಳ ಪುನರ್ವಸತಿ ಯೋಜನೆ ಅಡಿ ಈಗಾಗಲೇ 8 ಸಂಸ್ಥೆಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ. ಇಂತಹ ಸಂಸ್ಥೆಗಳನ್ನು ಇನ್ನಷ್ಟು ಹೆಚ್ಚು ಮಾಡಿದರೆ ಇನ್ನಷ್ಟು ಅನುಕೂಲವಾಗುತ್ತದೆ. ಇದರಲ್ಲಿ ಕೇಂದ್ರ ಸರ್ಕಾರ ಶೇಕಡ 90ರಷ್ಟು ಅನುದಾನವನ್ನು ಕೊಡುವುದರಿಂದ ಇನ್ನಷ್ಟು ಇಂತಹ ಸಂಸ್ಥೆಗಳು ಪ್ರಾರಂಭ ಆಗಬೇಕು. ಅಂಕವಿಕಲರ ವೈದ್ಯಕೀಯ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರ ಭರಿಸಬೇಕು; ಆ ನಿಟ್ಟಿನಲ್ಲಿ ಸರ್ಕಾರ ಇವತ್ತು ಚಿಂತನೆ ಮಾಡಬೇಕೆಂದು ಆಗ್ರಹ ಮಾಡುತ್ತೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ**:- ಮಾನ್ಯ ಸದಸ್ಯರು ಹೊಸ ಬೇಡಿಕೆಗಳನ್ನು ಇಟ್ಟಿದ್ದಾರೆ. ಅಂಗವಿಕಲರಿಗೆ ಮಾಸಾಶನವನ್ನು ರೂ. 200 ಗಳನ್ನು ಹೆಚ್ಚು ಮಾಡುವುದರ ಸಂಬಂಧ 3 ತಿಂಗಳ ಹಿಂದೆ ಘೋಷಣೆ ಮಾಡಿದೆ. ಅದು ರೆವಿನ್ಯೂ ಇಲಾಖೆಯಿಂದ ಪಿಂಚಣಿ ಬರುತ್ತದೆ. ನಮ್ಮಿಂದ ಹೋಗುವುದಿಲ್ಲ. 2018-19ರಲ್ಲಿ ನಮ್ಮ ಇಲಾಖೆಯ ಮುಖಾಂತರ ಕೊಡಲಾಗುತ್ತಿತ್ತು. ನಂತರ 2019-20 ರಿಂದ ರೆವಿನ್ಯೂ ಇಲಾಖೆಯವರು ಕೊಡುತ್ತಿದ್ದಾರೆ. ನಮ್ಮ ಯೋಜನೆಯಲ್ಲಿ ಇರಲಾರದ ಅನುಕೂಲಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಮಾನ್ಯ ಸದಸ್ಯರು ಕೇಳಿದ್ದಾರೆ. ಅದನ್ನು ಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡಿ ಮಾನ್ಯ ಸದಸ್ಯರ ಬೇಡಿಕೆಗಳನ್ನು ಜಾರಿಗೆ ತರುವ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ನಿರಾಣಿ ಹಣವಂತ್ ರುದ್ರಪ್ಪ**:- ಮಾನ್ಯ ಸಭಾಪತಿಗಳೇ, ಅಂಗವಿಕಲರನ್ನು ಗುರುತಿಸಿ, ಈಗಾಗಲೇ ಗ್ರಾಮ ಪಂಚಾಯಿತಿಯಲ್ಲಿ ಒಂದು ಅಥವಾ ಎರಡು ಮನೆಗಳನ್ನು ಮಾತ್ರ ಕೊಡುತ್ತಿದ್ದಾರೆ. ಆದರೆ ಒಂದೇ ಸಲ, ರಾಜ್ಯದಲ್ಲಿರುವ ಅಂಗವಿಕಲ ಮಕ್ಕಳ ಸಂಖ್ಯೆ ಎಷ್ಟು, ಫಲಾನುಭವಿಗಳ ಸಂಖ್ಯೆ ಎಷ್ಟು ಎನ್ನುವ ವಿವರ ಇಲಾಖೆಯಲ್ಲಿ ಸಿಗುತ್ತದೆ. ಒನ್ ಟೈಮ್ ಸೂರು ಕಲ್ಪಿಸುವ ವ್ಯವಸ್ಥೆಯನ್ನು ಮಾಡುವುದು ಉತ್ತಮವಾದುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ**:- ಮಾನ್ಯ ಸಭಾಪತಿಗಳೆ, ಹೌಸಿಂಗ್ ಇಲಾಖೆ ಮುಖಾಂತರ ಮನೆಗಳನ್ನು ಕೊಡುವಂಥದ್ದಿದ್ದರೂ ಸಹಿತ, ಪ್ರತಿ ಇಲಾಖೆಯೂ ಅಂಗವಿಕಲರಿಗೆ ಶೇಕಡ 2 ರಷ್ಟು ಕೊಡಬೇಕು ಎನ್ನುವುದಿದೆ. ಆದರೆ ಹೌಸಿಂಗ್ ಇಲಾಖೆಯ ಮೂಲಕ ಹೆಚ್ಚು ಕೊಡಬೇಕು ಎನ್ನುವ ಮಾನ್ಯ ಸದಸ್ಯರ ಅಪೇಕ್ಷೆ ಇನಿದೆ ಅದನ್ನು ಸಂಬಂಧಪಟ್ಟವರ ಗಮನಕ್ಕೆ ತರುವ ಕೆಲಸ ಮಾಡುತ್ತೇವೆ

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಗಳೆ, ಅಂಗವಿಕಲರ ಕಲ್ಯಾಣ, ವಿಕಲಚೇತನರ ಕಲ್ಯಾಣಕ್ಕೆ ಸರ್ಕಾರ ಕೊಡುವ ಅನುದಾನು ರೂ. 200 ಕೋಟಿ. ಈ ಅನುದಾನವನ್ನು ಹೆಚ್ಚಳ ಮಾಡುವ ಪ್ರಯತ್ನ ಮಾಡಬೇಕು. ನಾವು ಇಷ್ಟೆಲ್ಲಾ ಸುದ್ದಿ ಮಾಡುತ್ತೇವೆ, ಅಂತಹ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ನೋಡುವಾಗ ಸುಮಾರು ಕನಸುಗಳು ಹುಟ್ಟುತ್ತವೆ; ಸರ್ಕಾರ ಎಷ್ಟು ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ ಎಂದೆನಿಸುತ್ತದೆ. ಆದರೆ ಒದಗಿಸುವ ಅನುದಾನ ರೂ. 190 ಕೋಟಿ. 3ನೇ ಪ್ರಶ್ನೆಗೆ ಉತ್ತರವಾಗಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಂಗವಿಕಲರಿಗಾಗಿ ತ್ರಿಚಕ್ರ ವಾಹನಗಳನ್ನು ನೀಡಲು ಅವಕಾಶ ಕಲ್ಪಿಸಿದ್ದು, ಪ್ರಾರಂಭದಲ್ಲಿ ವಾರ್ಷಿಕ ರೂ. 10.00 ಲಕ್ಷಗಳನ್ನು ವೆಚ್ಚ ಮಾಡಲು ಅವಕಾಶ ಕಲ್ಪಿಸಿದ್ದು, ಅದನ್ನು ರೂ. 20 ಲಕ್ಷಕ್ಕೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಚ್ಚಿಸಲಾಗಿದೆ ಎಂದಿದೆ. ಅಂದರೆ ಇದರಲ್ಲಿ ಅಡಿಷನಲ್ ಆಗಿ ಹಣವನ್ನು ಕೊಟ್ಟಿಲ್ಲ. ನಮಗೆ ಕೊಟ್ಟಿರುವ ಅನುದಾನದಲ್ಲೇ ರೂ. 10 ಲಕ್ಷದ ಬದಲಾಗಿ ರೂ. 20 ಲಕ್ಷ ಕೊಡಿ ಎಂದು ಆದೇಶ ಮಾಡಿ ಕೈ ತೊಳೆದುಕೊಂಡಿದ್ದಾರೆ.

(ಮುಂದು )

(1064) 14-12-2021 12.10 DS-AK

**ಶ್ರೀ ಅರುಣ ಶಹಾಪುರ(ಮುಂದು):-**

ಅದರ ಬದಲಿಗೆ ಈ ಶಾಸಕರ ಅನುದಾನದಿಂದ ಕೊಡುವಂತಹ ಕೆಲಸ ಮಾಡಿದರೆ ಒಳ್ಳೆಯ ಕಾರ್ಯವಾಗುತ್ತದೆ. ತ್ರಿಚಕ್ರ ವಾಹನ ಕೊಡುತ್ತಿರುವುದರಿಂದ ವಿಕಲಚೇತನರಿಗೆ ಬಹಳ ಅನುಕೂಲವಾಗುತ್ತಿದೆ. ಇತ್ತೀಚೆಗೆ ವಿಕಲಚೇತನರು ನನಗೆ ವಿನಂತಿ ಮಾಡಿಕೊಂಡಿರುವುದೇನೆಂದರೆ, ಸ್ವಯಂ ಉದ್ಯೋಗ ಮಾಡುವುದಕ್ಕೆ ಗೃಹ ಉದ್ಯೋಗಕ್ಕಾಗಿ ಸಣ್ಣ ಸಣ್ಣ ಯಂತ್ರೋಪಕರಣಗಳು ಬಂದಿವೆ. ನಿಮ್ಮ ಅನುದಾನದಲ್ಲಿ ಕೊಡುವುದಕ್ಕೆ ಅವಕಾಶ ಇದೆಯೇ ಎಂದು ಕೇಳಿದರು. ಆಗ ನಮಗೆ ಅವಕಾಶ ಇಲ್ಲ ಎಂದು ಹೇಳಬೇಕಾಗುತ್ತದೆ. ಆ ರೀತಿ ಯಾರಾದರೂ ವಿಕಲಚೇತನರು ಸ್ವಾವಲಂಬಿ ಬದುಕನ್ನು ನಡೆಸುವುದಕ್ಕೆ ಇಷ್ಟಪಟ್ಟಲ್ಲಿ ನಮ್ಮ ಅನುದಾನದಲ್ಲಿ ಅವರಿಗೆ ಗೃಹ ಉದ್ಯೋಗಗಳನ್ನು ನಡೆಸುವುದಕ್ಕೆ ಯಂತ್ರೋಪಕರಣಗಳನ್ನು ಕೊಡುವ ನಿಟ್ಟಿನಲ್ಲಿ ತಿದ್ದುಪಡಿಯನ್ನು ಮಾಡುತ್ತಾರೆಯೇ ಎಂದು ಮಾನ್ಯ ಸಚಿವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ರೂ.೧೦.೦೦ ರಿಂದ ರೂ.೨೦.೦೦ ಲಕ್ಷ ಕೊಡುತ್ತಾರೆಂದು ಹೇಳಿದ್ದಾರಲ್ಲಾ ಅದನ್ನು ನಮ್ಮ ಇಲಾಖೆಯಿಂದ ಕೊಡುತ್ತಿಲ್ಲ. ಅಂಗವಿಕಲ ಚೇತನರಿಗಾಗಿಯೇ ಬಹಳಷ್ಟು ಯೋಜನೆಗಳಿವೆ. ಈಗಿರುವ ಬಜೆಟ್ ಸಾಲುವುದಿಲ್ಲ, ಹೆಚ್ಚಿನ ಬಜೆಟ್ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗ ಬರತಕ್ಕಂಥ ಬಜೆಟ್‌ನಲ್ಲಿ ಅದಕ್ಕೂ ಹೆಚ್ಚು ಮಾಡುತ್ತೇವೆಂದು ಹೇಳಬಯಸುತ್ತಿದ್ದೇನೆ. ಸ್ವಯಂ ಉದ್ಯೋಗಕ್ಕಾಗಿ ಅನುದಾನ ಒದಗಿಸಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗಾಗಲೇ ಸ್ವಯಂ ಉದ್ಯೋಗಕ್ಕಾಗಿ ಆಧಾರ ಯೋಜನೆ ಇದೆ. ಆ ಯೋಜನೆಯ ಮೌಲಿಕ ಶೇಕಡ ೪೦ ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವಂಥವರಿಗೆ ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.೧೧,೫೦೦ ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.೨೪,೦೦೦ ನಿಗದಿಗೊಳಿಸಲಾಗಿದೆ. ಸಣ್ಣ ವ್ಯಾಪಾರ ನಡೆಸುವವರಿಗೆ ೧೦ ವರ್ಷಗಳಿಂದ ಕರ್ನಾಟಕದಲ್ಲಿ ನಿವಾಸಿಗಳಾಗಿರುವಂಥವರಿಗೆ ಕನಿಷ್ಠ ಸುಮಾರು ೧೫-೧೮ ವರ್ಷ ವಯಸ್ಸಿನವರಿಗೆ ರೂ.೧.೦೦ ಲಕ್ಷ ಕೊಡುತ್ತೇವೆ. ಶೇಕಡ ೫೦

ರಷ್ಟು ನಾವು ಕೊಡುತ್ತೇವೆ, ಬ್ಯಾಂಕ್‌ನವರು ಶೇಕಡ ೫೦ ರಷ್ಟು ಕೊಡುತ್ತೇವೆ. ಈ ಯೋಜನೆ ಮೂಲಕ ಅವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಅವರಿಗೆ ಸಹಾಯವನ್ನು ಮಾಡುತ್ತಿದ್ದೇವೆ. ಒಟ್ಟಾರೆಯಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ೧೦೭ ಯೋಜನೆಗಳಿವೆ. ೧೦೭ ಯೋಜನೆಗಳ ಮೂಲಕ ಅಂಗವಿಕಲ ಚೇತನರಿರಬಹುದು, ಮಕ್ಕಳಿಗೆ, ಬಾಣಂತಿಯರಿಗೆ ಅನುಕೂಲವಾಗುತ್ತಿದೆ. ಆದರೆ ಬಜೆಟ್ ಕಡಿಮೆ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಬಜೆಟ್ ಹೆಚ್ಚಿಗೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 229**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಿರುದ್ಯೋಗಿ ಪದವೀಧರರು ಸ್ವಯಂ ಉದ್ಯೋಗ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಯಾವ ಯಾವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ನಾನು ವಿವರಗಳನ್ನು ಕೇಳಿದ್ದೆ. ಮಾನ್ಯ ಸಚಿವರು ಸುದೀರ್ಘವಾದ ಉತ್ತರ ಕೊಟ್ಟಿದ್ದಾರೆ. ಆದರೆ, ನಾನು ಇನ್ನು ನಾಲ್ಕು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ. ನಿರುದ್ಯೋಗಿ ಪದವೀಧರರಿಗೆ ಸ್ವಯಂ ಉದ್ಯೋಗ ಪ್ರಾರಂಭಿಸುವ ಬಗ್ಗೆ ಮಾರ್ಗದರ್ಶನ ನೀಡಲು ತರಬೇತಿ ಕಾರ್ಯಗಾರಗಳನ್ನು ಸರ್ಕಾರದಿಂದ ಹಮ್ಮಿಕೊಳ್ಳಲಾಗಿದೆಯೇ ಎಂದು ಪ್ರಶ್ನೆಗಳನ್ನು ಕೇಳಿದ್ದೆ. ೨೦೨೧ ರಲ್ಲಿ "ಉದ್ಯಮಿಯಾಗು, ಉದ್ಯೋಗ ನೀಡು" ಎಂದು ಹೊಸ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದು ಬಹಳ ಸಂತೋಷದ ವಿಷಯವಾಗಿದೆ. ಇದು ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ. ಹಾಗಾಗಿ ನಾನು ಸರ್ಕಾರವನ್ನು ವಿಶೇಷವಾಗಿ ಬೃಹತ್ ಕೈಗಾರಿಕೆ ಸಚಿವರಾಗಿರುವಂಥ ಮಾನ್ಯ ಮುರುಗೇಶ್ ನಿರಾಣಿಯವರನ್ನು, ಮಾನ್ಯ ಎಂ.ಟಿ.ಬಿ. ನಾಗರಾಜ್‌ರವರನ್ನು ಅಭಿನಂದಿಸುತ್ತೇನೆ. ಈ ಕಾರ್ಯಕ್ರಮವನ್ನು ಏನು ಪ್ರಾರಂಭ ಮಾಡಿದ್ದಾರೆ ಅದು "ಉದ್ಯಮಿಯಾಗು, ಉದ್ಯೋಗ ನೀಡು" ಒಳ್ಳೆಯ ಕಾರ್ಯಕ್ರಮವಾಗಿದೆ. ಇದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳ ಸುಮಾರು ೯೦೦೦ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಬಹಳ ಸಂತೋಷ. ಇದೇ ಕಾರ್ಯಕ್ರಮವನ್ನು ಹುಬ್ಬಳಿ, ಧಾರವಾಡ, ಮಂಗಳೂರಿನಲ್ಲಿ ಮುಂದುವರೆಸುತ್ತೇವೆಂದು ಹೇಳಿದ್ದಾರೆ. ಇದನ್ನು ಈ ವರ್ಷಕ್ಕೆ ಮಾತ್ರ ಸೀಮಿತ ಮಾಡುತ್ತಾರೆಯೋ ಅಥವಾ ಈ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗುತ್ತಾರೆಯೋ ಎಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಈ ಕಾರ್ಯಕ್ರಮವನ್ನು ಕೇವಲ ಇಂಜಿನಿಯರಿಂಗ್ ಮತ್ತು MBBS ಪದವೀಧರರಿಗೆ ಮಾತ್ರ ಮಾಡಿದ್ದಾರೆ. ಬಹಳಷ್ಟು ಸಂಖ್ಯೆಯಲ್ಲಿ ಐ.ಟಿ.ಐ. ಮತ್ತು ಪಾಲಿಟೆಕ್ನಿಕ್ ಇಂಜಿನಿಯರ್‌ಗಳು ಇದ್ದಾರೆ. ಅವರಿಗೆ ಪ್ರತ್ಯೇಕವಾದಂತಹ ತರಬೇತಿ ಕಾರ್ಯಗಾರವನ್ನು ನಡೆಸಬೇಕು. "ಉದ್ಯಮಿಯಾಗು, ಉದ್ಯೋಗ ನೀಡು" ಎನ್ನುವ ಕಾರ್ಯಕ್ರಮವನ್ನು ಬೇರೆ ಬೇರೆ ವಿಭಾಗಗಳ ಮಟ್ಟದಲ್ಲಿ ಮಾಡುತ್ತಿದ್ದಾರೆ ಅದರಲ್ಲಿ ಐ.ಟಿ.ಐ. ಮತ್ತು ಪಾಲಿಟೆಕ್ನಿಕ್ ಇಂಜಿನಿಯರ್‌ಗಳಿಗೂ ಕೂಡ ಮಾಡುತ್ತೀರೋ ಇಲ್ಲವೋ? ಈ ರೀತಿಯ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆಯೇ ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಬಹಳ ಮುಖ್ಯವಾದ ಕಾರ್ಯಕ್ರಮವನ್ನು ೨೦೨೧ ರಲ್ಲಿ ಪ್ರಾರಂಭ ಮಾಡಿದ್ದಾರೆ. ಆದರೆ ಇಲ್ಲಿಯವರೆಗೂ ಯಾವ ಕಾರ್ಯಕ್ರಮಗಳಿದ್ದವು, ಇಲ್ಲಿಯವರೆಗೆ ಇವರಿಗೆ ತರಬೇತಿ ಕೊಡುವುದಕ್ಕೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವ ಕಾರ್ಯಕ್ರಮವೂ ಇರಲಿಲ್ಲವೇ ಎಂಬುದರ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಡಬೇಕು. ೨೦೨೧ ರಲ್ಲಿ ಹೊಸ ಯೋಜನೆಯನ್ನು ಪ್ರಾರಂಭ ಮಾಡಿರುವುದಕ್ಕೆ ಸರ್ಕಾರಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಹಿಂದೆ ಯಾವ ಯಾವ ಯೋಜನೆಗಳಿದ್ದವು ಎಂದು ಅದರ ಬಗ್ಗೆ ಮಾಹಿತಿಯನ್ನು ಉತ್ತರದಲ್ಲಿ ಕೊಟ್ಟಿಲ್ಲ. ಬಹಳ ಮುಖ್ಯವಾದ ವಿಚಾರವೇನೆಂದರೆ, ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮವನ್ನು ನಡೆಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ೩೧ ಜಿಲ್ಲೆಗಳಲ್ಲಿ ೧೩ ಜಿಲ್ಲೆಗಳಲ್ಲಿ ಮಾತ್ರ ಕಾರ್ಯಕ್ರಮವನ್ನು ನಡೆಸಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಏಕೆ ಮಾಡಿಲ್ಲ? ಜಿಲ್ಲಾ ಮಟ್ಟದಲ್ಲಿ ತರಬೇತಿ ಕಾರ್ಯಾಗಾರ ಮಾಡುವುದು ಬಹಳ ಅವಶ್ಯಕತೆ ಇದೆ. ಏಕೆಂದರೆ, ಪದವೀಧರರಿಗೆ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ರೀತಿಯ ಕಚ್ಚಾ ವಸ್ತುಗಳು ಸಿಗುತ್ತವೆ, ಅಲ್ಲೇನು product produce ಮಾಡಿದರೆ ಬೇಡಿಕೆ ಇದೆ ಎಂಬುದು ಅವರಿಗೆ ಗೊತ್ತಾಗುವುದಿಲ್ಲ. ಇದರ ಬಗ್ಗೆ ಸರ್ಕಾರ ಕೆಲಸ ಮಾಡಬೇಕು. ಜಿಲ್ಲಾ ಮಟ್ಟದಲ್ಲಿ ಈ ಇಲಾಖೆ ಮೂಲಕ ಪಾಲಿಟೆಕ್ನಿಕ್, ಐ.ಟಿ.ಐ., ಬಿ.ಇ. ಇರಬಹುದು, ಇವರೆಲ್ಲರಿಗೂ ಕೂಡ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಉದ್ಯೋಗವನ್ನು ಪ್ರಾರಂಭ ಮಾಡಬೇಕೆಂದು ತರಬೇತಿ ಕಾರ್ಯಕ್ರಮವನ್ನು ಮಾಡಬೇಕು. ಇಲ್ಲದಿದ್ದರೆ ಅವರಿಗೆ ಗೊತ್ತಾಗುವುದಿಲ್ಲ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ೭೫ನೇ ವರ್ಷದ ಸ್ವಾತಂತ್ರ್ಯೋತ್ಸವದ ಅಂಗವಾಗಿ ದಿನಾಂಕ:೧೧-೧೦-೨೦೨೧ ರಂದು ಬೆಂಗಳೂರು ಅರಮನೆ ಮೈದಾನದಲ್ಲಿ "ಉದ್ಯಮಿಯಾಗು, ಉದ್ಯೋಗ ನೀಡು" ಎನ್ನುವ ವಿನೂತನವಾದ ಕಾರ್ಯಕ್ರಮವನ್ನು ಪ್ರಾರಂಭ ಮಾಡಿ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಬೃಹತ್ ಕೈಗಾರಿಕೆ ಸಚಿವರಾದ ಮಾನ್ಯ ಮುರುಗೇಶ್ ನಿರಾಣಿಯವರು ಉದ್ಘಾಟನೆ ಮಾಡಿದರು. ಆ ಉದ್ಘಾಟನೆ ಮಾಡಿದಂತಹ ಸಂದರ್ಭದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆ, ಸುಮಾರು ೭-೮ ಜಿಲ್ಲೆಗಳಿಂದ ಸುಮಾರು ೯೦೦೦ ಯುವಕರು ಪಾಲ್ಗೊಂಡಿದ್ದರು. ಎಂ.ಬಿ.ಎ., ಬಿ.ಕಾಂ., ವೈದ್ಯಕೀಯ, ಎಲ್ಲಾ ಪದವೀಧರರು ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದನ್ನು ಮತ್ತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ೩-೪ ಜಿಲ್ಲೆಗಳು ಒಟ್ಟಾರೆಯಾಗಿ ಸೇರಿ ಈ ಕಾರ್ಯಾಗಾರವನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಮುರುಗೇಶ್ ನಿರಾಣಿಯವರು ಕೂಡ ಈ ಭಾಗದಲ್ಲಿ ಕಾರ್ಯಾಗಾರವನ್ನು ಮಾಡಬೇಕೆಂದು ಸಮಯವನ್ನು ನಿಗದಿ ಮಾಡಿದ್ದರು. ಅವರು ಅದರ ಬಗ್ಗೆ ನನಗೂ ಕೂಡ ಫೋನ್‌ನಲ್ಲಿ ನೀವು ಬನ್ನಿ ಎಂದು ಹೇಳಿದ್ದರು. ಆದರೆ ಕೆಲವು ಕಾರಣಾಂತರದಿಂದ ಆ ಕಾರ್ಯಾಗಾರವನ್ನು ಮುಂದೂಡಲಾಗಿದೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುವುದು ಸರಿಯಾಗಿದೆ. ನಾವು ಬರೀ ಐದು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಬಾರದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಈ ಕಾರ್ಯಾಗಾರ ಮಾಡಬೇಕು, ಈ ತರಬೇತಿ ಕಾರ್ಯಕ್ರಮಗಳನ್ನು

ಕೊಡಬೇಕು ಮತ್ತು "ಉದ್ಯಮಿಯಾಗು, ಉದ್ಯೋಗ ನೀಡು" ಎಂಬುದಕ್ಕೆ ಅವರಿಗೆ ಸರ್ಕಾರದಿಂದ ಯಾವ ಯಾವ ಸವಲತ್ತುಗಳು, ಯಾವ ಯಾವ ಸಾಲ ಧನ, ಪ್ರೋತ್ಸಾಹಧನ, ಸಬ್ಸಿಡಿ ಧನ, ಇವೆಲ್ಲದ್ದರ ಬಗ್ಗೆ ಸವಿಸ್ತಾರವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ನಾವು ಉತ್ತರದಲ್ಲೂ ಮಾಹಿತಿಯನ್ನು ಕೊಟ್ಟಿದ್ದೇವೆ. ಪಾಲಿಟೆಕ್ನಿಕ್ ಮತ್ತು ಐ.ಟಿ.ಐ. ಮಾಡಿದವರಿಗೆ ಕೌಶಲ್ಯಾಭಿವೃದ್ಧಿಯಿಂದ ತರಬೇತಿ ಕೇಂದ್ರಗಳು ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇವೆ. ಇವರಿಗೆಲ್ಲಾ ಸರ್ಕಾರ ಪ್ರೋತ್ಸಾಹ ಧನ, ಸಹಾಯ ಧನ, ಸಾಲಧನ ಕೊಡುವಂಥದ್ದು ಇದೆ. ಇವತ್ತು ಬಹಳ ಮುಖ್ಯವಾಗಿ ರಾಜ್ಯದಲ್ಲೇ ಅಲ್ಲ, ಇಡೀ ದೇಶದಲ್ಲೇ ಈ ಸಮಸ್ಯೆ ಇದೆ. ಕೋವಿಡ್-೧೯ ಬಂದು ಲಾಕ್‌ಡೌನ್ ಆದ ಮೇಲೆ ಬಹಳಷ್ಟು ಸಣ್ಣ ಕೈಗಾರಿಕೆಗಳು ಮುಚ್ಚಿವೆ. ಕಳೆದ ಎರಡು ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳಲ್ಲಿ ಉದ್ಯೋಗಿಗಳ ಕೊರತೆಯಾಗಿದೆ. ಕೋವಿಡ್-೧೯ ಭಯದಿಂದ ಕೆಲವರೆಲ್ಲಾ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಊರುಗಳಿಗೆ ಹೋಗಿದ್ದಾರೆ. ಹಾಗಾಗಿ ಸಣ್ಣ ಕೈಗಾರಿಕೆಗಳು ಮುಚ್ಚಿವೆ. ಅದಕ್ಕೆ ಈಗ "ಉದ್ಯಮಿಯಾಗು, ಉದ್ಯೋಗ ನೀಡು" ಕಾರ್ಯಕ್ರಮಕ್ಕೆ ಇವತ್ತು ನಿರುದ್ಯೋಗಿ ಪದವೀಧರರು ಕೈಗಾರಿಕೆಯನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯಡಿ ಸಬ್ಸಿಡಿಯನ್ನು ಕೂಡ ಈಗಾಗಲೇ ನೀಡುತ್ತಿದೆ.

(ಮುಂದು)

(1065) 14-12-2021/12-20/ bkp-rn

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ)(ಮುಂದು)**

ಅದಲ್ಲದೆ, ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು 25 ಲಕ್ಷ ರೂಪಾಯಿಗಳವರೆಗೆ ಸಬ್ಸಿಡಿ ಸಾಲವನ್ನು ನೀಡಲಾಗುತ್ತಿದೆ.

**ಸಭಾಪತಿಯವರು:-** ನಿಮ್ಮ ಕಡೆ ಇರುವ ಉತ್ತರದ ಪ್ರತಿಯನ್ನು ಸದಸ್ಯರಿಗೆ ಕೊಡಿ.

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ನನ್ನ ಮೂಲ ಪ್ರಶ್ನೆ ಏನೆಂದರೆ ಪದವೀಧರರಿಗೆ ಮಾಡಿದ್ದೀರಿ. ಪಾಲಿಟೆಕ್ನಿಕ್ ಮಾಡಿರುವಂತಹ ಹುಡುಗರಿಗೆ ಮಾಡುವ ಅವಶ್ಯಕತೆ ಇದೆ. ITI ಮಾಡಿರುವಂತಹ ಹುಡುಗರಿಗೆ ಮಾಡುವ ಅವಶ್ಯಕತೆ ಇದೆ. ಇವರು ಕ್ರೀಡಾ skill ಬಗ್ಗೆ ಹೇಳಿದರು. ಅಲ್ಲಿ skill development ಅಷ್ಟೆ ಮಾಡುತ್ತಾರೆ. ಉದ್ಯೋಗ ಪ್ರಾರಂಭ ಮಾಡಲಿಕ್ಕೆ ಮಾರ್ಗದರ್ಶನ ಮಾಡಲಿಕ್ಕೆ ವ್ಯವಸ್ಥೆ ಅಲ್ಲಿ ಇಲ್ಲ.

**ಸಭಾಪತಿಯವರು:-** ಉಳಿದವರಿಗೆ ಮಾಡಿ ಎಂದು ಸದಸ್ಯರು ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ:-** ಕೌಶಲ್ಯ ಬೆಳಸಲಿಕ್ಕೆ ಮಾತ್ರ ಅವರ ಮಾರ್ಗದರ್ಶನ ಇದೆ. ಅದಕ್ಕೆ ಇವರಿಗೆ ಮಾಡುವ ಅವಶ್ಯಕತೆ ಇದ್ದು, ಇವರಿಗೆ ಮಾಡುತ್ತೀರಾ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ತಾವು ಕುಳಿತುಕೊಳ್ಳಿ. ಇದರ ಬಗ್ಗೆ ಸಚಿವರಾದ ನಿರಾಣಿಯವರು ಹೇಳುತ್ತಾರೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಇಡೀ ಕರ್ನಾಟಕ ರಾಜ್ಯಾದ್ಯಂತ ಪ್ರತಿ ವರ್ಷ ಸುಮಾರು 1 ಲಕ್ಷ 25 ಸಾವಿರದಷ್ಟು ಇಂಜಿನೀಯರ್‌ಗಳು ಪಾಸಾಗುತ್ತಾರೆ. ಅದೇ ratio ದಲ್ಲಿ ಎಂಬಿಎ, ಇರಬಹುದು, ಬಿಕಾಂ, ಬಿಎಸ್ಸಿ ಪಿ.ಹೆಚ್.ಡಿ. ಹೋಲ್ಡರ್ಸ್ , ಕಾನೂನು ಪದವೀಧರರು ಇರಬಹುದು. ಇವರೆಲ್ಲರೂ ಪಾಸ್ ಆಗಿರುವುದರಿಂದ ಈಗ ನಮ್ಮ ಐಟಿಐ ಪಾಸ್ ಆದವರು ನಮ್ಮ ಕಾರ್ಖಾನೆಗಳಲ್ಲಿ ಬಹಳ ಕೊರತೆ ಇದೆ. ಅವರಿಗೆ ನಾವು ತರಬೇತಿಯನ್ನು ಕೊಟ್ಟು, ಕಾರ್ಖಾನೆಗಳಿಗೆ ತೆಗೆದುಕೊಳ್ಳುವುದು ಬಹಳ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ನಾವು ಉದ್ಯಮಿ ಹಾಗೂ ಉದ್ಯೋಗ ನೀಡುವಂತಹ ಒಂದು ವಿನೂತನ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಕಳೆದ ತಿಂಗಳು ಅರಮನೆ ಮೈದಾನದಲ್ಲಿ ಪ್ರಾರಂಭ ಮಾಡಿದಾಗ 10 ಸಾವಿರಗಿಂತಲೂ ಹೆಚ್ಚು ಪದವೀಧರರು ಒಂದು ದಿನ ಪೂರ್ಣವಾಗಿ ಅದರಲ್ಲಿ ಪಾಲ್ಗೊಂಡಿದ್ದರು. ತದನಂತರ sector specific ಆಗಿ ಅಂದರೆ, ಯಾವ ಒಂದು ಸೆಕ್ಟರ್‌ನಲ್ಲಿ ಆಸಕ್ತಿ ತೋರಿಸುತ್ತಾರೆ ಆ ಆಸಕ್ತಿಯಿಂದ 7 ದಿವಸಗಳಿಂದ 30 ದಿವಸಗಳವರೆಗೆ ಅವರುಗಳಿಗೆ ವಿಶೇಷ ತರಬೇತಿಯನ್ನು ಉಚಿತವಾಗಿ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಇದರಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಲ್ಲಿ ಯಾವ ಯಾವ ಸಬ್ಸಿಡಿಗಳಿವೆ, ಯಾವ ಯಾವ ಸವಲತ್ತುಗಳಿವೆ ಎನ್ನುವುದನ್ನು ಅವರಿಗೆ ನೇರವಾಗಿ ಮತ್ತು ವಿವರವಾದ ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ಮಾಡಿಕೊಡುವಂತಹ ವ್ಯವಸ್ಥೆಯನ್ನು ನಮ್ಮ ಇಲಾಖೆಯಲ್ಲಿ ಮಾಡಿದ್ದೇವೆ. ಈಗ ಮೊನ್ನೆ ಬೆಳಗಾವಿ ಮತ್ತು ಕಲ್ಬುರ್ಗಿಯಲ್ಲಿ ಈ ಸಂಬಂಧ ದಿನಾಂಕವನ್ನು ನಿರ್ಧಾರ ಮಾಡಿದ್ದೇವೆ. ಆದರೆ code of conduct ಬಂದಿರುವುದರಿಂದ ಅದನ್ನು ಮುಂದೂಡಿದ್ದೇವೆ. ಬರುವ ಜನವರಿಯಿಂದ ಮತ್ತೆ ಕಲ್ಬುರ್ಗಿ ಮತ್ತು ಬೆಳಗಾವಿ, ಮೈಸೂರು, ತುಮಕೂರು ಮತ್ತು ಮಂಗಳೂರು ಈ 5 ಕಡೆ ಈಗಾಗಲೇ ದಿನಾಂಕವನ್ನು ಘೋಷಣೆ ಮಾಡಿದ್ದೇವೆ. ಅದು ಪದವೀಧರರಿಗೆ ಬಹಳ ಅವಶ್ಯಕತೆಯಾಗುತ್ತದೆ. ಬಹಳಷ್ಟು ಜನರಿಗೆ ಸಿಲಬಸ್‌ನಲ್ಲಿ ಇಲ್ಲದೇ ಇರುವಂತಹದ್ದನ್ನು, ಯಾವ ರೀತಿ project ಮಾಡಬೇಕೆನ್ನುವುದು ಅವರಿಗೆ ಗೊತ್ತಿರುವುದಿಲ್ಲ. ಉದಾಹರಣೆಗೆ ಇವತ್ತು ಟೆಕ್ಸ್‌ಟೈಲ್ಸ್ ಮಿಲ್ ಬಹಳ ಕೊರತೆ ಇದೆ ಮತ್ತು profit making ಕಂಪನಿ ಇದೆ. ಬೇರೆ ಬೇರೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಅದು ಏರಿಳಿತ ಆಗುತ್ತದೆ. 40% ಸಬ್ಸಿಡಿ ಇದೆ. 100 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟ್ ಮಾಡಿದರೆ 40 ಕೋಟಿ ರೂಪಾಯಿಗಳ ಸಬ್ಸಿಡಿ ಇದೆ. ಈ ರೀತಿಯಲ್ಲಿ ನಾವು ಹತ್ತಾರು ಯೋಜನೆಗಳನ್ನು ಹೇಳಬಹುದು. ಎಸ್‌ಸಿ/ಎಸ್‌ಟಿ ಸಮಾಜದವರಿಗೆ ನಾವು 75% ರಷ್ಟು ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಬೆಂಗಳೂರಿನಲ್ಲಿ ಒಂದು ಎಕರೆ ಜಮೀನಿಗೆ 3 ಕೋಟಿ ರೂಪಾಯಿಗಳಷ್ಟು ಬೆಲೆ ಇದ್ದರೆ 2 ಕೋಟಿ 25 ಲಕ್ಷ ರೂಪಾಯಿಗಳು ಅವರಿಗೆ ಸಬ್ಸಿಡಿ ಹೋಗುತ್ತದೆ. ಉಳಿದಿರುವಂತಹ 25%ಗೆ 10 ಕಂತು ಕೊಡುತ್ತೇವೆ. ಅದಕ್ಕೆ 6%, 4%, 0% ಬಡ್ಡಿ. ಈ ರೀತಿಯಲ್ಲಿ ಬೇರೆ ಬೇರೆ ಇದೆ. ಇದು ಪದವೀಧರರಿಗೆ ಗೊತ್ತಿರುವುದಿಲ್ಲ. ಇದು ಯಾವುದೇ ಸಿಲಬಸ್‌ನಲ್ಲಿ ಕವರ್ ಅಗಿರುವುದಿಲ್ಲ. ಅದಕ್ಕೆ ಕರೆದಾಗ ಅವರು ಅರ್ಜಿ ಹಾಕಬೇಕಾಗುತ್ತದೆ.

**ಸಭಾಪತಿಯವರು:-** ಪದವೀಧರರಿಗೆ ಗೊತ್ತಾಗಬೇಕೆಂದರೆ ಈ ಸಂಬಂಧ ಪಬ್ಲಿಸಿಟಿ ಮಾಡಿ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೆ, ಆ ಒಂದು ಕೆಲಸವನ್ನು ಸಹ ಈಗ ಮಾಡುತ್ತಿದ್ದೇವೆ. ಅದರ ಜೊತೆಯಲ್ಲಿಯೇ ಈಗ ಕಲ್ಬುರ್ಗಿಯಲ್ಲಿ ಮಾಡುವ ಸಲುವಾಗಿ ಬೆಂಗಳೂರಿನಲ್ಲಿ ಮಾಡಿರುವುದನ್ನು ತಿಳಿದುಕೊಂಡು ಮಾಡಲಾಗುತ್ತದೆ. 8 ಸಾವಿರಕ್ಕಿಂತಲೂ ಹೆಚ್ಚು ನೋಂದಣಿಯಾಗಿತ್ತು. ಇದು ಎಲ್ಲಾ ಬರುವುದನ್ನು ನೋಡಿದಾಗ ಪ್ರತಿಯೊಂದು ಕಡೆ ಬಹಳ ಒಳ್ಳೆಯ ಪ್ರತಿಕ್ರಿಯೆ ಇದೆ . ಇವತ್ತು ತಾವು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ, ಅದು ಸಂಪೂರ್ಣವಾಗಿ ಇಡೀ ರಾಜ್ಯಾದ್ಯಂತ ಇದರ ಬಗ್ಗೆ ತಿಳುವಳಿಕೆ ಕೊಡುವಂತಹ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಮಾಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನನಗೆ ಅವಕಾಶವನ್ನು ಕೊಡಿ. ಸ್ವಯಂ ಉದ್ಯೋಗ ಪ್ರಾರಂಭ ಮಾಡಲಿಕ್ಕೆ ಸರ್ಕಾರದಿಂದ ಸೀಡ್ ಮನಿ ಕೊಡುತ್ತೀರಾ ಎಂದು ಕೇಳಿರುವುದಕ್ಕೆ ಎಸ್‌ಸಿ/ಎಸ್‌ಟಿ.ಯವರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಸಂತೋಷ. ಇದನ್ನು ಜನರಲ್ ಕ್ಯಾಟಗರಿಗೆ ಕೊಡಲಿಕ್ಕೆ ಈ ಯೋಜನೆಯನ್ನು ಸರ್ಕಾರದ ವತಿಯಿಂದ ರೂಪಿಸಿಕೊಳ್ಳುತ್ತೀರಾ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎನ್. ನಾಗರಾಜ್ (ಎಂ.ಟಿ.ಬಿ):** ಸೀಡ್ ಮನಿ ಕೊಡುವುದರಲ್ಲಿ ಸಂಸ್ಥೆಗಳ ಸಾಲ ಮತ್ತು ಬಂಡವಾಳ ಹೂಡಿಕೆಯಲ್ಲಿ ಶೇಕಡ 50 ರಷ್ಟು ಬಡ್ಡಿರಹಿತ ಸಾಲವನ್ನು ಕೊಡಲಾಗುತ್ತಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಸಾಲದ ವಿಷಯ ಬಿಡಿ. ಸೀಡ್ ಮನಿಯನ್ನು ಕೇಳುತ್ತಿದ್ದೇನೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಸಭಾಪತಿಯವರು:-** ನೀವು ಇಬ್ಬರು ಏತಕ್ಕೆ ಗುದ್ದಾಡುತ್ತಿದ್ದೀರಿ. ಈ ಕಡೆ ನೋಡಿ ಮಾತನಾಡಿ.

**ಶ್ರೀ ಎನ್ ನಾಗರಾಜ್ (ಎಂ.ಟಿ.ಬಿ):** ಮಾನ್ಯ ಸಭಾಪಸತಿಯವರೇ, 5 ಕೋಟಿಯವರೆಗೂ 6% ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡುವಂತಹ ಕಾರ್ಯಕ್ರಮ ಕೂಡ ಇದರಲ್ಲಿ ಇದೆ.

**ಸಭಾಪತಿಯವರು:-** ಶ್ರೀಯುತ ಸಂಕನೂರರವರೆ, ಈ ವಿಚಾರದಲ್ಲಿ ನಿಮಗೆ ಏನಾಗಬೇಕೆಂದು ಹೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಸೀಡ್ ಮನಿಯನ್ನು ಎಸ್‌ಸಿ/ಎಸ್‌ಟಿ.ಯವರಿಗೆ ಕೊಡುತ್ತಿದ್ದು, ಇದನ್ನು ಸಾಮಾನ್ಯ ವರ್ಗದವರಿಗೂ ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ. ಅದಕ್ಕೆ ಸಚಿವರು ಉತ್ತರ ಕೊಡುತ್ತಿಲ್ಲ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ):** ಇದನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಸರ್ಕಾರ 6% ಬಡ್ಡಿ ದರದಲ್ಲಿ ಕೊಡುತ್ತಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ನಾನು ಕೇಳಿದ ಪ್ರಶ್ನೆಯನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ಸ್ವಯಂ ಉದ್ಯೋಗ ಮಾಡಲಿಕ್ಕೆ ಎಸ್‌ಸಿ/ಎಸ್‌ಟಿ.ಯವರಿಗೆ ಸೀಡ್ ಮನಿಯನ್ನು ಕೊಡುತ್ತಿದ್ದೀರಿ. ಅದೇ ರೀತಿ ಜನರಲ್ ಕ್ಯಾಟಗರಿಯವರಿಗೆ ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ. ಈಗ ಕೊಡುತ್ತಿಲ್ಲವಾದರೆ ಮುಂದೆ ಈ ಬಗ್ಗೆ ಯೋಜನೆಯನ್ನು ರೂಪಿಸುತ್ತೀರೋ ಎಂದು ಕೇಳುತ್ತಿದ್ದೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಇದನ್ನು ಜನರಲ್‌ನವರಿಗೂ ಕೊಡುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಇದನ್ನು ನಾನು ಸ್ಪಷ್ಟಪಡಿಸಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಶ್ರೀಯುತ ಶ್ರೀಕಂಠೇಗೌಡರೇ, ನೀವು ಮಾತನಾಡಬೇಕಾದರೆ ನನ್ನನ್ನು ಕೇಳಿ ಮಾತನಾಡಬೇಕಲ್ಲವೇ? ನಿಮಗೆ ಮಾತನಾಡಲು ನಾನು ಅನುಮತಿಯನ್ನು ಕೊಟ್ಟಿದ್ದೇನೆಯೇ? ಸುಮ್ಮನೆ ಮಾತನಾಡುತ್ತೀರಲ್ಲಾ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ):** ಮಾನ್ಯ ಸಭಾಸಪತಿಯವರೆ, ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಒಳ್ಳೆಯ ಉತ್ತರವನ್ನು ಹೇಳಿ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ):** ಮಾನ್ಯ ಸಭಾಸಪತಿಯವರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಾವು ಇಷ್ಟೊಂದು ಪ್ರಮಾಣದಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಬಡ್ಡಿಯಲ್ಲಿ ಕಡಿಮೆ ಕೊಟ್ಟಿದ್ದೇವೆ. ಸಾಲ 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದನ್ನು ಜನರಲ್ ಕ್ಯಾಟಗರಿಗೂ ಕೊಡಿ ಎನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೆ, ಇದು ಬಹಳ ಒಳ್ಳೆಯ ಪ್ರಶ್ನೆಯಾಗಿದೆ. ಆರ್ಥಿಕವಾಗಿ ಹಿಂದುಳಿದಿರುವಂತಹ ಎಸ್.ಸಿ/ಎಸ್.ಟಿ.ಯವರಿಗೆ ನಾವು ಏನು ಸವಲತ್ತು ಕೊಡುತ್ತಿದ್ದೇವೆ, ಅದೇ ಸವಲತ್ತನ್ನು ಜನರಲ್‌ನವರಿಗೂ ಕೊಡಬೇಕೆಂದು ನಾವು ತೀರ್ಮಾನ ತೆಗೆದುಕೊಂಡು ಇವತ್ತು ಈ ವಿಷಯವಾಗಿ ಕಡತ ಎಫ್.ಡಿಗೆ ಬಂದಿದೆ. 125 ಕೋಟಿ ರೂಪಾಯಿಗಳು ನಮಗೆ ಹೆಚ್ಚಿನ ಹೊರೆಯಾಗುತ್ತಿದೆ. ಅದರೂ ಸಹ ಇದನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರ ಸಲುವಾಗಿ ಕಡತವನ್ನು ಮುಂದುವರಿಸಿದ್ದೇವೆ. ಇದರಿಂದ ಹೆಚ್ಚ startups ಏನು ಬರುತ್ತಿದ್ದಾರೆ. ಹೆಚ್ಚು ತರಬೇತಿ ಹೊಂದಿರುವವರು ಏನಿದ್ದಾರೆ, ಅವರಿಗೆಲ್ಲರಿಗೂ ಅನುಕೂಲವಾಗುತ್ತದೆ. ಇದರ ಕರ್ನಾಟಕ ರಾಜ್ಯದಲ್ಲಿ ಇರುವಂತಹ ಕಾರ್ಖಾನೆಗಳಲ್ಲಿ ಸಾಮಾನ್ಯ ವರ್ಗದವರಿಗೆ ಅದರಲ್ಲೂ ಆರ್ಥಿಕವಾಗಿ ಹಿಂದುಳಿದಿರುವಂತಹವರಿಗೆ 10%ರಷ್ಟು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

**ಸಭಾಪತಿಯವರು:-** ಈಗ ಮಾನ್ಯ ಎಂ.ನಾರಾಯಣ ಸ್ವಾಮಿಯವರ ಪ್ರಶ್ನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಪ್ರಶ್ನೆ ಕೇಳಲಿಕ್ಕೆ ಮುಂಚಿತವಾಗಿ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಶಾಸಕರ ಅನುದಾನವನ್ನು ಏನು ಕೊಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡಿದ್ದೇವೆ. ಇದರ ಬಗ್ಗೆ ನೀವು ಸಭೆ ಕರೆದು ಎಲ್ಲಾ ಅಧಿಕಾರಿಗಳಿಗೆ ತಿಳಿಸಿದ್ದರೂ ಕೂಡ ಇವತ್ತಿನವರೆಗೂ ಕೂಡ ನಮಗೆ ಅನುದಾನ ಏನು ಬರಬೇಕಾಗಿದೆ, ಅದು ಬಂದಿಲ್ಲ. ನಾವು ಈಗ ಜನವರಿ 5ನೇ ತಾರೀಖು ನಿವೃತ್ತಿಯಾಗುತ್ತಿದ್ದೇವೆ. ಈ ಬಗ್ಗೆ ನಾವು ಪತ್ರವನ್ನು ಕೊಟ್ಟಿದ್ದೇವೆ, ಅನುದಾನವಾಗಿದೆ, ಅರ್ಧಂಬರ್ಧ ಕೆಲಸ ಆಗಿದೆ. ನಾವುಗಳು ಮಾಜಿ ಆದ ಮೇಲೆ ಗುತ್ತಿಗೆದಾರರು ಹಣ ಕೊಡಲಿಲ್ಲವೆಂದು ಹೇಳಿ ನಮ್ಮ ಮನೆ ಬಾಗಿಲಿಗೆ ಬಂದು ನಿಂತುಕೊಳ್ಳುತ್ತಾರೆ.

**ಸಭಾಪತಿಯವರು:-** ಈ ವಿಚಾರವನ್ನು ನೀವು ಶೂನ್ಯವೇಳೆಯಲ್ಲಿ ಕೇಳಬೇಕು. ಈಗ ನೀವು ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಪ್ರಶ್ನೆ ಸಂಖ್ಯೆ 251
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದು ಒಂದು ಬಹಳ ಗಂಭೀರವಾದ ಪ್ರಶ್ನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಮಕ್ಕಳು, ಬಾಣಂತಿಯರು ಮತ್ತು ಗರ್ಭಿಣಿಯರಿಗೆ ಯಾವ ರೀತಿಯ ಸವಲತ್ತುಗಳನ್ನು ಸರ್ಕಾರ ಕೊಡುತ್ತಿದೆ, ಕೊಡುತ್ತಿರುವಂತಹದ್ದು, ಅವರುಗಳಿಗೆ ಸಮರ್ಪಕವಾಗಿ ತಲುಪುತ್ತಿದೆಯೇ ಅಥವಾ ಇಲ್ಲವೇ? ತಲುಪದೇ ಅದು ಕಳ್ಳತನ ಆಗುತ್ತಿದೆಯೇ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ, ಇದನ್ನು ಮಕ್ಕಳಿಗೆ ಕೊಡಬೇಕೆಂದು ಸರ್ಕಾರ ಏನು ತೀರ್ಮಾನ ಮಾಡಿದೆ, ಬಾಣಂತಿಯರಿಗೆ ಕೊಡಬೇಕೆಂದು ತೀರ್ಮಾನ ಮಾಡಿದೆಯೋ ಮತ್ತು ಗರ್ಭಿಣಿ ಸ್ತ್ರೀಯರಿಗೆ ಕೊಡಬೇಕೆಂದು ತೀರ್ಮಾನ ಮಾಡಿದೆಯೋ, ಅದು ಸರ್ಮಪಕವಾಗಿ ಅದು ತಲುಪುತ್ತಿಲ್ಲವೆನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ. ಆದಕ್ಕೆ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬಾಣಂತಿಯರಿಗೆ ಮತ್ತು ಗರ್ಭಿಣಿಯರಿಗೆ ಪೌಷ್ಟಿಕಾಂಶದ ಕೊರತೆ ಇರುವುದನ್ನು ನಾನು ಕೇಳಿದ್ದೆ. ಪೌಷ್ಟಕಾಂಶದ ಆಹಾರವನ್ನು ೨೧ ರೂಪಾಯಿಗಳಿಗೆ ಕೊಡುತ್ತಾರಂತೆ. ಮಕ್ಕಳಿಗೆ ಪೌಷ್ಟಕಾಂಶದ ಆಹಾರವನ್ನು ೮ ರೂಪಾಯಿಗಳಿಗೆ ಕೊಡುತ್ತಾರಂತೆ. ಮತ್ತೆ ಏನೇನು ಕೊಡುತ್ತೀರಾ ಎಂದು ಕೇಳಿದ್ದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಕಡಲೆಬೀಜ, ಬೆಲ್ಲ, ಅಕ್ಕಿ, ತೊಗರಿಬೇಳೆ, ಸಕ್ಕರೆ ಹೆಸರುಬೇಳೆ, ಸಂಬಾರು ಪುಡಿ, ಹಾಲಿನ ಪುಡಿ, ಮೊಟ್ಟೆ ಎಂದು ಹೇಳಿದ್ದಾರೆ. ಮೊಟ್ಟೆ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೋದರೆ ಇಲ್ಲಿ ಏನೆಲ್ಲಾ ಮಾತನಾಡಬೇಕಾಗುತ್ತದೆ. ಪಾಪ, ಮಂತ್ರಿಗಳು ಮೊಟ್ಟೆಯಿಂದ ಇಲ್ಲಿ ಸ್ಥಾನ ಪಲ್ಲಟ ಆಗಿ ಹೋಗಿದೆ. ಇವತ್ತಿನ ವಿಷಯ ಆ ರೀತಿಯಲ್ಲಿ ಆಗಿದೆ. ಆದ್ದರಿಂದ, ಇದನ್ನು ಸಮರ್ಪಕವಾಗಿ ತಲುಪುತ್ತಿಲ್ಲವೆನ್ನುವುದು ಈಗಾಗಲೇ ಸಚಿವರಿಗೂ ಗೊತ್ತಿದೆ.

ಅಂಗನವಾಡಿಗಳಲ್ಲಿನ ಆಹಾರ ಅಕ್ರಮ ಸಾಗಣೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ಎನ್ನುವ ನನ್ನ ಪ್ರಶ್ನೆಗೆ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳು ಸರಬರಾಜಾದ ನಂತರ ಬಾಲವಿಕಾಸ ಸಮಿತಿ, ಇಲಾಖೆಯ ಮೇಲ್ವಿಚಾರಕಿಯರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಜಿಲ್ಲಾ ನಿರೂಪಣಾಧಿಕಾರಿಗಳು ಹಾಗೂ ಜಿಲ್ಲಾ ಉಪ ನಿರ್ದೇಶಕರು, ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತಿದ್ದಾರೆ. ಬಾಲವಿಕಾಸ ಸಮಿತಿಯ ಸದಸ್ಯರು ಫಲಾನುಭವಿಗಳ ಮನೆಗಳಿಗೆ ಭೇಟಿ ನೀಡಿ ಪೂರಕ ಪೌಷ್ಠಿಕ ಆಹಾರ ತಲುಪಿರುವ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಚಿತಪಡಿಸಿಕೊಳ್ಳುತ್ತಿದ್ದಾರೆ. ಮಕ್ಕಳಿಗೆ ಕೇವಲ 8 ರೂಪಾಯಿಗಳ ಪೌಷ್ಠಿಕ ಆಹಾರವನ್ನು ನೀಡುತ್ತಿದ್ದಾರೆ. ಇದಕ್ಕೆ ಯಾರು ಯಾರನ್ನು ಸೇರಿಸಿಕೊಂಡು ಏನು ಒಂದು ಸಮಿತಿಯನ್ನು ಮಾಡಿದ್ದಾರೆ. ಇದರಲ್ಲಿಯೇ ಕಳ್ಳರಿದ್ದಾರೆ. ಇವರೇ ಸಮರ್ಪಕವಾಗಿ ಕೊಡುತ್ತಿಲ್ಲ. ಇನ್ನು ೮ ರೂಪಾಯಿಗಳಿಗೆ ಕೊಡತಕ್ಕಂತಹ ಆಹಾರವನ್ನು ಫಲಾನುಭವಿಗಳ ಮನೆಗಳಿಗೆ ಹೋಗಿ ಪರಿಶೀಲನೆ ಮಾಡುತ್ತಿದ್ದಾರೆನ್ನುವ ಉತ್ತರವನ್ನು ಕೊಟ್ಟಿದ್ದೀರಿ. ಇದನ್ನು ನಾವು ನಂಬಬಹುದೇ? ಮಾನ್ಯ ಸಚಿವರು ಜವಾಬ್ದಾರಿಯಲ್ಲಿ ಇರುವಂತಹವರಾದ ತಮಗೆ ಇದರ ಬಗ್ಗೆ ಕಾಳಜಿ ಇದೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಏನು ನಾವು ಅಂಗನವಾಡಿ ಮಕ್ಕಳಿಗೆ , ಗರ್ಭಿಣಿಯರಿಗೆ, ಬಾಣಂತಿಯರಿಗೆ ಕೊಡತಕ್ಕಂತಹ ಆಹಾರ ಏನಿದೆ, ಅದು ಅವರಿಗೆ ಸರಿಯಾದ ರೀತಿಯಲ್ಲಿ ತಲುಪುತ್ತಿಲ್ಲ. ಇದರ ಬಗ್ಗೆ ನಾನು ಹೇಳಬೇಕಾಗಿಲ್ಲ. ಉದಾಹರಣೆಯನ್ನು ನಾನು ಕೊಡುತ್ತೇನೆ. ಕಲ್ಬುರ್ಗಿಯಲ್ಲಿ ಮಾಳಪ್ಪ ಪೂಜಾರಿ ಎನ್ನುವವರ ಜಮೀನಿನಲ್ಲಿ ೨ ಕ್ವಿಂಟಾಲ್ ಪುಷ್ಟಿ ಆಹಾರ, ೧ ಕ್ವಿಂಟಾಲ್ ಅಕ್ಕಿ ಸೇರಿದಂತೆ ಅನೇಕ ಆಹಾರ ಸಾಮಗ್ರಿ ಕಳೆದ ರಾತ್ರಿ ಪತ್ತೆಯಾಗಿದೆ.

(ಮುಂದು)

**(1066) 14.12.2021 12.30 ಎಸ್‌ವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ನಾನು ಫೋಟೋ ಸಮೇತ ತೋರಿಸುತ್ತೇನೆ. ಯಾರೋ ಒಬ್ಬ ಏಜೆಂಟ್‌ನ ತೋಟದ ಮನೆಯಲ್ಲಿ ಸಾಮಗ್ರಿಗಳನ್ನು ಇಟ್ಟುಕೊಂಡಿದ್ದು, ಅದನ್ನು ವಶಪಡಿಸಿಕೊಳ್ಳಲಾಗಿದೆ. ಈ ತರಹದ ಪ್ರಕರಣಗಳು ನಿಮಗೆ ಬಂದಿವೆಯಾ ಎಂದು ಕೇಳಿದರೆ ಮೂರು ವರ್ಷಗಳಲ್ಲಿ ಕೇವಲ ಮೂರು ಪ್ರಕರಣಗಳು ಮಾತ್ರ ಬಂದಿವೆ. ಕಳ್ಳ ಸಾಗಾಣಿಕೆಯಿಂದಾಗಿ ಅಂಗನವಾಡಿಗೆ ಬರಬೇಕಾಗಿದ್ದ ಸಾಮಗ್ರಿಗಳು ಅಂಗನವಾಡಿಯನ್ನು ತಲುಪುತ್ತಲೇ ಇಲ್ಲ. ಅಂಗನವಾಡಿಯ ಪುಟ್ಟ ಮಕ್ಕಳು ಯಾರನ್ನೂ ಕೂಡ ಪ್ರಶ್ನೆ ಮಾಡುವುದಿಲ್ಲ. ಎಲ್ಲಿಂದ ಎಲ್ಲಿಗೆ ಸರಬರಾಜು ಆಗಬೇಕಾಗಿತ್ತೋ ಅಲ್ಲಿಂದ ಗೋಡೌನ್‌ಗಳಿಗೆ ಹೋಗುತ್ತಿವೆ. ಅದನ್ನು ತಡೆಯಬೇಕೆಂಬುದು ನಮ್ಮ ಕಾಳಜಿ. ದಯಮಾಡಿ ಮಾನ್ಯ ಸಚಿವರು ಉತ್ತರಿಸಿದರೆ ನಂತರ ನಾನು ಮಾತನಾಡುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ್ದಂತಹ ಮಾಹಿತಿಯ ಪ್ರಕಾರ ಬಾಣಂತಿಯರಿಗಿರಬಹುದು, ಗರ್ಭಿಣಿಯರಿಗಿರಬಹುದು, 6 ತಿಂಗಳ ಚಿಕ್ಕ ಮಗುವಿಗೆ ಇರಬಹುದು, 3-6 ವರ್ಷಗಳ ಮಕ್ಕಳಿರಬಹುದು, ಅಪೌಷ್ಠಿಕತೆಯಿಂದ ಬಳಲುತ್ತಿರುವ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಕ್ಕಳಿಗಿರಬಹುದು ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ. ಮಾತೃಪೂರ್ಣ ಯೋಜನೆಯಡಿಯಲ್ಲಿ ಗರ್ಭಿಣಿಯರಿಗೆ ಒಂದು ದಿನಕ್ಕೆ ರೂ.21ರ ಪೌಷ್ಟಿಕ ಆಹಾರವನ್ನು ನೀಡಲಾಗುತ್ತದೆಯೇ ಎಂದು ಕೇಳಿದರು. ಹೌದು, ಕೊಡುತ್ತೇವೆ. ಐಸಿಡಿಸಿಯಿಂದ ರೂ.9.50 ಬಂದರೆ ಉಳಿದ ರೂ.11.50 ಗಳನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಹಾಕಿಕೊಂಡು ರೂ.21ಗಳನ್ನು ಒಂದು ದಿನಕ್ಕೆ ಒಂದು ಊಟಕ್ಕಾಗಿ ಗರ್ಭಿಣಿಯರಿಗೆ ಕೊಡಲಾಗುತ್ತಿದೆ. ಸರ್ಕಾರ ಇದನ್ನು ಬಹಳಷ್ಟು ದಿನಗಳಿಂದ ಕೊಡುತ್ತಾ ಬರುತ್ತಿದೆ. ಕೋವಿಡ್ ನಂತರ ಈ ಸಾಮಗ್ರಿಗಳನ್ನು ಅವರ ಮನೆಗಳಿಗೆ ತಲುಪಿಸುವಂತಹ ಕೆಲಸವನ್ನು ಮಾಡಲಾಗುತ್ತಿದೆ. ರೂ.8ರ ಮೌಲ್ಯದ ಆಹಾರ ಧಾನ್ಯಗಳನ್ನು ಅಂಗನವಾಡಿ ಮಕ್ಕಳಿಗೆ ಕೊಡುತ್ತಿದ್ದೇವೆ. ತೀರಾ ಅಪೌಷ್ಠಿಕತೆಯನ್ನು ಹೊಂದಿರುವ ಮಕ್ಕಳಿಗೆ ರೂ.12 ಅನ್ನು ಕೊಡುತ್ತೇವೆಂದೂ ನಾವು ಹೇಳಿದ್ದೇವೆ ಹಾಗೂ ಕೊಡುತ್ತಲೂ ಇದ್ದೇವೆ. ಈಗ ನೇರವಾಗಿ ಅಂಗನವಾಡಿಗೆ ಇಲ್ಲ. ಕೋವಿಡ್‌ನ ಕಾರಣದಿಂದಾಗಿ ಮನೆಗಳಿಗೆ ಕೊಡಲಾಗುತ್ತದೆ. ಕೆಲವು ರಾಜ್ಯ ಸರ್ಕಾರದ ಯೋಜನೆಗಳಾಗಿದ್ದು, ಕೆಲವು ಕೇಂದ್ರಸರ್ಕಾರದ ಯೋಜನೆಗಳಾಗಿವೆ. 3-6 ವರ್ಷದೊಳಗಿನ ಮಕ್ಕಳಿಗೆ ವಾರಕ್ಕೆರಡು ದಿನ ನಾವು ಮೊಟ್ಟೆಯನ್ನು ಕೊಡುತ್ತೇವೆ.

ರಾಜ್ಯ ಸರ್ಕಾರವು ಆರು ತಿಂಗಳುಗಳಿಂದ ಮೂರು ವರ್ಷದ ಮಕ್ಕಳವರೆಗೆ 150 ಎಂ.ಎಲ್. ಹಾಲನ್ನು ವಾರದಲ್ಲಿ 5 ದಿನಗಳು ನೀಡಲಾಗುತ್ತಿದೆ. ಇನ್ನೂ ವರದಿಯಾಗಿರುವುದರ ಅಕ್ರಮದ ಬಗ್ಗೆ ನೀವು ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದ್ದೀರಿ. ನಮ್ಮ ಗಮನಕ್ಕೆ ಬಂದ ಯಾವುದನ್ನೂ ನಾವು ನಿರ್ಲಕ್ಷ್ಯ ಮಾಡುವುದಿಲ್ಲ. ನೀವು-ನಾವು ಜವಾಬ್ದಾರಿಯುತ ಸ್ಥಾನದಲ್ಲಿದ್ದೇವೆ. ಆಯಾ ಊರುಗಳಲ್ಲಿ ಬಾಲ ವಿಕಾಸ ಸಮಿತಿ ಎಂದು ನಾವು ಮಾಡಿರುವುದು ಈ ರೀತಿಯಾದ ಅವ್ಯವಹಾರಗಳು ನಡೆಯಬಾರದು ಎನ್ನುವ ಉದ್ದೇಶದಿಂದಲೇ. ಅದು ಅಲ್ಲಿನ ಗ್ರಾಮ ಪಂಚಾಯ್ತಿಯವರಿಗೂ ಸಂಬಂಧವಿದೆ. ಎಲ್ಲರದ್ದೂ ಇದರಲ್ಲಿ ಜವಾಬ್ದಾರಿಯಿದೆ.

**ಸಭಾಪತಿಯವರು:-** ಅವರು ಪೋಲಾಗದಂತೆ ನೋಡಲು ಹೇಳುತ್ತಿದ್ದಾರೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಇದಕ್ಕೆ ಇನ್ನೂ ಹೆಚ್ಚಿನ ಕಠಿಣ ನಿಯಮಗಳನ್ನು ತಂದು ಅದನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ತಾವು ದೂರುಗಳೇ ಬಂದಿಲ್ಲವೆಂದು ಹೇಳಿದಿರಿ. ಅಂಗನವಾಡಿಯ ಆರು ತಿಂಗಳಿನಿಂದ 3 ವರ್ಷದ ಮಕ್ಕಳು ಯಾರು ದೂರು ಕೊಡುತ್ತಾರೆ? ಒಂದು ವೇಳೆ ಆ ಮಕ್ಕಳ ಪಾಲಕರು ಬಂದು ದೂರು ಕೊಟ್ಟರೆ ಆ ಮಕ್ಕಳನ್ನು ಶಾಲೆಯಿಂದ ಹೊರ ಹಾಕಲಾಗುವುದು. ಜೊತೆಗೆ ಈ ಸಮಿತಿಯಲ್ಲಿರುವವರೇ ಕಳ್ಳರು. ಮಾನ್ಯ ಸಚಿವರು ರೂ.8ರ ಸಾಮಗ್ರಿಗಳನ್ನು ನಾವು ಮಕ್ಕಳಿಗೆ ಕೊಡುತ್ತೇವೆಂದು ಹೇಳುತ್ತಾರೆ. ಇದು ಬಹಳ ಗಂಭೀರವಾದ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಷಯ. ಪುಷ್ಟಿ, ಬೆಲ್ಲ, ಸಕ್ಕರೆ, ಹಾಲಿನ ಪುಡಿ ಇಷ್ಟನ್ನೂ ರೂ.8ಕ್ಕೆ ನೀಡಲು ಸಾಧ್ಯವೇ? ಒಂದು ಚಾಕೊಲೇಟ್ ಕೂಡ ಎಂಟು ರೂಪಾಯಿ ಆಗುತ್ತದೆ. ಇದು ತಲುಪುತ್ತಿಲ್ಲ ಮಕ್ಕಳಿಗೆ. ಇದನ್ನು ಕೇಳುವುದಕ್ಕೆ ಹೋದರೆ ಆ ಮಗುವನ್ನು ಹೊರ ಹಾಕಿಬಿಡುತ್ತಾರೆ. ಇದನ್ನು ನೋಡಲು ಮನೆಗಳಿಗೆ ಹೋಗಿ ಪರಿಶೀಲಿಸಲಾಗುತ್ತಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯ್ದಂತೆ, ಸಮಿತಿಗೆ ನೇಮಕವಾಗಿರುವವರೇ ಕಳ್ಳರು. ಮಕ್ಕಳಿಗೆ ಮನೆಗಳಿಗೆ ಹೋಗಿ ಪರಿಶೀಲನೆ ಮಾಡುತ್ತೇವೆ ಎನ್ನುವುದು ಸತ್ಯವೇ? ಕೊರೊನಾ ಬರುವುದಕ್ಕಿಂತ ಮುಂಚೆ ಸರಿಯೋ ತಪ್ಪೋ ಮಕ್ಕಳಿಗೆ ಅಲ್ಲಿಯೇ ಅಡಿಗೆ ಮಾಡಿ ಬಡಿಸುತ್ತಿದ್ದರು. ನಾವು ಕಣ್ಣಾರೆ ನೋಡುತ್ತಿದ್ದೆವು. ಕೊರೊನಾ ಬಂದ ನಂತರ ಅಡಿಗೆ ಮಾಡುವುದನ್ನೇ ನಿಲ್ಲಿಸಿದ್ದಾರೆ. ಸರ್ಕಾರ ನೇಮಿಸಿರುವ ಸರಬರಾಜುದಾರರು ಸರಿಯಾದ ರೀತಿಯಲ್ಲಿ ಅದನ್ನು ತಲುಪಿಸುತ್ತಿದ್ದಾರೆಯೇ ಇಲ್ಲವೇ ಎಂಬ ಜವಾಬ್ದಾರಿಯನ್ನು ಯಾರ ಮೇಲೆ ಹೊರಿಸುತ್ತೀರಿ?

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಅಲ್ಲಿರತಕ್ಕಂತಹ ಅಂಗನವಾಡಿ ಕಾರ್ಯಕರ್ತರು, ಇರಬಹುದು, helper ಇರಬಹುದು, CDPO ಇರಬಹುದು, ಯೋಜನಾಧಿಕಾರಿ ಇರಬಹುದು ಎಲ್ಲರೂ ಕೂಡ ಹೊಣೆಗಾರರಿದ್ದಾರೆ. ಯಾವ ಮಕ್ಕಳು ಅಂಗನವಾಡಿಗೆ ಹೋಗುತ್ತಾರೆಯೋ ಅವರ ಪಾಲಕರನ್ನು ಈ ಸಮಿತಿಗೆ ಸದಸ್ಯರನ್ನಾಗಿ ನೇಮಿಸಿರುತ್ತಾರೆ. ಹೀಗಾಗಿ ಅವರಿಗೂ ಜವಾಬ್ದಾರಿ ಇದೆಯೆಂದು ನಾನು ಭಾವಿಸಿದ್ದೇನೆ. ಇನ್ನೂ ಹೆಚ್ಚಿನ ಸಲಹೆಗಳೇನಾದರೂ ಇದ್ದಲ್ಲಿ ನಿಯಮಾನುಸಾರ ಮುಂದಿನ ದಿನಮಾನದಲ್ಲಿ implement ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 14ನೇ ಡಿಸೆಂಬರ್ 2021ರಂದು ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 97 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಪ್ರಕಟಣೆಗಳು

**ಅ) ಸಭಾಪತಿಯವರು:-** ಸದನದಲ್ಲಿ ಈ ದಿನ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರ ಹೆಸರುಗಳು ಈ ರೀತಿ ಇವೆ.

1. ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
2. ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)
3. ಶ್ರೀ ಬಿ.ಶ್ರೀರಾಮುಲು(ಸಾರಿಗೆ,ಎಸ್.ಟಿ.ಅಭಿವೃದ್ಧಿ)
4. ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)
5. ಡಾ:ಕೆ.ಸಿ.ನಾರಾಯಣಗೌಡ(ಕ್ರೀಡೆ, ಯುವಜನ, ರೇಷ್ಮೆ ಸಚಿವರು)
6. ಶ್ರೀ ಎನ್.ಮುನಿರತ್ನ(ತೋಟಗಾರಿಕೆ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

<u>ಅಧಿಕಾರಿಗಳ ಹೆಸರು ಈ ಕೆಳಕಂಡಂತಿದೆ:</u>

1. ಶ್ರೀ ವಿಜಯ ಶರ್ಮ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮ
2. ಶ್ರೀ ಕರಿಗೌಡ, ಕೃಷಿ ಮಾರುಕಟ್ಟೆ ಇಲಾಖೆ
3. ಶ್ರೀಮತಿ ಕಲ್ಪನ

<u>ಅಧಿವೇಶನದ ಮಧ್ಯಾಹ್ನದಲ್ಲಿ ಹಾಜರಿರಬೇಕಾದ ಅಧಿಕಾರಿಗಳ ಪಟ್ಟಿ ಈ ರೀತಿ ಇದೆ.</u>

1. ಶ್ರೀ ಮಹದೇವ್ ಶಿರೂರ್
2. ಶ್ರೀ ಶಿವಾನಂದ ಹೆಚ್ ಕಲ್ಕೇರಿ, ಸಕ್ಕರೆ ಅಭಿವೃದ್ಧಿ ನಿರ್ದೇಶಕರು
3. ಶ್ರೀ ಪ್ರಸಾದ್ ಚಂದ್, ವ್ಯವಸ್ಥಾಪಕ ನಿರ್ದೇಶಕರು, ಗಣಿ ಹಾಗೂ ಪರಿಸರ ಮತ್ತು ಭೂವಿಜ್ಞಾನ ಇಲಾಖೆ.

ಆ) ಮತ್ತೊಂದು ಅಂಶ ಎಂದರೆ, ಮಾನ್ಯ ನಾರಾಯಣಸ್ವಾಮಿಯವರು ಹೇಳಿದಂತೆ ಶಾಸಕರ ನಿಧಿ ಸರಿಯಾಗಿ ಮುಟ್ಟುತ್ತಿಲ್ಲವೆಂದು ನಾನು ಸಹ ಎರಡು ಬಾರಿ ಸಭೆಯನ್ನು ನಡೆಸಿದ್ದೇನೆ. ಜನವರಿ 5ಕ್ಕೆ ಬಹಳ ಮಂದಿ ಸದಸ್ಯರು ನಿವೃತ್ತರಾಗುತ್ತಾರೆ. ಆದ್ದರಿಂದ ಸರ್ಕಾರ ತಕ್ಷಣ ಏನಾದರೂ ತೀರ್ಮಾನ ಮಾಡಬೇಕು. ಇದರ ಬಗ್ಗೆ ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು ಸರಿಯಾಗಿದೆ. ನಾವು ಸಹ ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡಿದ್ದೇವೆ. ಇದಕ್ಕೆ ಏನು ವ್ಯವಸ್ಥೆ ಬೇಕೋ ಅದನ್ನು ಖಂಡಿತವಾಗಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಖಂಡಿತ ಯಾವುದೇ ಅನ್ಯಾಯವಾಗಲು ಬಿಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ: ಕೆ.ಪಿ.ಎಸ್.ಸಿ. ಮೂಲಕ ಲೋಕೋಪಯೋಗಿ ಇಲಾಖೆ ಸಹಾಯಕ ಇಂಜಿನಿಯರ್ ಹುದ್ದೆಗಳಿಗೆ ಇಂದು ನಡೆಸುವ ಪರೀಕ್ಷೆಯನ್ನು ರೈಲು ವಿಳಂಬದಿಂದಾಗಿ ಮುಂದೂಡುವ ಬಗ್ಗೆ

- - - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಲೋಕಸೇವಾ ಆಯೋಗವು ಪಿ.ಡಬ್ಲ್ಯೂಡಿ ಇಲಾಖೆಯಲ್ಲಿ ಖಾಲಿ ಇರುವ ಎ.ಇ. ವೃಂದದ ಹುದ್ದೆಗಳಿಗೆ ದಿನಾಂಕ 14.12.2021 ಮಂಗಳವಾರ ಅಂದರೆ ಇಂದು ಪರೀಕ್ಷೆ ನಿಗದಿಗೊಳಿಸಿರುತ್ತದೆ. ಇಲ್ಲಿಯವರೆಗೂ ಜಿಲ್ಲೆಯ ಅಭ್ಯರ್ಥಿಗಳಿಗೆ ಜಿಲ್ಲಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ವ್ಯವಸ್ಥೆ ಇರುತ್ತಿತ್ತು. ಆದರೆ ಈ ಬಾರಿ ಕೆ.ಪಿ.ಎಸ್.ಸಿಯು ದಕ್ಷಿಣ ಕರ್ನಾಟಕದ ಅಭ್ಯರ್ಥಿಗಳನ್ನು ಉತ್ತರ ಕರ್ನಾಟಕದ ಜಿಲ್ಲಾ ಕೇಂದ್ರಗಳಿಗೆ ಹಾಗೂ ಉತ್ತರ ಕರ್ನಾಟಕದ ಅಭ್ಯರ್ಥಿಗಳನ್ನು ದಕ್ಷಿಣ ಕರ್ನಾಟಕದ ಜಿಲ್ಲಾ ಕೇಂದ್ರಗಳಿಗೆ ನಿಗದಿಗೊಳಿಸಿರುತ್ತದೆ. ಇದು ಅವೈಜ್ಞಾನಿಕ. ಇಂದು ಹಾಸನ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು ವಿಭಾಗಗಳ ಸುಮಾರು 2000 ಅಭ್ಯರ್ಥಿಗಳು ಗುಲ್ಬರ್ಗಕ್ಕೆ ಪರೀಕ್ಷೆ ಬರೆಯಲು ಹಾಸನ ಸೊಲ್ಲಾಪುರ ಎಕ್ಸ್‌ಪ್ರೆಸ್ ಮೂಲಕ ಪ್ರಯಾಣಿಸಿದ್ದು, ಅಭ್ಯರ್ಥಿಗಳು ರೈಲು ವಿಳಂಬದಿಂದಾಗಿ ಪರೀಕ್ಷೆಯಿಂದ ವಂಚಿತರಾಗಿದ್ದಾರೆ. ಇದೇ ರೀತಿ ಬಸವ, ಉದ್ಯಾನ್, ಕರ್ನಾಟಕ ಎಕ್ಸ್‌ಪ್ರೆಸ್ ರೈಲುಗಳು ವಿಳಂಬವಾಗಿದ್ದು, ಸಾವಿರಾರು ಅಭ್ಯರ್ಥಿಗಳು ಪರೀಕ್ಷೆಯಿಂದ ವಂಚಿತರಾಗಿರುತ್ತಾರೆ. ಇವರಿಗೆ ಮತ್ತೊಮ್ಮೆ ದಿನಾಂಕ ನಿಗದಿ ಪಡಿಸಿ ಪರೀಕ್ಷೆ ಬರೆಯಲು ಅನುಕೂಲ ಮಾಡಿಕೊಡಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಸ್ವಾಭಾವಿಕವಾಗಿ ಇದರ ಬಗ್ಗೆ ಉತ್ತರ ಕೊಡಬೇಕಾದರೆ ಉನ್ನತ ಶಿಕ್ಷಣ ಸಚಿವರ ಬಳಿ ಮಾತನಾಡಿ ಅದಕ್ಕೊಂದು ರೂಪ ತರಬೇಕು. ಆದರೂ ನಾನು ಸಂಬಂಧಪಟ್ಟ ಅಧಿಕಾರಿಗಳ ಬಳಿ ಮಾತನಾಡಿದ್ದೇನೆ. ಏನೇನು ಅನುಕೂಲಕಗಳನ್ನು ಮಾಡಿಕೊಡಲು ಸಾಧ್ಯವೋ ಅವುಗಳನ್ನು ಖಂಡಿತವಾಗಿಯೂ ಮಾಡಿಕೊಡಲಾಗುವುದು. ಏಕೆಂದರೆ ವಿದ್ಯಾರ್ಥಿಗಳಿಗೆ ಅನ್ಯಾಯವಾಗಬಾರದು. ಅದು ಮಾನ್ಯ ಸದಸ್ಯರ ಉದ್ದೇಶವಾಗಿದೆ ಹಾಗೂ ಸರ್ಕಾರದ ಉದ್ದೇಶವೂ ಆಗಿದೆ. ಆ ನಿಟ್ಟಿನಲ್ಲಿ ಏನು ಪ್ರಯತ್ನಗಳು ಬೇಕೋ ಅವುಗಳನ್ನು ಮಾಡಲಾಗುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ದಯಮಾಡಿ ಮಾಡಿಕೊಡಬೇಕು. ಏಕೆಂದರೆ ಈ ಪರೀಕ್ಷೆಗಳು ನಾಲ್ಕು ವರ್ಷಗಳಿಂದ ನಡೆದಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಮಾನ್ಯ ಈಶ್ವರಪ್ಪನವರೇ, ಈ ವಿಷಯದ ಬಗ್ಗೆ ನಾನು ಕೂಡ ಕೆ.ಪಿ.ಎಸ್.ಸಿ. ಅಧ್ಯಕ್ಷರೊಡನೆ ಮತ್ತು ಕಾರ್ಯದರ್ಶಿಯವರೊಡನೆ ಮಾತನಾಡಿದ್ದೇನೆ. ಅವರು ಚರ್ಚೆ ಮಾಡುತ್ತಿದ್ದು, ಸರಿಪಡಿಸಿಕೊಡುವುದಾಗಿ ಹೇಳಿದ್ದಾರೆ. ಮಧ್ಯಾಹ್ನದೊಳಗೆ ಹೇಳುತ್ತೇವೆಂದು ಹೇಳಿದ್ದಾರೆ.

(ಮುಂದು)

(1067) 14-12-2021 (12.40) ಕೆಜಿ -ವಿಕೆ

(ಸಭಾಪತಿಯವರ ಉಪಸ್ಥಿತಿ)

**ಆ)ವಿಷಯ: ಬಂಜಾರದ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಮೂಲಭೂತ ಸೌಕರ್ಯ ಒದಗಿಸುವ ಕುರಿತು.**

- - - -

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕಿನ ಬಂಜಾರಾ ಸಮಾಜದ ಬಡ ಕುಟುಂಬದ ಜನಾಂಗದವರು ಕಬ್ಬು ಕಟಾವು ಕೆಲಸಕ್ಕಾಗಿ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಗ್ರಾಮವೊಂದಕ್ಕೆ ಒಂದು ವರ್ಷದ ಮಗುವಿನೊಂದಿಗೆ ಹೋಗಿದ್ದ ಸಂದರ್ಭದಲ್ಲಿ ಆ ಮಗುವನ್ನು ಟ್ರಾಕ್ಟರ್ ನೆರಳಿನಲ್ಲಿ ಬರಕಾ (ತಾಡಪಲ್) ಹೊದಿಸಿ ಮಲಗಿಸಲಾಗಿತ್ತು. ಟ್ರಾಕ್ಟರ್ ಚಾಲಕ ಆ ಮಗುವನ್ನು ಗಮನಿಸದೆ ಟ್ರಾಕ್ಟರ್‌ನ್ನು ಮಗುವಿನ ಮೇಲೆ ಹರಿಸಿದ್ದಾನೆ. ಆ ವೇಳೆಯಲ್ಲಿ ಮಗು ಸ್ಥಳದಲ್ಲಿಯೇ ಮೃತಪಟ್ಟಿರುತ್ತದೆ. ಈ ರೀತಿಯಾಗಿ ಲಂಬಾಣಿ ಸಮಾಜದವರು ಹೊಟ್ಟೆ ಪಾಡಿಗಾಗಿ ಅವರು ವಾಸಿಸುವ ಹಟ್ಟಿ ಅಥವಾ ತಾಂಡಗಳಲ್ಲಿ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಯಾರು ಇಲ್ಲದೆ ಇರುವುದರಿಂದ ಮನೆ ಬಾಗಿಲುಗಳಿಗೆ ಮುಳ್ಳುಕಂಟಿ ಹಚ್ಚಿ ಹಾಗೂ ಕೆಲವರು ವಯೋವೃದ್ಧರನ್ನು ಮನೆಯಲ್ಲಿ ಬಿಟ್ಟು ತಮ್ಮ ಮಕ್ಕಳನ್ನು ಜೊತೆಯಲ್ಲಿಯೇ ಕರೆದುಕೊಂಡು ಬರುತ್ತಾರೆ. ಇದರಿಂದ ಮಕ್ಕಳ ಕಲಿಕೆಗೆ ತೊಂದರೆಯಾಗುವುದರಿಂದ ವಿದ್ಯಾಭ್ಯಾಸವನ್ನು ಮುಂದುವರೆಸದೇ ಶಿಕ್ಷಣದಿಂದ ವಂಚಿತರಾಗಿ ಶಾಲೆಯಿಂದ ದೂರ ಉಳಿಯುತ್ತಾರೆ. ಇವರಿಗೆ ಕೃಷಿ ಮಾಡಿ ಜೀವನ ಸಾಗಿಸಲು ಜಮೀನು ಇರುವುದಿಲ್ಲ. ಇನ್ನೂ ಕೆಲವರಿಗೆ ಪುಟ್ಟ ಗುಡಿಸಲು ಬಿಟ್ಟರೆ ಜೀವನಕ್ಕೆ ಏನೂ ಆಶ್ರಯವಿಲ್ಲದಂತೆ ಆಗಿರುತ್ತದೆ. ಮಕ್ಕಳ ಮದುವೆ ಮುಂಜಿಗೆ ಅಂತಾ ಸಾಲ ಮಾಡಿ ಮರಳಿ ಆ ಸಾಲವನ್ನು ತುಂಬಲಾರದೆ, ಕೇವಲ ಬಡ್ಡಿ ಕಟ್ಟುವುದರಲ್ಲಿ ಅವರ ಬದುಕು ಮುಗಿದು ಹೋಗುತ್ತದೆ. ಆದ್ದರಿಂದ, ಲಂಬಾಣಿ ಸಮಾಜದವರು ಹೊಟ್ಟೆ ಪಾಡಿಗಾಗಿ ಗುಳೆ ಹೋಗುವುದನ್ನು ತಡೆದು ಈ ಸಮಾಜಕ್ಕೆ ಉದ್ಯೋಗ ಸೃಷ್ಟಿ ಮಾಡಿಕೊಡಬೇಕೆಂದು ಮತ್ತು ಎಲ್ಲಾ ತಾಂಡಾಗಳಲ್ಲಿ ವಸತಿ ಶಾಲೆಗಳನ್ನು ಸರ್ಕಾರ ಪ್ರಾರಂಭ ಮಾಡಬೇಕೆಂದು ಸರ್ಕಾರಕ್ಕೆ

ಒತ್ತಾಯ ಮಾಡುತ್ತೇನೆ. ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಮೂಲಭೂತ ಸೌಕರ್ಯ ಒದಗಿಸಬೇಕು ಹಾಗೂ ಸಾವನ್ನೊಪ್ಪಿರುವ ಮಗುವಿನ ಪಾಲಕರಿಗೆ ಸೂಕ್ತ ಪರಿಹಾರ ನೀಡಬೇಕು. ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರು ಸದನದಲ್ಲಿ ಇದ್ದಾರೆ. ಅವರ ತಾಲ್ಲೂಕಿನಲ್ಲಿ ಈ ಘಟನೆಯಾಗಿದೆ. ಆದ್ದರಿಂದ, ಆ ಮಗುವಿನ ಕುಟುಂಬಸ್ಥರಿಗೆ ಪರಿಹಾರವನ್ನು ಬೇಗ ಕೊಡಬೇಕೆಂದು ಹಾಗೂ ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಒತ್ತಾಯಿಸಿ ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದಕ್ಕೆ ಧನ್ಯವಾದಗಳು.

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಕಾಶ್ ಕೆ.ರಾಥೋಡ್‌ರವರು ಶೂನ್ಯ ವೇಳೆಯಲ್ಲಿ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಬೇಕು ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಪ್ರಮುಖವಾದ ವಿಷಯವಾಗಿದೆ. ನಾನು ಕಂದಾಯ ಸಚಿವನಾದ ನಂತರ ಪ್ರತಿ ಬಾರಿ ನಡೆದ ಸಭೆಗಳಲ್ಲಿಯೂ ಡಿ.ಸಿ. ಯವರ ಜೊತೆಗೆ ಇದೇ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಈ ರೀತಿಯ ಲಂಬಾಣಿ ತಾಂಡಾಗಳು ಇರಬಹುದು, ಹಟ್ಟಿಗಳು ಇರಬಹುದು, ಕುರುಬರ ಹಟ್ಟಿ ಇರಬಹುದು, ಈ ತರಹದ್ದು ಬಹಳಷ್ಟು ಇದೆ. ಸರ್ಕಾರ ಎಲ್ಲಿಯವರಗೆ ಅವುಗಳನ್ನು ಕಂದಾಯ ಗ್ರಾಮವೆಂದು ಅನುಮೋದನೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ಸೌಲಭ್ಯ ಸಿಗುವುದಕ್ಕೆ ಆಗುವುದಿಲ್ಲ. ಶಾಲೆಗಳು ಇರಬಹುದು ಅಥವಾ ಇತರೆ ಬೇರೆ ಬೇರೆ ಸೌಲಭ್ಯಗಳು ಇರಬಹುದು, ಏನೇ ಸೌಲಭ್ಯ ಸಿಗಬೇಕಾದರೂ ಸಹ ಕಂದಾಯ ಗ್ರಾಮವಾದರೆ ಮಾತ್ರ ಸಿಗುತ್ತದೆ. ಅದಕ್ಕೆ ಸರ್ಕಾರದ ಅಧಿಸೂಚನೆ ಹೊರಡಿಸಬೇಕು, ಪ್ರಾಥಮಿಕ ಅಧಿಸೂಚನೆ ಹೊರಡಿಸಬೇಕು, ಅಂತಿಮ ಅಧಿಸೂಚನೆ ಹೊರಡಿಸಿದ ಮೇಲೆ ಅದಕ್ಕೆ ಸರ್ಕಾರ ಅನುಮೋದನೆ ಕೊಟ್ಟ ಮೇಲೆ ಅದೊಂದು ಗ್ರಾಮವಾಗುತ್ತದೆ. ಇದೊಂದು procedure. ಇದನ್ನು ಇಷ್ಟು ದಿವಸಗಳ ಕಾಲ ಜಿಲ್ಲಾಧಿಕಾರಿಗಳು ಆದ್ಯತೆ ಎನ್ನುವ ತರಹ ಇಟ್ಟುಕೊಂಡಿರಲಿಲ್ಲ. ಎಂ.ಎಲ್.ಎ ಮತ್ತು ಎಂ.ಎಲ್.ಸಿ ಗಳ ಒತ್ತಡಗಳು ಬಂದಾಗ ಆ ಗ್ರಾಮಗಳನ್ನು ಮಾಡುತ್ತಿದ್ದರು. ನಾನೀಗ ಈ ವಿಚಾರವನ್ನು ಪ್ರಮುಖವಾಗಿ ತೆಗೆದುಕೊಂಡಿದ್ದೇನೆ. ಏಕೆಂದರೆ, ನಾನು ಸಹ ಆ ಭಾಗದಲ್ಲಿ ಓಡಾಡಿದ್ದೇನೆ. ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಲಂಬಾಣಿ ತಾಂಡಾಗಳು ಹಲೆಮಾರಿಗಳ ತರಹ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುತ್ತಿದ್ದಾರೆ. ಈಗ ಅವರೂ ಸಹ ಅಲ್ಲಲ್ಲಿಯೇ ನೆಲೆಸುತ್ತಿದ್ದಾರೆ. ಮೊದಲಿನ ರೀತಿ ಗುಳೆ ಹೋಗುತ್ತಿಲ್ಲ. ಈ ಬಗ್ಗೆ ನಾನು ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದಿದ್ದೇನೆ. ಇದು ಸರ್ಕಾರದ ಒಂದು ಪ್ರಮುಖ ನಿರ್ಧಾರವೆಂದು ಹೇಳಿದ್ದೇನೆ. ಈಗಾಗಲೇ 3513 ಜನವಸತಿ ಪ್ರದೇಶಗಳನ್ನು ಗುರುತಿಸಲಾಗಿದೆ. ಇದರಲ್ಲಿ 1472 ಜನವಸತಿ ಪ್ರದೇಶಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. Preliminary notification ಆಗಿದೆ. 898 ಗ್ರಾಮಗಳಿಗೆ ಅಂತಿಮ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಅಧಿಸೂಚನೆಯನ್ನು ಮಾಡಿ ಆದೇಶವನ್ನು ಮಾಡಿದ್ದೇವೆ. ರಾಯಚೂರು ಜಿಲ್ಲೆಯಲ್ಲಿ 87 ಜನವಸತಿ ಪ್ರದೇಶಗಳಿವೆ. ಇದನ್ನು ಸಹ ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಇದನ್ನು ಆದ್ಯತೆಯ ಮೇರೆಗೆ ಮಾಡಬೇಕಾಗಿದೆ. ಇಲ್ಲವೆಂದರೆ, ಅವರಿಗೆ ಯಾವುದೇ ರೀತಿಯ ಸೌಲಭ್ಯ ಸಿಗುವುದಿಲ್ಲ. ಹಾಗಾಗಿ, ಕಂದಾಯ ಗ್ರಾಮ ಮಾಡುವುದು ನಮ್ಮ ಆದ್ಯಕರ್ತವ್ಯವಾಗಿದೆ. ಅದನ್ನು ಮಾಡುತ್ತೇವೆ. ಕಂದಾಯ ಗ್ರಾಮವಾದ ಮೇಲೆ ಶಾಲೆ ಮತ್ತು ಇತರೆ ಸೌಲಭ್ಯಗಳು naturally ಸಿಗುತ್ತವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮೃತಪಟ್ಟ ಮಗುವಿನ ಬಗ್ಗೆ ಏನು ಹೇಳಲಿಲ್ಲ.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಅದನ್ನು ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರು ವಿಚಾರಿಸುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಹಾಗಾದರೆ, ಸರಿ.

**ಇ) ವಿಷಯ:- ಮಂಗಳೂರು ವಿಮಾನ ನಿಲ್ದಾಣಕ್ಕೆ ಕೋಟಿ ಚನ್ನಯ್ಯರ ಹೆಸರನ್ನು ಮರುನಾಮಕರಣ ಮಾಡುವ ಬಗ್ಗೆ.**

\- - - - - -

**ಶ್ರೀ ಕೆ.ಹರೀಶ್ ಕುಮಾರ್(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಜಿಲ್ಲೆಯ ಅವಳಿ ವೀರ ಪುರಷರಾದ ಕೋಟಿ ಚನ್ನಯರ ಹೆಸರನ್ನು ಮರು ನಾಮಕರಣ ಮಾಡಬೇಕು ಎನ್ನುವುದು ಈ ಭಾಗದ ಬಹುಜನರ ಬೇಡಿಕೆಯಾಗಿದ್ದು, ಈ ಕುರಿತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ 15ನೇ ಸಾಮಾನ್ಯ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದ್ದು, ಸರ್ಕಾರದ ಮೂಲಭೂತ ಸೌಕರ್ಯಗಳ ಇಲಾಖೆಗೆ ಪತ್ರ ಸಂಖ್ಯೆ ದ.ಕ.ಜಿ.ಪಂ/ಕೌನ್ಸಿಲ್/ಸಿ.ಆರ್.33/2018-19-ಸಿ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅಲ್ಲದೇ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಅನೇಕ ಸಂಘ ಸಂಸ್ಥೆಗಳು ಈ ಕುರಿತು ಅಗ್ರಹಪಡಿಸಿರುತ್ತಾರೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲಭೂತ ಸೌಕರ್ಯಗಳ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಮು.ಅ.ಇ. 83 ರಾ.ಅ.ವಿ. 2018 ದಿನಾಂಕ 26-05-2020 ರಂತೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಮರು ನಾಮಕರಣ ಮಾಡುವ ವಿಷಯವು ರಾಜ್ಯ ಸರ್ಕಾರಕ್ಕೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಂಧಿಸಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ, ಸದರಿ ಪ್ರಾಸ್ತಾವನೆಯನ್ನು ಸಚಿವ ಸಂಪುಟ ಸಭೆಯಲ್ಲಿ ಮರು ನಾಮಕರಣ ಪ್ರಸ್ತಾವನೆಯನ್ನು ಅಂಗೀಕರಿಸಿ ತಕ್ಷಣ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು, ಕೇಂದ್ರ ಸರ್ಕಾರವು ಈ ಪ್ರಸ್ತಾವನೆಯನ್ನು ಅಂಗೀಕರಿಸಿ ಶೀಘ್ರವೇ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೋಟಿ ಚನ್ನಯರ ಹೆಸರನ್ನು ಮರು ನಾಮಕರಣ ಮಾಡುವ ಸರ್ಕಾರದ ನಿಲುವಿನ ಕುರಿತಂತೆ ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ಕೊಟ್ಟಿದಕ್ಕಾಗಿ ಧನ್ಯವಾದಗಳು.

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತಂದು ನಂತರ ಉತ್ತರವನ್ನು ಒದಗಿಸುತ್ತೇನೆ.

**ಈ) ವಿಷಯ ಅಕಾಲಿಕ ಮಳೆಯಿಂದಾಗಿ ಅತಿವೃಷ್ಠಿ ಪ್ರವಾಹದಿಂದ ಬೆಳೆನಷ್ಟ ಅನುಭವಿಸುತ್ತಿರುವ ರೈತರುಗಳಿಗೆ ಎನ್.ಡಿ.ಆರ್.ಎಫ್. ಪರಿಹಾರದ ಜೊತೆಗೆ ಹೆಚ್ಚುವರಿ ಪರಿಹಾರ ನೀಡುವ ಬಗ್ಗೆ.**

---

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಸುರಿದ ಅಕಾಲಿಕ ಮಳೆಯಿಂದಾಗಿ ಅತಿವೃಷ್ಟಿ ಪ್ರವಾಹದಿಂದ ಬೆಳೆ ನಷ್ಟ ಅನುಭವಿಸುತ್ತಿರುವ ರೈತರಿಗೆ ರಾಜ್ಯ ಸರ್ಕಾರ ಈ ಬಾರಿ ಬಿಡಿಗಾಸು ವಿತರಣೆ ಮಾಡುತ್ತಿದ್ದು, ಅನ್ನದಾತರ ಮೇಲೆ ಬರೆ ಎಳೆದಂತಾಗಿದೆ. 2019ರ ಪ್ರವಾಹಕ್ಕೆ ಹೋಲಿಸಿದರೆ, ಈ ಬಾರಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚು ಬೆಳೆ ಹಾನಿ ಅನುಭವಿಸಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಂತೂ ಭೂ ಕುಸಿತದ ಜೊತೆಗೆ ನದಿಗಳ ದಿಕ್ಕು ಬದಲಾಗಿ, ಹೊಲಗಳ ಮಣ್ಣು ಕೊಚ್ಚಿ ಹೋಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ ನದಿಯ ಜೊತೆಗೆ ಎಲ್ಲಾ ನದಿಗಳು ಉಕ್ಕಿ ಹರಿದು ಅವಾಂತರ ಸೃಷ್ಠಿಯಾಗಿದೆ. ಕೃಷ್ಣಾ ನದಿ ಪಾತ್ರದ ಇತರ ಜಿಲ್ಲೆಗಳಲ್ಲೂ ವ್ಯಾಪಕ ಹಾನಿಯಾಗಿದೆ. ಆ ಭಾಗದ ರೈತರಿಗೆ ಅಪಾರ ಬೆಳೆ ಹಾನಿ ಆಗಿರುವುದರಿಂದ ಬೆಳೆ ಹಾನಿಗೆ ರಾಜ್ಯ ಸರ್ಕಾರ ಎನ್.ಡಿ.ಆರ್.ಎಫ್ ಪರಿಹಾರದ ಜೊತೆಗೆ ಹೆಚ್ಚುವರಿಯಾಗಿ ಪರಿಹಾರವನ್ನು ನೀಡುವ ಕುರಿತ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೂ ಕಾನೂನು ಯಾವ ಯಾವ ವರ್ಷದಲ್ಲಿ ಯಾವ ರೀತಿ ಬದಲಾವಣೆಯಾಗುತ್ತದೆ ಎಂದು ಗೊತ್ತಿದೆ. ಎನ್.ಡಿ.ಆರ್.ಎಫ್.ನ ಹಣ ಏನಿದೆ, ಇದನ್ನು 5 ವರ್ಷಗಳಿಗೊಮ್ಮೆ ಕೇಂದ್ರ ಸರ್ಕಾರವೇ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಬದಲಾವಣೆ ಮಾಡುತ್ತದೆ. ಅದು 2015 ನೇ ಸಾಲಿನಲ್ಲಿ ಆಗಿತ್ತು. ಈಗ ಮತ್ತೆ ಬದಲಾವಣೆಗೆ ಬಂದಿದೆ. ಈಗಿರುವಂತಹ NDRF rules ಪ್ರಕಾರ ಕೃಷಿ ಜಮೀನಿಗೆ 6800/-, ನೀರಾವರಿ ಬೆಳೆಗೆ 13,500/- ಮತ್ತು ಬಹು ವಾರ್ಷಿಕ ಬೆಳೆಗೆ 18000/- ರೂಪಾಯಿಗಳು ಇದೆ. ಇದನ್ನು ಕೊಡುತ್ತಿದ್ದೇವೆ. ಈಗ ಸುಮಾರು 12 ಲಕ್ಷ ರೈತರಿಗೆ ಈ term ನಲ್ಲಿ ಆಗಿರುವಂತಹವರಿಗೆ ಬೆಳೆ ಪರಿಹಾರವನ್ನು ಕೊಡುತ್ತಿದ್ದೇವೆ. ಸುಮಾರು 787.29 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೂ ಸಹ ಪತ್ರ ಬರೆದಿದ್ದೇವೆ. ಇದನ್ನು ಇನ್ನೂ ಹೆಚ್ಚಿಗೆ ಮಾಡಬೇಕೆಂದು follow-up ಮಾಡುತ್ತಿದ್ದೇವೆ. ಅದು ಹಾಜು ಒಂದು ವರ್ಷದಲ್ಲಿ ಹೆಚ್ಚಿಗೆ ಮಾಡಬಹುದು. 5 ವರ್ಷಗಳಿಗೊಮ್ಮೆ ಮಾಡಬೇಕು. ಈ ವರ್ಷ ಅದು ಬಂದಿದೆ. ಆ ಪ್ರಕಾರ ಮಾಡುತ್ತಾರೆ ಎನ್ನುವ ವಿಶ್ವಾಸ ಇದೆ. ನಾನು ಸಹ ಕೇಂದ್ರ ಸರ್ಕಾರಕ್ಕೆ ಹೆಚ್ಚಿಗೆ ಮಾಡಬೇಕೆಂದು ವಿನಂತಿಯನ್ನು ಮಾಡಿದ್ದೇನೆ.

(ಮುಂದು)

**(1068) 14-12-2021 (12.50) ಎಂವಿ-ವಿಕೆ**

(ಸಭಾಪತಿಯವರ ಉಪಸ್ಥಿತಿ)

**ಉ) ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳ ಸೇವೆಗೆ ಭದ್ರತೆ ನೀಡುವ ಕುರಿತು.**

- - - -

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆಗಳ ಒಕ್ಕೂಟವು ದಿನಾಂಕ 10.12.2021ರಿಂದ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ಧಾರವಾಡದಲ್ಲಿ ನಡೆಸುತ್ತಿವೆ. ಸುಮಾರು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಅತ್ಯಂತ ಕಡಿಮೆ ಸಂಬಳ ಪಡೆದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ ಸೇವಾ ಭದ್ರತೆಯನ್ನು ಒದಗಿಸಬೇಕೆಂಬುದು ಇವರ ಮೊದಲನೆಯ ಬೇಡಿಕೆಯಾಗಿದೆ. ಯು.ಜಿ.ಸಿ ನಿಯಮಾವಳಿಯಂತೆ ರಾಜ್ಯದ ವಿಶ್ವ ವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ನೀಡುವ ವೇತನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಅದೇ ವೇತನವನ್ನು ನೀಡುವಂತೆ ಒತ್ತಾಯಿಸಿದ್ದಾರೆ. ಅತಿಥಿ ಉಪನ್ಯಾಸಕರನ್ನು ಸೆಮಿಸ್ಟರ್‌ಗಳಿಗೆ ಒಮ್ಮೆ ನೇಮಕ ಮಾಡುತ್ತಿರುವುದನ್ನು ಕೈಬಿಟ್ಟು ಶೈಕ್ಷಣಿಕ ವರ್ಷಕ್ಕೆ (12 ತಿಂಗಳಿನವರೆಗೂ) ನೇಮಕ ಮಾಡಿ ವೇತನ ನೀಡುವಂತೆ ಅಗ್ರಹಿಸಿದ್ದಾರೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘವು ಈ ಹೋರಾಟವನ್ನು ಬೆಂಬಲಿಸಿದೆ. ಕೂಡಲೇ ಸರ್ಕಾರವು ಈ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ವಿಲೀನಗೊಳಿಸಲು ಅಥವಾ ಸೇವಾ ಭದ್ರತೆ ನೀಡಲು ಸೂಕ್ತ ನಿಯಮಗಳನ್ನು ರೂಪಿಸಿ ಸೇವಾ ಭದ್ರತೆ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಬೇಕು ಹಾಗೂ ಇವರಿಗೆ ನೀಡುತ್ತಿರುವ ಸಂಬಳವನ್ನು ಯು.ಜಿ.ಸಿ ನಿಯಮಾವಳಿಗಳಿಗೆ ಅನುಗುಣವಾಗಿ ಹೆಚ್ಚಿಸುವಂತೆ ಕ್ರಮವಹಿಸಿ, ಇನ್ನುಳಿದ ಇವರ ಬೇಡಿಕೆಗಳನ್ನು ಈಡೇರಿಸುವತ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಈ ಮೂಲಕ ಗಮನ ಸೆಳೆಯುತ್ತೇನೆ.

**ಶ್ರೀ ಆರ್.ಅಶೋಕ, ಕಂದಾಯ ಸಚಿವರು (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತರುತ್ತೇನೆ. ಇದು ಬಹಳ ಗಂಭೀರವಾದಂತಹ ವಿಷಯ.

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾವಿರ ಜನರು ಇದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಲ್ಲಿ ಒಂದು ವಾರದಿಂದ ಚಳುವಳಿ ನಡೆಯುತ್ತಿದೆ.

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಮಾನ್ಯ ಉನ್ನತ ಶಿಕ್ಷಣ ಸಚಿವರು ನನ್ನ ಅಧ್ಯಕ್ಷತೆಯಲ್ಲಿ ಇವತ್ತು ನಾಲ್ಕು ಗಂಟೆಗೆ ಸಭೆಯನ್ನು ಕರೆದಿದ್ದಾರೆ. ತಮ್ಮೆಲ್ಲರಿಗೂ ಸಂದೇಶ ಕಳುಹಿಸುವಂತೆ ತಿಳಿಸಲಾಗಿದೆ. ಇವತ್ತು ನಾಲ್ಕು ಗಂಟೆಗೆ ಸಭೆ ಇದೆ. ಅದನ್ನು ಅಲ್ಲಿ ಚರ್ಚೆ ಮಾಡೋಣ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ಸಾಯಂಕಾಲದ ಸಭೆಯಲ್ಲಿ ಏನಾದರೂ ಒಂದು ಇತ್ಯರ್ಥವಾಗಲಿ.

**ಸಭಾಪತಿಯವರು:-** ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ.

**ಶ್ರೀ ಆರ್.ಅಶೋಕ:-** ಈ ವಿಷಯದ ಬಗ್ಗೆ ಚರ್ಚಿಸಲು ಈಗಾಗಲೇ ಸಭೆ ನಿಗದಿಯಾಗಿದೆ ಎಂದು ಮಾನ್ಯ ಸಭಾಪತಿಯವರು ತಿಳಿಸಿದ್ದಾರೆ. ಇವತ್ತಿನ ನಾಲ್ಕು ಗಂಟೆಯ ಸಭೆಯಲ್ಲಿ ಅದು ತೀರ್ಮಾನವಾಗುತ್ತದೆ ಎಂಬ ವಿಶ್ವಾಸ ನಮಗೆ ಇದೆ. ಇದನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತಂದು, ಇವತ್ತು ನಡೆಯುವ ನಾಲ್ಕು ಗಂಟೆಯ ಸಭೆಯಲ್ಲಿ ಇದಕ್ಕೆ ಒಂದು ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಊ) ವಿಷಯ: ಕಡ್ಡಾಯ ಸೇವೆ ಸೇರಿರುವ ಕಿರಿಯ ವೈದಾಧಿಕಾರಿಗಳಿಗೆ ವೇತನ ಬಿಡುಗಡೆ ಕುರಿತು.**

- - - -

**ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಕರ್ನಾಟಕ ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ವ್ಯಾಸಂಗ ಮುಗಿದ ಮೇಲೆ ಅವರು ಕಡ್ಡಾಯವಾಗಿ ಗ್ರಾಮೀಣ ಸೇವೆಯನ್ನು 01 ವರ್ಷದ ಅವಧಿಗೆ ಪೂರೈಸಬೇಕೆಂದು ಹೇಳಿ ನಮ್ಮ ರಾಜ್ಯದಲ್ಲಿ ಕಾನೂನನ್ನು ರೂಪಿಸಲಾಗಿದೆ.

ಅದರಂತೆ ನಮ್ಮ ರಾಜ್ಯದಲ್ಲಿ ಸಾವಿರಾರು ವೈದ್ಯರು ತಮ್ಮ ವೈದ್ಯಕೀಯ ವಿದ್ಯಾಭ್ಯಾಸ ಮುಗಿದ ಮೇಲೆ ಹಾಲಿ ಗ್ರಾಮೀಣ ಸೇವೆಯನ್ನು ನಿರ್ವಹಿಸುತ್ತಿದ್ದಾರೆ. ಸರ್ಕಾರವು ಕೌನ್ಸಲಿಂಗ್ ಮುಖಾಂತರ ಅಂತಹ ವೈದ್ಯರಿಗೆ ಸರ್ಕಾರಿ ವೈದ್ಯಕೀಯ ಕಾಲೇಜು ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆ ಇಂತಹ ಸಂಸ್ಥೆಗಳಿಗೆ ನೇಮಕಾತಿ ನೀಡಿದೆ. ಆದರೆ, ಇಂತಹ ಗ್ರಾಮೀಣ ಸೇವೆಗೆ ನಿಯುಕ್ತಿಗೊಂಡು ಸುಮಾರು ಆರು ತಿಂಗಳುಗಳಾಗಿದೆ. ಇದುವರೆಗೆ ಅಂತಹ ವೈದ್ಯರುಗಳಿಗೆ ಸಂಬಳವನ್ನು ನೀಡಿಲ್ಲ. ಕೆಲವು ವೈದ್ಯರು ಬಡ ಕುಟುಂಬಗಳಿಂದ ಬಂದಿದ್ದು, ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ನಾನು ಖುದ್ದಾಗಿ ಮಾನ್ಯ ವೈದ್ಯಕೀಯ ಹಾಗೂ ಕುಟುಂಬ ಕಲ್ಯಾಣ ಸಚಿವರು ಹಾಗೂ ಇಲಾಖಾ ಅಧಿಕಾರಿಗಳೊಂದಿಗೆ ಮಾತನಾಡಿದ್ದರೂ ಇದುವರೆಗೆ ಸಂಬಳ ಬಿಡುಗಡೆ ಮಾಡಿಲ್ಲ.

ಹಾಗಾಗಿ ಸರ್ಕಾರ ಕೂಡಲೇ ಕಡ್ಡಾಯ ಸೇವೆಗೆ ಸೇರಿರುವ ಕಿರಿಯ ವೈದ್ಯಾಧಿಕಾರಿಗಳಿಗೆ ಸಂಬಳ ಬಿಡುಗಡೆ ಮಾಡಿ, ಸರ್ಕಾರದ ಗೌರವವನ್ನು ಉಳಿಸಿಕೊಳ್ಳಬೇಕೆಂದು ಹೇಳಿ. ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರ್.ಅಶೋಕ, ಕಂದಾಯ ಸಚಿವರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಡಾ|| ವೈ.ಎ.ನಾರಾಯಣಸ್ವಾಮಿಯವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಚಾರದ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ವೈದ್ಯರಿಗೆ ಸಂಬಳ ಕೊಡಿಸಲಿ. ಅದು ಸಾಕು.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ನಾನು ತಕ್ಷಣ ಮಾನ್ಯ ಸಚಿವರ ಬಳಿ ಮಾತನಾಡಿ, ಉತ್ತರವನ್ನು ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಖ) ವಿಷಯ: ಅತಿಥಿ ಮತ್ತು ಅರೆಕಾಲಿಕ ಉಪನ್ಯಾಸಕರುಗಳಿಗೆ ಕಳೆದ ಒಂದು ವರ್ಷದಿಂದ ವೇತನ ಮಂಜೂರಾಗದಿರುವ ಕುರಿತು.**

- - - - -

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಕಳೆದ ಡಿಸೆಂಬರ್ 2020ರಿಂದ ಇಂದಿನವರೆಗೆ ಅಂದರೆ ಹತ್ತು ತಿಂಗಳು ವೇತನವಿಲ್ಲದೆ ಜೀವನ ನಿರ್ವಹಣೆ ಮಾಡುವುದು ಅತ್ಯಂತ ತೊಂದರೆಯಾಗಿರುತ್ತದೆ. ಹಲವಾರು ಜನ ಪದವೀಧರ ಉಪನ್ಯಾಸಕರಿಗೆ ವೇತನವೇ ಬದುಕಿನ ಆಧಾರ ಸ್ಥಂಭವಾಗಿದ್ದು, ವೇತನವಿಲ್ಲದೆ ಅವರ ಜೀವನ ಸಂಕಷ್ಟದಲ್ಲಿರುತ್ತದೆ.

ಕೋವಿಡ್-19 ಹಿನ್ನೆಲೆಯಲ್ಲಿ ಭೌತಿಕವಾಗಿ ವರ್ಗಗಳು ನಡೆಯದಿದ್ದರೂ ಕೂಡ ಅತಿಥಿ ಉಪನ್ಯಾಸಕರು ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಿರುವರು. ವಿಶ್ವವಿದ್ಯಾಲಯವು ನಿಗದಿಪಡಿಸಿದ ವೇಳಾಪಟ್ಟಿಯಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಪೂರ್ಣಗೊಳಿಸಿದ್ದರೂ ಕೂಡ ಸರ್ಕಾರದಿಂದ ಗೌರವಧನ ಬಿಡುಗಡೆಯಾಗದೆ ಇರುವುದು ದುರ್ದೈವದ ಸಂಗತಿ.

ವೇತನ ಬಿಡುಗಡೆ ವಿಳಂಬಕ್ಕೆ ಕಾರಣಗಳನ್ನು ಪ್ರಶ್ನಿಸಿದಾಗ ಸರ್ಕಾರದಿಂದ ಹಣವೇ ಬಿಡುಗಡೆಯಾಗಿಲ್ಲವೆಂದು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು ಉತ್ತರ ನೀಡುತ್ತಿರುವರು. ಇದು ಅಲ್ಲದೆ ಅತಿಥಿ ಉಪನ್ಯಾಸಕರ ಕಾರ್ಯಭಾರ ಹಾಗೂ ಹಾಜರಾತಿ ಮಾಹಿತಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಇಲಾಖೆಗೆ ಒದಗಿಸದೇ ಇರುವುದು ಕೂಡ ವಿಳಂಬಕ್ಕೆ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ. ಆದ್ದರಿಂದ ಉನ್ನತ ಶಿಕ್ಷಣ ಸಚಿವರು ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಿ ತಕ್ಷಣ ಅತಿಥಿ ಉಪನ್ಯಾಸಕರ ಗೌರವಧನ ಬಿಡುಗಡೆ ಮಾಡಲು ಸೂಕ್ತ ಕ್ರಮ ಜರುಗಿಸಲು ಈ ಮೂಲಕ ಒತ್ತಾಯಿಸುತ್ತೇನೆ.

ಇದಲ್ಲದೆ ಈ ಹಿಂದೆ ಸರ್ಕಾರ ಅತಿಥಿ ಉಪನ್ಯಾಸಕರ ಗೌರವಧನವನ್ನು ರೂ.10,000/- ದಿಂದ ರೂ.15,000/-ಕ್ಕೆ ಹೆಚ್ಚಳ ಮಾಡಿದ್ದು, ಅದರಂತೆ ರಾಜ್ಯದ ಹಲವಾರು ಕಾಲೇಜುಗಳ ಪ್ರಾಂಶುಪಾಲರು ಸರ್ಕಾರದ ಆದೇಶವನ್ನು ಪಾಲಿಸದೇ ರೂ.15,000/- ರಂತೆ ವೇತನ ನೀಡುತ್ತಿರುವುದಿಲ್ಲ. ಹಾಗಾಗಿ ಸಚಿವರು ಗೌರವಧನ ಹೆಚ್ಚಿಸಿದ್ದಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಪ್ರಾಂಶುಪಾಲರಿಗೆ ಸೂಕ್ತ ಕಟ್ಟುನಿಟ್ಟಿನ ನಿರ್ದೇಶನ ನೀಡಲು ಒತ್ತಾಯಿಸುತ್ತೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ, ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಅತಿಥಿ ಮತ್ತು ಅರೆಕಾಲಿಕ ಉಪನ್ಯಾಸಕರಿಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಕಳೆದ ಒಂದು ವರ್ಷದಿಂದ ವೇತನ ಬಿಡುಗಡೆ ಆಗದಿರುವ ಬಗ್ಗೆ ಶೂನ್ಯವೇಳೆಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಎಸ್.ವ್ಹಿ.ಸಂಕನೂರರವರು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಕಡೆಯಿಂದ ಉತ್ತರವನ್ನು ಒದಗಿಸಲಾಗುವುದು.

**ಎ) ವಿಷಯ: ರಾಜ್ಯದಲ್ಲಿ ನಾಡು ನುಡಿ ಮತ್ತು ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸುತ್ತಿರುವ ಸಂಘ-ಸಂಸ್ಥೆಗಳ ನಿವೇಶನಗಳು/ಕಟ್ಟಡಗಳ ನವೀಕರಣಕ್ಕೆ ಶೇಕಡ 10ರಷ್ಟು ಗುತ್ತಿಗೆ ಶುಲ್ಕ ವಿಧಿಸುತ್ತಿರುವ ಕುರಿತು.**

- - - - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸುತ್ತಿರುವ ಸಂಘ-ಸಂಸ್ಥೆಗಳು, ಶಾಲೆಗಳಿಗೆ ಗುತ್ತಿಗೆ ನೀಡಿರುವ ನಿವೇಶನ, ಕಟ್ಟಡಗಳ ಪ್ರಸಕ್ತ ಮಾರುಕಟ್ಟೆ ಬೆಲೆಯನ್ನಾಧರಿಸಿ, ವಾರ್ಷಿಕ ಗುತ್ತಿಗೆ ಶುಲ್ಕವನ್ನು ನಿಗದಿಪಡಿಸಲು ಮುಂದಾಗಿರುವ ಬಿ.ಬಿ.ಎಂ.ಪಿ ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ.

ಬಿಬಿಎಂಪಿ, ಬಿಡಿಎ ಹಾಗೂ ಸರ್ಕಾರದ ನಾನಾ ಇಲಾಖೆಗಳು ಬಿಎಂಶ್ರೀ ಪ್ರತಿಷ್ಠಾನ, ಉದಯಭಾನು ಕಲಾಸಂಘ, ಕಟ್ಟೆ ಬಳಗ ಸೇರಿದಂತೆ ಹಲವು ಕನ್ನಡ ಪರ ಸಂಘ-ಸಂಸ್ಥೆಗಳು ಹಾಗೂ ಕನ್ನಡ ಶಾಲೆಗಳಿಗೆ ನಿವೇಶನಗಳನ್ನು 5, 10, 30 ವರ್ಷಗಳ ಅವಧಿಗೆ ಗುತ್ತಿಗೆ ಪಡೆದಿವೆ. ಆದರೆ, ಗುತ್ತಿಗೆ ಅವಧಿ ಮುಗಿದ ನಿರ್ವೇಶನಗಳ ನವೀಕರಣ ಸಂದರ್ಭದಲ್ಲಿ ಯಾವುದೇ ಷರತ್ತು ವಿಧಿಸದೆ ಪ್ರಸಕ್ತ ಮಾರುಕಟ್ಟೆ ಬೆಲೆಯ ಶೇಕಡಾ 2ರಷ್ಟು ಗುತ್ತಿಗೆ ಶುಲ್ಕ ನಿಗದಿಪಡಿಸಿರುವುದು ಹಾಗೂ ಕನ್ನಡ ಸಂಘ-ಸಂಸ್ಥೆಗಳು, ಕನ್ನಡ ಶಾಲೆಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರಗಳಿಗೆ ನೀಡಿರುವ ನಿವೇಶನಗಳ ಗುತ್ತಿಗೆ ನವೀಕರಣ ಸಂದರ್ಭದಲ್ಲಿ ಯಾವುದೇ ಪರಭಾರೆ ಮಾಡದಂತೆ ಷರತ್ತು ವಿಧಿಸಿ, ಅದೇ ಸಂಸ್ಥೆಗಳಿಗೆ ಮಾರ್ಗಸೂಚಿ ದರದ ವಾರ್ಷಿಕ ಶೇಕಡಾ 10ರಷ್ಟು ಶುಲ್ಕ ವಿಧಿಸಿ ನವೀಕರಣ ಮಾಡಿಕೊಡಲು ನಿರ್ಣಯ ಕೈಗೊಂಡಿರುವುದು ಅಚ್ಚರಿಗೆ ಕಾರಣವಾಗಿರುತ್ತದೆ.

ಇದು ಸಮಾಜಮುಖಿ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಇಂತಹ 250ಕ್ಕೂ ಹೆಚ್ಚು ಸಂಘ-ಸಂಸ್ಥೆಗಳಿಗೆ ನುಂಗಲಾರದ ಬಿಸಿ ತುಪ್ಪವಾಗಿದೆ. ಆ ಕಾರಣ ಕನ್ನಡ ಸಂಘ-ಸಂಸ್ಥೆಗಳು, ಶಾಲೆಗಳು ಲಾಭದ ಉದ್ದೇಶವನ್ನಿಟ್ಟುಕೊಂಡು ಕಾರ್ಯನಿರ್ವಹಿಸದಿರುವುದರಿಂದ ಸ್ವತ್ತುಗಳ ಮಾರುಕಟ್ಟೆ ಮೌಲ್ಯದ ಶೇಕಡಾ 2ರಷ್ಟು ವಾರ್ಷಿಕ ಗುತ್ತಿಗೆ ಶುಲ್ಕ ನಿಗದಿಪಡಿಸದೆ ಹಾಲೀ ಇರುವ ಗುತ್ತಿಗೆ ದರದಲ್ಲೇ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಕಡಾ 10ರಷ್ಟು ಶುಲ್ಕವನ್ನು ಹೆಚ್ಚಿಸಿ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ, ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ನಾಡು, ನುಡಿ ಮತ್ತು ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸುತ್ತಿರುವ ಸಂಘ-ಸಂಸ್ಥೆಗಳ ನಿವೇಶನಗಳು, ಕಟ್ಟಡಗಳ ನವೀಕರಣಕ್ಕೆ ಶೇಕಡಾ 10ರಷ್ಟು ಗುತ್ತಿಗೆ ಶುಲ್ಕ ವಿಧಿಸುವ ಬಗ್ಗೆ ಶೂನ್ಯವೇಳೆಯಲ್ಲಿ ಸದಸ್ಯರಾದ ಮಾನ್ಯ ಯು.ಬಿ.ವೆಂಕಟೇಶ್ ರವರು ಪ್ರಸ್ತಾಪಿಸಿರುವ ವಿಷಯವನ್ನು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನಕ್ಕೆ ತಂದು ಉತ್ತರವನ್ನು ಒದಗಿಸಲಾಗುವುದು.

**ಏ) ವಿಷಯ: ಹಂಪಿ ಕನ್ನಡ ವಿಶ್ವವಿದ್ಯಾಲಯದ ಬಗ್ಗೆ.**

- - - - -

**ಡಾ: ತಳವಾರ ಸಾಬಣ್ಣಾ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾಡು-ನುಡಿಯ ವಿವೇಕದ ಪ್ರತಿರೂಪವಾಗಿ, ಭಾಷೆಗಾಗಿ ಇರುವ ವಿಶ್ವವಿದ್ಯಾಲಯ, ಜ್ಞಾನಗಂಗೋತ್ರಿಯಂತೆ ಕಾರ್ಯನಿರ್ವಹಿಸಬೇಕಾಗಿದ್ದ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಭ್ರಷ್ಟಾಚಾರದ ಗಂಗೋತ್ರಿಯ ರೂಪದಲ್ಲಿ ಸುದ್ದಿಯಲ್ಲಿರುವುದು ದುರದೃಷ್ಟಕರ. ಮುಂಬಡ್ತಿ, ಪಿಂಚಣಿ ಬಿಡುಗಡೆ, ಪ್ರೊಬೇಷನರಿ ಅವಧಿ ಪೂರ್ಣಗೊಂಡಿರುವುದರ ಘೋಷಣೆ ಸೇರಿದಂತೆ ವಿವಿಧ ಕೆಲಸಗಳಿಗೆ ಲಂಚ-ಕಮೀಷನ್ ಕೇಳಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಆದಾಯ ತೆರಿಗೆ, ಹಿಂದಿನ ಬಾಕಿ ಹೆಸರಿನಲ್ಲಿ ನಿವೃತ್ತ ನೌಕರರ ಒಪ್ಪಿಗೆಯಿಲ್ಲದೆ ಪಿಂಚಣಿ ಮೊತ್ತದಲ್ಲಿ ಕಡಿತ ಮಾಡಲಾಗುತ್ತಿದೆ ಎಂದು ವಿಶ್ರಾಂತ ಕುಲಪತಿ ಹಾಗೂ ಪ್ರಾಧ್ಯಾಪಕರು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ ಎಂದು ಪತ್ರಿಕೆಗಳಲ್ಲಿ ಉಲ್ಲೇಖಿಸಲಾಗಿದೆ.

1995 ರಿಂದ 1997ರ ಅವಧಿಯಲ್ಲಿ ಯು.ಜಿ.ಸಿ ನಿಯಮಕ್ಕೆ ವಿರುದ್ಧವಾಗಿ ನೇಮಕಗೊಂಡ ಎಂಟು ಜನ ಪ್ರಾಧ್ಯಾಪಕರ ನೇಮಕಾತಿ ವಿಷಯ ಇನ್ನೂ ಇತ್ಯರ್ಥಗೊಂಡಿಲ್ಲ. ಈ ಸಂಬಂಧ ರಾಜ್ಯ ಸರ್ಕಾರ ಮತ್ತು ಯುಜಿಸಿಗೆ ವಿಶ್ವವಿದ್ಯಾಲಯದಿಂದ ಹಲವು ಸಲ ಪತ್ರ ಬರೆದರೂ ಇವರ ನೇಮಕವನ್ನು ಅಸಿಂಧುಗೊಳಿಸಿಲ್ಲ. ಇಷ್ಟೇ ಅಲ್ಲ. ರಾಜ್ಯ ಲೆಕ್ಕಪತ್ರ ಇಲಾಖೆಯು ಕಾಲಕಾಲಕ್ಕೆ ಇವರ ವೇತನ, ಪಿಂಚಣಿ ಬಿಡುಗಡೆಯ ಸಂದರ್ಭದಲ್ಲಿ ಆಕ್ಷೇಪ ಎತ್ತುತ್ತಲೇ ಬಂದಿದೆ. ಯುಜಿಸಿ ನಿಯಮಕ್ಕೆ ವಿರದ್ಧವಾಗಿ ಈ ವರ್ಷದಲ್ಲಿ 17 ಬೋಧಕ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ನಡೆದಿದೆ ಎನ್ನುವ

---

ವರದಿಗಳೂ ಇವೆ. ಇಷ್ಟೇ ಅಲ್ಲ. 1991ರ ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮದ ಪ್ರಕಾರ, ನೇಮಕಾತಿ ಪರಿನಿಯಮಕ್ಕೆ ತಿದ್ದುಪಡಿ ತರಬೇಕು. ಅದಕ್ಕೆ ರಾಜ್ಯಪಾಲರಿಂದ ಅನುಮೋದನೆ ಪಡೆಯಬೇಕು. ಆದರೆ, ಇದ್ಯಾವುದೂ ಮಾಡಿಲ್ಲ ಎಂದು ಪತ್ರಿಕೆಗಳಲ್ಲಿ ಆರೋಪಿಸಲಾಗಿದೆ. ಸಹಾಯಕ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ ಹುದ್ದೆಗಳನ್ನು ತುಂಬಲಾಗುತ್ತಿದೆ. ಆದರೆ, ಮೂರು ಹುದ್ದೆಗಳಿಗೆ ಒಂದೇ ಲಿಖಿತ ಪರೀಕ್ಷೆ ನಡೆಸಲಾಗುತ್ತಿದೆ ಬೇರೆ ಬೇರೆ ಹುದ್ದೆಗಳಿಗೆ ಅರ್ಜಿ ಹಾಕಿದ್ದರೂ ಎಲ್ಲಾ ಹುದ್ದೆಗಳಿಗೂ ಲಿಖಿತ ಪರೀಕ್ಷೆಯನ್ನೇ ಪರಿಗಣಿಸಲಾಗುತ್ತಿದೆ. ಇದು ನಿಯಮಕ್ಕೆ ವಿರುದ್ಧ. ಲಿಖಿತ ಪರೀಕ್ಷೆಗೆ 80 ಅಂಕ, ಸಂದರ್ಶನಕ್ಕೆ 20 ಅಂಕ ನಿಗದಿಗೊಳಿಸಲಾಗಿದೆ. ಆದರೆ, ಇದು ಯಾವ ನಿಯಮದ ವ್ಯಾಪ್ತಿಯಲ್ಲಿ ಬರುತ್ತದೆ ಎನ್ನುವುದನ್ನು ತಿಳಿಸಿಲ್ಲ.

ಶಿಷ್ಯವೇತನ ಮಂಜೂರಾತಿಗೆ ದಾಖಲೆಗಳ ಮೇಲೆ ಸಹಿ ಮಾಡುವುದಕ್ಕೂ ಹಣ ಕೇಳಲಾಗುತ್ತಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. 36 ತಿಂಗಳಿನಿಂದ ಸ್ಥಗಿತಗೊಂಡಿರುವ ಶಿಷ್ಯವೇತನ (ಫೆಲೋಶಿಪ್) ಬಿಡುಗಡೆ ಮಾಡಬೇಕೆಂದು ಸಂಶೋಧನಾ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದ್ದರು. 'ಫೆಲೋಶಿಪ್ ಕೊಡಿ. ಇಲ್ಲವೇ ವಿಷ ಕೊಡಿ' ಎಂಬ ವಿದ್ಯಾರ್ಥಿಗಳ ಘೋಷಣೆ ಪರಿಸ್ಥಿತಿ ಗಂಭೀರವಾಗಿರುವುದನ್ನು ಸೂಚಿಸುವಂತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡಬೇಕಿದ್ದ ಸಹಾಯಧನವನ್ನು ಸರ್ಕಾರ ಕಾಲಕಾಲಕ್ಕೆ ಬಿಡುಗಡೆ ಮಾಡಿದ್ದರೂ ವಿದ್ಯಾರ್ಥಿಗಳ ಖಾತೆಗೆ ಅದು ಜಮೆ ಆಗಿಲ್ಲ. ಸಹಾಯಧನ ನೀಡದಿರುವ ಮೂಲಕ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದಿಂದ ವಂಚಿಸಲಾಗುತ್ತಿದೆ ಎನ್ನುವ ಗಂಭೀರ ಆರೋಪವನ್ನು ವಿದ್ಯಾರ್ಥಿಗಳು ಮಾಡಿದ್ದಾರೆ. ಹಂಪಿ ವಿಶ್ವವಿದ್ಯಾಲಯದಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದನ್ನು ಈ ಘಟನೆಗಳು ತೋರಿಸುತ್ತವೆ. ಕನ್ನಡಕ್ಕಾಗಿ ಕಟ್ಟಿರುವ ಈ ವಿಶ್ವವಿದ್ಯಾಲಯದಲ್ಲಿ ಅವ್ಯವಹಾರಗಳು ಈ ಪರಿ ನಡೆದಿವೆ ಎಂದಾದರೆ ಅವು ನಾಡು-ನುಡಿಗೆ ಬಗೆದ ಮೋಸವೇ ಸರಿ. ಈ ಎಲ್ಲಾ ಆರೋಪಗಳ ಕುರಿತು ಸರ್ಕಾರವು ಸಮಗ್ರ ತನಿಖೆ ನಡೆಸಿ ವಿಶ್ವವಿದ್ಯಾಲಯವನ್ನು ಗುಣಮಟ್ಟದ ಶಿಕ್ಷಣ ನೀಡಲು ಸಿದ್ಧಪಡಿಸಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1069) 14.12.2021 01.00 LL-BNS

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಬಗ್ಗೆ ಶೂನ್ಯ

ವೇಳೆಯಲ್ಲಿ ಡಾ: ತಳವಾರ್ ಸಾಬಣ್ಣನವರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸಲಾಗುವುದು.

**4. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಭಾರತದ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ 2020-21ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಸಂಪುಟ 1 ಮತ್ತು 2) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**5. ವರದಿಗಳನ್ನೊಪ್ಪಿಸುವುದು**

**ಡಾ: ಕೆ. ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, 15ನೇ ವಿಧಾನಸಭೆಯ 2020-21ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಿಸಿದ 05ನೇ ವರದಿ ಮತ್ತು ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ 06ನೇ ವರದಿ ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದ 07ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಗಳನ್ನೊಪ್ಪಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ಸದನ ಸಮಿತಿ ಹಾಗೂ ವಿಶೇಷ ಜಂಟಿ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವಗಳು

**ಅ) ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ಇನ್ನೂ 6 ತಿಂಗಳು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆಯವರು ಮಂಡಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

“ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 06 ತಿಂಗಳು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಸದನದ ಒಪ್ಪಿಗೆ ಪಡೆಯುವುದು”

**ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಸದನ ಸಮಿತಿಯು ತನ್ನ ವರದಿ ಸಲ್ಲಿಸಲು ದಿನಾಂಕ:21.12.2021ರಿಂದ ಇನ್ನೂ 06 ತಿಂಗಳವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಸದನದ ಒಪ್ಪಿಗೆಯನ್ನು ನೀಡಲಾಯಿತು**

**ಆ) ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತು ಲಘು ಪ್ರಕಟಣೆ ಭಾಗ-2, ದಿನಾಂಕ:16.04.2021 ಸಂಖ್ಯೆ:42ರನ್ವಯ ರಚಿಸಲಾದ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು 06 ತಿಂಗಳು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಸದನದಲ್ಲಿ ಚರ್ಚೆಯಾಗಿ ನಿರ್ಣಯಿಸಿದಂತೆ, ಕರ್ನಾಟಕ ವಿಧಾನ ಪರಿಷತ್ತು ಲಘು ಪ್ರಕಟಣೆ ಭಾಗ-2, ದಿನಾಂಕ:16.04.2021ರನ್ವಯ ಸಂಖ್ಯೆ:42ರನ್ವಯ ರಚಿಸಲಾದ ವಿಶೇಷ ಜಂಟಿ ಸದನ ಸಮಿತಿಯನ್ನು ಅಧ್ಯಕ್ಷರು ಸೇರಿದಂತೆ 15 ಶಾಸಕರ ಸದಸ್ಯತ್ವದಲ್ಲಿ ರಚಿಸಲಾಗಿತ್ತು. ಈ ಸಮಿತಿಯ ಮೊದಲ ಸಭೆಯನ್ನು ದಿನಾಂಕ:30.06.2021ರಂದು ನಡೆಸುವ ಕುರಿತು ಸಭಾ ಸೂಚನಾ ಪತ್ರವನ್ನು ಹೊರಡಿಸಲಾಗಿತ್ತು.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉಲ್ಲೇಖದ ಪತ್ರದಂತೆ, ಕಾರಣಾಂತರಗಳಿಂದ ಸಭೆಯನ್ನು ಮುಂದೂಡಿದ ಕುರಿತು ಎಲ್ಲಾ ಸದಸ್ಯರಿಗೂ ತುರ್ತು ಮಾಹಿತಿಯನ್ನು ನೀಡಲಾಯಿತು. ತದನಂತರ, ಇದುವರೆವಿಗೂ ಸಭೆ ಕರೆಯಲು ಸಾಧ್ಯವಾಗಿರುವುದಿಲ್ಲ. ಈ ಅಂಶಗಳನ್ನು ಪರಿಗಣಿಸಿ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಇನ್ನು 06 ತಿಂಗಳ ಕಾಲ ವಿಸ್ತರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಎನ್. ರವಿಕುಮಾರ್‌ರವರು ಮಂಡಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

“ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಿಗೆ ಮೂಲಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ರವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಕಾಲಾವಧಿಯನ್ನು 06 ತಿಂಗಳು ವಿಸ್ತರಿಸಲು ಸಲ್ಲಿಸಲಾಗಿರುವ ಪ್ರಸಾವಕ್ಕೆ ಸದನದ ಒಪ್ಪಿಗೆ ಪಡೆಯುವುದು .”

**ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿ ಸಲ್ಲಿಸಲು ದಿನಾಂಕ:16.07.2021ರಿಂದ ಇನ್ನೂ 06 ತಿಂಗಳವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಸದನದ ಒಪ್ಪಿಗೆಯನ್ನು ನೀಡಲಾಯಿತು**

**7. ಕೆ.ಪಿ.ಎಸ್.ಸಿ. ಪರೀಕ್ಷೆ ಬರೆಯಬೇಕಾಗಿದ್ದ ಅಭ್ಯರ್ಥಿಗಳಿಗೆ ರೈಲು ವಿಳಂಬದಿಂದ ಪರೀಕ್ಷೆ ಬರೆಯಲು ಸಾಧ್ಯವಾಗದೇ ಇರುವ ಬಗ್ಗೆ**

\- - - - - -

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಲೋಕೋಪಯೋಗಿ ಇಲಾಖೆಯ ವತಿಯಿಂದ ನಡೆಸುತ್ತಿರುವ ಪರೀಕ್ಷೆ...

**ಸಭಾಪತಿಯವರು:-** ಈ ಬಗ್ಗೆ ಆಗಲೇ ಚರ್ಚೆಯಾಗಿರುತ್ತದೆ. ಆ ಸಂದರ್ಭದಲ್ಲಿ ತಾವು ಸದನದಲ್ಲಿ ಹಾಜರಿರಲಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ನಾನು ಸಹ ಈ ಸದನದಲ್ಲಿ ಹಾಜರಿದ್ದೆನು. ಏಕೆಂದರೆ, ಸುಮಾರು 5 ತಾಸು ರೈಲುಗಳು, ಲಿಂಕ್ ಎಕ್ಸ್‌ಪ್ರೆಸ್,

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ನಿಜಾಮುದ್ದೀನ್ ಎಕ್ಸ್‌ಪ್ರೆಸ್, ಸೊಲಾಪುರ ಎಕ್ಸ್‌ಪ್ರೆಸ್, ಬಸವ ಎಕ್ಸ್‌ಪ್ರೆಸ್ ಈ ಎಲ್ಲಾ ರೈಲುಗಳು ಸಹ 5 ತಾಸು ಇವೆ. ಇದರಿಂದಾಗಿ, ಅಭ್ಯರ್ಥಿಗಳು ಸದರಿ ಪರೀಕ್ಷೆಗೆ ಹಾಜರಾಗುವುದಕ್ಕೆ ಕಷ್ಟವಾಗಿದ್ದು, ಸರ್ಕಾರ ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ, ಆ ಅಭ್ಯರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ.

**ಸಭಾಪತಿಯವರು:-** ಈ ವಿಷಯದ ಬಗ್ಗೆ ಸರ್ಕಾರ ಉತ್ತರ ನೀಡಿದ್ದು, ತಕ್ಷಣವೇ ಆ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿರುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಆ ಮಕ್ಕಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ಈ ದಿನ ಮಧ್ಯಾಹ್ನ ನಿಮಗೆ ಯಾವಾಗ ಅವಕಾಶ ಆಗುತ್ತದೆಯೋ ಆಗ ಈ ವಿಷಯದ ಬಗ್ಗೆ ಉತ್ತರವನ್ನು ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಇರುವಷ್ಟು ಕಳಕಳಿ ಖಂಡಿತವಾಗಿಯೂ ಅಷ್ಟೇ ಕಳಕಳಿ ನಮಗೂ ಇದೆ. ಈಗ ಇದರಲ್ಲಿ ಒಂದು ಯೋಚನೆ ಬಂದಿರುವುದೇನೆಂದರೆ, ಈ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾತ್ರ ಆಯೋಗವು ಸೂಕ್ತ ನಿರ್ಣಯ ಕೈಗೊಳ್ಳುವುದು. ಈ ಹಿನ್ನೆಲೆಯಲ್ಲಿ ಎಲ್ಲಾ ಅಭ್ಯರ್ಥಿಗಳು ಮಧ್ಯಾಹ್ನ ನಡೆಯುವ ಪರೀಕ್ಷೆಗೆ ಕೂಡಲೇ ಹಾಜರಾಗಲು ಅವರಿಗೆ ಸೂಚನೆ ಕೊಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದು ಆಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅದು ಏತಕ್ಕೆ ಆಗುವುದಿಲ್ಲ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕೆಲವು ಅಭ್ಯರ್ಥಿಗಳು ನನಗೆ ಫೋನ್ ಮಾಡಿದ್ದರು. ಅವರು ರಾಯಚೂರಿನಿಂದ ಮಧ್ಯಾಹ್ನ ಕೂಡ ತಲುಪುವುದಕ್ಕೆ ಆಗುವುದಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಸುಮಾರು 05 ಗಂಟೆ ರೈಲು ವಿಳಂಬವಾಗಿರುತ್ತದೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆ ಅಭ್ಯರ್ಥಿಗಳು ಮಧ್ಯಾಹ್ನದ ಪರೀಕ್ಷೆ ವೇಳೆಗೂ ಸಹ ಅವರು ತಲುಪುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ರೈಲಿನಲ್ಲಿ ಬರುತ್ತಿರುವಂತಹ ಅಭ್ಯರ್ಥಿಗಳು ನನಗೆ ಫೋನ್ ಮಾಡಿ ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸದರಿ ರೈಲು ಈಗಾಗಲೇ ತಲುಪಿರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲ ಬಂದಿರುವುದಿಲ್ಲ. ಒಂದು ರೈಲು ಬಂದಿರುವುದಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಉದ್ಯಾನ್ ಎಕ್ಸ್‌ಪ್ರೆಸ್ 09.30 ಗಂಟೆಗೆ ಗುಲ್ಬರ್ಗಾ ಮುಟ್ಟುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಹೌದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಹಾಗಾಗಿ ಆ ರೈಲು ಸುಮಾರು 05 ಗಂಟೆ ವಿಳಂಬವಾಗಿರುತ್ತದೆ. ಅಷ್ಟು ವಿಳಂಬವಾದರೆ, ಅವರು ಮಧ್ಯಾಹ್ನ 03-00 ರಿಂದ 04-00 ಗಂಟೆಗೆ ಅವಧಿಗೆ ಮುಟ್ಟುತ್ತಾರೆ. ಅವರು ಮಧ್ಯಾಹ್ನದ ಪರೀಕ್ಷಾ ವೇಳೆಗೆ ಅಲ್ಲಿಗೆ ಹೋಗಬೇಕಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಹಾಸನ-ಸೊಲ್ಲಾಪುರ ಎಕ್ಸ್‌ಪ್ರೆಸ್ ರೈಲು ಮಧ್ಯಾಹ್ನ 03-00 ಗಂಟೆಗೆ ತಲುಪುತ್ತದೆ. ಆ ರೈಲಿನಲ್ಲಿ ಸುಮಾರು 2000 ಅಭ್ಯರ್ಥಿಗಳು ಇದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ಮಕ್ಕಳಿಗೆ ಅನ್ಯಾಯವಾಗದ ರೀತಿ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆ ಅಭ್ಯರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಸರ್ಕಾರ ಮಾಡುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**8. ಪ್ರಶ್ನೆಗಳಿಗೆ ಹಾಗೂ ನಿಯಮ 330ರ ಅಡಿಯಲ್ಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಇಲಾಖೆಗಳಿಂದ ಉತ್ತರ ಬಾರದಿರುವ ಬಗ್ಗೆ.**

- - - - - -

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಗಳು. ಮೊದಲನೆ ವಿಷಯ ಶ್ರೀ ಬಿ.ಎಂ. ಫಾರೂಕ್‌ರವರದ್ದು. ಆದರೆ, ಸದರಿಯವರು ಸದನದಲ್ಲಿ ಗೈರು ಹಾಜರಾಗಿದ್ದಾರೆ. ಎರಡನೆ ವಿಷಯ ಡಾ: ವೈ.ಎ. ನಾರಾಯಣಸ್ವಾಮಿರವರದ್ದು. ಆದರೆ, ಅದಕ್ಕೆ ಸಂಬಂಧಪಟ್ಟ ಸಚಿವರು ಸದನದಲ್ಲಿ ಹಾಜರಿರುವುದಿಲ್ಲ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಿಯಮ 330ರಡಿಯಲ್ಲಿ ನನಗೆ ಸಂಬಂಧಪಟ್ಟ ವಿಷಯ ಇದೆ. ಅದನ್ನು before lunch ತೆಗೆದುಕೊಂಡರೆ it will be better.

**ಸಭಾಪತಿಯವರು:-** ನಾನು ಸಭೆಯ ಕಾರ್ಯಸೂಚಿಯ ಮೇರೆಗೆ ಕಲಾಪ ನಡೆಸುತ್ತೇನೆ. ಮೂರನೆ ವಿಷಯ ಶ್ರೀಮತಿ ವೀಣಾ ಅಚ್ಚಯ್ಯನವರದ್ದು ಇದೆ. ಆದರೆ, ಅವರ ವಿಷಯಕ್ಕೆ ಸರ್ಕಾರದಿಂದ ಉತ್ತರ ಬಂದಿರುವುದಿಲ್ಲ. ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರಗಳು ಬರುವುದೇ ಇಲ್ಲ. ಉದಾಹರಣೆಗೆ, ಶ್ರೀಮತಿ ಶಶಿಕಲಾ ಜೊಲ್ಲೆಯವರು ಶ್ರೀ ಮುನಿರಾಜುರವರ ಪ್ರಶ್ನೆಗೆ ಒಂದು ತಿಂಗಳು ಕಾಲಾವಕಾಶ ಕೇಳಿದ್ದಾರೆ. ಶ್ರೀ ಎಂ.ಎ. ಗೋಪಾಲಸ್ವಾಮಿಯವರ ಪ್ರಶ್ನೆಗೆ 15 ದಿವಸ ಸಮಯ ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಶ್ರೀ ಎಂ.ನಾರಾಯಣಸ್ವಾಮಿಯವರ ಪ್ರಶ್ನೆಗೆ 2 ವಾರ ಕಾಲಾವಕಾಶ ಕೇಳಿದಾರೆ. ಶ್ರೀ ಎಸ್.ವ್ಹಿ. ಸಂಕನೂರರವರ ಪ್ರಶ್ನೆಗೆ 2 ವಾರ ಕಾಲಾವಕಾಶ ಕೇಳಿದ್ದಾರೆ. ಶ್ರೀ ಶಶೀಲ್ ಜಿ. ನಮೋಶಿಯವರ ಒಟ್ಟು ಎರಡು ಪ್ರಶ್ನೆಗಳಿಗೆ 2 ವಾರ ಕಾಲಾವಕಾಶ ಕೇಳಿದ್ದಾರೆ. ಶ್ರೀ ಕಾಂತರಾಜುರವರ ಪ್ರಶ್ನೆಗೆ 30 ದಿವಸ ಕಾಲಾವಕಾಶ ಕೇಳಿದ್ದಾರೆ. ಶ್ರೀ ಬಿ.ಸಿ. ನಾಗೇಶ್‌ರವರು ಶ್ರೀ ಮರಿತಿಬ್ಬೇಗೌಡರವರ ಪ್ರಶ್ನೆಗೆ 15 ದಿವಸ ಕಾಲಾವಕಾಶ ಕೇಳಿದ್ದಾರೆ. ಶ್ರೀ ಶಶೀಲ್ ಜಿ. ನಮೋಶಿಯವರ ಪ್ರಶ್ನೆಗೆ 15 ದಿವಸ, ಶ್ರೀ ಅರುಣ ಶಹಾಪೂರರವರ ಪ್ರಶ್ನೆಗೆ 15 ದಿವಸ ಮತ್ತು ಶ್ರೀ ಕಾಂತರಾಜುರವರ ಪ್ರಶ್ನೆಗೆ 30 ದಿವಸ ಕಾಲಾವಕಾಶ ಕೇಳಿರುತ್ತಾರೆ. ಅಧಿವೇಶನ ನಡೆಯುತ್ತಿದೆ ಎಂಬ ಬಗ್ಗೆ ಸರ್ಕಾರಕ್ಕೆ ಗೊತ್ತಿಗೆ. ಆದರೆ, ಅದು ಅಧಿಕಾರಿಗಳಿಗೆ ತಿಳಿಯಬೇಕು. ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಮೊದಲೇ ಕೇಳಿದ್ದರೂ ಉತ್ತರ ಕೊಡುವುದಕ್ಕೆ ಇಷ್ಟು ವಿಳಂಬ ಮಾಡಿದರೆ ಹೇಗೆ? ಇದರಿಂದಾಗಿ, ನಾವು ಅವರಿಗೆ ಉತ್ತರ ಹೇಗೆ ಕೊಡುವುದಕ್ಕಾಗುತ್ತದೆ? ಆ ಉತ್ತರಗಳನ್ನು ಕೊಡಿಸುವುದು ನನ್ನ ಜವಾಬ್ದಾರಿಯಾಗಿವುದರಿಂದ ಅವರು ನನ್ನನ್ನು ಕೇಳುತ್ತಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1070) 14.12.2021 1.10 YL-BNS (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

ತಮಗೆ ಇದೆಲ್ಲವನ್ನೂ ಕಳುಹಿಸಿಕೊಡುತ್ತೇನೆ. ಸದನವು ಮುಕ್ತಾಯಗೊಳ್ಳುವುದರೊಳಗೆ ತಕ್ಷಣವೇ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ತರಿಸಿಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಸಹ ಈ ಹಿಂದೆ ಸಚಿವರಾಗಿ ಕರ್ತವ್ಯವನ್ನು ನಿರ್ವಹಿಸಿದ್ದೀರಿ. ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಹಾಗೂ ರಾಜ್ಯದಲ್ಲಿರುವ ಅನೇಕ ವರ್ಷಗಳಿಗೆ ಸಂಬಂಧಿಸಿದಂತೆ ಒಟ್ಟಿಗೆ ಪ್ರಶ್ನೆ ಕೇಳುತ್ತಾರೆ. ಇಂತಹ ಸಂದರ್ಭದಲ್ಲಿ 10 ದಿವಸಗಳೊಳಗೆ ಉತ್ತರವನ್ನು ತರಿಸುವುದು ಬಹಳ ಕಷ್ಟವಾಗುತ್ತದೆ. ಆದರೂ ಸಹ ತಾವು ಹೇಳುವುದು ಸರಿ ಇದ್ದ ಕಾರಣ ಎಷ್ಟು ಸಾಧ್ಯವೋ ಅಷ್ಟಕ್ಕೆ ಉತ್ತರವನ್ನು ಖಂಡಿತವಾಗಿ ತರಿಸಿಕೊಡುತ್ತೇನೆ.

**ಸಭಾಪತಿಯವರು:-** ಶ್ರೀಯುತರುಗಳಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಎಸ್. ಎಲ್.ಭೋಜೋಗೌಡ, ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330ರ ಅಡಿಯಲ್ಲಿ *'ಅನುದಾನ ಮತ್ತು ಅನುದಾನ ರಹಿತ ಶಾಲೆಗಳ ಮಾನ್ಯತೆ ನವೀಕರಣ ಮಾಡುವ ಸಂಬಂಧ ಇಲಾಖೆಯಿಂದ ರೂಪಿಸಿರುವ ನಿಯಮಾವಳಿಗಳ ಕುರಿತು'* ಪ್ರಸ್ತಾಪಿಸಲಿರುವ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಮ್ಮ ಕರ್ನಾಟಕ ರಾಜ್ಯದಲ್ಲಿ....

**ಸಭಾಪತಿಯವರು:-** ಮಾನ್ಯ ಸದಸ್ಯರೆ ಒಂದು ನಿಮಿಷ. ಉತ್ತರ ಬಂದಿಲ್ಲ ಎಂದು ನನಗೆ ಈಗ ಮಾಹಿತಿ ಬಂತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಜೊತೆಗೆ ನಮಗೆ ಉತ್ತರ ನೀಡಲು ಮಾನ್ಯ ಸಚಿವರೆ ಸದನಕ್ಕೆ ಬರಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಮುಂದಿನ ವಿಷಯ ನನಗೆ ಸಂಬಂಧಿಸಿರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು 6000 ಸಂಸ್ಥೆಗಳ ಮಾನ್ಯತೆಯ ವಿಚಾರವಾಗಿದೆ. ಹಾಗಾಗಿ ಶಿಕ್ಷಣ ಸಚಿವರು ಸದನಕ್ಕೆ ಬಂದ ಮೇಲೆಯೇ ಈ ವಿಚಾರವನ್ನು ಪ್ರಸ್ತಾಪ ಮಾಡಲು ಅವಕಾಶ ಕಲ್ಪಿಸಿದರೆ ಒಳ್ಳೆಯದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು burning issue ಆಗಿದೆ.

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯತೆ ನವೀಕರಣವಾಗದೇ ಸ್ಚಂಬಳ ನೀಡುವುದಿಲ್ಲ. ಈಗಾಗಲೇ ಸುಮಾರು 6000 ಕ್ಕೂ ಹೆಚ್ಚು ಶಾಲಾ-ಕಾಲೇಜು ಸಂಸ್ಥೆಯವರು ಮಾನ್ಯತೆ ನವೀಕರಣಕ್ಕೆ ಇಟ್ಟಿದ್ದಾರೆ. ಈ ಸಂಬಂಧ ಈಗಾಗಲೇ ಸಮಿತಿ ರಚಿಸಲಾಗಿದ್ದು, ಅದರ ವರದಿಯನ್ನು ಸರ್ಕಾರ ಸ್ವೀಕರಿಸಿಲ್ಲ. ನೆರೆಯ ತೆಲಂಗಾಣ ರಾಜ್ಯದವರು ಸುಪ್ರೀಂ ಕೋರ್ಟ್‌ನ ಮಾರ್ಗದರ್ಶನದ ಮೇಲೆ 5 ಮೀಟರ್ ಒಳಗಿರುವವರಿಗೆ, 500 sq. ft. ನಲ್ಲಿರುವವರಿಗೆ ಎಲ್ಲಾ ರೀತಿಯಲ್ಲಿ ರಿಯಾಯಿತಿ ನೀಡಿದ್ದಾರೆ. ಈ ರೀತಿ ಇರುವಾಗ ಸರ್ಕಾರವೇ ಮಾಡಿದಂತಹ ಸಮಿತಿಯ ವರದಿಯನ್ನು ಸಹ ಜಾರಿಮಾಡಿಲ್ಲ ಅಥವಾ ತೆಲಂಗಾಣದಂತಹ ನೆರೆ ರಾಜ್ಯದ ರೀತಿ ಸರಳೀಕರಣವನ್ನು ಸಹ ಮಾಡಿಲ್ಲ. ಇದರಿಂದಾಗಿ ಸಾವಿರಾರು ಸಂಸ್ಥೆಗಳು ಅಕ್ಷರಶಃ ಸಂಕಷ್ಟದಲ್ಲಿದ್ದಾರೆ. ಮಾನ್ಯತೆ ನವೀಕರಣವಾಗದೆ ಇವತ್ತು ವೇತನ ಸಿಗುತ್ತಿಲ್ಲ. ಹಾಗಾಗಿ ನನ್ನ ಪ್ರಶ್ನೆಯೇನೆಂದರೆ, ಮಾನ್ಯತೆ ನವೀಕರಣ ಮಾಡಲು ಏತಕ್ಕೆ ಇದನ್ನು ಥಳಕು ಹಾಕುತ್ತಾರೆ? ಇದಕ್ಕೆ ಥಳಕು ಹಾಕುವುದು ಬೇಡ, ಮಾನ್ಯತೆ ಮಾಡಿಕೊಡಬೇಕು. ಮಾನ್ಯತೆ ನವೀಕರಣವೇ ಬೇರೆ, ನಮ್ಮ ಮಾರ್ಗಸೂಚಿಯನ್ನು ಕಾರ್ಯಗತಗೊಳಿಸುವುದೇ ಬೇರೆ. ಪ್ರತಿಯೊಂದಕ್ಕೂ ಮಾನ್ಯತೆ ನವೀಕರಣಕ್ಕೆ ಜೊತೆಗೂಡಿಸಿ ಶಿಕ್ಷಕರಿಗೆ ಸಂಬಳ ಇಲ್ಲದ ಹಾಗೆ ಮಾಡಿದರೆ ಶಾಲಾ-ಕಾಲೇಜು ಹೇಗೆ ನಡೆಸಬೇಕು? ಹಾಗೆಯೇ ಮಾನ್ಯ ಎಸ್.ವಿ.ಸಂಕನೂರ ನೇತೃತ್ವದ ಸಮಿತಿಯಿಂದ ವರದಿಯನ್ನು ಸಹ ಸಲ್ಲಿಸಿದ್ದಾರೆ. ಅದನ್ನು ಅನುಷ್ಠಾನಗೊಳಿಸದೇ 4 ತಿಂಗಳುಗಳಿಂದ ಸರ್ಕಾರ ಸುಮ್ಮನೆ ಕುಳಿತಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಆಯಿತು. ತಾವು ಹೇಳುವುದನ್ನು ನಾನು ಯಾರಿಗೆ ಹೇಳಬೇಕು?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ನಾವು ಹೇಳುತ್ತಿರುವುದು. ಮಾನ್ಯ ಶಿಕ್ಷಣ ಸಚಿವರು ಸದನಕ್ಕೆ ಬಂದ ಮೇಲೆಯೇ ಈ ವಿಷಯನ್ನು ಪ್ರಸ್ತಾಪ ಮಾಡಲು ಅವಕಾಶ ಕಲ್ಪಿಸಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಒಂದು ನಿಮಿಷ ತಾವು ಕುಳಿತುಕೊಳ್ಳಿ. ಮಾನ್ಯ ಈಶ್ವರಪ್ಪನವರೆ, ಇದಕ್ಕೆ ಏನು ಮಾಡಬೇಕೆಂದು ತಾವೇ ದಯವಿಟ್ಟು ತಿಳಿಸಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ ಇದೆ. ಸುಮ್ಮನೆ ಏನೇನೋ ಪ್ರಸ್ತಾಪ ಮಾಡುವ ಸಂದರ್ಭ ಅಂತೂ ಇದು ಖಂಡಿತವಾಗಿಲ್ಲ. ಹಾಗಾಗಿ ಸಂಬಂಧಪಟ್ಟ ಸಚಿವರನ್ನೇ ಸದನಕ್ಕೆ ಬರುವಂತೆ ಖಂಡಿತವಾಗಿ ತಿಳಿಸುತ್ತೇನೆ. ಅವರ ಸಮ್ಮುಖದಲ್ಲಿಯೇ ಈ ವಿಷಯವನ್ನು ಪ್ರಸ್ತಾಪ ಮಾಡಿ, ಅವರಿಂದಲೇ ಉತ್ತರ ಪಡೆದುಕೊಳ್ಳಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾಳೆ ಈ ವಿಚಾರವನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ನಾಳೆ ಏತಕ್ಕೆ ಮಧ್ಯಾಹ್ನವೇ ಈ ವಿಷಯವನ್ನು ತೆಗೆದುಕೊಳ್ಳೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರ ಬರಬೇಕಲ್ಲವೇ? ಇಲ್ಲಿ ಉತ್ತರವೇ ಬಂದಿಲ್ಲ. ಶಿಕ್ಷಣ ಇಲಾಖೆಯವರು ಉತ್ತರವನ್ನು ಕಳುಹಿಸಿಲ್ಲ. ಉತ್ತರ ಬಂದ ನಂತರ ಅಲ್ಲವೇ ಚರ್ಚೆ ಮಾಡಲು ಸಾಧ್ಯ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾಳೆಯೇ ತೆಗೆದುಕೊಳ್ಳಿ.

**ಸಭಾಪತಿಯವರು:-** ಆಯಿತು. ನಾಳೆ ಈ ವಿಚಾರವನ್ನು ಪ್ರಸ್ತಾಪ ಮಾಡೋಣ. ಈಗ ಸದನವನ್ನು ಭೋಜನಕ್ಕಾಗಿ ಮಧ್ಯಾಹ್ನ 03 ಗಂಟೆಯವರೆಗೆ ಮುಂದೂಡಲಾಗಿದೆ.

(1071)14.12.2021/3.10/ಎಂ.ಎಂ-ಜಿ.ಆರ್

**(ಮಧ್ಯಾಹ್ನ 01 ಗಂಟೆ 13 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 03 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ. ಮಾನ್ಯ ಬಿ.ಎಂ. ಫಾರೂಕ್ ಅವರು ಗೈರು ಹಾಜರಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**9. ಗಮನ ಸೆಳೆಯುವ ಸೂಚನೆ**

**ವಿಷಯ:- ಬೆಂಗಳೂರು ಉತ್ತರ ತಾಲ್ಲೂಕಿನ ಚಾಗಲಟ್ಟಿ ಗ್ರಾಮದ ಕೆರೆಯ ಮಧ್ಯಭಾಗದಲ್ಲಿ ಕೆಲವು ಭೂಗಳ್ಳರು ರಸ್ತೆಯನ್ನು ನಿರ್ಮಿಸಿ ಕೆರೆಯ ಸ್ವರೂಪವನ್ನು ವಿರೂಪಗೊಳಿಸಿ ಭೂಕಬಳಿಕೆ ಮಾಡಿರುವ ಗಂಭೀರ ವಿಷಯದ ಬಗ್ಗೆ.**

- - - - -

**ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ಉತ್ತರ ತಾಲ್ಲೂಕಿನ ಚಾಗಲಟ್ಟಿ ಗ್ರಾಮದ ಕೆರೆಯ ಮಧ್ಯಭಾಗದಲ್ಲಿ ಕೆಲವು ಭೂಗಳ್ಳರು ರಸ್ತೆಯನ್ನು ನಿರ್ಮಿಸಿ ಕೆರೆಯ ಸ್ವರೂಪವನ್ನು ವಿರೂಪಗೊಳಿಸಿ ಭೂಕಬಳಿಕೆ ಮಾಡಿರುವ ಗಂಭೀರ ವಿಷಯದ ಬಗ್ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಗಮನವನ್ನು ಸೆಳೆಯಬಯಸುತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ,

*"ಪ್ರಸ್ತಾಪಿಸಿರುವ ಕೆರೆಯು ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ "ಚಾಗಲಟ್ಟಿ" ಗ್ರಾಮದ ಸರ್ವೆ ನಂಬರ್: 83ರ ಸ್ಥಳದಲ್ಲಿದ್ದು, ಈ ಕೆರೆಯು ಜಿಲ್ಲಾ ಪಂಚಾಯತ್ ಕೆರೆಯಾಗಿರುತ್ತದೆ.*

*ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ – 2014 ಹಾಗೂ ತದನಂತರದ ತಿದ್ದುಪಡಿಗಳ ಅಧ್ಯಾಯ-3ರ ಪ್ರಕರಣ (6)ರಲ್ಲಿ*

*"ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು, ಸೇತುವೆಗಳನ್ನು ಮತ್ತು ಅದೇ ರೀತಿಯ ಇತರ ರಚನೆಗಳನ್ನು ನಿರ್ಮಿಸತಕ್ಕದ್ದಲ್ಲ. ಪ್ರಾಧಿಕಾರವು, ಅಂಥ ಕಾಮಗಾರಿಯ ತರುವಾಯವೂ ಕೆರೆಗಳ ಮೂಲ ಸಾಮರ್ಥ್ಯವು ಕಡಿಮೆಯಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ತರುವಾಯ ಮಾತ್ರವೇ ಅಂಥ ಕಾಮಗಾರಿಗಳಿಗೆ ಅನುಮತಿಯನ್ನು ನೀಡಬಹುದು" ಎಂದು ನಮೂದಿಸಲಾಗಿರುತದೆ.*

*ಸಿ.ಎಂ.ಆರ್., ವಿಶ್ವವಿದ್ಯಾಲಯರವರಿಂದ ಸಿ.ಎಸ್.ಆರ್., ನಡಿ ಚಾಗಲಟ್ಟಿ ಕೆರೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ತಾಂತ್ರಿಕ ಪರಿಣಿತರಿಂದ ಕೆರೆಯನ್ನು ಪರಿವೀಕ್ಷಣೆ ಮಾಡಿದ ಸಂದರ್ಭದಲ್ಲಿ ಚಾಗಲಟ್ಟಿ ಕೆರೆಯಂಗಳದಲ್ಲಿ ಅನಧಿಕೃತವಾಗಿ 220.00 ಮೀ ಉದ್ದದ ರಸ್ತೆಯನ್ನು ನಿರ್ಮಿಸಿದ್ದು ಇದರಿಂದ 4400.00 ಚ.ಮೀ. ಕೆರೆಯಂಗಳ ಅತಿಕ್ರಮವಾಗಿರುತ್ತದೆ. ಈ ಅನಧಿಕೃತ*

"ತಿದ್ದುಪಡಿಯಾಗದ ಪ್ರತಿ/Unedited copy ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

*ರಸ್ತೆಯನ್ನು ಕೂಡಲೇ ತೆರವುಗೊಳಿಸಲು ಕ್ರಮವಹಿಸುವಂತೆ ಕೋರಿ ಹಾಗೂ ಕ್ರಮ ಕೈಗೊಂಡ ಬಗ್ಗೆ ವರದಿ ನೀಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು ರವರನ್ನು ದಿನಾಂಕ 18.8.2018ರ ಪತ್ರದಲ್ಲಿ ಕೋರಲಾಗಿತ್ತು. ಈ ಅನಧಿಕೃತ ರಸ್ತೆಯನ್ನು ಕೂಡಲೇ ತೆರವುಗೊಳಿಸಲು ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು ರವರನ್ನು ಕೋರಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದಿನಾಂಕ 25.01.2021ರಂದು ಪತ್ರ ಬರೆಯಲಾಗಿರುತ್ತದೆ. ಸದರಿ ಪತ್ರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ. ಈವರೆಗೆ ಯಾವುದೇ ಕ್ರಮದ ಮಾಹಿತಿ ನೀಡಿರುವುದಿಲ್ಲ. ಅಲ್ಲದೇ ಈವರೆಗೆ ಯಾವುದೇ ಕ್ರಮ ವಹಿಸದ ಕಾರಣ ಪುನಃ ಮತ್ತೊಮ್ಮೆ ಅನಧಿಕೃತ ರಸ್ತೆಯ ತೆರವಿಗೆ ಜಿಲ್ಲಾ ಪಂಚಾಯತ್ ಬೆಂಗಳೂರು ನಗರ ಜಿಲ್ಲೆ ರವರಿಗೆ ಸೂಚಿಸಲಾಗುವುದು.*

*ದಿನಾಂಕ 13.01.2021ರಂದು ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ರವರು ಇದನ್ನು ಪರಿವೀಕ್ಷಿಸಿರುತ್ತಾರೆ. ಈ ವಿಷಯದ ಕುರಿತು ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಜಿಲ್ಲಾ ಪಂಚಾಯತ್ ಬೆಂಗಳೂರು ರವರಿಗೆ ಪತ್ರ ವ್ಯವಹಾರ ನಡೆಸಿದ್ದು, ಸದರಿಯವರಿಂದ ಈವರೆವಿಗೂ ಮಾಹಿತಿ ಸ್ವೀಕೃತವಾಗಿರುವುದಿಲ್ಲ."*

ಇಲ್ಲಿ ಕೆರೆಯೊಳಗೆ ಏರಿ ಹಾಕಿರುವುದು ನಿಜ. ಅದನ್ನು ತೆರವುಗೊಳಿಸಬೇಕೆಂದು ನಾವು ಗ್ರಾಮಾಂತರ ಜಿಲ್ಲೆಗೆ ನಂತರ ನಗರ ಜಿಲ್ಲೆಗೆ ಪತ್ರ ಬರೆದೆವು. ನಾನು ಸಭೆಯ ಮುಂದೆ ಹೇಳುವುದೇನೆಂದರೆ, ಈವರೆಗೂ ಯಾರೂ ಇದನ್ನು own ಮಾಡುತ್ತಿಲ್ಲ. ಇದನ್ನು ಯಾರು ಹಾಕಿದ್ದು, ಏತಕ್ಕೆ ಹಾಕಿದ್ದು ಎಂಬುದಕ್ಕೆ ಸ್ಪಷ್ಟವಾದ ಮಾಹಿತಿ ಕೊಡಲಿಲ್ಲ. ಇದರ ಬಗ್ಗೆ ಕೋರ್ಟ್‌ಗೆ ಪ್ರಕರಣ ಹೋಗಿತ್ತು. ಇದನ್ನು ವೆಕೇಟ್ ಮಾಡಿಸಲೇಬೇಕೆಂದು ಕೋರ್ಟ್ ಕೂಡ ನಿರ್ದೇಶನ ಕೊಟ್ಟಿದೆ. ಇದನ್ನು ಮಾಡಿದ್ದು ಯಾರೆಂದರೆ, ಈವರೆಗೆ ಅವನಿಗೆ ಬಿಲ್ ಆಗಿಲ್ಲ. ಆ ಬಿಲ್ ಬಗ್ಗೆ ಮಾಹಿತಿ ತೆಗೆದುಕೊಂಡು ಕ್ರಮ ಜರುಗಿಸೋಣವೆಂದರೆ ಇನ್ನೂ ಬಿಲ್ ಆಗಿಲ್ಲ. ರಸ್ತೆಯನ್ನಂತೂ ಮಾಡಿದ್ದಾರೆ. ರಸ್ತೆಯನ್ನು ಮಾಡಿ ಮುಂದಗಡೆ ದೊಡ್ಡ ಬಡಾವಣೆಗಳನ್ನು ಅಭಿವೃದ್ಧಿಗೊಳಿಸಿ ಈ ರಸ್ತೆಯನ್ನು ಅದಕ್ಕೆ ಟ್ಯಾಗ್ ಮಾಡಿ, ಈ ರಸ್ತೆಯನ್ನು ತೆಗೆದರೆ ಆ ಬಡಾವಣೆಗಳಿಗೆ ಓಡಾಡುವುದಕ್ಕೆ ರಸ್ತೆ ಇಲ್ಲ, ದಾರಿ ಇಲ್ಲವೆಂಬ ಸ್ಥಿತಿಯನ್ನು ನಿರ್ಮಾಣ ಮಾಡಿಬಿಟ್ಟಿದ್ದಾರೆ. ನಾನು ನಿಜವನ್ನೇ ಹೇಳುತ್ತೇನೆ, ಅದರಲ್ಲೇನೂ ಮುಚ್ಚು ಮರೆ ಇಲ್ಲ. ಹಾಗಾಗಿ ಇದನ್ನು ತೆರವುಗೊಳಿಸಲೇಬೇಕೆಂದು ನಾವು ಸಂಬಂಧಪಟ್ಟವರಿಗೆ ಕ್ರಮ ಜರುಗಿಸಿ ಎಂದು ಪತ್ರ ಬರೆದರೆ ಯಾರೂ own ಮಾಡುತ್ತಿಲ್ಲ, ಕಾರ್ಪೊರೇಷನ್‌ನವರು, ಜಿಲ್ಲಾ ಪರಿಷತ್ ಕೂಡ own ಮಾಡುತ್ತಿಲ್ಲ. ನಾನು ಮೊನ್ನೆ ದಿವಸ ಕರೆದು ಮತ್ತೆ ಹೇಳಿದ್ದೇನೆ. ಸಂಬಂಧಪಟ್ಟ ಇಲಾಖೆಗಳು ಕೆಲಸ ಮಾಡಲಿಲ್ಲವೆಂದರೆ ನಾವೇ ಕಾನೂನು ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಡಾ: ವೈ.ಎ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸ್ವಾತಂತ್ರ ಬಂದಾಗಿನಿಂದ ಕೆರೆಗಳನ್ನು ಹೊಸದಾಗಿ ಯಾರೂ ಕಟ್ಟುವುದಕ್ಕೆ ಹೋಗಿಲ್ಲ. ಕೆರೆಗಳನ್ನು ನುಂಗುವುದಕ್ಕೆ ಹೋಗಿದ್ದೇವೆ. ವಿಶೇಷವಾಗಿ ಹಳೆಯ ಮೈಸೂರು ಭಾಗದಲ್ಲಿ ಮೈಸೂರು ಮಹಾರಾಜರ ಆಶೀರ್ವಾದದಿಂದ ಅವರ ಪ್ರಯತ್ನದಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ ಈ ಕಡೆಗಳಲ್ಲಿ ವಿಶೇಷವಾಗಿ ಸಾವಿರಾರು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಅಟ್‌ಲೀಸ್ಟ್ ನಾವು ಆ ಕೆರೆಗಳನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ಬಿಟ್ಟು ಆ ಕೆರೆಗಳನ್ನು ಒತ್ತುವರಿ ಮಾಡಿಕೊಂಡು, ಆ ಕೆರೆಗಳಲ್ಲಿ ಅನಧಿಕೃತ ಬಡಾವಣೆಗಳನ್ನು ಯಾರು ಮಾಡಿ ಅದರ ಮುಖಾಂತರ ನಮ್ಮ ಹೊಟ್ಟೆ ಹೊರೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ ನಾವು ಈ ಗತಿಗೆ ಬಂದಿದ್ದೇವೆ. ತಮಗೆಲ್ಲಾ ಗೊತ್ತಿದೆ. ಬೆಂಗಳೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಮಳೆ ಬಂದಾಗ ಬೆಂಗಳೂರಿನಲ್ಲಿದ್ದ ನೂರಾರು ಕೆರೆಗಳು ಒತ್ತುವರಿಯಾಗಿ ಬಡಾವಣೆಗಳು ತಯಾರಾಗಿರುವುದರಿಂದ ಎಲ್ಲಾ ಕಡೆ ಫ್ಲಡ್ ಆಗಿ ಜನಜೀವನ ಅಸ್ತವ್ಯಸ್ತವಾಗಿದೆ. ಇಂತಹ ಸಂದರ್ಭದಲ್ಲಿ ಕೆರೆಗಳನ್ನು ಸಂರಕ್ಷಣೆ ಮಾಡಬೇಕೆಂದು 2018ನೇ ಇಸವಿಯಲ್ಲಿ ಕೆರೆ ಸಂರಕ್ಷಣಾ ಪ್ರಾಧಿಕಾರವನ್ನು ರಚನೆ ಮಾಡಿದರು. ಕೆರೆ ಸಂರಕ್ಷಣಾ ಪ್ರಾಧಿಕಾರದ ಸಿ.ಇ.ಓ., ಯಾರೆಂದರೆ ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿಯವರು. ನಾನು ಇಂದು ಮಾನ್ಯ ಸಚಿವರನ್ನು ಏತಕ್ಕೆ ವಿನಂತಿ ಮಾಡುತ್ತಿದ್ದೇನೆಂದರೆ, ಅವರು ಉತ್ತರದಲ್ಲಿ ಹೇಳಿದರು, ಇದನ್ನು ಯಾರು ಕಟ್ಟಿದರೋ ಗೊತ್ತಾಗಿಲ್ಲ. ಇದು ಯಾವ ಇಲಾಖೆಗೆ ಸಂಬಂಧಪಟ್ಟಿದ್ದೋ ನಮಗೆ ಗೊತ್ತಾಗಿಲ್ಲ. ಯಾರೂ ಬಿಲ್ ಮಾಡಿಕೊಂಡಿಲ್ಲ ಅದಕ್ಕೋಸ್ಕರ ನಾವು ಅದನ್ನು ಗುರುತಿಸುವುದಕ್ಕೆ ಆಗುತ್ತಿಲ್ಲ ಎಂಬ ಮಾತನ್ನು ಹೇಳಿದರು. ನನಗೆ ಮಾನ್ಯ ಮಾಧುಸ್ವಾಮಿಯವರ ಕಾರ್ಯಕ್ಷಮತೆಯ ಬಗ್ಗೆ ಅಪಾರವಾದ ಗೌರವವಿದೆ. ಅವರು ಶಕ್ತಿವಂತರಿದ್ದಾರೆ. ಅವರ ಇಲಾಖೆಯ ವ್ಯಾಪ್ತಿಗೆ ಬರುವಂತಹ ಕಾರ್ಯದರ್ಶಿಯವರು ಕೆರೆ ಸಂರಕ್ಷಣಾ ಪ್ರಾಧಿಕಾರದ ಸಿ.ಇ.ಓ., ಆಗಿದ್ದಾರೆ. ನಾನು ವಿನಂತಿ ಮಾಡುವುದೇನೆಂದರೆ, ಕೆರೆಯ ಮಧ್ಯ ಭಾಗದಲ್ಲಿ ರಸ್ತೆಯನ್ನು ನಿರ್ಮಾಣ ಮಾಡುವುದಕ್ಕೆ ಅವರಿಗೆ ಎಷ್ಟು ಧೈರ್ಯ ಇರಬೇಕು? ಅವರು ಯಾರು? ಭೂಗಳ್ಳರಿರಬಹುದು, ಭೂ ಮಾಫಿಯ ಇರಬಹುದು, layout formation ಮಾಡಿದವರು ಇರಬಹುದು, ಯಾರವರು? ಯಾರ ಬಡಾವಣೆಗಳಿಗೆ ರಸ್ತೆಯನ್ನು ಮಾಡಿಕೊಂಡು ಕೆರೆಯನ್ನು ಡಿವೈಡ್ ಮಾಡಿ 220 ಮೀಟರ್ ರಸ್ತೆಯನ್ನು ಕೆರೆಯ ಮಧ್ಯ ಭಾಗದಲ್ಲಿ ಮಾಡಿರುವರಲ್ಲಾ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದೆಯೇ? ಇದು ಯಾವಾಗಲಾದರೂ ಆಗಿರಲಿ. ನಾನು 2018 ರಿಂದಲೂ ಈ ಪ್ರಶ್ನೆಯನ್ನು ಹಾಕುತಿದ್ದೇನೆ. ಇದುವರೆಗೂ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ದಯವಿಟ್ಟು ಕೋರ್ಟ್ ನಿರ್ದೇಶನವಿದ್ದರೂ ಕೆರೆಯಲ್ಲಿ ಒತ್ತುವರಿದಾರರನ್ನು ನಿರ್ದಾಕ್ಷಿಣ್ಯವಾಗಿ ಆಚೆ ಹಾಕಬೇಕೆಂದು ನಿರ್ದೇಶನವಿದ್ದರೂ ಕೆರೆಯ ಮಧ್ಯ ಭಾಗದಲ್ಲಿ ಯಾವುದೇ ಕೆರೆಗೆ dismeasurement ಮಾಡಬಾರದು ಎನ್ನುವ ವ್ಯವಸ್ಥೆ ಇದ್ದರೂ ಸರ್ಕಾರ ಇನ್ನೂ ಕೈ ಕಟ್ಟಿಕೊಂಡು ಏತಕ್ಕೆ ಕುಳಿತಿದೆ? ಇದು ನನ್ನ ನೇರವಾದ ಪ್ರಶ್ನೆ. ಇಲಾಖೆ ಯಾವುದೇ ಇರಲಿ, ಸರ್ಕಾರ ಒಂದೇ ಅಲ್ಲವೇ? ಆ ಇಲಾಖೆ, ಈ ಇಲಾಖೆ ಎಂದು ಒಬ್ಬರ ಮೇಲೊಬ್ಬರು ಹಾರಿಕೆ ಉತ್ತರ ಕೊಟ್ಟುಕೊಂಡು ಹೋದರೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ? ನಾನು ತಮ್ಮ ಮುಖಾಂತರ ಮನವಿ ಮಾಡುತ್ತಿದ್ದೇನೆ, ಈ ರಸ್ತೆಯನ್ನು ಯಾರ ಉಪಯೋಗಕ್ಕೋಸ್ಕರ ನಿರ್ಮಾಣ ಮಾಡಲಾಗಿದೆ? ಆ ಕಡೆ ಯಾರೆಲ್ಲಾ ಲೇಔಟ್ ಮಾಡಿದ್ದಾರೆ ಮೊದಲು ಅವರ ಮೇಲೆ ಎಫ್.ಐ.ಆರ್., ಹಾಕಿ. ಇದನ್ನು ಆರ್.ಡಿ.ಪಿ.ಆರ್., ನಿರ್ಮಾಣ ಮಾಡಿಲ್ಲ ಎಂದು ಹೇಳುತ್ತಿದ್ದೀರಿ. ಅದು ಗೊತ್ತಿಲ್ಲ, ಅದಕ್ಕೆ ದಾಖಲೆ ಕೊಡುವವರು ಯಾರೂ ಇಲ್ಲ. ಆರ್.ಡಿ.ಪಿ.ಆರ್., ನವರನ್ನು ಕೇಳಿದರೆ ತಮಗೆ ಗೊತ್ತಿಲ್ಲ, ಬಿ.ಬಿ.ಎಂ.ಪಿ.,ಯವರನ್ನು ಕೇಳಿದರೆ ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಯಾರಿಗೆ ಗೊತ್ತಿದೆ? ದಯವಿಟ್ಟು ನಾನು ಮನವಿ ಮಾಡುತ್ತಿದ್ದೇನೆ, ಈ ರಸ್ತೆಯನ್ನು ನಿರ್ಮಾಣ ಮಾಡಿ ಕೆರೆಯ ಸ್ವರೂಪವನ್ನು ವಿಕೃತಗೊಳಿಸುವುದಕ್ಕೆ ಪ್ರಯತ್ನ ಮಾಡಿರುವಂತಹವರು ಎಷ್ಟೇ ದೊಡ್ಡ ವ್ಯಕ್ತಿಯಾಗಿದ್ದರೂ, ಅವರು ಎಷ್ಟೇ ಪ್ರಭಾವಿ ವ್ಯಕ್ತಿಯಾಗಿದ್ದರೂ, ಎಷ್ಟೇ ಶ್ರೀಮಂತರಿದ್ದರೂ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಎಫ್.ಐ.ಆರ್., ಅನ್ನು ಫೈಲ್ ಮಾಡಬೇಕು, ಅವರ ಮೇಲೆ ಕ್ರಿಮಿನಲ್ ಕೇಸ್ ಅನ್ನು ದಾಖಲು ಮಾಡಬೇಕೆಂದು ಮೊಟ್ಟಮೊದಲಾಗಿ ಆಗ್ರಹ ಮಾಡುತ್ತಿದ್ದೇನೆ ಇದು ಮೊದಲನೆಯದು. ಎರಡನೆಯದಾಗಿ ಆ ರಸ್ತೆಯನ್ನು ನಿರ್ಮಾಣ ಮಾಡಬೇಕಾದರೆ ಸುಮ್ಮನೇ ಇದ್ದ ಅಧಿಕಾರಿಗಳ ಮೇಲೂ ಕ್ರಮ ತೆಗೆದುಕೊಳ್ಳಬೇಕು. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ, ಮಾನ್ಯ ಮಾಧುಸ್ವಾಮಿಯವರಿಂದ ಸಕಾರಾತ್ಮಕವಾದ ಉತ್ತರ ನನಗೆ ಬೇಕಾಗಿಲ್ಲ, ಈ ಸದನಕ್ಕೆ ಬೇಕಾಗಿದೆ. ಕೆರೆಗಳನ್ನು ರಕ್ಷಣೆ ಮಾಡುವುದಕ್ಕೆ, ನಾವೆಲ್ಲಾ ಕೆರೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆದರೆ ಇರುವ ಕೆರೆಗಳನ್ನು ರಕ್ಷಣೆ ಮಾಡುವುದಕ್ಕೆ ಈ ಸದನಕ್ಕೆ ಬಹಳ ಗಟ್ಟಿಯಾದ ಎಷ್ಟೇ ದೊಡ್ಡ ಮಾಫಿಯಾ

(ಮುಂದು)

ಇದ್ದರೂ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಿಮಿನಲ್ ಕೇಸ್ ಅನ್ನು ಬುಕ್ ಮಾಡುತ್ತೇವೆ ಎಂಬ ಮಾತನ್ನು ಹೇಳಿ, ಈ ರಸ್ತೆ ಏನಿದೆ ಇದನ್ನು ಯಾವುದೇ ಇಲಾಖೆಗೆ ಸಂಬಂಧಪಟ್ಟಿರಲಿ ಆ ರಸ್ತೆಯನ್ನು 15 ದಿನಗಳ ಕಾಲಮಿತಿಯೊಳಗೆ ಅದನ್ನು ತೆರವುಗೊಳಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಆಗ್ರಹ ಮಾಡುತ್ತಿದ್ದೇನೆ.

---

(1072) 14-12-2021 KH/MD 3-20

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಮ್ಮ ಸ್ನೇಹಿತರಾದ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಕೆರೆ ಒತ್ತುವರಿಯ ಬಗ್ಗೆ ತಂದಿರುವಂತಹ ವಿಷಯ ಕೇವಲ ಒಂದು ಕೆರೆಗೆ ಸೀಮಿತವಾಗಿರುವಂತಹದ್ದಲ್ಲ. ನಾನು ಕೂಡ ಬೆಂಗಳೂರು ನಗರವನ್ನು ಪ್ರತಿನಿಧಿಸುತ್ತಿರುವಂತಹ ಪ್ರತಿನಿಧಿಯಾಗಿ ಇಂತಹ ಹಲವಾರು ಕೆರೆಗಳು ಒತ್ತುವರಿಯಾಗಿರುವಂತಹದ್ದು ಕಣ್ಣ ಮುಂದೆ ಕಾಣುತ್ತಿದೆ. "ಚಾಗಲಟ್ಟಿ" ಬಾಗಲೂರು ಎನ್ನುವಂತಹ ಕೆರೆ ಏನಿದೆ, ಇದು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ನಾವು ಜಿಲ್ಲಾ ಪಂಚಾಯಿತಿಯ ಸಿ.ಇ.ಓ.,ರವರಿಗೆ ಮತ್ತು ಬಿ.ಬಿ.ಎಂ.ಪಿ.,ಯ ಕಮೀಷನರ್‌ರವರಿಗೆ ಹಾಗೂ ಇನ್ನು ಯಾವ್ಯಾವುದೋ ಇಲಾಖೆಗೆ ಪತ್ರ ಬರೆದಿದ್ದೇವೆ ಎಂದು ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ ಹೇಳಿದರು. ಇದು ಸಂಪೂರ್ಣವಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವುದರಿಂದ, ಇದು ಜಿಲ್ಲಾ ಪಂಚಾಯತ್ ಸಿ.ಇ.ಓ.,ರವರಿಗೆ ಸಂಬಂಧಪಟ್ಟಿರುವುದಾಗಿದೆ, ಹಾಗೆಯೇ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಿರುವುದಾಗಿದೆ. ಈ ರಸ್ತೆಯನ್ನು ಯಾರು ರಾಜಾರೋಷವಾಗಿ ಮಾಡಿದ್ದಾರೆ ಎಂದರೆ, ಕೆರೆಯ ನಡುಭಾಗದಲ್ಲಿ ರಸ್ತೆಯನ್ನು ಮಾಡಿ, ಎಡಕ್ಕೆ ಅರ್ಧ ಕೆರೆ, ಬಲಕ್ಕೆ ಅರ್ಧ ಕೆರೆ ಆಗಿರುವಂತಹದ್ದಾಗಿದೆ. ಈ ರಸ್ತೆಯಲ್ಲಿ ಹೋಗಿ ಯಾರು ಬಡಾವಣೆಯನ್ನು ಅಭಿವೃದ್ಧಿಪಡಿಸಿದ್ದಾರೋ ಅವರು ಒಂದೊಂದು ನಿವೇಶನವನ್ನು ಲಕ್ಷಾಂತರ ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಇದು ರೆವಿನ್ಯೂ ಲೇಔಟ್ ಆಗಿದ್ದು, ಯಾರೂ ಕೂಡ conversion ಮಾಡಿಲ್ಲ, plan sanction ಮಾಡಿಲ್ಲ. ಯಾರೋ ಒಬ್ಬ ಬಂದು ರೈತರ ಜಮೀನನ್ನು ತೆಗೆದುಕೊಳ್ಳುತ್ತಾನೆ. ಲೇಔಟ್ ಅನ್ನು ಮಾಡಿ ಮಾರಾಟ ಮಾಡಿ ಹೋಗುತ್ತಾನೆ. ಇದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ. ನಾಳೆ ದಿವಸ ಸರ್ಕಾರ ಇದರ ಮೇಲೆ ಕಾನೂನು ಕ್ರಮ ಕೈಗೊಂಡಾಗ ಬಿಲ್ಡರ್‌ಗಳು ಯಾರು ಸಿಕ್ಕಿ ಹಾಕಿಕೊಳ್ಳುವುದಿಲ್ಲ? ಯಾರು ಅಮಾಯಕರು ಕಡಿಮೆ ಬೆಲೆಗೆ ನಿವೇಶನಗಳು ಸಿಗುತ್ತದೆ ಎಂದು ಆ ಲೇಔಟ್‌ನಲ್ಲಿ ನಿವೇಶನಗಳನ್ನು ತೆಗೆದುಕೊಂಡಿದ್ದಾರೆಯೋ? ಅವರು ಬೀದಿಗೆ ಬರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕೆರೆಯ ಮೇಲೆ ರಸ್ತೆ ಮಾಡಿ ಆ ಜಮೀನನ್ನು ತೆಗೆದುಕೊಂಡು ಹೋಗಿದ್ದಾನೆಯೋ, ಅವನಿಗೆ ಎಷ್ಟು ಧೈರ್ಯ ಇರಬೇಕು? ಈ ಜಮೀನನ್ನು ಮಾರಾಟ ಮಾಡಬೇಕಾದರೆ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದರು? ನಾವು ಗುತ್ತಿಗೆದಾರನಿಗೆ ಪೇಮೆಂಟ್ ಆಗಿದೆಯೋ, ಇಲ್ಲವೋ ಎಂದು ಆತನನ್ನು ಹುಡುಕಿದ್ದೇವೆ ಎಂದು ತಾವು ಮಾತನಾಡುತ್ತಾ ಹೇಳಿದ್ದೀರಿ. ಇದನ್ನು ಜಿಲ್ಲಾ ಪಂಚಾಯಿತಿ ಮತ್ತು ಬಿ.ಬಿ.ಎಂ.ಪಿ.,ಯಿಂದ ಮಾಡಿರುವಂತಹದ್ದು ಅಲ್ಲ. ಈ ರಸ್ತೆಯನ್ನು ಖಾಸಗಿಯವರು ಮಾಡಿರುವಂತಹದ್ದಾಗಿದೆ. ಕೆರೆಯಲ್ಲಿ ರಸ್ತೆ ಮಾಡಬೇಕೆಂದರೆ ಆ ಅಧಿಕಾರಿಗಳ ಕುಮ್ಮಕ್ಕು ಇಲ್ಲದೇ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಹೋದರೆ ಇದನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ನಾವು ಏನು ಮಾಡಿದ್ದೇವೆಯೆಂದರೆ, ಬೆಂಗಳೂರಿನ wastage water ಅನ್ನು ಹೆಬ್ಬಾಳ ಕೆರೆಯಿಂದ treatment ಮಾಡಿ ನೀರನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಏಕೆಂದರೆ, ಬರಡು ಭೂಮಿ ನಮ್ಮದು. ಅಲ್ಲಿ ಬೋರ್‌ವೆಲ್‌ಗಳನ್ನು ಕೊರೆದರೆ 1000 ರಿಂದ 1200 ಅಡಿ ಆಳಕ್ಕೆ ಹೋದರೂ ಕೂಡ ನೀರು ಸಿಗದೇ ಇರುವಂತಹ ಪರಿಸ್ಥಿತಿ ನಮ್ಮದು. ಅದಕ್ಕೋಸ್ಕರ treatment ಮಾಡಿರುವಂತಹ ನೀರನ್ನು ತೆಗೆದುಕೊಂಡು ಕೆರೆ ತುಂಬಿಸುವಂತಹ ಒಂದು ದೊಡ್ಡ ಯೋಜನೆಯನ್ನು ಮಾಡಿದ್ದೇವೆ. ಆ ಯೋಜನೆ ಮಾಡಿದಾಗಲೂ ಕೂಡ ನೀರು ತುಂಬಿಸುವುದಕ್ಕೆ ಈ ಊರುಗಳನ್ನೆಲ್ಲಾ ದಾಟಿಕೊಂಡು ಚಿಕ್ಕಬಳ್ಳಾಪುರ ತನಕ ಹೋಗಿದ್ದೇವೆ. ಆದರೆ "ಚಾಗಲಟ್ಟಿ" ಭಾಗದಲ್ಲಿರುವಂತಹ ಕೆರೆಗೆ ನೀರು ತುಂಬಿಸಿದರೂ ಕೂಡ ಒಂದು ಕಡೆಗೆ ತುಂಬಿಸುವುದಕ್ಕೆ ಆಗುತ್ತಿದೆ. ಇನ್ನೊಂದು ಕಡೆಗೆ ನೀರನ್ನು ತುಂಬಿಸುವುದಕ್ಕೆ ಆಗುತ್ತಿಲ್ಲ. ಈ ರೀತಿಯ ಪರಿಸ್ಥಿತಿ ಉದ್ಭವವಾಗಿದೆ. ದಯವಿಟ್ಟು ಮಾಡಿ ಮಾನ್ಯ ಸಚಿವರೇ ಇದರ ಹಿಂದೆ ಯಾರು ಇದ್ದಾರೋ ಅವರ ಮೇಲೆ ಕ್ರಮವಾಗಬೇಕು. ದಿನಾಂಕ:18-08-2018 ಮತ್ತು ದಿನಾಂಕ:25-01-2021 ರಂದು ಸಂಬಂಧಪಟ್ಟವರಿಗೆ ಪತ್ರ ಬರೆದರೂ ಯಾವುದೇ ಉತ್ತರ ಬಂದಿಲ್ಲ. ಹಾಗಾದರೆ ಸರ್ಕಾರಕ್ಕಿಂತ ಅಧಿಕಾರಿಗಳು ತುಂಬಾ ದೊಡ್ಡವರೇ. ತಾವು ಒಬ್ಬ ಸರ್ಕಾರದ ಜವಾಬ್ದಾರಿಯುತ ಮಂತ್ರಿಗಳಾಗಿ ತಾವು ಬರೆದಿರುವಂತಹ ಪತ್ರಕ್ಕೆ ಯಾವುದೇ ಉತ್ತರವನ್ನು ಬರೆಯುವುದಕ್ಕೆ ಈ ಅಧಿಕಾರಿಗಳಿಗೆ ಆಗುವುದಿಲ್ಲವೆಂದರೆ ಈ ಅಧಿಕಾರಿಗಳು ಏತಕ್ಕಾಗಿ ಇರಬೇಕು? ಸರ್ಕಾರದ ಮೇಲೆ ಅಧಿಕಾರಿಗಳು ಸವಾರಿ ಮಾಡುತ್ತಾರೆಯೇ? ಇವತ್ತು ತಾವು ಅಧಿಕಾರದಲ್ಲಿರಬಹುದು. ನಾಳೆ ನಾವು ಅಧಿಕಾರಕ್ಕೆ ಬರಬಹುದು. ಸರ್ಕಾರದ ಮೇಲೆ ಕಿಂಚಿತ್ತು ಗೌರವ ಇಲ್ಲದೇ ಹೋದರೆ, ಈ ಅಧಿಕಾರಿಗಳು ಹೇಳಿರುವುದನ್ನೇ ಮಾಡುವುದಾದರೆ ಏತಕ್ಕಾಗಿ ನಾವು ಅಧಿಕಾರದಲ್ಲಿ ಇರಬೇಕು. ಇವತ್ತಿನ ದಿವಸ ಸಾವಿರಾರು ಜನರಿಗೆ ಅನ್ಯಾಯವಾಗುತ್ತಿದೆ. ಮಾನ್ಯ ವೈ.ಎ.ನಾರಾಯಣಸ್ವಾಮಿರವರು ಹೇಳಿದ ಹಾಗೆ ನಮಗೆ ಕೆರೆಗಳನ್ನು ಕಟ್ಟುವುದಕ್ಕೆ ಯೋಗ್ಯತೆ ಇಲ್ಲ. ಆದರೆ, ಪುರಾತನ ಕಾಲದಲ್ಲಿ ಮತ್ತು ಕೆಂಪೇಗೌಡ ಕಾಲದಿಂದ ಏನು ಕೆರೆಗಳನ್ನು ಕಟ್ಟಿದ್ದಾರೆಯೋ, ಅದನ್ನು ಉಳಿಸಿಕೊಳ್ಳುವುದಕ್ಕೆ ಯೋಗ್ಯತೆ ಇಲ್ಲವೆಂದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ? ದಯವಿಟ್ಟು ಮಾನ್ಯ ಸಚಿವರೇ, ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು "ಚಾಗಲಟ್ಟಿ" ಗ್ರಾಮದ ಒಂದು ಕೆರೆಗೆ ಸೀಮಿತವಾಗಿರುವಂತಹದ್ದಲ್ಲ. ಒಂದು ಕೆರೆಗೆ ಸಂಬಂಧಿಸಿದಂತೆ ಬಿಸಿ ಮುಟ್ಟಿಸಿದರೆ ಬೆಂಗಳೂರಿನಲ್ಲಿರುವ ಎಲ್ಲಾ ಕೆರೆಗಳಿಗೂ ಬಿಸಿ ಮುಟ್ಟಿಸುವಂತಹದ್ದು ಆಗುತ್ತದೆ. ದಯಮಾಡಿ, ತಾವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, . . .

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಾವು ನಂತರ ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರೇ, ದಯಮಾಡಿ ನಾನು ಇದರಲ್ಲಿ ಮಧ್ಯಪ್ರವೇಶ ಮಾಡಬೇಕೆಂದಿರಲಿಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ ತಾವು ಮೊದಲು ಪ್ರಶ್ನೆಯನ್ನು ಕೇಳಿ. ತಾವು ಏನೇನೋ ಮಾತನಾಡುತ್ತೀರಿ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನಾಗಿದೆ ಎಂದರೆ, ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ನಾನು ಕೂಡ ಆ ಕಾಲೇಜನ್ನು 2017ನೇ ಸಾಲಿನಲ್ಲಿ ಪರಿಶೀಲನೆ ಮಾಡಿದ್ದೇನೆ. ಇದರಲ್ಲಿ ಬಹಳ ಪ್ರಭಾವಿಗಳಿದ್ದಾರೆ. Main entrance ನಿಂದಲೇ ರಾತ್ರೋರಾತ್ರಿ ಈ ರಸ್ತೆ ಆಗಿರುವುದಲ್ಲ. ಈ ರಸ್ತೆಯನ್ನು ರಾತ್ರೋರಾತ್ರಿ ಮಾಡುವುದಕ್ಕೂ ಸಾಧ್ಯ ಇಲ್ಲ. It takes months together to build up a road there. Back entrance ಯಾರಿಗೂ ಸಹ ಇಲ್ಲ. ಆ ಕಾಲೇಜಿನವರಿಗೂ ಸೇರಿ ಯಾರಿಗೂ ಸಹ ಇಲ್ಲ. ಮುಖ್ಯವಾಗಿ ಸರ್ಕಾರದ ತಪ್ಪು ಎಲ್ಲಿ ಆಗಿದೆ ಎಂದರೆ, ತಾವು ಕಾನೂನು ಕೈಯಲ್ಲಿ ಬೀಗ ಕೊಟ್ಟಿದ್ದೀರಿ. ಕಾನೂನು ಕೈಯಲ್ಲಿ treasury ಬೀಗ ಕೊಟ್ಟರೆ ಏನಾಗುತ್ತದೆ? ಆ ರೀತಿ ಪರಿಸ್ಥಿತಿ ಇದ್ದರೆ ಕೆರೆ ನಿರ್ವಹಣೆಯನ್ನು ಅವರ ಕೈಗೆ ಕೊಟ್ಟು ತಾವು ಕಣ್ಣು ಮುಚ್ಚಿಕೊಂಡು ಕುಳಿತಿದ್ದರೆ, ಕೆರೆ ನಿರ್ವಹಣೆ ವರದಿ ಇಷ್ಟೆಲ್ಲಾ ಮಾಡಿದ ಮೇಲೆ ಏಕೆ ತೆಗೆಯಬಾರದು? ಕೆರೆ ನಿರ್ವಹಣೆಯನ್ನು ಅವರಿಗೆ ಕೊಟ್ಟಿದ್ದೀರಿ. ಮಣ್ಣು ತೆಗೆದುಕೊಂಡು ಹೋಗಬೇಕು. ಕಲ್ಲು ತೆಗೆದುಕೊಂಡು ಹೋಗಬೇಕು. ಆ ರಸ್ತೆಯನ್ನು road build up ಮಾಡಬೇಕೆಂದರೆ main entrance ನಿಂದಲೇ ಹೋಗಬೇಕು. ಆ main entrance ನಿಂದ ಹೋಗಿ ಈಗ ರಸ್ತೆಯನ್ನು ಮಾಡಿ, ಈಗ back entrance ನಿಂದ ಯಾರೂ ಬೇಕಾದರೂ ಓಡಾಡಬಹುದು. ಆ ರೀತಿಯ ಪರಿಸ್ಥಿತಿ ಇದೆ. It is only for the use of that Institution ಮತ್ತೆ ಅಲ್ಲಿರುವಂತಹ ಪ್ರಭಾವಿಗಳು revenue land conversion ಮಾಡದೇ ಮಾರಾಟ ಮಾಡುವುದಕ್ಕೆ ಅನುಕೂಲವಾಗಿದೆ. ಮುಂದೊಂದು ದಿನ ಈ ಲ್ಯಾಂಡ್ ಅನ್ನು ತೆಗೆದುಕೊಂಡವರು ಬಳಲುತ್ತಾರೆ. ಹಾಗಾಗಿ ಇದು ಪ್ರಭಾವಿ ವ್ಯಕ್ತಿಗಳ ಕೈಯಲ್ಲಿ ಇದೆ. ಅದಕ್ಕೆ ದಯಮಾಡಿ, ಮಾನ್ಯ ಜೆ.ಸಿ.ಮಾಧುಸ್ವಾಮಿಯಂತಹ veteran politician, veteran leader, knowing all the consequences, ನೋಡಿರುವಂತಹ ತಾವು ಈ ಸದನಕ್ಕೆ ಸರಿಯಾದ ಉತ್ತರ ಮತ್ತು ಬಹಳ ನಿರ್ದಿಷ್ಟವಾದಂತಹ ಉತ್ತರ ಬೇಕಾಗಿದೆ. ತಮ್ಮಂತಹವರ ಕೈಯಲ್ಲಿಯೇ ಇದನ್ನು ಬಿಡಿಸುವುದಕ್ಕೆ ಆಗಲಿಲ್ಲವೆಂದರೆ, ಇನ್ನು ಯಾರ ಕೈಯಲ್ಲಿ ಬಿಡಿಸುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತದೆ. ದಯಮಾಡಿ ಈ ಕೆಲಸವನ್ನು ಮಾಡಬೇಕು. ಇದು ಸರ್ಕಾರದ ಆಸ್ತಿ. ಇದು ಸಾರ್ವಜನಿಕರ ಆಸ್ತಿ. ಈ ಕೆರೆಯನ್ನು ಸಂರಕ್ಷಣೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಇದು ಸರ್ಕಾರದ ಕೆರೆ. ಸರ್ಕಾರದ ಕೆರೆಯಲ್ಲಿ ಒಂದು ಎಕರೆ ಜಾಗದಲ್ಲಿ ರಸ್ತೆ ಇದೆ. 4400 ಚದರ ಮೀಟರ್‌ನಷ್ಟು ಮಾಡಿದ್ದಾರೆ. ತಾವು ಏನು ಮಾಡಬೇಡಿ. ದಯವಿಟ್ಟು, ತಾವು ಆ ರಸ್ತೆಗೆ beginning approach ಕೊಟ್ಟಿದ್ದೀರಲ್ಲವೇ, ಅದನ್ನು ಅಗೆದುಬಿಡಿ. ರಸ್ತೆಯನ್ನು ಜೆಸಿಬಿ ತಂದು ಅಗೆದುಬಿಡಿ. ತಾವು ಸಂಪರ್ಕವನ್ನು ಕೊಡಲಿಲ್ಲವೆಂದರೆ automatic ಅದು ಸ್ತಬ್ಧವಾಗುತ್ತದೆ. ಈಗ ಹಿಂದೆ ಇರುವಂತಹ ಯಾವುದೋ ಲೇಔಟ್‌ಗಳಿಗೆ ಒಂದಷ್ಟು approach ಹೋಗುತ್ತಿದೆ ಎಂದು ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಹೇಳಿದರು. ಆ ಲೇಔಟ್ unauthorized ಆಗಿದ್ದರೆ Revenue Act ಕೆಳಗೆ ತಾವು ಕ್ರಮ ಏಕೆ ತೆಗೆದುಕೊಂಡಿಲ್ಲ? ತಮ್ಮ ಕಂದಾಯ ಇಲಾಖೆ ಇದಕ್ಕೆ ಮಂಜೂರಾತಿ ಕೊಡಬೇಕಾದರೆ, alienation ಮಾಡಬೇಕಾದರೆ, conversion ಮಾಡಬೇಕಾದರೆ ತಾವು ಆ ರಸ್ತೆಯನ್ನು ತೆಗೆದುಕೊಳ್ಳದೇ ಮಾಡುವುದಕ್ಕೆ ಆಗುವುದೇ ಇಲ್ಲ. ಏನಾದರೂ conversion ಕೊಟ್ಟಿದ್ದರೆ ತಾವು ಈ ರಸ್ತೆಯನ್ನು ಆ ಕನ್‌ವರ್ಷನ್‌ನಲ್ಲಿ ತೋರಿಸಿದ್ದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಆದ್ದರಿಂದ, this property belongs to the Government. ಇದು ಸರ್ಕಾರದ್ದು ಆಗಿರುವುದರಿಂದ, ಇದನ್ನು ತೆಗೆಯುವುದಕ್ಕೆ ಯಾರು ಅಡ್ಡಿ ಬರುವುದಿಲ್ಲ. ಈ ರಸ್ತೆಯನ್ನು ಅಗೆಯುವುದಕ್ಕೆ ಯಾರು ಅಡ್ಡಿ ಬರುವುದಿಲ್ಲ. ತಾವು ತಕ್ಷಣವೇ ಕೆಲಸ ಮಾಡಿ automatic ಆಗಿ ಎಲ್ಲಾ ಸರಿ ಹೋಗುತ್ತದೆ. ದಯವಿಟ್ಟು ಹಿಂದೆ ಮಾಡಿರುವಂತಹ ಲೇಔಟ್‌ನವರು ಯಾರು ಇದ್ದರೂ ಅವರ ಮೇಲೆ ತಾವು ಕಾನೂನು ಕ್ರಮಗಳನ್ನು ತಕ್ಷಣವೇ ಜರುಗಿಸಿದರೆ ಒಳ್ಳೆಯದು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ನಮಗೆ ಯಾರೂ ಪ್ರತಿಕ್ರಿಯಿಸಿಲ್ಲ ಎಂದಲ್ಲ. ಯಾರೂ own ಮಾಡಲಿಲ್ಲ. ಅವರು ನಾವು ಮಾಡಲಿಲ್ಲ ಎಂದು ಹೇಳಿ. ಇದನ್ನು ಯಾರು ಮಾಡಿದ್ದಾರೆ ಎಂದು ನಮಗೆ ಗೊಂದಲವಾಗಿದೆ. ಇದರಲ್ಲಿ ಸಮಸ್ಯೆಯೇನೆಂದರೆ, ಇದು ಜಿಲ್ಲಾ ಪಂಚಾಯತ್ ಕೆರೆಯಾಗಿದೆ. ನಾವು ಬೆಂಗಳೂರು ನಗರ neighbour ಗೆ ಬರುವುದೆಲ್ಲಾ ಪ್ರಾಧಿಕಾರದ ಕೆಳಗೆ ಬರುತ್ತದೆ ಎಂದು ownership ಅವರಿಗೆ ಇರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯವರು ಸುಮಾರು ಕೆರೆಗಳನ್ನು ಅವರೇ ತೆಗೆದುಕೊಂಡರು. ಈ ಕೆರೆಯನ್ನು ಕೂಡ CSR (Corporate Social Responsibility) grant ನಲ್ಲಿ ಬೇರೆಯವರಿಗೆ ವಹಿಸಿಕೊಟ್ಟಿದ್ದೇವೆ. ಅವರು ಕೂಡ CSR grant ನಲ್ಲಿ ಅಭಿವೃದ್ಧಿಪಡಿಸುತ್ತಿದ್ದಾರೆ. ಹಾಗಾಗಿ ನಮಗೆ ಸ್ವಲ್ಪ monitoring ಇರಲಿಲ್ಲ. 100 ಎಕರೆ ಅಚ್ಚುಕಟ್ಟು ಕೆರೆಗಳು ನಮ್ಮದು ಎಂದು ಇದೆ. ಕೆರೆ ಅಭಿವೃದ್ಧಿ ಪ್ರಾಧಿಕಾರ ಹೆಸರಿನಲ್ಲಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದದ್ದನ್ನು ನಗರ ಪಾಲಿಕೆ ತೀರ್ಮಾನ ತೆಗೆದುಕೊಂಡಿಲ್ಲ. ನಾವು ಅಷ್ಟೊಂದು ಹಣ ಖರ್ಚು ಮಾಡುತ್ತೇವೆ ನಮಗೆ ಬಿಡಿ ಎಂದು ಬೆಂಗಳೂರಿನಲ್ಲಿರುವ ಒಂದೊಂದೇ ಕೆರೆಯನ್ನು ನಮ್ಮ ಕೈಯಿಂದ ತೆಗೆದುಕೊಂಡು ಬಿಟ್ಟಿದ್ದಾರೆ. ಅದು ನಮ್ಮ ಸಮಸ್ಯೆಯಾಗಿದೆ. ಆದರೆ, ಇದರಲ್ಲಿ ಏನಾಗಿದೆಯೆಂದರೆ, ಸತ್ಯ ಇದು. ಕೆರೆ ಮಧ್ಯದಲ್ಲಿ ರಸ್ತೆ ಮಾಡಿದ್ದಾರೆ. ಇದನ್ನು ಯಾರು ಸಹಿಸುವುದಕ್ಕೆ ಆಗುವುದಿಲ್ಲ. ತಾವು ಹೇಳಿದ ಹಾಗೆ ಅವರು ಮಾಡಿದ್ದಾರೋ, ನಮ್ಮ ಇಲಾಖೆಯವರು ಮಾಡಿದ್ದಾರೋ ಗೊತ್ತಿಲ್ಲ. ಇದನ್ನು ತಕ್ಷಣವೇ ಮಾಡಿರುವಂತಹ ರಸ್ತೆ ಅಲ್ಲ. ಇಲಾಖೆಯವರ consent ಇಲ್ಲದೇ, ಮತ್ತೊಬ್ಬರು ಇದನ್ನೇ ಮಾಡಿದ್ದಾರೆ ಎಂದು ಭಾವಿಸುವುದಿಲ್ಲ. ಈ ಪ್ರಕರಣ ನ್ಯಾಯಾಲಯಕ್ಕೆ ಹೋಗಿತ್ತು. ನ್ಯಾಯಾಲಯದಲ್ಲಿಯೂ ಈ ಪ್ರಕರಣ ನಡೆದು eviction ಮಾಡಬೇಕೆಂದು ಸ್ಪಷ್ಟವಾದ ನಿರ್ದೇಶನ ಕೊಟ್ಟಿದೆ. ನ್ಯಾಯಾಲಯದಲ್ಲಿ hurdles ಇಲ್ಲ. ನಾವು ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತೇವೆ. ಇದನ್ನು ಯಾರು ಮಾಡಿದ್ದಾರೆಯೋ ಅವರ ಮೇಲೆ ಕಾನೂನುಬದ್ಧ ಪ್ರಕರಣ ದಾಖಲು ಮಾಡಿ ಮುಂದಿನ ಕ್ರಮ ಏನು ತೆಗೆದುಕೊಳ್ಳಬಹುದು. ಅದನ್ನು ನಿದಾಕ್ಷಿಣ್ಯವಾಗಿ ತೆಗೆದುಕೊಳ್ಳುತ್ತೇವೆ ಎಂದು ತಮಗೆ ಆಶ್ವಾಸನೆ ಕೊಡುತ್ತೇನೆ.

**ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರಿಯಾಗಿ ಉತ್ತರವನ್ನು ಹೇಳಿದ್ದಾರೆ. ಆದರೆ, *Karnataka Lake Conservation and Development* Authority *Act, 2014* ರಲ್ಲಿ ಯಾರ್ಯಾರು *disfigurement of tank* ಯಾರು ಮಾಡುತ್ತಾರೋ, ಅವರಿಗೆಲ್ಲಾ *penalty clause* ಹಾಕಿದ್ದಾರೆ. *Penalty clause* ಪ್ರಕಾರ *3 years imprisonment* ನೇರವಾಗಿ ಇವರಿಗೆ ಇದೆ. ಹೈಕೋರ್ಟ್ ಇದಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಒತ್ತಿ ಹೇಳಿದೆ. ಬಹಳ ಮುಖ್ಯವಾಗಿ ಇಲ್ಲಿ ಚರ್ಚೆ ಆಗಲೇ ಬೇಕಾದ ಅಂಶ ಏನೇಂದರೆ, ಇದಕ್ಕೆ ಆರ್.ಡಿ.ಪಿ.ಆರ್., ಬಿ.ಬಿ.ಎಂ.ಪಿ., ಯವರು ಯಾರು ಮುಂದೆ ಬರುತ್ತಿಲ್ಲ.

(ಮುಂದು)

(1073) ಎಸ್‌ಆರ್/ಎಂಡಿ 3:30 14/12/2021

(ಸಭಾಪತಿಯವರ ಉಪಸ್ಥಿತಿ)

**ಡಾ: ವೈ.ಎ.ನಾರಾಯಣಸ್ವಾಮಿ(ಮುಂದು):-**

ನನಗೆ ಬಂದ ಮಾಹಿತಿಯ ಪ್ರಕಾರ ಇವತ್ತಿನ ದಿವಸ ಇದಕ್ಕೆ ಉತ್ತರಿಸಲು ಅವರುಗಳು ಯಾರೂ ಸಹ ತಯಾರಿಲ್ಲ. ಆದರೆ ಸಚಿವರೇ ಸ್ವಯಂಪ್ರೇರಿತರಾಗಿ ಉತ್ತರಿಸುತ್ತಿದ್ದಾರೆ; ಏಕೆಂದರೆ, ಅಲ್ಲಿನ ಸಂಗತಿಗಳು ಇವರಿಗೆ ಕಾಣಿಸುತ್ತಿದೆ. ಅಲ್ಲಿ ರಸ್ತೆ ನಿರ್ಮಿಸಿರುವ ಛಾಯಾಚಿತ್ರಗಳನ್ನು ನಾನು ಅವರಿಗೆ ನೇರವಾಗಿ ಕಳುಹಿಸಿಕೊಟ್ಟಿದ್ದೇನೆ ಮತ್ತು ಇವರಿಗೂ ಸಹ ತೋರಿಸಿದ್ದೇನೆ. ಈ ಕಾರಣಕ್ಕಾಗಿ ನಾನು ಸಚಿವರನ್ನು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಭಿನಂದಿಸುತ್ತಿದ್ದೇನೆ. ಶ್ರೀ ಎಂ.ನಾರಾಯಣಸ್ವಾಮಿಯವರು ಒಳ್ಳೆಯ ಅಂಶವನ್ನು ಉಲ್ಲೇಖಿಸಿದರು ಹಾಗೂ ಶ್ರೀ ಪಿ.ಆರ್.ರಮೇಶ್‌ರವರು ಅದಕ್ಕೆ ಪೂರಕರವಾಗಿ ಮತ್ತೊಂದು ಅಂಶವನ್ನು ಪ್ರಸ್ತಾಪಿಸಿದರು. ಪಟ್ಟಭದ್ರ ಹಿತಾಸಕ್ತಿಗಳು, ಭೂ ಕಬಳಿಕೆದಾರರು, ಭೂ ಮಾಫಿಯಾ ಇವರುಗಳು ತಮ್ಮ ಸ್ವಂತ ದುಡ್ಡಿನಲ್ಲಿ ಕೆರೆಯ ಮಧ್ಯದಲ್ಲಿ ರಸ್ತೆಯನ್ನು ನಿರ್ಮಿಸಿದ್ದಾರೆ; ಇವರುಗಳ ವಿರುದ್ಧ ಸರ್ಕಾರವು ಯಾವುದೇ ಕ್ರಮ ತೆಗೆದುಕೊಳ್ಳದಿದ್ದರೆ, ಇದನ್ನೂ ಯಾರೂ ಸಹ ಸಹಿಸಲು ಸಾಧ್ಯವಾಗುವುದಿಲ್ಲ. ಶ್ರೀ ಪಿ.ಆರ್.ರಮೇಶ್‌ರವರು ಪ್ರಸ್ತಾಪಿಸಿದಂತೆ, ಅಲ್ಲಿನ ರಸ್ತೆಯನ್ನು ಮೊದಲು ಕಿತ್ತುಹಾಕುವಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಂತರದಲ್ಲಿ ಅಲ್ಲಿನ ಅನಧಿಕೃತ ಬಡಾವಣೆಗಳ ಮಾಲೀಕರ ವಿರುದ್ಧವೂ ಸಹ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹೀಗೆ ಮಾಡಿದ್ದಲ್ಲಿ ಮಾತ್ರವೇ ಇದಕ್ಕೆ ಪರಿಹಾರ ದೊರೆಯುತ್ತದೆ. ನ್ಯಾಯಾಲಯದ ಆದೇಶದ ಪ್ರಕಾರ ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ನಿಗದಿತ ಕಾಲಮಿತಿಯಲ್ಲಿ ಅಲ್ಲಿ ನಿರ್ಮಿಸಿರುವ ರಸ್ತೆಯನ್ನು ತೆಗೆದು ಹಾಕಬೇಕು. ರಸ್ತೆಯೇ ಇಲ್ಲದೇ, ಭೂ ಪರಿವರ್ತನೆ ಮಾಡಿಕೊಂಡು, ಬಡಾವಣೆಗಳನ್ನು ನಿರ್ಮಿಸಿದ ಮಾಲೀಕರುಗಳ ವಿರುದ್ಧ ಕ್ರಮಗಳನ್ನು ತೆಗೆದುಕೊಂಡಾಗ, ಇಂತಹ ಚಟುವಟಿಕೆಗಳಿಗೆ ಕಡಿವಾಣ ಬೀಳುತ್ತದೆ ಎನ್ನುವ ಮಾತನ್ನು ತಮ್ಮ ಮುಖಾಂತರ ನಾನು ಬಹಳ ವಿನಯಪೂರ್ವಕವಾಗಿ ಸಚಿವರಿಗೆ ಹೇಳಬಯಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತೇವೆಂದು ನಾನು ಈಗಾಗಲೇ ಹೇಳಿದ್ದೇನೆ. ನಗರ ಯೋಜನೆ ಮತ್ತು ಬಡಾವಣೆಗಳಿಗೆ ಅನುಮೋದನೆ ನೀಡಿದವರು, ಪ್ರಶ್ನಿತ ಪ್ರದೇಶದಲ್ಲಿ ರಸ್ತೆಯನ್ನು ಅನುಮೋದಿಸಿವರು ಮತ್ತು access ಯಾರು ಮಾಡಿದ್ದಾರೆನ್ನುವುದು ನಮಗೆ ಸಂಬಂಧವಿಲ್ಲ. ಅದು ನಮ್ಮ ಸ್ವತ್ತಾಗಿದ್ದು, ಈ ಬಗ್ಗೆ ನಾವು ಯಾರಿಗೂ ಸಹ ನಿರಾಕ್ಷೇಪಣೆಯನ್ನು ನೀಡಿಲ್ಲ. ಅತಿಕ್ರಮಿಸಿದ ಪ್ರದೇಶವನ್ನು 'ಖುಲ್ಲಾ' ಗೊಳಿಸಲಾಗುವುದು. ಸಂಬಂಧಪಟ್ಟ ಇಲಾಖೆಯವರು ಈ ವಿಚಾರದಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಿ ಎಂದು ನಾವು ಈವರೆಗೆ ಪ್ರಯತ್ನಿಸಿದೆವು. ಅವರುಗಳು ಯಾವುದೇ ಕ್ರಮಗಳನ್ನು ತೆಗದುಕೊಳ್ಳದಿಲ್ಲವೆಂದಾದರೆ, ಕೆರೆಗಳ ಅಭಿವೃದ್ಧಿ ಪ್ರಾಧಿಕಾರದ ನಿಯಮಗಳನ್ವಯ ಪ್ರಶ್ನಿತ ರಸ್ತೆಯನ್ನು 'ಖುಲ್ಲಾ' ಪಡಿಸಲಾಗುವುದು. ಇದಕ್ಕೆ ಯಾರಾದರೂ ಅಡ್ಡಿಪಡಿಸಿದರೆ, ಅವರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ, ಮುಂದಿನ ಕ್ರಮಗಳನ್ನು ಜರುಗಿಸುತ್ತೇವೆ.

**ಡಾ: ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸಚಿವರು ಸಮಯವನ್ನು ನಿಗದಿಪಡಿಸಬೇಕು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಮಯವನ್ನು ನಿಗದಿಪಡಿಸಲಾಗುವುದಿಲ್ಲ; ಆದರೆ ನಾವು ಕೆಲಸವನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ.

**ಡಾ: ತೇಜಸ್ವಿನಿ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇತ್ತೀಚಿನ ಅತಿವೃಷ್ಟಿಯಿಂದ ಕೇಳು ಕಂಡರಿಯದ ರೀತಿಯಲ್ಲಿ ತಿರುಮಲದಂತಹ ಎತ್ತರದ ಪ್ರದೇಶಗಳಿಂದ ಮೊದಲುಗೊಂಡು ನಗರ ಪ್ರದೇಶಗಳವರೆಗೆ ಯಾವುದೇ ಭೂಮಿಯು ಸುರಕ್ಷಿತವಲ್ಲ ಎನ್ನುವಷ್ಟು ದೊಡ್ಡ ಪ್ರಮಾಣದಲ್ಲಿ ನೀರಿನ ಲಭ್ಯತೆ ಆಯಿತು. ನನ್ನ ಅನೇಕ ಸನ್ಮಿತ್ರರು ಮಾತನಾಡಿದಂತೆ, ಹಾಲಿ ಇರುವ ಕೆರೆಗಳಲ್ಲಿನ ಹೂಳನ್ನು ತೆಗೆದು, ಒತ್ತುವರಿಗಳನ್ನು ತೆರವುಗೊಳಿಸಿ, ನೀರು ನೈಸರ್ಗಿಕವಾಗಿ ಹರಿಯಲು ಅವಕಾಶ ಮಾಡಿದ್ದರೆ, ನನ್ನ ಪ್ರಕಾರ ಶೇಕಡಾ 75 ರಷ್ಟು ಪ್ರವಾಹ ಪರಿಸ್ಥಿತಿಗಳನ್ನು ತಡೆಯಬಹುದಾಗಿತ್ತು. ನಾವು ಚಿಕ್ಕ ವಯಸ್ಸಿನಿಂದಲೂ ನೋಡಿದ್ದನ್ನು ಹಾಗೂ ನಮ್ಮ ಹಿರಿಯರು ಹೇಳಿದ್ದನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ಪ್ರಕೃತಿಯು ತನಗೆ ಬೇಕಾದ ಹಾದಿಯನ್ನು ಮಾಡಿಕೊಂಡಾಗಲೂ ಸಹ ಕಂದಾಯ ಇಲಾಖೆಯವರು ಸರ್ವೆ ಮಾಡುವ ಕೆಲಸಗಳನ್ನು ಮಾಡಬೇಕು. ಇಲಾಖೆಯಲ್ಲಿ ಸರ್ವೆಯರ್‌ಗಳ ಕೊರತೆ ಇದೆ ಎನ್ನುವುದನ್ನು ಹಲವಾರು ಸಂದರ್ಭಗಳಲ್ಲಿ ಇದೇ ಸದನದಲ್ಲಿ ಹೇಳಿದ್ದಾರೆ. ಸರ್ಕಾರಿ ಭೂಮಿ, ಗೋಮಾಳ, ಕೆರೆ ಇವುಗಳನ್ನು ಸಂರಕ್ಷಿಸಲು ಮತ್ತು ಅಂತರ್ಜಲ ವೃದ್ಧಿ ಮತ್ತು ಪರಿಸರ ಸಮತೋಲನ ಈ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ಜಾಗತಿಕ ಮಟ್ಟದಲ್ಲಿ ದೊಡ್ಡ ದೊಡ್ಡ ದೇಶಗಳು ಇದೇ ವಿಚಾರವಾಗಿ ಚರ್ಚೆಗೆ ಮುಂದೆ ಬಂದಿರುವ ಸಂದರ್ಭದಲ್ಲಿ ಮತ್ತು ಕೋವಿಡ್-19 ರ ಸಂದರ್ಭದಲ್ಲಿ ರೋಗಿಗಳಿಗೆ ನೀಡುವ ಆಮ್ಲಜನಕವು ಸಾಕಾಗುತ್ತಿಲ್ಲವೆಂದು ಹಾಗೂ ಗಿಡ-ಮರಗಳಿಂದ ನೇರವಾಗಿ ಆಮ್ಲಜನಕವು ದೊರೆಯುತ್ತಿಲ್ಲವೆನ್ನುವ ಕಾರಣಗಳಿಗಾಗಿ ಕಾರ್ಖಾನೆಗಳಿಂದ ಆಮ್ಲಜನಕವನ್ನು ಪೂರೈಕೆ ಮಾಡಲಾಗಿತ್ತು. ಇಂತಹ ಸಂದರ್ಭಗಳಲ್ಲಿ ಪರಿಸರಕ್ಕೆ ಪೂರಕವಾಗುವ ಕೆರೆ-ಕಟ್ಟೆಗಳ ಒತ್ತುವರಿಯನ್ನು ನಾವು ತಡೆಯದಿದ್ದರೆ, ಇನ್ನು ಯಾವಾಗ ಮಾಡಬೇಕು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ವಿಚಾರದಲ್ಲಿ ಇಲಾಖೆಯು ಅನೇಕ ಬಾರಿ ಕ್ರಮಗಳನ್ನು ಕೈಗೊಳ್ಳುತ್ತಿದ್ದು; ಇದನ್ನು ನಾನು ಸಾಕಷ್ಟು ಬಾರಿ ಗಮನಿಸಿದ್ದೇನೆ. ಈ ಸಂದರ್ಭದಲ್ಲಿ ನಾನು ನನ್ನ ಅನುಭವವೊಂದನ್ನು ಹೇಳಬಯಸುತ್ತೇನೆ. ಬೆಂಗಳೂರು ಗ್ರಾಮಾಂತರದ ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬುಗೆರೆ ಹೋಬಳಿಯ ಮೆಳೆಕೋಟೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕೂಸಮ್ಮನ ಕೆರೆಗೆ ಒಂದೂಕಾಲು ಕಿಲೋಮೀಟರ್‌ಗಳಷ್ಟು ಏರಿ; ಎರಡು ತೂಬುಗಳಿದ್ದು, ಅದ್ಭುತ ಹಾಗೂ ಕೌಶಲ್ಯಯುತವಾದ ಕೆರೆ ಇದಾಗಿದೆ. ಅಲ್ಲಿನ ಕೆರೆಯು 29 ಎಕರೆಗಳಷ್ಟು ಪ್ರದೇಶದಲ್ಲಿದ್ದು, ಅದನ್ನು ನಿರ್ಮಿಸಿದಾಗಿನಿಂದ ಹೂಳನ್ನು ತೆಗೆದಿಲ್ಲ. ಅಲ್ಲಿನ ಗ್ರಾಮಸ್ಥರುಗಳೆಲ್ಲರೂ ಸೇರಿಕೊಂಡು ಸಂಘ ಮಾಡಿಕೊಂಡು, ಹೂಳನ್ನು ತೆಗೆದಿದ್ದಾರೆ. ಹೀಗಾಗಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇವತ್ತಿನ ದಿವಸ ಅದು ಒಳ್ಳೆಯ ಸರೋವರದಂತಾಗಿದೆ. ಅಲ್ಲಿ ಎರಡು-ಮೂರು ಬಾರಿ ಸರ್ವೇಯನ್ನು ಮಾಡಲಾಗಿದೆ. ಅಲ್ಲಿ ಸರ್ವೆಯನ್ನು ತೆರವುಗೊಳಿಸಲು ಹೋದಾಗ, ಅಲ್ಲಿನ ಅಧಿಕಾರಿಗಳ ಮೇಲೆ ಕೆಲವರು ಹಲ್ಲೆ ಮಾಡುತ್ತಾರೆ.

**ಸಭಾಪತಿಯವರು:-** ಪ್ರಶ್ನಿತ ಚಾಗಲಟ್ಟಿ ಗ್ರಾಮದ ಕೆರೆಯ ಬಗ್ಗೆ ಮಾತನಾಡಿ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಕೆರೆ ಒತ್ತುವರಿಯ ಬಗ್ಗೆ ಹೇಳುವವರು ಹಾಗೂ ಕೇಳುವವರು ಯಾರೂ ಇಲ್ಲದಂತಾಗಿದೆ. ಆದ್ಯತೆಯ ಮೇರೆಗೆ, ಕೆರೆಗಳನ್ನು ಅಳತೆ ಮಾಡಿ, ಒತ್ತುವರಿಯನ್ನು ತೆರವುಗೊಳಿಸಿ, ಅಭಿವೃದ್ಧಿ ಮಾಡುವ ಕೆಲಸಗಳಾಗಬೇಕು. ಸಚಿವರು ವಿಶೇಷವಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ದೊಡ್ಡ ಮನಸ್ಸು ಮಾಡಿ, ಕೆರೆಗಳಲ್ಲಿನ ಹೂಳನ್ನು ತೆಗೆಯುವ ವಿಚಾರದಲ್ಲಿ ಅವರು ದಾಖಲೆಯನ್ನು ನಿರ್ಮಿಸಬೇಕು; ಅವರ ಅಧಿಕಾರಾವಧಿಯಲ್ಲಿ ಕೆರೆಗಳ ಸಂರಕ್ಷಣೆಯಾಗಬೇಕೆಂದು ನಾನು ಆಗ್ರಹಿಸುತ್ತೇನೆ.

**ಸಭಾಪತಿಯವರು:-** ಈ ವಿಚಾರದಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಸಚಿವರು ಈಗಾಗಲೇ ತಿಳಿಸಿದ್ದಾರೆ; ಹೀಗಾಗಿ ಅವರು ಕೆಲಸಗಳನ್ನು ಮಾಡುತ್ತಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಕೆರೆಯ ಹೂಳು ತೆಗೆಯುವ ಕೆಲಸವು ಅವರು ಮಾತನಾಡಿದಷ್ಟು ಸುಲಭವಾದುದಲ್ಲ. ಈ ವಿಚಾರದಲ್ಲಿ ರಾಷ್ಟ್ರೀಯ ಹಸಿರು ಪ್ರಾಧಿಕಾರ ಮತ್ತು ಉಚ್ಚ ನ್ಯಾಯಾಲಯಗಳು ಇಂತಿಷ್ಟು ಹೂಳನ್ನು ತೆಗೆಯಬೇಕೆಂದು ನಿರ್ದೇಶನ ನೀಡುತ್ತವೆ. ಬೆಂಗಳೂರಿನಲ್ಲಿರುವ ಕೆರೆಗಳ ಬಗ್ಗೆ ಮಾನ್ಯ ಸಭಾಪತಿಯವರು ಅರ್ಥ ಮಾಡಿಕೊಳ್ಳಬೇಕು. ಅಲ್ಲಿ ವಾಹನಗಳನ್ನು ಚಲಾಯಿಸುವುದಕ್ಕಾಗುವುದಿಲ್ಲ. ರಾಷ್ಟ್ರೀಯ ಹಸಿರು ಪ್ರಾಧಿಕಾರದ ನಿರ್ದೇಶನದಂತೆ ಕೆಲಸ ಮಾಡಿದರೆ, ನಿಮಿಷಕ್ಕೆ ಒಂದಕ್ಕೆ ಒಂದು ಟ್ರಕ್‌ನಷ್ಟು ಹೂಳನ್ನು ತೆಗೆದರೆ ಮೂರು ವರ್ಷಗಳಲ್ಲಿ ಅಲ್ಲಿನ ಹೂಳು ಖಾಲಿಯಾಗುತ್ತದೆ. ಅನಗತ್ಯ ವಸ್ತುಗಳೆಲ್ಲವೂ ಕೆರೆಯಲ್ಲಿ ಬಿದ್ದಿವೆ. CSR (Corporate Social Responsibility) ಯೋಜನೆಯಡಿ ಯಾರಾದರೂ ಮುಂದೆ ಬಂದರೆ, ಒಳ್ಳೆಯ ಕಂಪೆನಿಗಳಿಗೆ ಕೆರೆಗಳನ್ನು ವಹಿಸಿಕೊಟ್ಟು, ಅವರುಗಳು ಕೆರೆಗಳನ್ನು ನಿರ್ವಹಿಸುವಂತೆ ಮತ್ತು ಅಲ್ಲಿ ಹೂಳು ಬರದಂತೆ ಹಾಗೂ ಅನವಶ್ಯಕ ವಸ್ತುಗಳನ್ನು ಕೆರೆಗಳಲ್ಲಿ ತುಂಬದಂತೆ, ಅಲ್ಲಿ ಬೇಲಿ ಹಾಕುವ ಕೆಲಸಗಳನ್ನು ಸರ್ಕಾರವು ಮಾಡುತ್ತಿದೆ. ಈ ಸಂಬಂಧ ಸುಮಾರು 48-50 ಕೋಟಿ ರೂಪಾಯಿಗಳಷ್ಟು ಸಿ.ಎಸ್.ಆರ್. ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ವಿಸರ್ಜನೆ ಮಾಡುವ ಪ್ರಕ್ರಿಯೆಗಳನ್ನು ಸರ್ಕಾರವು ಸ್ಥಗಿತಗೊಳಿಸಬೇಕು. ಮಾಟ-ಮಂತ್ರ ಇತ್ಯಾದಿಗಳನ್ನು ಮಾಡಿಸಿ, ತೆಂಗಿನಕಾಯಿ ಹಾಗೂ ಇನ್ನಿತರೆ ವಸ್ತುಗಳನ್ನು ಕೆರೆಗಳಲ್ಲಿ ಹಾಕುತ್ತಾರೆ. ಇವುಗಳಿಗೆ ಬೇರೆ ವ್ಯವಸ್ಥೆಯನ್ನು ಮಾಡದಿದ್ದರೆ, ಸರ್ಕಾರವು ಯಾವುದೇ ಕ್ರಮಗಳನ್ನು ತೆಗೆದುಕೊಂಡರೂ ಸಹ ಅದನ್ನು ಸ್ವಚ್ಛ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೆರೆಗಳಿಗೆ ಬೇಲಿಯನ್ನು ಹಾಕಿ, ಮೇಲಿನ ಪ್ರದೇಶದಲ್ಲಿ 'ಪಾಥ್ ವೇ' ಮಾಡಿ, ಓಡಾಡಲು ಅನುಕೂಲ ಮಾಡಲಾಗುತ್ತಿದೆ. ಅಲ್ಲಿ ಟ್ಯಾಂಕ್‌ನೊಳಗೆ direct access ಬರದೇ ಇರುವಂತಹ ಪರಿಸ್ಥಿತಿಯನ್ನು ನಿರ್ಮಿಸಿದ್ದೇವೆ. ಖಾಸಗಿಯವರಿಗೂ ಸಹ ಕೆರೆಗಳ ನಿರ್ವಹಣೆಗಾಗಿ ವಹಿಸಲಾಗುತ್ತಿದೆ. ಅನುದಾನ ಮತ್ತು ಅಲ್ಲಿನ ಸ್ಥಿತಿಗತಿಗಳ ಆಧಾರದ ಮೇಲೆ ಕೆರೆಗಳಲ್ಲಿನ ಹೂಳನ್ನು ತೆಗೆಯುತ್ತೇವೆಂದು ನಾನು ಹೇಳಬಯಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ....

**ಸಭಾಪತಿಯವರು:-** ನಿಮ್ಮ ಹಾಗೂ ಶ್ರೀಮತಿ ವೀಣಾ ಅಚ್ಚಯ್ಯ ರವರುಗಳ ವಿಷಯಗಳನ್ನು ನಾಳೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ. ಅಲ್ಲಿನ ಗುತ್ತಿಗೆದಾರರು ಪತ್ರಿಕಾಗೋಷ್ಠಿಯನ್ನು ನಡೆಸಿ, ....

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನಿಮ್ಮ ಪ್ರಶ್ನೆಗೆ ಉತ್ತರ ಕೊಡುವ ಸಚಿವರು ಇಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಾವೂ ಸಹ ಸರ್ಕಾರದ ಭಾಗವಾಗಿದ್ದೇವೆ. ಈ ಕಾರ್ಯಕ್ಕಾಗಿ ಸಭಾನಾಯಕರ ಜೊತೆಯಲ್ಲಿ ಮುಖ್ಯಮಂತ್ರಿಗಳಿದ್ದರೆ ಒಳ್ಳೆಯದು. ಏಕೆಂದರೆ, ಈ ವಿಷಯದಲ್ಲಿ ಸತ್ಯವಿದ್ದರೆ, ಗುತ್ತಿಗೆದಾರರ ಅಸೋಸಿಯೇಷನ್ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಹೀಗಾಗಿ ನಾವು ನಾಳೆಯ ದಿನ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಾಳೆಯ ದಿನ ಭೋಜನ ಪೂರ್ವದಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ನಾಳೆಯ ದಿನ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, **XXX**

(ಮುಂದು)

(1074) 03-40 14-12-2021 ಸಿಎಸ್/ ಎಕೆ

**ಶ್ರೀ ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಗಳೇ, **XXX** ದಯಮಾಡಿ ಅದನ್ನು ಕಡತದಿಂದ ತೆಗೆಯಬೇಕು.

**ಸಭಾಪತಿಯವರು:-** ಅವರು ಹೇಳಿದ್ದು ಕಡತಕ್ಕೆ ಹೋಗಿಲ್ಲ, ಹೋಗಿದ್ದಲ್ಲಿ ಅದನ್ನು ಕಡತದಿಂದ ತೆಗೆಯಿರಿ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 10. ನಿಯಮ 330ರ ಮೇರೆಗೆ ಚರ್ಚೆ

**(ಅ)ವಿಷಯ: ಬಿಡಿಎ ಪ್ರಾಧಿಕಾರವು 2004ರಲ್ಲಿ ನಿರ್ಮಾಣಗೊಂಡಿರುವ ಕೇಂದ್ರ ಕಚೇರಿಯ ಆವರಣದಲ್ಲಿರುವ ಕಟ್ಟಡಗಳನ್ನು ಕೆಡವಿ ಬಹು ಮಹಡಿಯ ಬಿಡಿಎ ಅಭಿವೃದ್ಧಿ ಭವನ ನಿರ್ಮಾಣ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ಬಗ್ಗೆ.**

- - - -

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಗಳೇ, ಇವತ್ತು ಕೊರೊನಾ ಎನ್ನುವ ಮಾರಕ ರೋಗ ಬಂದು ರಾಜ್ಯದಲ್ಲಿ ಏನೆಲ್ಲಾ ಅನಾಹುತಗಳಾದವು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಕೊರೊನಾ ರೋಗಿಗಳಿಗೆ ಯಾವ ರೀತಿಯ ಸವಲತ್ತುಗಳನ್ನು ನೀಡಬೇಕಾಗಿತ್ತು ಆ ವಿಚಾರದಲ್ಲಿ ಸರ್ಕಾರವು ಸಂಪೂರ್ಣವಾಗಿ ಎಡವಿದೆ. ನ್ಯಾಯವಾಗಿ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಬೆಡ್‌ನ ವ್ಯವಸ್ಥೆಯನ್ನು ಮಾಡಬೇಕಾಗಿತ್ತು, ಅದನ್ನು ಸರಿಯಾಗಿ ಕೊಡುವುದಕ್ಕೆ ಆಗಲಿಲ್ಲ. ಆಕ್ಸಿಜನ್ ಸಿಲಿಂಡರ್‌ಗಳನ್ನು ಸರಿಯಾದ ಪ್ರಮಾಣದಲ್ಲಿ ರೋಗಿಗಳಿಗೆ ಒದಗಿಸಲು ಆಗಲಿಲ್ಲ. ವೆಂಟಿಲೇಟರ್‌ಗಳನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಯಾವ ಕಾರ್ಯಕರ್ತರು ಕೊರೊನಾ ವಾರಿಯರ್ಸ್ ಆಗಿ ಕೆಲಸ ಮಾಡಿದ್ದರು ಅವರಿಗೆ ಸಂಬಳ ಕೊಡಲಿಕ್ಕೆ ಸರ್ಕಾರಕ್ಕೆ ಆಗಲಿಲ್ಲ. ಸ್ಕೂಲ್ ಟೀಚರ್ಸ್‌ಗೆ ಸಂಬಳ ಸರಿಯಾಗಿ ಕೊಡಲಿಕ್ಕೆ ಆಗಲಿಲ್ಲ. ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ.ಯಲ್ಲಿ ಸಂಬಳವನ್ನು ಕೊಡಲಿಕ್ಕೆ ಅಗಲಿಲ್ಲ. ಇಂತಹ ಒಂದು ಅರ್ಥಿಕ ಸ್ಥಿತಿಯನ್ನು ನಮ್ಮ ಸರ್ಕಾರ ಹೊಂದಿದೆ. ಇಂತಹ ಒಂದು ಶೋಚನೀಯ ಸಂದರ್ಭದಲ್ಲಿ ಇವತ್ತು ನಾವಿದ್ದೇವೆ. ಬೆಂಗಳೂರು ನಗರ ಸೇರಿದಂತೆ ಇಡೀ ಕರ್ನಾಟಕ ರಾಜ್ಯಾಂದ್ಯತ ಅನೇಕ ಸರ್ಕಾರಿ ಕಟ್ಟಡಗಳಿವೆ, ಎಲ್ಲಾ ಜಿಲ್ಲಾ ಮಟ್ಟದಲ್ಲಿಯೂ ಸಹ ಪುರಾತನ ಕಾಲದಲ್ಲಿ ನಿರ್ಮಿತವಾದಂತಹ ಸರ್ಕಾರಿ ಕಚೇರಿಗಳು ಇಂದಿಗೂ ಸಹ ಜೀವಂತವಾಗಿವೆ. ಅಂದು ಕಟ್ಟಿದಂತಹ ಕಟ್ಟಡಗಳು ಶಿಥಿಲಗೊಳ್ಳದೇ ಇನ್ನು ಉತ್ತಮ ಸ್ಥಿತಿಯಲ್ಲಿದ್ದು ಅದರಲ್ಲಿ ಜನರು ಕಾರ್ಯ ನಿರ್ವಹಿಸುತ್ತಿರುವ monuments ನ್ನು ನಾವು ನೋಡುತ್ತಿದ್ದೇವೆ. ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅದು ಕೂಡ ಪುರಾತನ ಕಾಲದಲ್ಲಿ ಕಟ್ಟಿದಂತಹ ಕಟ್ಟಡಗಳು. ಇತ್ತೀಚೆಗೆ ಸುಮಾರು 17 ವರ್ಷಗಳ ಹಿಂದೆ ಅಲ್ಲಿ ಒಂದು ಕಟ್ಟಡವನ್ನು ನಿರ್ಮಾಣ ಮಾಡಿದರು. ಇವತ್ತು ನೂತನವಾಗಿ ಬಿಜೆಪಿ ಪಕ್ಷದ ಅಧ್ಯಕ್ಷರಾಗಿರುವವರು ನಮ್ಮಲ್ಲಿರುವ ದಾಖಲೆಗಳನ್ನು ಇಟ್ಟುಕೊಳ್ಳುವುದಕ್ಕೆ ಜಾಗ ಇಲ್ಲ, ಅದಕೋಸ್ಕರ ಈ ಕಟ್ಟಡವನ್ನು ನೆಲಸಮ ಮಾಡಿ, ಹೊಸ ಕಟ್ಟಡವನ್ನು ನಿರ್ಮಾಣ ಮಾಡಬೇಕೆಂದು ಹೇಳಿ, ಸರ್ಕಾರದ ಅನುಮತಿಗೆ ಕಳುಹಿಸಿಕೊಡುತ್ತಾರೆ. ಸುಮಾರು 250-300 ಕೋಟಿ ರೂಪಾಯಿಗಳ ವೆಚ್ಚ ಮಾಡಿ ಈ ಕಟ್ಟಡವನ್ನು ಕಟ್ಟಬೇಕೆನ್ನುವ ಪ್ರಸ್ತಾವವನ್ನು ಸರ್ಕಾರದ ಮುಂದಿಟ್ಟಿದ್ದಾರೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
------------------------------------------------------------------------------------------------------------

ಆದರೆ ಸುಸ್ಥಿತಿಯಲ್ಲಿರುವ ಕೇವಲ 17 ವರ್ಷಗಳ ಹಿಂದೆ ಕಟ್ಟಿರುವಂತಹ ಈ ಕಟ್ಟಡವನ್ನು ನೆಲಸಮ ಮಾಡಿ ಹೊಸದಾಗಿ ಕಟ್ಟುವುದರ ಹಿಂದೆ ಯಾವ ಹುನ್ನಾರ ಇದೆ ಎನ್ನುವುದು ಎಲ್ಲರಿಗೂ ಅರ್ಥವಾಗುತ್ತದೆ. ಒಂದು ವೇಳೆ ನೀವು ಆ ಕಟ್ಟಡವನ್ನು ಕಟ್ಟಲೇಬೇಕೆಂದರೆ ಆ ಬಿಡಿಎ ಆವರಣದಲ್ಲಿ ಖಾಲಿ ಜಾಗ ಕೂಡ ಇದೆ. ಅದನ್ನು ಬಿಟ್ಟು ತಮ್ಮ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಬಿಡಿಎ ಅಧ್ಯಕ್ಷರಾಗಿರುವವರು ಸುಮಾರು 250-300 ಕೋಟಿ ರೂಪಾಯಿಗಳ ವೆಚ್ಚ ಮಾಡಿ ಈ ಕಟ್ಟಡವನ್ನು ಕಟ್ಟಬೇಕೆನ್ನುವ ಪ್ರಸ್ತಾವವನ್ನು ಸರ್ಕಾರದ ಮುಂದಿಟ್ಟಿದ್ದಾರೆ. ರಾಜ್ಯದ ಮತ್ತು ಕೇಂದ್ರ ಸರ್ಕಾರದ ಆರ್ಥಿಕ ಪರಿಸ್ಥಿತಿ ಇವತ್ತು ಯಾವ ರೀತಿ ಇದೆ ಎನ್ನುವುದನ್ನು ನಾವು ಮಾಧ್ಯಮಗಳ ಮೂಲಕ ನೋಡುತ್ತಿದ್ದೇವೆ. ನಮ್ಮಲ್ಲಿರುವ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳುವುದಕ್ಕೆ ಹಲವಾರು ಸರ್ಕಾರಿ ಕಚೇರಿಗಳನ್ನು ಅಡಮಾನ ಮಾಡಿ ಸಾಲವನ್ನು ಪಡೆಯುತ್ತಿದ್ದೇವೆ. ಇನ್ನೂ 1947 ರಿಂದ ಯಾರು ಯಾರು ಪ್ರಧಾನ ಮಂತ್ರಿಗಳಾಗಿದ್ದರು, ಯಾವ ಯಾವ ಸರ್ಕಾರ ಕೇಂದ್ರದಲ್ಲಿ ಆಡಳಿತಕ್ಕೆ ಬಂದಿತ್ತು, ಅವು ಈ ದೇಶದ ಸಂಪತ್ತನ್ನು ಉನ್ನತೀಕರಣ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳಿರಬಹುದು, ರೈಲ್ವೇ ಇರಬಹುದು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿರಬಹುದು, ಕಲ್ಲಿದ್ದಲಿನ ಗಣಿಗಳಿರಬಹುದು ಹೀಗೆ ಹಲವಾರು ಅಂಶಗಳಿಂದ ರಾಷ್ಟ್ರದ ಸಂಪತ್ತನ್ನು ಕ್ರೋಢೀಕರಣ ಮಾಡಿದ್ದರು. ಆದರೆ ಇವತ್ತು ಆರ್ಥಿಕ ಪರಿಸ್ಥಿತಿ ಸರಿಯಿಲ್ಲವೆಂದು ರಾಷ್ಟ್ರೀಯ ಹೆದ್ದಾರಿಗಳನ್ನು ಬೇರೆಯವರಿಗೆ ಗುತ್ತಿಗೆ ನೀಡಲಾಗುತ್ತಿದೆ, ಸುಮಾರು ೨೭ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಬೇರೆಯವರಿಗೆ ಮಾರಾಟ ಮಾಡಲು ಹೊರಟಿದ್ದಾರೆ. ರೈಲ್ವೇ ಲೇನುಗಳನ್ನು ಸಹ ಗುತ್ತಿಗೆ ನೀಡಲು ಮುಂದಾಗಿದ್ದಾರೆ. ಈ ರೀತಿ ನಮ್ಮ ದೇಶದ ಆರ್ಥಿಕ ನೀತಿ ದುಸ್ಥಿತಿಯಲ್ಲಿದೆ. ಶಾಲಾ ಶಿಕ್ಷಕರಿಗೆ ಸರಿಯಾಗಿ ಸಂಬಳ ನೀಡಲು ಆಗುತ್ತಿಲ್ಲ. ನೌಕರರಿಗೆ ಸಂಬಳವನ್ನು ನೀಡಲು ಆಗುತ್ತಿಲ್ಲ. ಕೊರೊನಾ ಮಾರಕ ರೋಗ ಬಂದಂತಹ ಸಂದರ್ಭದಲ್ಲಿ ಯಾವ ರೀತಿಯ ಅವ್ಯವಸ್ಥೆ ಆಗಿತ್ತು ಎನ್ನುವುದನ್ನು ಇಡೀ ದೇಶ ನೋಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಯೋಜನೆಯ ಅಗತ್ಯವಿತ್ತೇ? ನೀರಾವರಿ ಯೋಜನೆಗಳಿಗಾಗಿ ಇನ್ನೂ ಕೂಡ ರೈತರು ಧರಣಿಯನ್ನು ಮಾಡುತ್ತಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿರುವ ಯೋಜನೆಗಳಿಗೆ ಹಣವನ್ನು ನೀಡಲಿಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಬಿಬಿಎಂಪಿ ಎನ್ನುವುದು ಒಂದು ಬಿಳಿಯಾನೆ, ಅದರಲ್ಲಿ ಏನೆಲ್ಲಾ ಅವ್ಯವಹಾರಗಳು ನಡೆಯುತ್ತಿವೆ ಎನ್ನುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಅಲ್ಲಿರುವಂತಹ ಅಧಿಕಾರಿಗಳ ಮೇಲೆ ಲೋಕಾಯುಕ್ತದವರು ದಾಳಿಯನ್ನು ಮಾಡಿದಾಗ ಕೆಜಿಗಟ್ಟಲೆ ಚಿನ್ನ, ಬೆಳ್ಳಿ, ಹಲವಾರು ಬಂಗಲೆಗಳು ಅವರುಗಳ ಮನೆಯಲ್ಲಿ ಸಿಕ್ಕಿರುವುದನ್ನು ನಾವು ಕಂಡಿದ್ದೇವೆ. ಇಂತಹದ್ದನ್ನು ನಿಲ್ಲಿಸುವುದನ್ನು ಬಿಟ್ಟು, ಬಿಡಿಎನಲ್ಲಿ ಚೆನ್ನಾಗಿರುವ ಕಟ್ಟಡವನ್ನು ಒಡೆದು ಹಾಕಿ, ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನು ಮಾಡಿ, 250-300 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಾದರೆ ಈ ರಾಜ್ಯದ ಪ್ರತಿಯೊಬ್ಬ ನಾಗರೀಕನು ಸಹ ಬೆವರು ಸುರಿಸಿ ಸಂಪಾದನೆ ಮಾಡಿರುವ ಹಣದಲ್ಲಿ ಆತ ಕಟ್ಟಿರುವ ತೆರಿಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣದಲ್ಲಿ ಸರ್ಕಾರ ಪೋಲು ಮಾಡುವುದನ್ನು ನಾವಿಲ್ಲಿ ಸುಮ್ಮನೆ ಕುಳಿತುಕೊಂಡು ನೋಡಬೇಕೆ? ಎಲ್ಲಾ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಬಂದಿದ್ದನ್ನು ತಾವು ನೋಡಿರಬಹುದು. ಸುಸ್ಥಿತಿ ಕಟ್ಟಡ ಕೆಡವಿ ಅಭಿವೃದ್ಧಿ ಭವನ ನಿರ್ಮಾಣ ಎನ್ನುವುದು ಬಂದಿದೆ, ಇದು ನಮಗೆ ಬೇಕೆ? ನನ್ನ ಪ್ರಸ್ತಾವಕ್ಕೆ ಯಾರು ಉತ್ತರ ನೀಡುತ್ತಾರೆನ್ನುವುದು ನನಗೆ ಗೊತ್ತಿಲ್ಲ.

**ಸಭಾಪತಿಯವರು:-** ನಾನು ತಮಗೆ ಮಾತನಾಡಲು ಅವಕಾಶ ಕೊಟ್ಟ ಮೇಲೆ ನಿಮಗೆ ಸರ್ಕಾರ ಉತ್ತರ ಕೊಡುತ್ತದೆ, ನೀವು ಮಾತನಾಡಿ.

**ಶ್ರೀ ಎಂ.ನಾರಾಯಣ ಸ್ವಾಮಿ:-** ದಯಮಾಡಿ ಮಾನ್ಯ ಸಚಿವರು ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳಬಾರದು ಎಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಏಕೆಂದರೆ ಆಡಳಿತದಲ್ಲಿರುವವರು ಆಗಿರುವ ತಪ್ಪನ್ನು ಸಮರ್ಥನೆ ಮಾಡಿಕೊಳ್ಳುವುದನ್ನೇ ಮಾಡುತ್ತಾರೆ.

(ಮುಂದು)

(1075)/3-50/14-12-2021/ಎಲ್‌ಎಂ/ಎಕೆ

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

ನಮ್ಮ ಸರ್ಕಾರ ಇದ್ದಾಗ ಬಿಡಿಎ ಅಧ್ಯಕ್ಷರಾಗಿದ್ದ ಮಾನ್ಯ ಎಸ್.ಟಿ.ಸೋಮಶೇಖರ್‌ರವರು ಇಲ್ಲಿಯೇ ಕುಳಿತಿದ್ದಾರೆ. ಅವರಿಗೆ ಎಲ್ಲವೂ ಗೊತ್ತಿದೆ. He knows nook and corner of BDA and everything. ಅಲ್ಲಿ ಏನು ಪರಿಸ್ಥಿತಿ ಇದೆ ಎನ್ನುವ ಸಂಪೂರ್ಣ ಮಾಹಿತಿ ಅವರಿಗೆ ಗೊತ್ತಿದೆ. ಇವತ್ತು ಇದನ್ನು ತಂದಿದ್ದಾರೆ. ಬಿಡಿಎ ದಿಂದ ಲೇಔಟ್‌ಗಳನ್ನು ಮಾಡಬೇಕೆಂದು ಬೆಂಗಳೂರು ಸುತ್ತ-ಮುತ್ತ ಸಾವಿರಾರು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಹೋದ ಅಧಿವೇಶನದಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಶಿವರಾಂ ಕಾರಂತ ಬಡಾವಣೆ, ಕೆಂಪೇಗೌಡ ಬಡಾವಣೆ ಇರಬಹುದು. ಇಂತಹ ಬಡಾವಣೆಗಳನ್ನು ನಿರ್ಮಾಣ ಮಾಡಿ, ಅಲ್ಲಿಗೆ ಇದುವರೆಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ರಸ್ತೆ ವ್ಯವಸ್ಥೆ ಇಲ್ಲ, ಚರಂಡಿ ವ್ಯವಸ್ಥೆ ಇಲ್ಲ. ಅಲ್ಲಿ ನಿವೇಶನವನ್ನು ತೆಗೆದುಕೊಂಡವರು ಇವತ್ತು ಪರದಾಡುತ್ತಿದ್ದಾರೆ. ಮನೆ ಕಟ್ಟಲು ಆಗದಂತಹ ದುಸ್ಥಿತಿ ಅಲ್ಲಿದೆ. ಇಂತಹ ಬಡಾವಣೆಯನ್ನು ಅಭಿವೃದ್ಧಿಪಡಿಸುವುದನ್ನು ಬಿಟ್ಟು, kickback ಬರುತ್ತದೆ ಎನ್ನುವ ಉದ್ದೇಶಕ್ಕಾಗಿ ಇಂತಹ ಯೋಜನೆಗಳನ್ನು [illegible] ಇದನ್ನು ನಾವು ಒಪ್ಪಿಕೊಳ್ಳಬಹುದೇ? ಇಂತಹ ಕಡೆ [illegible] ಬಂದಿದ್ದರೂ ಈ ಕಡೆಗಳಲ್ಲಿ ಅದನ್ನು [illegible] ಮಾಡಿ ವ್ಯವಸ್ಥೆ ಕಲ್ಪಿಸಬೇಕು.ರಸ್ತೆ ವ್ಯವಸ್ಥೆ ಮಾಡಿ ಎಂದು

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):-** ಸಭಾಪತಿಗಳೇ, ಇಂತಹ [illegible]

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವರು ಹೇಳುತ್ತಿರುವುದು ಇನ್ನು ಯಾವುದೇ process ಆಗಿರುವುದಿಲ್ಲ, ಸುಮ್ಮನೆ ಇವರು 'kickback' ಎಂದು ಆಪಾದನೆ ಮಾಡುವುದು ಸರಿಯಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್**:- ಅವರು 'kickback' ಎನ್ನುವುದು ಬಹಳ ಹಳೆಯ ಪದ, ಅವರು 'advance' ಎಂದು ಹೇಳಬೇಕಾಗಿತ್ತು. ತಪ್ಪಿ 'kickback' ಎಂದು ಹೇಳಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಹರೀಪ್ರಸಾದ್‌ರವರೆ ತಾವು ಹಿರಿಯ ನಾಯಕರು, ತಮಗೂ ಗೊತ್ತಿದೆ. ಅಲ್ಲಿ ಇನ್ನು ಏನು ಆಗಿರುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಇನ್ನು ಏನು ಆಗಿರುವುದಿಲ್ಲ ಎಂದು ಹೇಳಿದ್ದಾರೆ. ಅದು ಸಂತೋಷದ ವಿಚಾರ. ೨೫೦/೩೦೦ ಕೋಟಿ ರೂಪಾಯಿಗಳ ಯೋಜನೆಯನ್ನು ತರಬೇಕು, ಆದರೆ ಕೇವಲ ೧೭ ವರ್ಷಗಳ ಹಿಂದೆ ಕಟ್ಟಿರುವಂತಹ ಕಟ್ಟಡವನ್ನು , ಉತ್ತಮ ಒಳ್ಳೆಯ ಸ್ಥಿತಿಯಲ್ಲಿರುವ ಕಟ್ಟಡವನ್ನು ಒಡೆದು ಕಟ್ಟುವ ಅವಶ್ಯಕತೆ ಏನು ಇದೆ?

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೆ,

**(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾನ್ಯ ಸಭಾಪತಿಯವರೆ, ಮಾನ್ಯ ನಾರಾಯಣಸ್ವಾಮಿಯವರು ಇಷ್ಟೊಂದು ಉದ್ವೇಗಕ್ಕೆ ಏಕೆ ಒಳಗಾದರು ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಎಲ್ಲೇಲೋ ಹೋಗುತ್ತಿದ್ದಾರೆ. ನನಗೆ ಅರ್ಥವೇ ಆಗುತ್ತಿಲ್ಲ. ಏನೊ ಪ್ರಾರಂಭ ಮಾಡಿ ಇನ್ಯಾವುದೋ ವಿಷಯಕ್ಕೆ ಹೋಗುತ್ತಿದ್ದಾರೆ ನಿಮಗಾದರೂ ಅರ್ಥವಾಗಿದೆಯೇ ಈಶ್ವರಪ್ಪನವರೆ ಎಂದು ಅವರನ್ನು ಕೇಳುತ್ತಿದ್ದೆ. ಏನು ಉತ್ತರ ಕೊಡಬೇಕು ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. Now the volume of work of BDA has increased. ೧೦೦ ಚದರ ಕಿ.ಮೀ ಇದ್ದಂತಹ ಬೆಂಗಳೂರು ನಗರ ಇಂದು ೮೪೦ ಚದರ ಕಿ.ಮೀ ಆಗಿದೆ. ಸುಮಾರು ೩೦/೪೦ ಜನ Corporators ಇರುವವರು ಈಗ ೧೪೦-೧೫೦ ಜನ ಆಗಿದ್ದಾರೆ. ಜನಸಂಖ್ಯೆ ೧ ಕೋಟಿ ದಾಟಿ ಹೋಗಿದೆ. ನಿವೇಶನಗಳನ್ನು ನಿರ್ಮಾಣ ಮಾಡಲು ೩೦ ರಿಂದ ೪೦ ಕಿ.ಮೀ ದೂರ ಹೋಗಿದ್ದೇವೆ. ನಮಗೆ ಸಮಸ್ಯೆ ಆಗಿರುವುದು ಏನೆಂದರೆ record maintenance ಮಾಡುವುದು ಸರಿ ಇಲ್ಲ ಎಂದು court direction ನೀಡಿದೆ. ಬಿಡಿಎ toilet facilities ಮತ್ತು ವ್ಯವಸ್ಥೆ ಇತರೆ ಸೌಲಭ್ಯಗಳನ್ನು ಕೊಟ್ಟಿರುವುದಿಲ್ಲ ಎಂದು ಹೇಳಲಾಗುತ್ತಿದೆ. ಇಂತಹ ದೊಡ್ಡ ಸಂಸ್ಥೆಯಲ್ಲಿ ಯಾವುದೇ ವ್ಯವಸ್ಥೆ ಮಾಡದ ಹಾಗೆ.... ಹಿಂದೆ CITB (City Improvement Trust Board) ಆಗಿತ್ತು. ಅವತ್ತಿನ ೯ ಕಾಲದಲ್ಲಿ ೧೦೦/೩೦೦ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ನಿವೇಶನಗಳನ್ನಾಗಿ ಮಾಡಿ ಬೆಂಗಳೂರಿನ ನಾಗರೀಕರಿಗೆ ನಿವೇಶನಗಳನ್ನು ಕೊಡುತ್ತಿದ ಸಂಸ್ಥೆ, ಇಂದು ಎಷ್ಟು ಬೃಹದಾರಕವಾಗಿ ಬೆಳೆದಿದೆ ಎನ್ನುವುದರ ಬಗ್ಗೆ ಮಾನ್ಯ ನಾರಾಯಣಸ್ವಾಮಿಯವರಿಗೆ ಹೇಳಬೇಕಾಗಿಲ್ಲ. ಇದು ಸ್ವಾಭಾವಿಕ. ಮೊದಲು ವಿಧಾನಸೌಧ ಒಂದೇ ಇತ್ತು ನಂತರ ವಿಕಾಸ ಸೌಧ ಮಾಡಲಾಯಿತು, ಹೀಗೆ ಒಂದು ಎರಡು ಎಂದು multistoried building ರೀತಿ ಬೆಳೆದುಕೊಂಡೆ ಹೋಯಿತು. ಜನಸಂಖ್ಯೆ, ಕೆಲಸದ ಪ್ರಮಾಣ ಹೆಚ್ಚಾದಂತೆ ಸರ್ಕಾರ expansion ಮಾಡಲೇ ಬೇಕಾಗುತ್ತದೆ. ಅದನ್ನು demolish ಮಾಡಬೇಕು, ಆ building dilapidated condition ನಲ್ಲಿದೆ ಎಂದು ನಾವು ಯಾರು ಹೇಳಿರುವುದಿಲ್ಲ. ಈಗ ಅದನ್ನು multistoried building ಮಾಡಬೇಕು, ground, cellar block ನಲ್ಲಿ car parking ಮಾಡಬೇಕು, ಮತ್ತು ಇವರು ಹೇಳುವ by-lane ಪಾರ್ಕಿಂಗ್ ಕೂಡಾ ಸಾಕಾಗುತ್ತಿಲ್ಲ, ೧೦೦/೩೦೦ ಜನ ನಿಲ್ಲಲು ಸಾಕಾಗುತ್ತಿಲ್ಲ. ಬಿಡಿಎ ದಲ್ಲಿ ಅಷ್ಟೊಂದು ದೊಡ್ಡ ಆವರಣ ಇಲ್ಲ, ಎಲ್ಲ ಕಡೆ ಕಟ್ಟಿ entrance ನಲ್ಲಿ ಸ್ವಲ್ಪ ಜಾಗವನ್ನು ಬಿಟ್ಟಿದ್ದಾರೆ. ಇದನ್ನು ಸರಿಮಾಡುವ ಅನಿವಾರ್ಯತೆ ಸೃಷ್ಟಿಯಾಗಿದೆ, court direction ಇದೆ, ಅನೇಕ ಸಮಿತಿಗಳು ರಚನೆಯಾಗಿವೆ. ಅವರು ಸಭೆ ನಡೆಸಲು ಕೊಠಡಿಗಳನ್ನು ನಿರ್ಮಿಸಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿಕೊಡಬೇಕು. ಮತ್ತು ಎಲ್ಲ record storing ಮಾಡಬೇಕು. ಇದು ಹುಡುಗಾಟದ ಮಾತಲ್ಲ. ಒಂದೊಂದು ಸೈಟ್‌ನ record maintain ಮಾಡಲು ಕೋರ್ಟ್ ನಮಗೆ directions ಕೊಟ್ಟಿದೆ. ನಾವು ಎಷ್ಟೇ ಬಡವರಿದ್ದರೂ ತಿರುಪೆ ಎತ್ತುವವರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸರ್ಕಾರವನ್ನು ನಡೆಸುತ್ತಿದ್ದೇವೆ. ಆದರೆ ಜನರ ನಮ್ಮ ಜೊತೆಗಿದ್ದಾರೆ. ಜನರ ಆಶಯದಂತೆ ಸರ್ಕಾರ ನಡೆಸಲು ನಮಗೆ ಆಗುತಿಲ್ಲ. ಆದರೂ ಜನರು ನಮ್ಮ ಜೊತೆಗಿದ್ದಾರೆ. ಇಂದು ಬೆಂಗಳೂರಿನಲ್ಲಿ building expansion ಮಾಡಬೇಕಾದರೆ, ಇವೊತ್ತಿನ ಕಾಲಕ್ಕೆ ಬೆಂಗಳೂರಿನಲ್ಲಿ ನಾವು moderate ಮಾಡಬೇಕಾದರೆ ಕಟ್ಟಡಗಳನ್ನು ಒಡೆಯಲಾಗುತ್ತದೆ ಮತ್ತೆ ಕಟ್ಟಲಾಗುತ್ತದೆ. ಈ ಬಿಡಿಎ ಕಟ್ಟಡ ಒಂದೇ ಅಲ್ಲ ಒಡೆಯುತ್ತಿರುವುದು, ಎಲ್ಲ ಕಡೆ ಈ ಕೆಲಸವನ್ನು ಮಾಡಲೇ ಬೇಕಾಗುತ್ತದೆ. ಮಾಡುತ್ತಿದ್ದೇವೆ. ಇವತ್ತು ಬಿಡಿಎ ದಲ್ಲಿ ವಿಸ್ತಾರವಾದ ಜಾಗವನ್ನು ಹೊಂದುವುದು ಅನಿವಾರ್ಯವಾಗಿದೆ. ಸೌಲಭ್ಯಗಳನ್ನು ಕೊಡಬೇಕಾಗಿದೆ, ರೆಕಾರ್ಡ್‌ಗಳನ್ನು ವೈಯಜ್ಞಾನಿಕವಾಗಿ ಸ್ಟೋರ್ ಮಾಡುವ ವ್ಯವಸ್ಥೆಯನ್ನು ಇಲ್ಲಿ ಮಾಡಬೇಕಾಗಿದೆ. ಯಾವ ದಾಖಲೆಗಳನ್ನು ಕೇಳಿದರೂ ಇಲ್ಲ ಎಂದು ಹೇಳುತ್ತಿದ್ದಾರೆ, ಯಾರು ಬೇಕಾದರೂ raid ಮಾಡಬಹುದು, ಏನಾದರೂ ಮಾಡಬಹುದು ಎನ್ನುವ ಸ್ಥಿತಿ ಇದೆ. ಹೀಗಾಗಿ ಬಿಡಿಎ ಯನ್ನು ಸುಸಜ್ಜಿತವಾದ ಕಟ್ಟಡದಲ್ಲಿ ಇಡಬೇಕು, ಬೆಂಗಳೂರಿಗೆ ಗೌರವ ತರುವಂತಹ ಕಟ್ಟಡವಾಗಿ ಕಾಣಲ್ಲಿ ಎನ್ನುವ ಉದ್ದೇಶದಿಂದ ಮಾಡುತ್ತಿದ್ದೇವೆ. ಮಾನ್ಯ ನಾರಾಯಣಸ್ವಾಮಿಯವರು ಹೇಳಿದಂತೆ ಎಲ್ಲಾ ಕಷ್ಟಗಳಿದ್ದರೂ ಬೆಂಗಳೂರನ್ನು ಶೃಂಗಾರ ಮಾಡಲು ಹೊರಟ್ಟಿದ್ದೇವೆ. ಬಡಿಎ ಸಂಸ್ಥೆ ವ್ಯಾಪಾರ ಮಾಡುತ್ತಿರುವುದು ಅದಕ್ಕಾಗಿ ಇದೆಲ್ಲವನ್ನು ಮಾಡಲೇಬೇಕಾಗುತ್ತದೆ. ಇದರ ತೀರ್ಮಾನ ಮಾತ್ರ ತೆಗೆದುಕೊಳ್ಳಲಾಗಿದೆ. ಬೇರೆ ಏನು ಆಗಿರುವುದಿಲ್ಲ. ಕಟ್ಟಡವನ್ನು ಹೊಸದಾಗಿ ಕಟ್ಟಿ ಅದರಲ್ಲಿ ಐದಾರು ಮಹಡಿಗಳನ್ನು ಕಟ್ಟಬೇಕು. ಈಗ ಇರುವ ಕಟ್ಟಡದ ಮೇಲೆ ಮಹಡಿಗಳನ್ನು ಕಟ್ಟಲು ಆಗುವುದಿಲ್ಲ. ಈಗ ಇರುವುದು ಅಷ್ಟಕೆ ಚೆನ್ನಾಗಿದೆ. ನಾವೆನ್ನು ಹಾಳಾಗಿದೆ ಎಂದು ಯಾರು ಹೇಳುತ್ತಿಲ್ಲ. ಆದರೆ further extension ಗೆ scope ಇಲ್ಲ. ಮುಂದೆ ಈ ಕಟ್ಟಡವನ್ನು ಕಟ್ಟುವಾಗ ಕಟ್ಟಡವನ್ನು ಎತ್ತರಿಸಬೇಕು ಎನ್ನುವ ವಿಚಾರವನ್ನು ಇಟ್ಟುಕೊಂಡು ಈ ಕಟ್ಟಡವನ್ನು ಕಟ್ಟಿರುವುದಿಲ್ಲ. ಅನಿವಾರ್ಯವಾಗಿ ಈ ಕಟ್ಟಡವನ್ನು demolish ಮಾಡಿ multistoried building ಕಟ್ಟಬೇಕು ಎಂದು ಬಿಡಿಎ ತೀರ್ಮಾನ ತೆಗೆದುಕೊಂಡಿದೆ. ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಇದರಲ್ಲಿ ಆವೇಶಕ್ಕೆ ಒಳಗಾಗುವಂತಹ ವಿಷಯ ಏನು ಇದೆ? ೮೦೦ ಚದರ ಕಿ.ಮೀ ಇರುವಂತಹ ಬೆಂಗಳೂರು ನಗರಕ್ಕೆ ತಕ್ಕ ಹಾಗೆ development authority ಎಷ್ಟು ಇರಬೇಕು, ಹೇಗೆ ಇರಬೇಕು ಎನ್ನುವ ಬಗ್ಗೆ ನೀವು ನಗರದವರು ಹೇಳಿ. ಅದನ್ನು expand ಮಾಡಲಾಗುತ್ತಿದೆ. ಅಷ್ಟಕ್ಕೆ 'kickback' ಅದು ಇದು ಎಂದು ದೊಡ್ಡದಾಗಿ ಹೇಳುತ್ತಿದ್ದಾರೆ, ಆದರೆ ನಮಗೆ ಯಾವ 'back' ಇಲ್ಲ, 'kick' ಇಲ್ಲ. You have to appreciate this government. ಇಷ್ಟು ಕಷ್ಟವನ್ನು ಅನುಭವಿಸುತ್ತಿದ್ದರೂ ನಿಮಗೆ ಒಂದು ಬಿಡಿಎ ಕಟ್ಟಡವನ್ನು ಕಟ್ಟಿಕೊಡುತ್ತಿದ್ದೇವೆ ಎಂದರೆ ನಮ್ಮ ಸರ್ಕಾರವನ್ನು ನೀವು ತಾರಿಫ್ ಮಾಡುವುದನ್ನು ಬಿಟ್ಟು ಇಲಿ ಕುಳಿತುಕೊಂಡು ನಮ್ಮನ್ನು ಟೀಕೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಸಿ.ಎಂ.ಇಬ್ರಾಹಿಂ**:- ಹೀಗೆ ಮಾತನನಾಡುವುದಕ್ಕಾಗಿಯೇ ಅವರನ್ನು ಮಾಧುಸ್ವಾಮಿ ಎಂದು ಕರೆಯುವುದು.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಮಾನ್ಯ ಸಭಾಪತಿಗಳೆ, ಆ ಕಟ್ಟಡವನ್ನು ನಾವು expansion ಮಾಡುವುದು ಅನಿವಾರ್ಯವಾಗಿದೆ. ಅದು ಅವರಿಗೂ ಗೊತ್ತಿದೆ. ಅಲ್ಲಿ ಬೇರೆ ಜಾಗ ಇದ್ದರೆ ಇದನ್ನು ಒಡೆದು ಹಾಕುತ್ತಿರಲಿಲ್ಲ. ಆದರೆ ಈ ಕಟ್ಟಡವನ್ನು ಒಡೆಯದೆ ಬೇರೆ ಕಟ್ಟಡ ಕಟ್ಟಬೇಕಾಗಿದೆ. ನಗರದಲ್ಲಿ ಈ ರೀತಿ ಸುಮಾರು ಕಟ್ಟಡಗಳನ್ನು ಒಡೆದು ಬೇರೆ ಕಟ್ಟಿದ್ದಾರೆ. ಅದೇ ರೀತಿ ಇದನ್ನು ಒಡೆದು ಕಟ್ಟುತ್ತಿದ್ದೇವೆ. ನಮ್ಮ ಸರ್ಕಾರ ಬೇರೆ ಯಾವುದೇ ಬೇರೆ motive ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲ. ಸುಸಜ್ಜಿತವಾದ ಕಟ್ಟಡವನ್ನು ಕಟ್ಟಿ ಬಿಡಿಎ ಗೆ ಸೌಲಭ್ಯಗಳನ್ನು ಕೊಡಲಾಗುತ್ತದೆ. Particular ಆಗಿ ಜನರಿಗೆ ಒಳ್ಳೆಯ ಸೌಲಭ್ಯಗಳನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಈ ತೀರ್ಮಾನ ತೆಗೆದುಕೊಂಡಿದ್ದೇವೆ.

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾಧುಸ್ವಾಮಿಯವರ ಹೇಳಿಕೆಯನ್ನು ಆಧಾರಿಸಿ ನಾನು ಮಾತನಾಡುತ್ತೇನೆ. BDA Act ಬರುವುದಕ್ಕಿಂತ ಮುಂಚೆ CITB Act ಇತ್ತು. ಬಿಡಿಎ ೧೯೭೬ರಲ್ಲಿ ಸ್ಥಾಪಿತವಾಯಿತು. ಬಿಡಿಎ ವ್ಯಾಪ್ತಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ಸೇರಿಸಿಕೊಂಡು ೧೩೦೭ ಚದುರ ಕಿ.ಮೀ ಮಾತ್ರ. ಅದರಿಂದ ಆಚೆ ಇರುವುದು BMRDA. ಅದರಲ್ಲಿ ಇರುವ ಎಲ್ಲಾ authority ಗಳನ್ನು, ಅದರಲ್ಲಿ ಬರುವ ಮಾಗಡಿ, ನೆಲಮಂಗಲ ಇತರ ಪ್ರದೇಶಗಳನ್ನು ಅವರೇ ನೋಡಿಕೊಳ್ಳುತ್ತಾರೆ. ಈಗ ಇರುವ ಪ್ರಶ್ನೆ ಎಂದರೆ, BDA Act ನ್ನು ನೀವು ಮಾಡಿದ ಮೇಲೆ ೧೩೦೭ ಚದರ ಕಿ.ಮೀ ಎಂದು ಹೇಳಿರುವುದು ಸಂಪೂರ್ಣವಾಗಿ exhaust ಆಗಿದೆ. There is no piece of land to acquire in future. ಈಗ ಇರುವ planned area ನ್ನು local bodies ಗೆ handover ಮಾಡುತ್ತಾ ಹೋಗುತ್ತೀರಿ. ಎಲ್ಲೇಲಿ developed layouts ಇವೆ ಅವೆಲ್ಲವು transfer ಆಗುತ್ತಾ ಹೋಗುತ್ತವೆ. ಇಲ್ಲಿ ಇರುವ ಪ್ರಶ್ನೆ ಎಂದರೆ ನಿಮ್ಮದು ಕೇವಲ local planning authority ಆಗಿ ಉಳಿದುಕೊಳ್ಳುತ್ತದೆ. Local planning authority ಉಳಿದುಕೊಳ್ಳುವುದು ಬಹಳ ಸೀಮಿತವಾದುದು. ಕೆಲಸ (ಮುಂದು)

(107.6)14-12-2021(04-00)bsd-rn

**Sri P.R.RAMESH(Contd…)**

Record keep ಮಾಡುವುದು correct ಇದೆ. ಆದರೆ ಹಿಂದಿನ ಸರ್ಕಾರ ಬಿಡಿಎ ಅನ್ನು ಮುಚ್ಚುವುದಕ್ಕೆ recommend ಮಾಡಿದ್ದರು. ನಾವು ಹೇಳುತ್ತಿರುವ ಕಾರಣದಿಂದಲೇ ಮುಚ್ಚುವುದಕ್ಕೆ ನೋಡಿತ್ತು. ಹಾಗಾಗಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

further acquisition ಅವರ planning area ದಲ್ಲಿ ಇಲ್ಲ. It is completely exhausted. ಇನ್ನು ಉಳಿದಿರುವುದನ್ನು ಮ್ಯಾನೇಜ್ ಮಾಡುತ್ತಾ, ಇರುವುದನ್ನು ಮಾಡುತ್ತಾ, auction ಮಾಡುತ್ತಾ, ಕೇವಲ ಬಿಡಿಎ ಸಂಬಳಕ್ಕೆ ದಾರಿ ಮಾಡಿಕೊಳ್ಳಬೇಕು. ಇನ್ನು ಅದಕ್ಕೆ scopes ಇಲ್ಲ. ಹಾಗಾಗಿ ಸರ್ಕಾರದಲ್ಲಿ ಇದರ ಬಗ್ಗೆ ಆಡಳಿತಾತ್ಮಕ ವಿಷಯವಾಗಿ ಪರಾಮರ್ಶಿಸಬೇಕಾಗುತ್ತದೆ. ಈಗ ಕಟ್ಟಡ ಕಟ್ಟುವುದಕ್ಕೆ ಎಷ್ಟರಮಟ್ಟಿಗೆ scope ಇದೆ ಎನ್ನುವುದನ್ನು examine ಮಾಡಬೇಕಾಗುತ್ತದೆ. ಇದಕ್ಕೆ ಇಷ್ಟೊಂದು ಹಣ ಬೇಕಾಗಿದೆಯೇ? ಮುಂದಿನ ದಿನಗಳಲ್ಲಿ ಈ ಕಟ್ಟಡದಿಂದ ಯಾವ ಪ್ರಯೋಜನಗಳು ಆಗುತ್ತವೆ? 74th Amendment of Constitution ನಂತೆ planning areas should be with Municipalities ಎಂದು ಹೇಳುತ್ತದೆ. ಆದರೆ planning area separate ಆಗಿ ಇರುವುದರಿಂದ ಮಾಡಿಕೊಂಡು ಹೋಗಿದ್ದಾರೆ. ಆದರೆ ಪ್ಲಾನಿಂಗ್ ಮಾಡುವ ಏರಿಯಾವನ್ನು acquisition ಮಾಡಿ formation ಮಾಡಿ ಹಂಚುವುದಕ್ಕೆ exhaust ಆಗಿಬಿಟ್ಟಿದೆ ಅಥವಾ ಅದಕ್ಕೆ scope ಇಲ್ಲ. ಇನ್ನು ಮುಂದೆ ಬಿಡಿಎ ಕೇವಲ planning authority ಆಗಿ ಉಳಿಯುತ್ತದೆ. It is best to merge with BBMP. ಹಾಗಾಗಿ ಮುಂದಿನ ದಿನಗಳಲ್ಲಿ ಸಂವಿಧಾನದ ಪ್ರಕಾರ ಹೋಗುವಾಗ ಬಿಡಿಎ ಅನ್ನು ಬಿಬಿಎಂಪಿ ಜೊತೆ ಸೇರಿಸಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ planning authority ಗಾಗಿ ಇಷ್ಟೊಂದು ಹಣ ವ್ಯಯ ಮಾಡುವುದು ಸೂಕ್ತವಲ್ಲ ಎಂದು ಗಮನಿಸಬೇಕು.

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದು, ಒಂದು ಕಡೆ ಪತ್ರಿಕೆಗಳಲ್ಲಿ ಜಾಹಿರಾತು ಬರುತ್ತಿರುತ್ತದೆ. Revenue Department ನ ಇಡೀ Documentation ಗಳನ್ನು ಸಕಾಲ ಕಾರ್ಯಕ್ರಮದ ಒಂದು server ನಲ್ಲಿ ಇಟ್ಟಿದ್ದು, ರಾಜ್ಯದಲ್ಲಿ ಯಾರು ಬೇಕಾದರೂ ಅದನ್ನು ಪಡೆಯಬಹುದು ಎಂದು ಬರುತ್ತಿರುತ್ತದೆ. ಬಿಡಿಎ ಬಗ್ಗೆ ಮಾನ್ಯ ಸಚಿವರು ಎಷ್ಟೆಲ್ಲಾ acquisition ಮಾಡಬೇಕಾಗಿದೆ, development ಮಾಡಬೇಕಾಗಿದೆ, ಇದಕ್ಕೆಲ್ಲಾ ಜಾಗ ಬೇಕು ಎಂದು ಹೇಳಿದರು. ಬಿಡಿಎ ಅನ್ನು ಏಕೆ ಸಕಾಲದಲ್ಲಿ ತಂದು ಐ.ಟಿ ರೀತಿ ಏಕೆ ಯೋಚನೆ ಮಾಡುವುದಿಲ್ಲ? ಏಕೆ digitization ಬಗ್ಗೆ ಯೋಚನೆ ಮಾಡುವುದಿಲ್ಲ. ಬಿಡಿಎ ನಲ್ಲಿ ಯಾವರೀತಿ ಕೆಲಸ ಮಾಡುತ್ತಾರೆ ಎಂದು ಒಂದು ವಿಚಾರವನ್ನು ಸದನದ ಗಮನಕ್ಕೆ ತರುತ್ತೇನೆ. ಬಿಡಿಎ ನವರು ಒಂದು corner site ಅನ್ನು auction ಮಾಡಿದಾಗ ಒಂದು ಸಂಸ್ಥೆ ರೂ.೧೮.೫೦ ಕೋಟಿಗಳನ್ನು ಕೊಟ್ಟು auction ನಲ್ಲಿ purchase ಮಾಡುತ್ತದೆ. ಸಂಪೂರ್ಣ ಹಣವನ್ನು ಪಾವತಿ ಮಾಡಿ ನಂತರ ಕೇವಲ ೬ ತಿಂಗಳುಗಳಲ್ಲಿ ಬಿಡಿಎ ನ ಅಧಿಕಾರಿಗಳು ಆ corner site ಅನ್ನು ಇನ್ನೊಬ್ಬರಿಗೆ ಅಲಾಟ್ ಮಾಡಿ, ಅವರಿಗೆ sale deed ಅನ್ನು execute ಮಾಡಿ ಕೊಡುತ್ತಾರೆ, ಮೊದಲು ಖರೀದಿಸಿದವರು ಬೊಬ್ಬೆ ಹೊಡೆದುಕೊಂಡು ಬಿಡಿಎ ಗೆ ಬಂದರೆ ’ಏನು ಮಾಡುವುದು, ಈ ರೀತಿ ಆಗಿ ಹೋಗಿದೆ, ಕೋರ್ಟ್‌ಗೆ ಹೋಗಿ’ ಎನ್ನುತ್ತಾರೆ. ೬ ವರ್ಷದಿಂದ ಕೋರ್ಟ್‌ಗೆ ಅಲೆದು, Lower Court ನಿಂದ High Court, Single Judge ಅಲ್ಲಿಂದ Double Bench ಗೆ ಅಲೆಯುವ ಕೆಲಸ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಆಗಿದೆ. ಈ ರೀತಿ ಇರುವ ಸಂಸ್ಥೆ ಬಗ್ಗೆ ದಯವಿಟ್ಟು ನೋಡಬೇಕು. ಮಾನ್ಯ ಸಚಿವರು ಇದಕ್ಕೆ ಉತ್ತರವನ್ನೇ ಕೊಡಬಾರದಾಗಿತ್ತು. ದಯವಿಟ್ಟು ಇದನ್ನು ನೋಡಬೇಕು. ಇಡೀ ರಾಜ್ಯದಲ್ಲಿ ಅವರು very good image ಹೊಂದಿದ್ದಾರೆ. ಅದನ್ನು ಏಕೆ ಕೆಡಿಸಿಕೊಳ್ಳುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿ ರವರು ಮಾತನಾಡುವಾಗ ಹೂಳು ಎತ್ತುವುದು ಸುಲಭದ ಕೆಲಸವಲ್ಲ ಎಂದು ಹೇಳಿದರು. ಬೆಂಗಳೂರಿನಲ್ಲಿ ಟ್ರಾಫಿಕ್ ಏನಿದೆ ಎಂಬು ಬಗ್ಗೆಯೂ ಹೇಳಿದರು. ಈಗ ಅಲ್ಲಿ Multi-Storeyed Building ತರಲು ಹೊರಟಿದ್ದು, ಅಲ್ಲಿ ಸಾಯಂಕಾಲ ಮತ್ತು ಬೆಳಗ್ಗೆ ಸಮಯದಲ್ಲಿ ಅವರು ಓಡಾಡಿದ್ದಾರೆಯೇ? ಅವರೇನೋ ಸುಲಭವಾಗಿ ಬೆಳ್ಳೂರಿಗೆ ಹೋಗಿಬಿಡುತ್ತಾರೆ. ಪಕ್ಕದಲ್ಲಿರುವ ನಾವು ಅಲ್ಲಿಯೇ ಓಡಾಡಬೇಕಾಗಿದ್ದು, Windsor Manor ನಿಂದ ವೈಯಾಲಿಕಾವಲ್‌ಗೆ ಹೋಗಲು ೧ ಗಂಟೆ ಬೇಕಾಗುತ್ತದೆ. ಬಹಳಷ್ಟು ಮಂತ್ರಿಗಳ ಮನೆಗಳು ಇರುತ್ತದೆ. ದಯವಿಟ್ಟು ಬಿಡಿಎ ಅನ್ನು ಶಿಫ್ಟ್ ಮಾಡಿ ಖಾಲಿ ಜಾಗ ಇಡಬೇಕು. Totally congest ಆಗಿದ್ದು, Smart City ಎಂದು ಹೇಳುತ್ತಾರೆ. Decongestion is the part of the Smart City. ಬಹಳ ದೊಡ್ಡ ಬೆಂಗಳೂರು ನಗರವಾಗಿದ್ದು, ದಯವಿಟ್ಟು ಬಿಡಿಎ ಅನ್ನು ಬೇರೆ ಕಡೆ ಶಿಫ್ಟ್ ಮಾಡಬೇಕು. ಮಾನ್ಯ ನಜೀರ್ ಅಹಮದ್ ರವರು ಹೇಳಿದಂತೆ ಬಿಡಿಎ ನಲ್ಲಿ ಏನು ಬೇಕಾದರೂ ಮಾಡಬಹುದಾಗಿದೆ. ಒಂದು ಕೇಸ್‌ನಲ್ಲಿ ನಾನು, ಮಾನ್ಯ ಜಗದೀಶ್ ಶೆಟ್ಟರ್, ಶ್ರೀ ಅಲ್ಲಂ ವೀರಭದ್ರಪ್ಪ, ಇನ್ನೊಬ್ಬರು CBI Superintendent ಎಲ್ಲರೂ ಇದ್ದೆವು. ಆಗ ಮಾನ್ಯ ಸಚಿವರ ಪಕ್ಕದಲ್ಲಿ ಕುಳಿತಿರುವವರ ಸಹಾಯ ತೆಗೆದುಕೊಂಡು ಕೆಲಸ ಮಾಡಿಸಿಕೊಂಡೆವು. ಬೆಂಗಳೂರು ಅಷ್ಟು ಸುಲಭವಲ್ಲ. ಮಾನ್ಯ ಸಚಿವರು ಒಂದು ಗಂಟೆಯಿಂದ statement contradict ಮಾಡುತ್ತಿದ್ದಾರೆ. ಮಾನ್ಯ ನಾರಾಯಣಸ್ವಾಮಿ ರವರಂತೆ ಹೂಳು ತೆಗೆಯುವುದಕ್ಕೆ ಆಗುವುದಿಲ್ಲ ಎಂದಿದ್ದು, ಅದಕ್ಕೆ ಕಾರಣವೆಂದರೆ traffic. ಅವರು ಬೆಳಗ್ಗೆ ಸಮಯದಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಸಂಜೆ ಸಮಯ ೫-೩೦ ರಿಂದ ೭-೩೦ ರವರೆಗೆ ಓಡಾಡುವುದಕ್ಕೆ ಆಗುವುದೇ ಇಲ್ಲ. ಆದ್ದರಿಂದ it's a part of Smart City Programme. City decongest ಮಾಡುವುದಕ್ಕೆ..... ಮಾನ್ಯ ನಾರಾಯಣಸ್ವಾಮಿ ರವರು ಅವರ ವಿಷಯ ಹೇಳಿದರು. ಅದೇರೀತಿ ಬಿಬಿಎಂಪಿ ಇರಬಹುದು, ಇವರದ್ದು ಮೊದಲು ಅಕ್ರಮ ಮಾಡಿ ನಂತರ ಸಕ್ರಮ ಮಾಡಿಬಿಡುವುದು. ಬೆಂಗಳೂರು ನಗರದ ಜನರಿಗೆ ಸಾಕಾಗಿ ಹೋಗಿದೆ. ಯಾರೋ ಬಡವರು ಎಂದು ಅಕ್ರಮ ಇರುವುದನ್ನು ಸಕ್ರಮ ಮಾಡಿದಂತೆ ಬಿಡಿಎ ನಲ್ಲಿ ಆಗಬಾರದು. ಬಿಡಿಎ ಒಂದು profit making ಸಂಘಟನೆಯಾಗಿದೆ. ಅದಕ್ಕೆ ಹಣ ಬರುತ್ತದೆ, ಆ ಹಣವನ್ನು ಬೇರೆ ಕಡೆ ಹಾಕಿ ಮಾಡಬಹುದು. ಒಂದೆರೆಡು ಸಾವಿರ ಕೋಟಿ ರೂಪಾಯಿಗಳನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಬಿಡಿಎ ಜಾಗವನ್ನು ಖಾಲಿ ಇಡುವುದು ಒಳ್ಳೆಯದು. ಇಲ್ಲದಿದ್ದರೆ ಮಂತ್ರಿಗಳ ಬಂಗಲೆಯನ್ನಾದರೂ ಮಾಡಲಿ. ಏಕೆಂದರೆ ಮಂತ್ರಿಗಳಿಗೆ ಬಂಗಲೆಗಳು ಬಹಳ ಕಡಿಮೆ ಇವೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಂತಹ ವಿಷಯಗಳನ್ನು ತರುತ್ತಾರೆ, ಸರ್ಕಾರಕ್ಕೆ ಕಷ್ಟವಾಗಿರುವ ಕೆಲಸವನ್ನು ಅವರು ನಿಭಾಯಿಸಿಕೊಂಡು ಹೋಗುತ್ತಾರೆ. ಕೆಟ್ಟ ಕೇಸ್‌ಗೆ ಒಳ್ಳೆಯ ಲಾಯರ್ ಇಟ್ಟಂತೆ ಸರ್ಕಾರ ಅವರನ್ನು ತಂದು ಕೂರಿಸಿದೆ. ಬಿಡಿಎ ನಲ್ಲಿ ಬಹಳ ಅಕ್ರಮ ಇದ್ದು, ಅದನ್ನು ಮುಚ್ಚಲು ಏನಾದರೂ ಮಾಡಬೇಕು. ಅದನ್ನು ಏಕೆ continue ಮಾಡುತ್ತಿದ್ದಾರೆ? ನನ್ನದೇ ಒಂದು ಉದಾಹರಣೆ ಹೇಳುತ್ತೇನೆ. ನನ್ನ ಬಿಡಿಎ ಬಡಾವಣೆಯ Dollars layout ನಲ್ಲಿ ಸೈಟ್ ಸರ್ಕಾರದಿಂದ ಅಲಾಟ್ ಆಗಿದ್ದು, ಅಲ್ಲಿ ಕೆರೆ ಇರುವುದನ್ನು ಬಿಡಿಎ ಒತ್ತುವರಿ ಮಾಡಿದೆ ಎಂದು ಸೈಟ್ ಅನ್ನು illegal ಎಂದು ಸದನ ಸಮಿತಿ ಮಾಡುತ್ತದೆ. ಅದನ್ನೇ ಸರಿ ಮಾಡಿಕೊಳ್ಳುವುದಕ್ಕೆ ಆಗದೇ, ದೇಶವನ್ನೆಲ್ಲ ಸರಿ ಮಾಡುತ್ತೇನೆ ಎಂದುಕೊಂಡು ಇನ್ನು ಅಲ್ಲಿ ಕಟ್ಟಡ ಕಟ್ಟುತ್ತೇನೆ ಎಂದು ಏಕೆ ಹೋಗುತ್ತಾರೆ? ಇರುವುದನ್ನು ಮುಚ್ಚಿಹಾಕಲು ಏನು ಬೇಕೋ ಆ ಕೆಲಸವನ್ನು ಮಾಡಬೇಕು. ಅನ್ಯಾಯ ಆಗಿರುವವರಿಗೆ ಸರಿ ಮಾಡಿಕೊಡಬೇಕು. ಈಗಾಗಲೇ ೮೦೦ square kilometre ಗಳಾಗಿದ್ದು, ಬೇರೆ ಏನಾದರೂ ಮಾಡಬೇಕು.

**ಸಭಾಪತಿಯವರು:-** ಹೊಸ ರಾಜ್ಯದವರಿಗೆ ಮುಚ್ಚಿಹಾಕುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಹೌದು, ನಮಗೆ ಸಿಗುವುದಿಲ್ಲ. ಬಿಡಿಎ ನಲ್ಲಿ ಸೈಟ್ ತೆಗೆದುಕೊಂಡಿದ್ದರೂ ಆ ಸೈಟ್‌ಗೆ ನಾವು illegal occupants ಆಗುತ್ತೇವೆ. ಅದಕ್ಕೆ ಸದನ ಸಮಿತಿ ಮಾಡುತ್ತಾರೆ. ಮಾನ್ಯ ಕೋಳಿವಾಡ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಆಗಿತ್ತು. ಆದ್ದರಿಂದ ಬಿಡಿಎ ಮುಚ್ಚಬೇಕು. ಈಗ ಇರುವ commitment ಗಳನ್ನು ಪೂರೈಸಿ ಅದನ್ನು ಮುಚ್ಚಬೇಕು. ಅಲ್ಲಿ ಬರೀ ಅಕ್ರಮ-ಅನ್ಯಾಯಗಳೇ ನಡೆಯುತ್ತವೆ. ದುಡ್ಡು ಕೊಟ್ಟರೆ ಸೈಟ್ ಸಿಗುತ್ತದೆ. ಉದಾಹರಣೆ ಹೇಳುವುದಾದರೆ ಮಾನ್ಯ ಕೊಂಡಯ್ಯನವರು ೧೯೯೭ರಲ್ಲಿ ಅಪ್ಲೈ ಮಾಡಿದ್ದಾರೆ. ಇವತ್ತು ಚುನಾವಣೆಯಲ್ಲಿ ಅವರು ಸೋತರು. ಅವರಿಗೆ ಇವತ್ತಿನವರೆಗೂ ಸೈಟ್ ಸಿಕ್ಕಿಲ್ಲ. ನೀವು ಒಬ್ಬ ಏಜೆಂಟ್ ಹಿಡಿದುಕೊಂಡರೆ ನಾಳೆ ಬೆಳಗ್ಗೆ ಎರಡು ಸೈಟ್ ಸಿಗುತ್ತವೆ. ಇಲ್ಲದಿದ್ದರೆ ಕೊಟ್ಟ ಸೈಟ್ ಬೇರೆಯವರಿಗೆ register ಆಗಿರುತ್ತದೆ, ಇಲ್ಲವೆಂದರೆ ಕೇಸ್ ಇರುತ್ತದೆ. ಬಿಡಿಎ ಅನ್ನು ಸರಿಮಾಡಬೇಕು. ಸುಮ್ಮನೆ ಕಟ್ಟಡ ಕಟ್ಟಿ establishment ಗೆ ದುಡ್ಡು ಕೊಡುವುದು ಬಹಳ ಅನ್ಯಾಯದ ಕೆಲಸವಾಗಿದೆ. ಮಾನ್ಯ ಸಚಿವರು ಏನು ಹೇಳಿದರೂ ಸರ್ವಜ್ಞರು ಹೇಳಿದಂತೆ ಇದ್ದು, ಬಿಡಿಎ ಅನ್ನು ಮುಚ್ಚಿಹಾಕಿಬಿಡಬೇಕು. ಕಮಿಟ್‌ಮೆಂಟ್ ಇರುವುದನ್ನು ಪೂರೈಸಿ ಬಿಡಿಎ ಅನ್ನು ನಿಲ್ಲಿಸಬೇಕು. ಕೆಲವು ಕಡೆ ಬಡಾವಣೆ ಮಾಡಿ ಸೈಟ್ ಕೊಟ್ಟು ಸವಲತ್ತುಗಳನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಕೊಟ್ಟಿಲ್ಲ. ಬೇರೆ ಕಡೆ ಇನ್ನೇನೋ ಮಾಡಲು ಹೋಗುತ್ತಾರೆ. ಆದ್ದರಿಂದ ಬಿಡಿಎ ಅನ್ನು ಮುಚ್ಚಿ, ಬೇರೆ establishment ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿಃ-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿದ್ದೇನೆ. ನಾನು 'Kickback' ಎನ್ನುವ ಪದ ಬಳಸಿದ ಬಗ್ಗೆ ಮಾತನಾಡಿದರು. ಅದನ್ನು ನಾನು ಹೇಳಿಲ್ಲ, ಪ್ರಜಾವಾಣಿ ದಿನಪತ್ರಿಕೆಯಲ್ಲಿ " ಬಿಡಿಎ ಇತ್ತೀಚೆಗೆ ವಿವಿಧ ಬಡಾವಣೆಗಳಲ್ಲಿನ ನಿವೇಶನ ಹರಾಜು ಪ್ರಕ್ರಿಯೆಯನ್ನು ೬ ಹಂತಗಳಲ್ಲಿ ನಡೆಸಿದೆ. ಇದರಿಂದ ಬಿಡಿಎ ಬೊಕ್ಕಸಕ್ಕೆ ರೂ.೧೯[illegible] ಕೋಟಿ ವರಮಾನ ಬರಲಿದೆ. ಈ ಹಣದ ಮೇಲೆ ಕಣ್ಣಿಟ್ಟು ಈ ಬಾರಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ" ಎಂದು ಪ್ರಜಾವಾಣಿ ಮತ್ತು ಮಾಧ್ಯಮಗಳಲ್ಲಿ ಬಂದಿದೆ.

(ಮುಂದು)

(1077)/14.12.2021/4.10/ಹೆಚ್‌ವಿ:ಆರ್‌ಎನ್

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡುವಂತಹ ಸಂದರ್ಭದಲ್ಲಿ 'ಅಲ್ಲಿ ಪಾರ್ಕಿಂಗ್‌ಗೆ ಜಾಗವಿಲ್ಲ, ಆ ಜಾಗ ತುಂಬಾ ಇಕ್ಕಟ್ಟಾಗಿದೆ. ಮುಂದೆ ಸ್ವಲ್ಪ ಜಾಗವನ್ನು ಬಿಟ್ಟುಕೊಂಡಿದ್ದೇವೆ. ಜನ ನಿಂತುಕೊಳ್ಳುವುದಕ್ಕೂ ಜಾಗವಿಲ್ಲ' ಎನ್ನುವಂತಹ ಮಾತನ್ನು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಬಿ.ಡಿ.ಎ.ಗಳ ಸಬ್-ಡಿವಿಷನ್‌ಗಳಿವೆ. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎನ್ನುವ ವಿಭಾಗಗಳನ್ನು ಮಾಡಲಾಗಿದೆ. ನಂತರ ಅವರು ಮಾತನಾಡುವಾಗ ಉದಾಹರಣೆಯನ್ನು ನೀಡುತ್ತಾ, 'ಮೊದಲು ವಿಧಾನಸೌಧ ಒಂದು ಮಾತ್ರ ಇತ್ತು. ನಂತರ ವಿಕಾಸಸೌಧ ಮಾಡಿದ್ದೇವೆ. ಈಗ ಸುವರ್ಣಸೌಧವನ್ನು ಮಾಡಿದ್ದೇವೆ' ಎಂದು ಹೇಳಿದರು. ಯಾವುದೋ ವಿಶ್ವವಿದ್ಯಾನಿಲಯಕ್ಕೆ ಸರ್ಕಾರ ನೂರಾರು ಎಕರೆ ಜಾಗವನ್ನು ಕೊಡುತ್ತಿದೆ. ಬಿ.ಡಿ.ಎ. ಹೊಸ ಕಟ್ಟಡವನ್ನು ಕಟ್ಟುವುದಕ್ಕೆ 10 ಎಕರೆ ಅಥವಾ 20 ಎಕರೆಯನ್ನು ಮಂಜೂರು ಮಾಡುವುದಕ್ಕೆ ಏನು ತೊಂದರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಶಾಸಕರಿಗೆ ನಿವೇಶನಗಳನ್ನು ನೀಡಬೇಕೆನ್ನುವ ಉದ್ದೇಶದಿಂದ 20-25 ಎಕರೆಯನ್ನು ಮೀಸಲಾಗಿಡಬೇಕೆಂದು ನಾವುಗಳು ಕೇಳಿದ್ದೆವು ಅದೇ ರೀತಿಯಲ್ಲಿ ಹೊಸದಾಗಿ ಬಿ.ಡಿ.ಎ.ಕಟ್ಟಡವನ್ನು ಕಟ್ಟುವುದಕ್ಕೆ 10 ಎಕರೆ ಜಾಗವನ್ನು ಮೀಸಲಿಡಬಹುದಾಗಿದೆ. ಇರುವಂತಹ ಕಟ್ಟಡವನ್ನು ಹೊಡೆದು ಹಾಕಿ ಕಟ್ಟುವುದಕ್ಕೆ ಬದಲಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಬಿ.ಡಿ.ಎ. ಭವನವನ್ನು ಕಟ್ಟಿದರೆ, ಅದು ಉಪಯೋಗಕ್ಕೆ ಬರುತ್ತದೆ. ಬೆಂಗಳೂರಿನ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸುತ್ತಮುತ್ತ ಬಿ.ಡಿ.ಎ.ಯವರು ಕಾಂಪ್ಲೆಕ್ಸ್‌ಗಳನ್ನು ಕಟ್ಟಿದ್ದಾರೆ. ಆ ಕಾಂಪ್ಲೆಕ್ಸ್ ಒಳಗಡೆ ಮೂಗು ಮುಚ್ಚಿಗೊಂಡು ಹೋಗಬೇಕಾಗಿರುವಂತಹ ಪರಿಸ್ಥಿತಿ ಉದ್ಭವವಾಗಿದೆ. ಉದಾಹರಣೆಗೆ ಹೇಳಬೇಕಾದರೆ, ಇಂದಿರಾನಗರದ ಬಿ.ಡಿ.ಎ. ಕಾಂಪ್ಲೆಕ್ಸ್ ಅನ್ನು ಅವರು ನೋಡಬೇಕಾಗಿದೆ. ಅದು ಶಿಥಿಲಗೊಂಡಿದೆ. ಅಲ್ಲಿ ಯಾರೂ ಓಡಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದುವರೆವಿಗೂ ಬೇರೆಬೇರೆ ಮಳಿಗೆಗಳಿಗೆ ಬಾಡಿಗೆ ಕೊಡಲಾಗಿತ್ತು. ಅವರೆಲ್ಲರೂ ಖಾಲಿ ಮಾಡಿಕೊಂಡು ಹೋಗಿದ್ದಾರೆ. ಅದನ್ನು ನೆಲಸಮ ಮಾಡಿ ಬೃಹತ್ ಕಟ್ಟಡವನ್ನು ಕಟ್ಟಬಹುದಾಗಿದೆ. ಸರ್ಕಾರ ಇಂತಹ ಕಡೆಗಳಲ್ಲಿ ಹೊಸ ಕಟ್ಟಡಗಳನ್ನು ಕಟ್ಟಲಿ ನಾವು ಬೇಡವೆಂದು ಹೇಳುವುದಿಲ್ಲ. ಆದರೆ, ಚೆನ್ನಾಗಿರುವ ಕಟ್ಟಡವನ್ನು ಒಡೆದು, ಹೊಸ ಕಟ್ಟಡವನ್ನು ಕಟ್ಟುವುದರಲ್ಲಿ ಯಾವುದೇ ಅರ್ಥವಿಲ್ಲ. ಮಾನ್ಯ ಹರಿಪ್ರಸಾದ್‌ರವರು ಹೇಳಿದಂತೆ, ಅಲ್ಲಿ ಟ್ರಾಫಿಕ್ ಜಾಮ್ ಸಮಸ್ಯೆ ಇದೆ. ನಗರದ ಕೇಂದ್ರ ಸ್ಥಾನದಲ್ಲಿರುವ ಬಿ.ಡಿ.ಎ. ಅನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಬೇಕಾಗಿದೆ. ಮುಖ್ಯವಾಗಿರುವ ಅಧಿಕಾರಿಗಳಿಗೆ ಮಾತ್ರ ಆ ಕಛೇರಿಯಲ್ಲಿ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಡಾಕ್ಯುಮೆಂಟ್‌ಗಳನ್ನು ಶಿಫ್ಟ್ ಮಾಡುವುದಕ್ಕೆ ಜಾಗವಿಲ್ಲ. ಅದಕ್ಕಾಗಿ ಆ ಕಟ್ಟಡವನ್ನು ಒಡೆದು ಹಾಕಿ ಕಟ್ಟುತ್ತೇವೆಂದು ಹೇಳುವುದರಲ್ಲಿ ಅರ್ಥವಿದೆಯೇ?

**ಸಭಾಪತಿಯವರು:-** ಮಾನ್ಯ ಸಚಿವರೇ ಉತ್ತರವನ್ನು ಹೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿರುವಂತೆ ಕೆಲಸ-ಕಾರ್ಯಗಳ ಗಾತ್ರ ಅಥವಾ ಪ್ರಮಾಣ ಹೆಚ್ಚಾದಾಗ, ಕಟ್ಟಡ ವಿಸ್ತರಣೆ ಎನ್ನುವುದರ ಅವಶ್ಯಕತೆ ಇರುತ್ತದೆ. ಈ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕಾರಣವೇನು ಎಂದು ನಾನು ಕೇಳಿದಂತಹ ಸಂದರ್ಭದಲ್ಲಿ anticipate ಮಾಡುತ್ತಿರುವುದರಲ್ಲಿ ರೆಕಾರ್ಡ್‌ಗಳನ್ನು ನಾವು ಹೇಳುತ್ತಾ ಹೋದರೆ ಒಂದು ದೊಡ್ಡ ಪಟ್ಟಿಯೇ ಆಗುತ್ತದೆ. ಪೆಂಡಿಂಗ್ ವರ್ಕ್ಸ್, ರೆಕಾರ್ಡ್‌ಗಳನ್ನು ನಿರ್ವಹಣೆ ಮಾಡುವುದು, ಸಿಬ್ಬಂದಿ ಇವೆಲ್ಲವುಗಳನ್ನು ಪ್ರತಿ ವರ್ಷ ನಾವು ಸೇರಿಸಿಕೊಳ್ಳುತ್ತಿರುವುದರಿಂದ ಅವುಗಳ ಗಾತ್ರ ಹೆಚ್ಚಾಗುತ್ತಿದೆ. ಬಿ.ಡಿ.ಎ. ಕೆಲಸದ ಒತ್ತಡಕ್ಕೆ ಸುಮಾರು 3-4 ಸಾವಿರ ಸಿಬ್ಬಂದಿಗಳ ಅಗತ್ಯವಿದೆ. ಆದರೆ, ನಾವು ಕೇವಲ 363 ಸಿಬ್ಬಂದಿಗಳನ್ನು ಇಟ್ಟುಕೊಂಡು 100 ರಿಂದ 200 ಜನರನ್ನು ಹೊರ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದೇವೆ. ಕೆಲಸವನ್ನು ಸಮರ್ಪಕವಾಗಿ ಮಾಡಬೇಕೆಂದು ನಿರೀಕ್ಷೆ ಮಾಡಿದಷ್ಟು ಮಟ್ಟದಲ್ಲಿ ಕೆಲಸವನ್ನು ಮಾಡುವುದಕ್ಕೆ ಅಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಬಿ.ಡಿ.ಎ.ಯಲ್ಲಿ ಕೆಲಸ ಕಡಿಮೆ ಆಗಿರಬಹುದು ಆದರೆ, ಪೆಂಡಿಂಗ್ ಕೇಸ್‌ಗಳನ್ನು ನೋಡುವವರು, ರೆಕಾರ್ಡ್‌ಗಳನ್ನು ನಿರ್ವಹಣೆ ಮಾಡುವವರನ್ನು ಬಿಟ್ಟು ನಾವು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

---

ಸನ್ಮಾನ್ಯ ಸಭಾಪತಿಯವರೇ, ಕೋರ್ಟ್‌ನಲ್ಲಿ ಪ್ರತಿ ಹಗರಣದಲ್ಲಿಯೂ ಒಂದು ಅಥಾರಿಟಿ ರಚನೆಯಾಗಿ ಒಂದು ಕಮಿಟಿಗಳನ್ನು ಮಾಡುತ್ತಿದ್ದಾರೆ. ಆ ಕಮಿಟಿಗೊಂದು ರೂಂ, ಈ ಕಮಿಟಿಗೊಂದು ರೂಂ ಕೊಡಬೇಕಾಗಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ನಿರ್ದಿಷ್ಟವಾಗಿ ಬಿ.ಡಿ.ಎ.ಗೆಂದು ಒಂದು ಜಾಗ ಇದ್ದ ಕಾರಣ ಅದೇ ಜಾಗವನ್ನು ಉಪಯೋಗಿಸಿಕೊಂಡು ಕಟ್ಟಡ ನಿರ್ಮಾಣ ಮಾಡಬೇಕೆಂದು ನಿರ್ಧಾರ ಮಾಡಿದ್ದಾರೆ. ಕಛೇರಿಗಳನ್ನು ನಗರದ ಹೊರವಲಯಗಳಿಗೆ ತೆಗೆದುಕೊಂಡು ಹೋದರೆ, ಬರುವವರು ಮತ್ತು ಹೋಗುವವರ ಗತಿಯೇನಾಗಬೇಕು? ಮಾತಿನಲ್ಲಿ ಹೇಳಬಹುದು ಅಲ್ಲಿ ಹೋಗಿ ಕಟ್ಟಬಹುದು, ಇಲ್ಲಿ ಹೋಗಿ ಕಟ್ಟಬಹುದು ಎಂದು ಆದರೆ ಪ್ರಾಕ್ಟಿಕಲ್ ಆಗಿ ಅಲ್ಲಿ ಕಟ್ಟುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಬಂದು ಹೋಗುವವರು ಎಷ್ಟು ದೂರ ಹೋಗುವುದಕ್ಕೆ ಸಾಧ್ಯವಾಗುತ್ತದೆ? ಇದನ್ನು ಬೆಂಗಳೂರಿನ ಹೊರ ವಲಯಕ್ಕೆ ತೆಗೆದುಕೊಂಡು ಹೋಗಬೇಕೆಂದರೆ, ಬೆಂಗಳೂರಿನಿಂದ 20-25 ಕಿಲೋ ಮೀಟರ್‌ಗಳಷ್ಟು ದೂರಕ್ಕೆ ಹೋಗಿ ಕಟ್ಟಬೇಕಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಹೊರ ವಲಯಕ್ಕೆ ಹೋಗುವಂತಹ ಅವಶ್ಯಕತೆ ಇಲ್ಲ. ನಗರದ ಒಳಭಾಗದಲ್ಲಿಯೇ ಬಿ.ಡಿ.ಎ. ಸಬ್- ಡಿವಿಷನ್‌ಗಳನ್ನು ಮಾಡಿದ್ದಾರೆ. ಅಲ್ಲಿ ಹಲವಾರು ಕಾಂಪ್ಲೆಕ್ಸ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಅವುಗಳು ಶಿಥಿಲಾವಸ್ಥೆಯಲ್ಲಿವೆ. ಅವುಗಳ ಜಾಗದಲ್ಲಿ ಇದನ್ನು ನಿರ್ಮಾಣ ಮಾಡಬಹುದು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಬಿ.ಡಿ.ಎ. ಯನ್ನು ಯಾವ ರೀತಿ ಭಾಗ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಒಂದು ವೇಳೆ ಭಾಗ ಮಾಡಿದರೆ, ಒಂದು ಕಡೆ ಇರುವಂತಹ ಆಡಳಿತಾತ್ಮಕ ಕಛೇರಿಯನ್ನು ತೆಗೆದುಕೊಂಡು ಹೋಗಿ ನಾಲ್ಕು ಕಡೆ ಮಾಡುವುದಕ್ಕೆ ಸಾಧ್ಯವಿದೆಯೇ? ಸರ್ಕಾರ ಎಲ್ಲಾ ರೀತಿಗಳಲ್ಲಿ ಯೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದಿದೆ. ಸರ್ಕಾರ ಕೆಲವೊಮ್ಮೆ ಪಾಲಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಕೆಲವರಿಗೆ ಸರಿ ಅನಿಸುತ್ತದೆ, ಕೆಲವರಿಗೆ ತಪ್ಪು ಅನಿಸುತ್ತದೆ. Order of the day ಏನಿದೆ, ಅದರ ಪ್ರಕಾರ ತೀರ್ಮಾನ ತೆಗೆದುಕೊಂಡಾಗ, ಆ ಕಟ್ಟಡವನ್ನು ವಿಸ್ತಾರಗೊಳಿಸುವುದು ಅನಿವಾರ್ಯವಾಗಿ , ಇರುವಂತಹ ಕಟ್ಟಡ ಮೇಲೆ ಮತ್ತೊಂದು ಮಹಡಿಯನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಆ ಕಟ್ಟಡವನ್ನು ನೆಲಸಮಗೊಳಿಸಿ ಹೊಸ ಕಟ್ಟಡವನ್ನು ನಿರ್ಮಾಣ ಮಾಡಬೇಕಾಗಿದೆ. ಒಂದು ಸಾವಿರದಿಂದ ಎರಡು ಸಾವಿರ ಸಿಬ್ಬಂದಿಗಳು ಬಂದರು ಸಹ ಕಛೇರಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುವಂತಹ ಕಟ್ಟಡವನ್ನು ನಿರ್ಮಾಣ ಮಾಡಬೇಕೆನ್ನುವ ನಿರ್ಧಾರವನ್ನು ಮಾಡಿದ್ದೇವೆ. ಇದರ ಬಗ್ಗೆ ಬೇರೆ ಯಾವ ರೀತಿಯ ಸಂಶಯಗಳನ್ನು ಮಾನ್ಯ ಸದಸ್ಯರು ಇಟ್ಟುಕೊಳ್ಳಬಾರದು. It's a known place.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿ.ಡಿ.ಎ.ಎಂದು ಹುಡುಕಿಕೊಂಡು ಬರುವಂತಹ ಜಾಗವನ್ನು ಬಿಟ್ಟು ಬೇರೆ ಕಡೆಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲೇ ಕಟ್ಟಡವನ್ನು ಕಟ್ಟಬೇಕೆನ್ನುವ ನಿರ್ಧಾರ ತೆಗೆದುಕೊಂಡಿರುವುದಕ್ಕೆ ಸರ್ಕಾರ ತನ್ನ ಸಮ್ಮತಿಯನ್ನು ಸೂಚಿಸಿದೆ.

**ಆ) ವಿಷಯ: ಅನುದಾನ ಮತ್ತು ಅನುದಾನರಹಿತ ಶಾಲೆಗಳ ಮಾನ್ಯತೆ ನವೀಕರಣ ಮಾಡುವ ಸಂಬಂಧ ಇಲಾಖೆಯು ರೂಪಿಸಿರುವ ನಿಯಮಾವಳಿಗಳ ಕುರಿತು**

-----

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಕಟ್ಟಡ ಸುರಕ್ಷತೆ ಮತ್ತು ಅಗ್ನಿಶಾಮಕ ಸುರಕ್ಷತೆಯ ಬಗೆಗಿನ ನಿಯಮಾವಳಿಗಳಿಂದ ಉಂಟಾಗಿರುವ ಬಹು ದೊಡ್ಡ ಗೊಂದಲದ ಬಗ್ಗೆ ಚರ್ಚೆ ಮಾಡುವುದಕ್ಕೆ ಬಯಸುತ್ತಿದ್ದೇನೆ. ನಮ್ಮ ದೇಶದ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆ ಎಲ್ಲ ರಾಜ್ಯಗಳು ಕಟ್ಟಡಗಳ ಸುರಕ್ಷತೆ ಮತ್ತು ಫೈರ್ ಸೇಫ್ಟಿ ಬಗ್ಗೆ ನಿಯಮಾವಳಿಗಳನ್ನು ರೂಪಿಸಿವೆ. ನಮ್ಮ ರಾಜ್ಯದಲ್ಲಿಯೂ ಕೂಡ ಈ ನಿಯಮಾವಳಿಗಳನ್ನು ಅನುಷ್ಠಾನಕ್ಕೆ ತರುವಂತಹ ವಿಚಾರದಲ್ಲಿ ಆಡಳಿತ ಪಕ್ಷದ ಸದಸ್ಯರಾಗಿರುವ ಎಸ್.ವ್ಹಿ.ಸಂಕನೂರ್‌ರವರ ಅಧ್ಯಕ್ಷತೆಯಲ್ಲಿ ಕಟ್ಟಡ ಹಾಗೂ ಅಗ್ನಿ ಸುರಕ್ಷತಾ ಪ್ರಮಾಣಪತ್ರಕ್ಕೆ ಸಂಬಂಧಿಸಿದ್ದಂತೆ ಪರಿಶೀಲನಾ ಸಮಿತಿಯನ್ನು ನೇಮಕ ಮಾಡಲಾಗಿತ್ತು.

**(ಈ ಹಂತದಲ್ಲಿ ಡಾ: ತೇಜಸ್ವಿನಿಗೌಡ ಅವರು ಸಭಾ ಪೀಠವನ್ನು ಅಲಂಕರಿಸಿದರು)**

ಆ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ನೀಡಿ ಈಗಾಗಲೇ 3-4 ತಿಂಗಳುಗಳು ಕಳೆದಿವೆ. ಆ ವರದಿಯ ಪ್ರಕಾರ ಸರ್ಕಾರ ಇನ್ನೂ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಸರ್ಕಾರ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಈ ರಾಜ್ಯದ ಸಾವಿರಾರು ಶಾಲಾ ಕಾಲೇಜುಗಳ ಮಾನ್ಯತೆಯ ವಿಚಾರದಲ್ಲಿ ಶಿಕ್ಷಣ ಇಲಾಖೆ ಕ್ರಮಕ್ಕೆ ಮುಂದಾಗಿದೆ. ಹಳೆಯ ಅವೈಜ್ಞಾನಿಕ ಸುತ್ತೋಲೆಯನ್ನು ಇಟ್ಟುಕೊಂಡು ಇಡೀ ಖಾಸಗಿ ಶಿಕ್ಷಣ ಸಂಸ್ಥೆಗಳ ವಲಯದ ಮೇಲೆ ಒಂದು ದೊಡ್ಡ ಪ್ರಹಾರವನ್ನು ನಡೆಸಿದ್ದಾರೆ. ಎಲ್ಲಿಯವರೆಗೆ ಅವರ ಪ್ರಹಾರ ಹೋಗಿದೆಯೆಂದರೆ, 'ನೀವು ಮಾನ್ಯತೆಯನ್ನು ನವೀಕರಣ ಮಾಡಿಸಿಕೊಳ್ಳಬೇಕಾದರೆ, ಕಟ್ಟಡ ಸುರಕ್ಷತೆ ಮತ್ತು ಅಗ್ನಿಶಾಮಕ ಸುರಕ್ಷತೆಯ ಬಗ್ಗೆ ಪ್ರಮಾಣ ಪತ್ರವನ್ನು ಒಳಗೊಂಡಂತೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಬರಬೇಕು' ಎನ್ನುವ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಸುಪ್ರೀಂ ಕೋರ್ಟಿನ ಆದೇಶವನ್ನು ಪೂರ್ಣ ಪ್ರಮಾಣದಲ್ಲಿ ಓದದೆ, ಸರಾಸಗಟಾಗಿ ಎಲ್ಲ ಶಿಕ್ಷಣ ಸಂಸ್ಥೆಗಳಿಗೂ ........

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ವೈಸ್ ಛೇರ್ಮನ್:-** ಮಾನ್ಯ ಶ್ರೀಕಂಠೇಗೌಡರೇ, ತಾವು ಸೂಚನೆಯನ್ನು ಮಂಡಿಸಿದ ಮೇಲೆ , ಮಾನ್ಯ ಸಚಿವರು ಉತ್ತರವನ್ನು ಕೊಟ್ಟ ನಂತರ ತಾವು ಚರ್ಚೆಯನ್ನು ಪ್ರಾರಂಭ ಮಾಡಬಹುದು. ನಮ್ಮ ನಿಯಮಾವಳಿಗಳ ಪ್ರಕಾರ ಸಚಿವರು ಉತ್ತರ ಕೊಟ್ಟ ನಂತರ ತಾವು ಚರ್ಚೆಯನ್ನು ಪ್ರಾರಂಭಿಸಬೇಕೆಂದು ಇದೆ. ಒಂದು ಬಾರಿ ಅದನ್ನು ಸ್ಪಷ್ಟಪಡಿಸಿಕೊಳ್ಳಿ. ನಮ್ಮ ಅನುಕೂಲಕ್ಕೆ ತಕ್ಕಂತೆ ನಿಯಮಾವಳಿಗಳನ್ನು ಬದಲಾವಣೆ ಮಾಡಿಕೊಳ್ಳಬಾರದಲ್ಲ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಅದು ಗಮನ ಸೆಳೆಯುವ ಸೂಚನೆಗೆ ಅನ್ವಯವಾಗುತ್ತದೆ. ನಿಯಮ 330ರ ಮೇರೆಗೆ ಪ್ರಸ್ತಾಪಸಿಲ್ಪಡುವ ವಿಚಾರವನ್ನು ನಾವು ವಿಷದವಾಗಿ ಪ್ರಸ್ತಾಪಿಸಬೇಕಾಗುತ್ತದೆ. ನಂತರ ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾರೆ. Rule 330 is differ from Calling Attention. ತಾವು ಹೇಳಿದಂತೆ ಗಮನ ಸೆಳೆಯುವ ಸೂಚನೆಯಡಿಯಲ್ಲಿ ನಾವು ಮಾನ್ಯ ಸಚಿವರ ಗಮನ ಸೆಳೆಯಬೇಕಾಗುತ್ತದೆ. ಆದರೆ, ನಿಯಮ 330ರ ಅಡಿಯಲ್ಲಿ ಪೂರ್ಣ ಪ್ರಮಾಣದ ಚರ್ಚೆಯಾದ ಮೇಲೆ ಅವರು ನಮಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕಾಗುತ್ತದೆ. ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿಯೂ ಸಹ ಚರ್ಚೆ ನಡೆದ ನಂತರ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಾಗುತ್ತದೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಗಮನಸೆಳೆಯುವ ಸೂಚನೆಗಳಲ್ಲಿ ಗಮನ ಸೆಳೆಯಬೇಕು ಸರ್ಕಾರ ಉತ್ತರ ಕೊಟ್ಟ ನಂತರ ಮಾನ್ಯ ಸದಸ್ಯರುಗಳು ಮಾತನಾಡಬೇಕು. ಆದರೆ, ನಿಯಮ 330ರ ಅಡಿಯಲ್ಲಿ ಆ ರೀತಿ ಆಗುವುದಿಲ್ಲ. ಇದರಲ್ಲಿ ಅವರು ಏನು ಉತ್ತರವನ್ನು ನೀಡಿದ್ದಾರೆ. ಈಗ ಖಾಸಗಿ ಶಾಲೆಗಳಿಗೆ ಅನ್ವಯಿಸುತ್ತಿರುವುದನ್ನು ಸರ್ಕಾರಗಳಿಗೂ ಅನ್ವಯಿಸುತ್ತಾರೆಯೇ? ರಾಜ್ಯದಲ್ಲಿ ಖಾಸಗಿ ಮತ್ತು ಅನುದಾನಿತ ಶಾಲೆಗಳನ್ನು ಈ ಸರ್ಕಾರ ಕ್ಲೋಸ್ ಮಾಡುವುದಕ್ಕೆ ಪ್ರಯತ್ನಿಸುತ್ತಿದೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರು ಏನು ಉತ್ತರ ಕೊಡುತ್ತಾರೆನ್ನುವುದನ್ನು ನೋಡೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಾಗೂ ನಾವೆಲ್ಲರೂ ಸೇರಿ ಈ ಸಮಸ್ಯೆಗೆ ಪರಿಹಾರವನ್ನು ಹುಡುಕಬೇಕಾಗಿದೆ. ಇದು ರಾಜಕೀಯ ಮೇಲಾಟದ ವಿಚಾರವಲ್ಲ. ಇದು ಮಕ್ಕಳಿಗೆ ಶಿಕ್ಷಣ ಕೊಡುವಂತಹ ಸಮಸ್ಯೆಗೆ ಸಂಬಂಧಪಟ್ಟ ವಿಚಾರವಾಗಿದೆ. ಆ ಖಾಸಗಿ ಶಿಕ್ಷಣ ಸಂಸ್ಥೆಗಳು ಏಕಾಏಕಿ ಹುಟ್ಟಿಕೊಂಡಿಲ್ಲ. ನೂರಾರು ವರ್ಷಗಳಿಂದ ಅಂದರೆ, ಸ್ವಾತಂತ್ರ್ಯ ನಂತರ ಮತ್ತು ಸ್ವಾತಂತ್ರ್ಯಪೂರ್ವದಲ್ಲಿ ಲಕ್ಷಾಂತರ ಜನರಿಗೆ ಶಿಕ್ಷಣವನ್ನು ನೀಡಿದಂತಹ ಶಿಕ್ಷಣ ಸಂಸ್ಥೆಗಳನ್ನು ಕತ್ತು ಹಿಸುಕುವಂತಹ ವಿಚಾರದ ಬಗ್ಗೆ, ನಾವೆಲ್ಲರೂ ಗಂಭೀರವಾಗಿ ಚರ್ಚೆ ಮಾಡಿ ಪರಿಹಾರ ಹುಡುಕಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1078) 14.12.2021 4.20 ಪಿಕೆ:ವಿಕೆ

**ಶ್ರೀ ಕೆ.ಟಿ.ಶ್ರೀಕಂಠೇಗೌಡ (**ಮುಂದು)

ಮಾನ್ಯ ಸಭಾಪತಿಯವರೇ, ನಾನೇಕೆ ಈ ವಿಚಾರವನ್ನು ಆತಂಕದಿಂದ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಕಮಿಷನರ್ ಕಚೇರಿಯಿಂದ ಎಲ್ಲಾ ಡಿಡಿಪಿಐ ಮತ್ತು ಬಿಇಓ ಆಫೀಸ್‌ಗಳಿಗೆ ಸುತ್ತೋಲೆ ಹೋಗಿದೆ. ನಾವು ಕೊಟ್ಟಿರುವ ಸೂಚನೆ-ಸಲಹೆಗಳು ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪಿನ ಪರಾಮರ್ಶೆ ಸರಿಯಾಗಿ ಆಗಿಲ್ಲ. ಈಗ ಇವರು, ಮಾನ್ಯತೆ ನವೀಕರಣ ತೆಗೆದುಕೊಳ್ಳದೇ ಹೋದರೆ, ಬೋಧಕ ಮತ್ತು ಬೋಧಕೇತರರಿಗೆ ಸಂಬಳವೇ ಇಲ್ಲ ಎಂದು ಹೇಳುತ್ತಿದ್ದಾರೆ. ಸಾವಿರಾರು ಸಂಸ್ಥೆಗಳಿಗೆ ನೀವು ವೇತನ ಕೊಡುವುದಿಲ್ಲ ಎಂದರೆ ಯಾರು ಪಾಠ ಮಾಡುತ್ತಾರೆ? ಇವತ್ತಿನ ಪರಿಸ್ಥಿತಿ ಹೇಗಿದೆ? ಕಳೆದ ಎರಡು ವರ್ಷಗಳಿಂದ ಕೋವಿಡ್‌ನ ಕಾರಣದಿಂದ ಇಡೀ ರಾಜ್ಯದ ಶೈಕ್ಷಣಿಕ ವಲಯ ತತ್ತರಿಸಿ ಹೋಗಿದೆ. ನೂರಾರು ಸಂಸ್ಥೆಗಳು ಮುಚ್ಚಿ ಹೋಗಿವೆ. ಇವತ್ತು ಆ ಸಂಸ್ಥೆಗಳನ್ನು ನಾವು ಉಳಿಸಿಕೊಳ್ಳಬೇಕಾಗಿದೆ. ಖಾಸಗಿ ಸಂಸ್ಥೆ ಎಂದಾಕ್ಷಣ ನಾವು ಅದನ್ನು ಹಳದಿ ಕಣ್ಣಿನಿಂದ ನೋಡಬೇಕಾಗಿಲ್ಲ. ಒಂದು ಕಾಲಕ್ಕೆ ಸರ್ಕಾರ ಮಾಡದೇ ಇರುವಂತಹ ಕೆಲಸವನ್ನು ಖಾಸಗಿ ಸಂಸ್ಥೆಗಳು ಸರ್ಕಾರಕ್ಕೆ ಪೂರಕವಾಗಿ ನಿಂತು, ಕೋಟ್ಯಾಂತರ ಜನರಿಗೆ ಅಕ್ಷರದ ಬೆಳಕನ್ನು ನೀಡುವಂತಹ ಕೆಲಸ ಮಾಡಿಕೊಂಡು ಬಂದಿವೆ. ಎಲ್ಲೋ ಬೆರಳೆಣಿಕೆಯಷ್ಟು ಶಿಕ್ಷಣ ಸಂಸ್ಥೆಗಳ ಬಗ್ಗೆ ಬೇರೆ ಬೇರೆ ಜನರು ಬೇರೆ ಬೇರೆ ಅಭಿಪ್ರಾಯ ಪಡಬಹುದು. ಶೇಕಡ 95 ಸಂಸ್ಥೆಗಳು ಈ ದೇಶದಲ್ಲಿ, ಈ ರಾಜ್ಯದಲ್ಲಿ ಒಂದು ಶೈಕ್ಷಣಿಕ ಕ್ರಾಂತಿಗೆ ಭದ್ರ ಬುನಾದಿ ಹಾಕಿಕೊಂಡು ಬಂದಿವೆ. ಅಂತಹ ಸಂಸ್ಥೆಗಳು ಇವತ್ತೂ ಇವೆ. ಡಾ: ಹೆಚ್.ನರಸಿಂಹಯ್ಯನವರು ಕಟ್ಟಿದಂತಹ ಸಂಸ್ಥೆಗಳೂ ಕೂಡ ರಾಜ್ಯದಲ್ಲಿವೆ. ಪ್ರತಿಷ್ಠಿತ ಸಂಸ್ಥೆಗಳು ಮತ್ತು ಸಾವಿರಾರು, ಕೋಟ್ಯಾಂತರ ಜನರಿಗೆ ಶಿಕ್ಷಣವನ್ನು, ಭವಿಷ್ಯವನ್ನು, ವ್ಯಕ್ತಿತ್ವನ್ನು ಮತ್ತು ಬದುಕನ್ನು ಕೊಟ್ಟ ಸಂಸ್ಥೆಗಳು ಈ ರಾಜ್ಯದಲ್ಲಿವೆ. ಸುಪ್ರೀಮ್ ಕೋರ್ಟ್ ಇದರ ಬಗ್ಗೆ ಏನು ಹೇಳಿದ್ದು, ಅದು ಎಲ್ಲಿಗೆ ಹೋಗಿದೆ? ಇವತ್ತು ನೆರೆಯ ತೆಲಂಗಾಣ ರಾಜ್ಯ ಒಂದು ನಿರ್ಣಯ ತೆಗೆದುಕೊಂಡಿತ್ತು. ಅವರು, ಒಂದೇ ನೆಲಮಾಳಿಗೆ ಇದ್ದರೆ ಯಾವುದೇ ನವೀಕರಣ ಬೇಕಾಗಿಲ್ಲ, ಯಾವ ಸುರಕ್ಷತೆಯೂ ಬೇಕಾಗಿಲ್ಲ ಯಾವ NOC ಯೂ ಬೇಕಾಗಿಲ್ಲ ಎಂದು ಹೇಳಿದೆ. ಯಾವುದೋ ಒಂದು ಸರ್ಕಾರಿ ಶಾಲೆಯಲ್ಲಿ ಭತ್ತದ ಹುಲ್ಲು ಹಾಕಿದ್ದರಿಂದ ಏನು ಒಂದು ಅವಘಡ ನಡೆಯಿತೋ ಆ ಹಿನ್ನಲೆಯಲ್ಲಿ ಈ ರೀತಿಯ ಸುತ್ತೋಲೆ ಬಂತು ಅಷ್ಟೆ. ಆದರೆ ಸರ್ಕಾರ ಖಾಸಗಿ ಶಾಲೆಗಳನ್ನು ಗುರಿ ಮಾಡುತ್ತಿದೆ. ಸರ್ಕಾರಿ ಶಾಲೆಗಳಿಗೆ ಈ ನಿಯಮವಿಲ್ಲ. Charity starts at home ಎಂದು ಹೇಳುತ್ತೇವೆ. ಮೊದಲು ಸರ್ಕಾರದಿಂದ ಆರಂಭವಾಗಬೇಕು ಅಲ್ಲವೇ? ಹಾಗಾಗಿಲ್ಲ. ಖಾಸಗಿ ಶಾಲೆಗಳನ್ನು ಟಾರ್ಗೆಟ್ ಮಾಡಿದಿರಿ. ಒಂದು ಫ್ಲೋರ್ ಇದ್ದರೆ ನೀವು ಏನೂ ಕೇಳುವ ಹಾಗಿಲ್ಲ. ಅಂಥವರನ್ನು ಅವರ ಪಾಡಿಗೆ ಬಿಟ್ಟು ಬಿಡಬೇಕು. ಒಂದು ಫ್ಲೋರ್ ಇರುವವರನ್ನು ನೀವು ಬಿಡುತ್ತಿಲ್ಲ.

---

ಈ ಕುರಿತಂತೆ ತೆಲ್ಲಂಗಾಣದವರು ಒಂದು ಕಾಯಿದೆ ಮಾಡಿದರೆ. ಎತ್ತರ 6 ಮೀಟರ್‌ಗಿಂತ ಒಳಗಿದ್ದರೆ ಮತ್ತು ಅದು 500 ಸ್ಕ್ವೈರ್ ಮೀಟರ್ ಏರಿಯಾ ಇದ್ದರೆ ಯಾವುದೇ ಎನ್‌ಒಸಿ ಬೇಕಾಗಿಲ್ಲ ಎಂದು ಒಂದು ಆದೇಶ ಮಾಡಿದರು. ಈ ಸಮಿತಿಯು 9 ಶಿಫಾರಸ್ಸುಗಳನ್ನು ಮಾಡಿದೆ. 9 ಶಿಫಾರಸ್ಸುಗಳನ್ನು ಏಕೆ ಮಾಡಲಾಗಿದೆ ಎಂದರೆ, ಒಂದು ಶಾಲೆ ಅಥವಾ ಒಂದು ಕಾಲೇಜು ಏನಾದರೂ, ಕಟ್ಟಡ ಮತ್ತು ಅಗ್ನಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾದರೆ ಅದಕ್ಕೆ ರೂ. 4 ರಿಂದ 7 ಲಕ್ಷಗಳನ್ನು ಕೇಳುತ್ತಾರೆ. ದೊಡ್ಡ ಸಂಸ್ಥೆಗಳಾಗಿದ್ದರೆ ರೂ. 10-15-20-25 ಲಕ್ಷಗಳು ಬೇಕಾಗುತ್ತದೆ. ಒಂದು ರೀತಿಯ ದೊಡ್ಡ ದಂಧೆ ಆರಂಭವಾಗಿದೆ. ಎನ್‌ಒಸಿ ತೆಗೆದುಕೊಳ್ಳಲು ಸಂಬಂಧಪಟ್ಟ ಡಿವಿಷನ್ ಆಫೀಸ್‌ಗೆ ಹೋಗಬೇಕು ಎಂದು ನೀವು ಹೇಳುತ್ತೀರಿ. ಈ ರಾಜ್ಯದ 4 ಜಾಗಗಳಲ್ಲಿ ಮಾತ್ರ ಡಿವಿಷನಲ್ ಕೇಂದ್ರಗಳಿವೆ. ನಾವೇನು ಶಿಫಾರಸ್ಸು ಮಾಡಿದ್ದೇವೆಯೋ ಅದನ್ನು ಬಿಟ್ಟುಬಿಡಿ. ಪ್ರತಿ ಜಿಲ್ಲೆಯಲ್ಲಿ ಎನ್‌ಒಸಿ ಕೊಡುವ ಹಾಗೆ ನೋಡಿಕೊಳ್ಳಿ. ಒಂದನೆಯದು, ಒಂದೇ ಫ್ಲೋರ್ ಇದ್ದರೆ ಏನೂ ಕೇಳುವ ಹಾಗಿಲ್ಲ. ಅದು 15 ಮೀಟರ್‌ಗಿಂತ ಮೇಲೆ ಹೋದರೆ ಅಲ್ಲಿ ಪ್ರಶ್ನೆ ಬರುತ್ತದೆ. ಈಗ ಒಂದು ಫ್ಲೋರ್‌ನಲ್ಲಿ 4 ರೂಮ್‌ಗಳಿದ್ದರೂ ಬಿಡುತ್ತಿಲ್ಲ, recognition ಕೊಡುತ್ತಿಲ್ಲ. ಅದೊಂದು ಸಮಸ್ಯೆಯಾಗಿದೆ. ನಾವು, ಕನಿಷ್ಠ 5 ಸಾವಿರ ಲೀಟರ್ ಇದ್ದರೆ ಸಾಕು ಎಂದರೆ, ನಿಮ್ಮವರು 10 ಸಾವಿರ ಲೀಟರ್ ಟ್ಯಾಂಕ್ ಇರಬೇಕು ಎಂದು ಹೇಳುತ್ತಾರೆ. ಕೊರೋನದಿಂದ ತತ್ತರಿಸಿ ಹೋಗಿ ಶಾಲಾ-ಕಾಲೇಜುಗಳನ್ನು ನಡೆಸಲು ಕಠಿಣವಾಗಿರುವಂತಹ ಸಂದರ್ಭದಲ್ಲಿ ರೂ. 4-5-10-15-20 ಲಕ್ಷಗಳನ್ನು additional ಆಗಿ ವ್ಯಯ ಮಾಡುವ ಸ್ಥಿತಿಯಲ್ಲಿ ಯಾವ ಶಾಲೆಗಳೂ ಇಲ್ಲ. ಅದರ ಬದಲಾಗಿ ಸಂಕನೂರ ಸಮಿತಿ 9 ಶಿಫಾರಸ್ಸುಗಳನ್ನು ಮಾಡಿದೆ. ಆ ಶಿಫಾರಸ್ಸುಗಳನ್ನು ಇವರು ಜಾರಿಗೆ ಕೊಟ್ಟರೆ ಬಹಳ ಸುಲಭವಾಗುತ್ತದೆ. ಸಮಸ್ಯೆಗಳು ಪರಿಹಾರ ಆಗುತ್ತವೆ. ಹಾಗಾಗಿ ನನ್ನ ಆಗ್ರಹ ಇಷ್ಟೆ. ಈಗ ಎಲ್ಲಿಯವರೆಗೆ ಪರಿಸ್ಥಿತಿ ಹೋಗಿದೆ ಎಂದರೆ, ಮಾನ್ಯ ಕಾನೂನು ಸಚಿವರು ಕೇಳಬೇಕು. ಕಟ್ಟಡ ಕಟ್ಟಿ 60-70-100 ವರ್ಷಗಳಾಗಿವೆ. ಫಾರಂ ನಂಬರ್-3 ಯಲ್ಲಿ, ಸದರಿ ಕಟ್ಟಡವನ್ನು ಕಟ್ಟಿದವರು ಯಾರು, ಪ್ಲ್ಯಾನ್ ಹಾಕಿ ಕೊಟ್ಟವರು ಯಾರು, ಅದರ ಇಂಜಿನಿಯರ್ ಯಾರು ಅವರ ಮಾಹಿತಿ ಕೊಡಿ ಎಂದು ಕೇಳಿದ್ದಾರೆ. ಈಗ ಅವರು ಯಾರೂ ಬದುಕಿಲ್ಲ. ಕಟ್ಟಡ ಕಟ್ಟಿದವರನ್ನು, ಪ್ಲ್ಯಾನ್ ಮಾಡಿದವರನ್ನು, ಇಂಜಿನಿಯರನ್ನು ನಾವು ಎಲ್ಲಿಂದ ತರಬೇಕು? ಆದ್ದರಿಂದ ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಕೇಳುವುದಿಷ್ಟೆ. ನಮ್ಮ ಸಮಿತಿ ಏನು ಶಿಫಾರಸ್ಸು ಮಾಡಿದೆಯೋ ಅ ವರದಿಯನ್ನು ಯಥಾವತ್ತಾಗಿ ಜಾರಿಗೆ ಕೊಟ್ಟರೆ, ನಿಂತು ಹೋಗಿದ್ದ ಉಸಿರು ಮತ್ತೆ ಪ್ರಾರಂಭವಾದಂತೆ ಆಗುತ್ತದೆ. ತೆಲಂಗಾಣ ರಾಜ್ಯ ಏನು ಒಂದು ಕಾಯಿದೆ ಮಾಡಿದೆ ಆ ಕಾಯಿದೆಯನ್ನು ಈ ಅಧಿವೇಶನದಲ್ಲಿ ತನ್ನಿ. ಒಂದು ರೀತಿಯ ಶೋಷಣೆ ಅಧಿಕಾರಿಗಳಿಂದ ಶಾಲೆ ಮೇಲೆ ಆರಂಭವಾಗಿದೆ. ಅಧಿಕಾರ ವಿಕೇಂದ್ರೀಕರಣ ಆಗಬೇಕು. ಒಂದು ಫ್ಲೋರ್ ಹೊಂದಿರುವವರ ತಂಟೆಗೆ ಯಾವುದೇ ರೀತಿಯ ತಂಟೆಗೆ ಹೋಗಬಾರದು. ಯಥಾವತ್ತು ಮಾನ್ಯತೆ ಮಾಡಬೇಕು. ಮಾನ್ಯತೆ ನವೀಕರಣಕ್ಕೂ ಈ ಅಗ್ನಿ ಸುರಕ್ಷತೆ ಮತ್ತು ಕಟ್ಟಡ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುರಕ್ಷತೆಗೆ ಇರುವ ಸಂಬಂಧ ಏನು? ಮಾತೆತ್ತಿದರೆ ಎಲ್ಲದಕ್ಕೂ ಮಾನ್ಯ ಪಡೆಯಬೇಕು ಎಂದು ಹೇಳುತ್ತಾರೆ. ಸುಪ್ರೀಮ್ ಕೋರ್ಟ್, 30 ದಿನ ಕೂಲಿ ಕೆಲಸ ಮಾಡಿದ ಮೇಲೆ ಕೂಲಿ ಕೊಡಬೇಕು ಎಂದು ಹೇಳುತ್ತದೆ. 30 ದಿವಸ ಪಾಠ ಮಾಡಿದ ಮೇಲೆ ಆತನಿಗೆ ಸಂಬಳ ಕೊಡಬೇಕು. ಮಾನ್ಯತೆ ಪಡೆಯುವುದಕ್ಕೂ, ಶಿಕ್ಷಕನಿಗೆ ಕೊಡುವ ಸಂಬಳಕ್ಕೆ ಅಂಟು ಹಾಕಿದರೆ ಹೇಗೇ? ನೀವು ಸುತ್ತೋಲೆಯನ್ನು ಕೊಟ್ಟು ಅದಕ್ಕೆ 1-2 ವರ್ಷ ಕಾಲಾವಕಾಶ ಕೊಡಿ. ಅದು ಬಿಟ್ಟು, ಮಾನ್ಯತೆ ನವೀಕರಣ ಮಾಡಬೇಕು, ಮಾನ್ಯತೆ ಪಡೆಯದೇ ಇದ್ದರೆ ಸಂಬಳ ಕೊಡುವುದಿಲ್ಲ ಎಂದು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಮಾತೆತ್ತಿದರೆ ಎಲ್ಲದಕ್ಕೂ ಮಾನ್ಯತೆಯನ್ನು ಗಂಟು ಹಾಕುತ್ತಾರೆ. ಅಲ್ಲದೇ ಮಾನ್ಯತೆಗೂ ಸಂಬಳಕ್ಕೂ ಗಂಟು ಹಾಕುತ್ತಾರೆ. ಇದನ್ನು ಬಿಟ್ಟು ಬಿಡಬೇಕು. Fire safety measures and building safety measures ಪ್ರಕ್ರಿಯೆ ಬೇರೆ. ಅದನ್ನು 2-3 ವರ್ಷ ಕಾಲಾವಕಾಶ ಕೊಟ್ಟು ಮಾಡಿಸಿ. ನಮ್ಮ ಸಮಿತಿಯ ರಿಪೋರ್ಟ್ ತೆಗೆದುಕೊಂಡು ಕಂಡೀಷನ್ ಹಾಕಿ ಖಾಸಗಿ, ಅನುದಾನರಹಿತ ಮತ್ತು ಸರ್ಕಾರಿ ಶಾಲೆಗಳಿಗೆ ಸಂಬಂಧಪಟ್ಟಂತೆ ಮಾಡಿಸಿ. ಅದಕ್ಕೆ ಏನು ಬೇಕೋ ಆ ದಾರಿ ಹುಡುಕಿಕೊಳ್ಳಿ. ಆದರೆ ಈಗ, ಮಾನ್ಯತೆ ನವೀಕರಣ ವಿಚಾರದಲ್ಲಿ ಇದನ್ನು ಥಳಕು ಹಾಕಬೇಡಿ. ನೂರಾರು ವರ್ಷಗಳಿಂದ, ಹತ್ತಾರು ವರ್ಷಗಳಿಂದ ಸಂಸ್ಥೆಗಳನ್ನು ನಡೆಸಿಕೊಂಡು ಬಂದಿರುವವರು 5-10 ವರ್ಷಗಳಿಗೆ ಮಾನ್ಯತೆ ಪಡೆದುಕೊಂಡಿರುತ್ತಾರೆ. ಈಗ ಮಾನ್ಯತೆ ನವೀಕರಣ ಮಾಡಲಿಲ್ಲ ಎಂದು ಬಿಇಓ ಸಂಬಳ ಕೊಡುವುದಿಲ್ಲ. ಡಿಡಿ ಸಂಬಳ ಕೊಡುವುದಿಲ್ಲ. ಹೀಗಾದರೆ ಶಾಲಾ-ಕಾಲೇಜುಗಳನ್ನು ಹೇಗೆ ನಡೆಸುವುದಕ್ಕೆ ಆಗುತ್ತದೆ? ಶಿಕ್ಷಕರು ಹೇಗೆ ಜೀವನ ಮಾಡಬೇಕು? ಆದ್ದರಿಂದ ಈ ಸಮಿತಿಯ ವರದಿಯನ್ನು ಸರ್ಕಾರ ಜಾರಿಗೆ ಕೊಡಬೇಕು. ಎರಡನೆದಾಗಿ, ಯಾವುದೇ ಕಾರಣಕ್ಕೂ ಮಾನ್ಯತೆ ನವೀಕರಣ ಮತ್ತು safety measures ಗೂ ಸಂಬಂಧ ಕಲ್ಪಿಸಬೇಡಿ. ಆ ಪ್ರಕ್ರಿಯೆ ಬೇರೆ; ಈ ಪ್ರಕ್ರಿಯೆಯೇ ಬೇರೆ. ಇವತ್ತೇನು ಇಡೀ ರಾಜ್ಯದ ಶಿಕ್ಷಣ ಸಂಸ್ಥೆಗಳು ಇವೆಯೋ ಅವರುಗಳ ಆತಂಕ ತೊಡೆದು ಹಾಕುವಂತಹ ಕೆಲಸವನ್ನು ಮಾಡಬೇಕು. ಈಗ ಅಪರೂಪಕ್ಕೆ ಕ್ಲಾಸ್ ಶುರು ಆಗಿದೆ. ಶಿಕ್ಷಕರು ಮಕ್ಕಳಿಗೆ ಪಾಠ ಮಾಡಬೇಕು ಅಥವಾ ಬಿಇಓ, ಡಿಡಿ ಆಫೀಸ್‌ಗೆ ರೆಕಗ್ನಿಷನ್‌ಗೋಸ್ಕರ ಅಲೆಯಬೇಕೋ? Fire safety ಗೆ ಮೈಸೂರು ಭಾಗದವರು ಮೈಸೂರಿಗೆ ಹೋಗಬೇಕು; ಇದೇ ರೀತಿ divisional level ಗೆ ಹೋಗಬೇಕು. ಇದಕ್ಕೆ ರೂ. 25 ಸಾವಿರ ಫೀ ಎಂದು ಮಾಡಿದ್ದಾರೆ. ಆದರೆ ನಾವು ರೂ. 5-10 ಸಾವಿರ ಫೀ ಎಂದು ಶಿಫಾರಸ್ಸು ಮಾಡಿದ್ದೇವೆ. ರೂರಲ್ ಭಾಗದಲ್ಲಿ ರೂ. 5 ಸಾವಿರ ಮತ್ತು ಸಿಟಿಗಳಲ್ಲಿ ರೂ.10 ಸಾವಿರ ಕಟ್ಟಬೇಕು ಎಂದು ಮಾಡಿದ್ದೇವೆ. ಅಲ್ಲಿ ಲಂಚದ ಕ್ರಮವನ್ನು ನೋಡಬೇಕು? ನೀವು ಏನೂ ಮಾಡುವುದು ಬೇಡ; ರೂ. 2 ಲಕ್ಷ ಕೊಟ್ಟುಬಿಟ್ಟರೆ ಎನ್‌ಓಸಿ ಕೊಟ್ಟು ಬಿಡುತ್ತಾರೆ. ಆ ರೀತಿ ಎನ್‌ಓಸಿ ತಂದಿರುವವರೂ ಇದ್ದಾರೆ. ಸುಮ್ಮನೆ ಬಣ್ಣ ಹೊಡೆದು ಪೈಪನ್ನು ನೇತು ಹಾಕಿರುತ್ತಾರೆ. ಈಗ ಇಂಥದ್ದಕ್ಕೆ ಹೆಚ್ಚಿನ ಅವಕಾಶ ಆಗುತ್ತಿದೆ. ಇದು ದೊಡ್ಡ ಭ್ರಷ್ಟಾಚಾರಕ್ಕೆ ಆದಿಯಾಗಿದೆ. ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳು ಸರಾಗವಾಗಿ ನಡೆಯುತ್ತಿವೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಅವರಿಗೆ ಬಂದಿರುವ ಗಂಡಾಂತರವನ್ನು, ಅತಂಕವನ್ನು ನಿವಾರಣೆ ಮಾಡಬೇಕು. 3-4 ತಿಂಗಳುಗಳಿಂದ ಶಾಲೆಗಳು ಮತ್ತು ಶೈಕ್ಷಣಿಕ ವಲಯಗಳು ಏನು ಆರಂಭವಾಗಿವೆಯೋ ಅವು neat ಆಗಿ, ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಶಿಕ್ಷಣಕ್ಕೆ ಬಂದಿರುವ ಅಡ್ಡಿ, ಗಂಡಾಂತರವನ್ನು ತೊಡೆದು ಹಾಕಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಶ್ರೀಕಂಠೇಗೌಡರು ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ಹೇಳಿದ್ದಾರೆ. ನಾನು ಆ ಅಂಶಗಳನ್ನೇ ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಸದನದ ಸಮಯವನ್ನು ಹಾಳು ಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ಒಂದಂತು ಸತ್ಯ ಇದೆ, ಮಾನ್ಯ ಶಿಕ್ಷಣ ಸಚಿವರು ಇದನ್ನು ತಿಳಿದುಕೊಳ್ಳಬೇಕಾಗುತ್ತದೆ. ಮಾನ್ಯ ಕಾನೂನು ಸಚಿವರು ಇಲ್ಲಿ ಕುಳಿತಿರುವುದು ಬಹಳ ಒಳ್ಳೆಯ ವಿಚಾರವಾಗಿದೆ. ಇದು ಜ್ವಲಂತ ವಿಷಯವಾಗಿದೆ. ನಮ್ಮ ಅಧಿಕಾರಿಗಳು ಗ್ಯಾಲರಿಯಲ್ಲಿ ಕುಳಿತುಕೊಂಡಿದ್ದಾರೆ. ಖಾಸಗಿ ಪ್ರೌಢ ಶಾಲೆಗಳ ನೋಂದಣಿ ಮತ್ತು ಮಾನ್ಯತೆ, ಇದು ಸರ್ಕಾರದಿಂದ, ಕಮಿಷನರ್‌ರವರಿಂದ ಹೊರಡಿಸಿರುವಂತಹ ಆದೇಶವಾಗಿದೆ. ಈ ಆದೇಶ ಏನು ಹೇಳುತ್ತದೆ? ಕರ್ನಾಟಕ ಶಿಕ್ಷಣ ಕಾಯಿದೆ 1983 ನಿಯಮ 30, 31, 33, 36 ಮತ್ತು 38ರ ಅನ್ವಯ ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಪೌಢ ಶಾಲೆಗಳು ತಮ್ಮ ನೋಂದಣಿ ಮತ್ತು ಮಾನ್ಯತೆಯನ್ನು ಕಡ್ಡಾಯವಾಗಿ ನವೀಕರಿಸಿಕೊಳ್ಳಬೇಕು.

(ಮುಂದು)

(1079) 14-12-2021 4.30 DS-VK

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):-**

ಹಾಗೂ ಪ್ರೌಢ ಶಾಲೆಯಲ್ಲಿ ಬೋಧನೆ ಮಾಡುವ ಮಾಧ್ಯಮದ ಅನುಗುಣವಾಗಿ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆಯು ನವೀಕರಣವಾಗಿರಬೇಕು. ೨೦೨೧-೨೨ನೇ ಸಾಲಿನ ಮಾನ್ಯತೆ ನವೀಕರಣವನ್ನು ಸಕ್ಷಮ ಪ್ರಾಧಿಕಾರದಿಂದ ಸಕಾಲದಲ್ಲಿ ಪಡೆಯುವುದು. ಮಾನ್ಯತೆ ಪಡೆಯದ ಹಾಗೂ ಮಾನ್ಯತೆ ನವೀಕರಣ ಆಗದಿರುವ ಶಾಲೆಯ ವಿದ್ಯಾರ್ಥಿಗಳ ಪರೀಕ್ಷಾ ನೋಂದಣಿಗೆ ಅವಕಾಶ ಇರುವುದಿಲ್ಲ. This is very important. ನೋಂದಣಿಯಾಗದಿದ್ದರೆ ನಮ್ಮ ಮಕ್ಕಳು ಶಾಲೆಯಲ್ಲಿ ಏನು ಕಲಿಯುತ್ತಿದ್ದಾರೆ ಅವರಿಗೆ ಯಾವುದೇ ಕಾರಣಕ್ಕೂ ಪರೀಕ್ಷೆ ಬರೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ನಾವು ಮಕ್ಕಳ ಭವಿಷ್ಯದ ಮೇಲೆ ಆಟ ಆಡುತ್ತಿದ್ದೇವೆ. ಇದರ ಜೊತೆಯಲ್ಲಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ, ಸಕ್ಷಮ ಪ್ರಾಧಿಕಾರದಲ್ಲಿ (Executive Engineer, PWD) ಇಂದ ಪಡೆದು ಸಲ್ಲಿಸಿ. ನಂತರ ಅಗ್ನಿ ಸುರಕ್ಷತಾ ಪ್ರಮಾಣ ಪತ್ರ, ಸಮಾಪನಾ ಪತ್ರ, fire safety compliance certificate ಕೊಡಲೇಬೇಕು. ಇವುಗಳನ್ನು ಹೇಗೆ ಕೊಡುವುದು? ಇದರಲ್ಲಿ fire safety ಎಂದರೆ

ಏನು, ಸುಪ್ರೀಂ ಕೋರ್ಟ್ ಆದೇಶ ಕೊಟ್ಟಿರುವುದು ಅನುದಾನ, ಅನುದಾನ ರಹಿತ ಪ್ರೌಢಶಾಲೆ ಮಾತ್ರ ಅನ್ವಯಿಸುತ್ತದೆಯೇ? Supreme Court Order is applicable to all the Institutions, whether it is Government, Aided or Unaided. All the Institutions comes under the Supreme Court Order. ಈ ಆದೇಶದ ಪ್ರಕಾರ ಇದು ಎಲ್ಲಾ ಶಾಲೆಗಳಿಗೂ ಅನ್ವಯವಾಗುತ್ತದೆ. And then what is the precautionary measurements you have taken for the Government Schools. When this Supreme Court Order is applicable to all the schools, you must be the role model for others. ಸರ್ಕಾರಿ ಶಾಲೆ ಈ ರೀತಿ ಅಗ್ನಿ ಸುರಕ್ಷತಾ ಕ್ರಮವನ್ನು ತೆಗೆದುಕೊಂಡಿದೆ, ಕಟ್ಟಡ ಈ ರೀತಿ ಇದೆ ಎಂದು ಮಾಡಿ ತೋರಿಸಿದಳ ಮೇಲೆ ನೀವು ಮಾಡಿ ಎಂದು ನಾವು ಹೇಳುತ್ತೇವೆ. ಇದನ್ನು ಬರೀ ಅನುದಾನಿತ ಶಾಲೆ, ಅನುದಾನ ರಹಿತ ಶಾಲೆಗಳಿಗೆ ಮಾತ್ರ ಏಕೆ ಅನ್ವಯ ಮಾಡುತ್ತಾರೆ. ಅಲ್ಲಿ ಬೇರೆ ಮಕ್ಕಳು ಕಲಿಯುತ್ತಿಲ್ಲವೇ? This discrimination should not be there. ಅಧಿಕಾರಿಗಳು ಈ ಆದೇಶವನ್ನು ಸರ್ಕಾರಿ ಶಾಲೆಗಳಿಗೆ ಏಕೆ ಕೊಟ್ಟಿಲ್ಲ? ಸುಪ್ರೀಂ ಕೋರ್ಟ್ ಆದೇಶ ಸರ್ಕಾರಿ ಶಾಲೆಗಳಿಗೆ ಅನ್ವಯವಾಗುವುದಿಲ್ಲವೇ? ಎಲ್ಲಾ ಕಡೆ ಮಕ್ಕಳು ಕಲಿಯುತ್ತಿದ್ದಾರೆ. ಕಾನೂನು ಸಚಿವರೇ, ಇದು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಈ ಆದೇಶ ಬಂದಿರುವಂಥದ್ದು. ಈ ರೀತಿ ಶಾಲೆಗಳು ಇರಬೇಕೆಂದು ಸರ್ಕಾರಿ ಶಾಲೆಯಲ್ಲಿ ಮಾಡಿ ತೋರಿಸಿ, ಅದೇ ರೀತಿ ಇವರಿಗೂ ಮಾಡಬೇಕೆಂದು ನಾವು ಹೇಳುತ್ತೇವೆ. ಇದರ ಜೊತೆಗೆ ಕಿರುಕುಳ ಸಿಕ್ಕಾಪಟ್ಟೆಯಾಗುತ್ತಿದೆ. ಈ ಕಿರುಕುಳವನ್ನು ತಡೆಯಬೇಕಾಗುತ್ತದೆ. ಮಾನ್ಯ ಸಚಿವರು ನಮ್ಮ ಮೇಲೆ ವಿಶ್ವಾಸ ಇಟ್ಟು ಮಾನ್ಯ ಎಸ್.ವಿ.ಸಂಕನೂರ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿಕೊಟ್ಟಿದ್ದಾರೆ. ನಾವು ಸುಮಾರು ೧೩ ಸಭೆಗಳನ್ನು ಮಾಡಿದ್ದೇವೆ. ಡಿವಿಜನ್‌ಗಳಲೆಲ್ಲಾ ಹೋಗಿ ಸಭೆಯನ್ನು ಮಾಡಿದ್ದೇವೆ. ಆ ಸಮಯದಲ್ಲಿ ಇರತಕ್ಕಂಥ ಎಲ್ಲಾ ಪಂಡಿತರುಗಳನ್ನೆಲ್ಲಾ ನಾವು ಭೇಟಿ ಮಾಡಿ ಅಲ್ಲಲ್ಲಿ ಏನೇನು ನ್ಯೂನತೆಗಳಿವೆ, ಅವುಗಳನ್ನು ಯಾವ ರೀತಿ ಸರಿ ಮಾಡಬಹುದು, ಸರ್ಕಾರಕ್ಕೆ ಯಾವ ರೀತಿಯಲ್ಲಿ ನಾವು ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು, ನಾವು ಯಾರು ಸದಸ್ಯರು TA, DA ತೆಗೆದುಕೊಳ್ಳದೆ ಸರ್ಕಾರಕ್ಕೆ ನಾವು ವರದಿಯನ್ನು ನೀಡಿದ್ದೇವೆ. ಈಗಾಗಲೇ ೧೦ ತಿಂಗಳು ಆಗಿದೆ. ನಮ್ಮ ಶಿಕ್ಷಣ ಸಚಿವರು ನುರಿತವರಿದ್ದಾರೆ. ಏಕೆ ಈ ರೀತಿ ಆಯಿತು ಎಂಬುದು ನನಗೆ ಗೊತ್ತಿಲ್ಲ. ನಮ್ಮ ಮೇಲೆ ವಿಶ್ವಾಸ ಇಟ್ಟು ವರದಿ ಕೊಡುವುದಕ್ಕೆ ನೇಮಕ ಮಾಡಿದ ಮೇಲೆ ನಾವು ಪ್ರಾಮಾಣಿಕವಾಗಿ ವರದಿಯನ್ನು ಕೊಟ್ಟಿದ್ದೇವೆ. ಆ ವರದಿಯನ್ನು ಸರ್ಕಾರ ಒಪ್ಪುತ್ತದೆಯೋ, ಬಿಡುತ್ತದೆಯೋ ಏನಾದರೂ modification ಇದ್ದರೆ ಈ ರೀತಿ modification ಮಾಡಿದ್ದೇವೆಂದು ಹೇಳಿ. But at the same time, we have taken precautionary measurements without affecting the Supreme Court Order. ಇದರ ಬಗ್ಗೆ ನಾವು ಪೂರ್ತಿಯಾಗಿ ಗಮನಹರಿಸಿದ್ದೇವೆ. ಹಾಗಾಗಿ ಇದರ ಬಗ್ಗೆ ಗಮನಹರಿಸಿದಂತಹ ಸಂದರ್ಭದಲ್ಲಿ ಎಲ್ಲವನ್ನು ನಾವು ಕೂಲಂಕಷವಾಗಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-----------------------------------------------------------------------------------------------------------

ನೋಡಿದ್ದೇವೆ. In the interest of the Students and the Institutions ಇದನ್ನು ಖಂಡಿತವಾಗಿಯೂ ಜಾರಿಗೆ ತರಲೇಬೇಕಾಗುತ್ತದೆ. ಜಾರಿಗೆ ತರದಿದ್ದರೆ ಮಕ್ಕಳ ಭವಿಷ್ಯ ಹಾಳಾಗುತ್ತದೆ. ಜೊತೆಗೆ 15 ಮೀಟರ್ ಎಂದು ಹೇಳಿದ್ದಾರೆ, ಅಗ್ನಿ ಸುರಕ್ಷತೆಯ ಬಗ್ಗೆ ಅಧಿಕಾರಿಗಳು ವರದಿಯನ್ನು ಕೊಟ್ಟಿದ್ದಾರೆ. Those buildings which are more than 15 meters… ಅಗ್ನಿ ಸುರಕ್ಷತೆಯ ಬಗ್ಗೆ ಏನಿದೆ ಎಂದರೆ, ಸುತ್ತ ಫೈರ್ ಇಂಜಿನ್ ಹೋಗಬೇಕೆಂದರೆ ಕಟ್ಟಡ ಈ ರೀತಿ ಇಷ್ಟು ಅಗಲ ಇರಬೇಕು, 15 ಮೀಟರ್ ಕಟ್ಟಡ ಇರುವಂಥದ್ದಕ್ಕೆ ಮಾತ್ರ ಅನ್ವಯವಾಗುತ್ತದೆ. ನಮ್ಮಲ್ಲಿ ಯಾವ ಸರ್ಕಾರಿ ಶಾಲೆ 15 ಮೀಟರ್ ಒಳಗೆ ಇದೆ? ಸರ್ಕಾರಿ ಶಾಲೆಯಲ್ಲಿ ಮೊದಲನೆಯ ಮಹಡಿಯೇ ಇಲ್ಲ. ಹಿಂದೆ ಹೆಂಚಿನ ಕಟ್ಟಡ ಇತ್ತು, ಈಗ ಆರ್‌ಸಿಸಿ ಹಾಕಿದ್ದಾರೆ. ಮಾನ್ಯ ಮಾಧುಸ್ವಾಮಿಯವರೇ, ಪ್ರೌಢಶಾಲೆಯಲ್ಲಿ ಮೊದಲನೆ ಮಹಡಿ, ಎರಡನೆ ಮಹಡಿ ಬಿಟ್ಟರೆ ಇನ್ನೊಂದು ಮಹಡಿ ಎಲ್ಲಿದೆ? More than 3 floors ಇದ್ದರೆ ಆಗ 15 ಮೀಟರ್ ಬರುತ್ತದೆ. Most of the building are less than 15 meters and some of the buildings which are in metropolitan cities like ಬೆಂಗಳೂರು ಮತ್ತು ಮೈಸೂರಿನಲ್ಲಿ ನಾಲ್ಕು, ಐದು ಮಹಡಿಗಳು ಇರತಕ್ಕಂಥ ಕಟ್ಟಡಗಳಲ್ಲಿ, ಆ ಕಟ್ಟಡಗಳನ್ನು ಇಟ್ಟುಕೊಂಡು ಸುಪ್ರೀಂ ಕೋರ್ಟ್ ಆದೇಶ ಮಾಡಿರುವಂಥದ್ದು. ಆ ಆದೇಶ ಏಕೆ ಬಂತು ಎಂದರೆ, that school was running in a bamboo hut with a strength of 900 students. ಅಲ್ಲಿ ಹೊರಗೆ ಹೋಗುವುದಕ್ಕೆ ಜಾಗ, ಒಳಗೆ ಬರುವುದಕ್ಕೆ ಜಾಗ ಒಂದೇ ಇತ್ತು. ಎಸ್ಕೇಪ್ ಆಗುವುದಕ್ಕೆ ಆಗಿರಲಿಲ್ಲ. ಅದರ ಜೊತೆಗೆ ಬಿಸಿಯೂಟದ ಅಡುಗೆ ಮನೆ ಕೂಡ it is attached to the school. ಆ ರೀತಿ ಇದ್ದಂತಹ ಸಂದರ್ಭದಲ್ಲಿ ಅಗ್ನಿ ಸುರಕ್ಷತೆಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಸರ್ಕಾರಿ ಶಾಲೆಯಲ್ಲಿ ಬಿಸಿಯೂಟದ ಎಲ್ಲಾ ಅಡುಗೆ ಮನೆ attach ಇಲ್ಲವೇ? ಈಗ ಖಾಸಗಿ ಶಾಲೆಗಳಿಗೆ ಈ ರೀತಿ ಹೇಳುತ್ತಿದ್ದೀರಲ್ಲಾ, very sorry for this. ಆದ್ದರಿಂದ ಸರ್ಕಾರಿ ಶಾಲೆಗಳು ಒಂದೇ, ಸರ್ಕಾರಿ ಶಾಲೆಯಲ್ಲಿ ಕಲಿಯುವಂತಹ ಮಕ್ಕಳು ನಮ್ಮ ಮಕ್ಕಳೇ. ಬೇರೆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು ನಮ್ಮ ಮಕ್ಕಳೇ. ಸರ್ಕಾರ ಮಾಡುವ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಇದರ ಜೊತೆಯಲ್ಲಿ ಈ ವರ್ಷ ನೀವು forthwith ಒಂದು ನಿರ್ಣಯವನ್ನು ತೆಗೆದುಕೊಳ್ಳದಿದ್ದರೆ, ನಮ್ಮ ಅಗ್ನಿ ಸುರಕ್ಷತಾ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಶಾಲೆಗೆ ಬರುತ್ತಿರಲಿಲ್ಲ. ಬೆಳಗ್ಗೆ ಅಗ್ನಿ ಸುರಕ್ಷತಾ ಅಧಿಕಾರಿಗಳು ಬಂದು ಶಾಲೆಯಲ್ಲಿ, ಕಾಲೇಜಿನಲ್ಲಿ ಅಗ್ನಿ ಸುರಕ್ಷತೆ ಇದೆಯೇ ಎಂದು ಕೇಳುತ್ತಾರೆ. ಅವರು ಕೇಳಿದ ಮೇಲೆ ಸರಿಯಾಗಿ ಮಾನ್ಯತೆ ಮಾಡದಿದ್ದರೆ ಅವರ ಮಕ್ಕಳಿಗೆ ಯಾರಿಗಾದರೂ ಸೀಟ್ ಕೊಡಬೇಕು, ಲೋಕೋಪಯೋಗಿ ಇಲಾಖೆಯ ಕಿರಿಯ ಇಂಜಿನಿಯರ್ ಹೀಗೆ ಕೇಳುತ್ತಾರೆ. ಈ ರೀತಿ ಖಾಸಗಿ ಶಾಲೆಗಳಲ್ಲಿ ಮಾನಸಿಕವಾಗಿ ಹಿಂಸೆ ಆಗುತ್ತಿದೆ. ಜೊತೆಗೆ ಈ ರೀತಿಯ ಹಿಂಸೆ ಹೋಗಬೇಕು. ನಮ್ಮ ಮಕ್ಕಳು ಮುಂದಿನ ತಿಂಗಳು ಪರೀಕ್ಷೆ ಬರೆಯಬೇಕು. ಮುಂದಿನ ತಿಂಗಳು ಪರೀಕ್ಷೆ ಬರೆಯಬೇಕಾದರೆ ಸರ್ಕಾರದ ಆದೇಶ ಇದೆ, ಆ ಆದೇಶವನ್ನು ಪಾಲನೆ ಮಾಡದಿದ್ದರೆ ಯಾವ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಕ್ಕೂ ಇವರಿಗೆ ಮಾನ್ಯತೆ ಕೊಡುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಮೇಲಿಂದ ಮೇಲೆ ಇಲ್ಲಿಂದ ಕಮೀಷನರ್‌ರವರಿಗೆ ಬರೆಯುತ್ತಾರೆ, ಅಲ್ಲಿ ಡಿಡಿಪಿಐ ಬಂದು ಬಿಇಓ ಗೆ ಗುದ್ದುತ್ತಾರೆ. ಬಿಇಓ ಬಂದು ಶಾಲೆಗೆ ಗುದ್ದುತ್ತಾರೆ. ದಯಮಾಡಿ ಇದಕ್ಕೆ ಕಡಿವಾಣ ಹಾಕಲೇಬೇಕು. ಮಾನ್ಯ ಮಂತ್ರಿಗಳಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಇದು burning issue ಇದೆ. ಇದಕ್ಕೊಂದು ಏನಾದರೂ ನಿರ್ಣಯವನ್ನು ತೆಗೆದುಕೊಳ್ಳಿ. ನಿರ್ಣಯವನ್ನು ತೆಗೆದುಕೊಂಡು ಈ ವರ್ಷಕ್ಕೆ ಮಾನ್ಯತೆ ಕೊಟ್ಟು ಪರೀಕ್ಷೆ ಬರೆಯುವುದಕ್ಕೆ ಅವಕಾಶ ಮಾಡಿಕೊಡಿ. ಅದರ ಜೊತೆಗೆ ನಾವು ಕೊಟ್ಟಿರುವಂತಹ ವರದಿ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಾನೂನು ಸಚಿವರ ಜೊತೆಯಲ್ಲಿ ಚರ್ಚೆ ಮಾಡಿ forthwith ಇದಕ್ಕೊಂದು ರೂಪುರೇಷೆಗಳನ್ನು ಮಾಡಿ. ನಾವು ಸರಿಯಾಗಿ ಮಾಡಿದ್ದೇವೆಂದು ನಮಗನಿಸುತ್ತಿದೆ. ಕೊಟ್ಟಿರುವ ವರದಿ ಸರಿಯಾಗಿಲ್ಲವೆಂದರೆ ಸ್ವಲ್ಪ modification ಮಾಡಿ. ಯಾವುದೇ ರೀತಿಯಲ್ಲೂ ಸುಪ್ರೀಂ ಕೋರ್ಟ್ ಆದೇಶಕ್ಕೆ ವ್ಯತಿರಿಕ್ತವಾಗದಿರುವ ರೀತಿಯಲ್ಲಿ ವರದಿಯನ್ನು ಕೊಟ್ಟಿದ್ದೇವೆ. ನಮ್ಮ ಮೇಲೆ ವಿಶ್ವಾಸವಿಟ್ಟು ಸಮಿತಿಯನ್ನು ರಚನೆ ಮಾಡಿದ್ದಕ್ಕೆ ನಾವೆಲ್ಲಾ ಸೇರಿ ವರದಿಯನ್ನು ಕೊಟ್ಟಿದ್ದೇವೆ. ದಯಮಾಡಿ ಇದನ್ನು ಕ್ಲಿಯರ್ ಮಾಡಿಕೊಡಬೇಕೆಂದು ನಾನು ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅನುದಾನಿತ, ಅನುದಾನ ರಹಿತ ಶಾಲೆಗಳ ನವೀಕರಣಕ್ಕೆ ಸಂಬಂಧಪಟ್ಟಂತೆ ಗೆಳೆಯರು ಈಗಾಗಲೇ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಇವತ್ತು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ರಾಜ್ಯ ಸರ್ಕಾರ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪರಿಗಣಿಸಿ ಕೆಲವು ನಿಯಮಗಳನ್ನು ರೂಪಿಸಿ ಅದನ್ನು ಜಾರಿಗೆ ತರಬೇಕೆಂದು ಹೊರಟಿದೆ. ಮಕ್ಕಳ ಸುರಕ್ಷತೆ ಬಗ್ಗೆ ನಮಗೂ ಕೂಡ ಅಷ್ಟೇ ಕಳಕಳಿ ಇದೆ. ಆದರೆ ಈ ಸುರಕ್ಷತೆ ಎನ್ನುವ ಹೆಸರಿನಲ್ಲಿ ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಅದರಲ್ಲೂ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುವಂತಹ ರೀತಿಯಲ್ಲಿ ನಿಯಮಗಳನ್ನು ಸರ್ಕಾರ ರೂಪಿಸುತ್ತಿದೆ. ಇದನ್ನು ನಾನು ಮೊದಲನೆಯದಾಗಿ ಖಂಡಿಸುತ್ತೇನೆ. ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಜಾರಿಗೆ ತರುವಾಗ ನಮ್ಮ ರಾಜ್ಯದಲ್ಲಿರುವಂತಹ ಪರಿಸ್ಥಿತಿಯನ್ನು ಅವಲೋಕನ ಮಾಡಿಕೊಂಡು ನ್ಯಾಯಾಲಯದ ಆದೇಶವನ್ನು ಗೌರವಿಸಿ ನಮ್ಮ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಯಾವ ರೀತಿ ಇದನ್ನು ಜಾರಿಗೆ ತರಬೇಕೆನ್ನುವುದರ ಬಗ್ಗೆ ಸರ್ಕಾರದಲ್ಲಿ ಚಿಂತನೆ ನಡೆಯಲಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ. ಇವತ್ತು ಸಂವಿಧಾನದಲ್ಲಿ ೧೪ನೇ ವಯಸ್ಸಿನವರೆಗೂ ಶಿಕ್ಷಣ ಕೊಡುವಂಥದ್ದು ಎಲ್ಲಾ ಸರ್ಕಾರಗಳ ಆದ್ಯ ಕರ್ತವ್ಯ ಎಂದು ಇದ್ದರೂ ಕೂಡ ಕರ್ನಾಟಕ ರಾಜ್ಯದಲ್ಲೇ ಅಲ್ಲ, ಭಾರತ ದೇಶದಲ್ಲೇ ಶೇಕಡ ೫೦ ಕ್ಕಿಂತ ಹೆಚ್ಚು ಈ ಶಿಕ್ಷಣವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಕೊಡುತ್ತಿವೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

1080/14-12-2021/bkp-bns

## ಶ್ರೀ ಮರಿತಿಬ್ಬೇಗೌಡ( ಮುಂದು)

ಸರ್ಕಾರದಿಂದ ಎಲ್ಲಾ ಮಕ್ಕಳಿಗೆ ಶಿಕ್ಷಣ ಕೊಡಲಿಕ್ಕೆ ಆಗುವುದಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ ಸ್ವಾತಂತ್ರ್ಯ ಪೂರ್ವದಲ್ಲಿಯೂ ಕೂಡ ಬಹಳ ಪ್ರಮುಖವಾಗಿ ಇದೆ. ಸರ್ಕಾರದಿಂದ ಸಾಧ್ಯವಿಲ್ಲದ ಕಾರಣ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸಲಿಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟುಕೊಂಡು ಬಂದಿದೆ. ಖಾಸಗಿ ಶಿಕ್ಷಣ ಸಂಸ್ಥೆಯವರು ಮಾನ್ಯತೆಯನ್ನು ಪಡೆಯಬೇಕೆನ್ನುವುದರ ಬಗ್ಗೆ ಸುಮಾರು 61 ದಾಖಲೆಗಳನ್ನು ಅವರು ಪ್ರತಿ ವರ್ಷ ನೀಡಬೇಕು. ಆದರೆ ಸರ್ಕಾರ ನಡೆಸಲಿಕ್ಕೆ ಯಾವುದೇ 61 ದಾಖಲೆಗಳು ಬೇಕಾಗಿಲ್ಲ. ನಾವು ಸರ್ಕಾರವೇ ನಡೆಸುತ್ತಿದ್ದೇವೆ ಎಲ್ಲವೂ ಸರಿಯಾಗಿದೆ ಎನ್ನುವುದಾಗಿದೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ಸಚಿವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಕಟ್ಟಡ ಸುರಕ್ಷತೆ ಬಗ್ಗೆ, ಸರ್ಕಾರಿ ಶಾಲೆಗಳು ಇನ್ನೂ ಸಹ ಹೆಂಚಿನ ಮನೆಯಲ್ಲಿ ನಡೆಯುತ್ತಿವೆ ಮತ್ತು ಈ ಕಟ್ಟಡಗಳು ಸೋರುವಿಕೆ ಆಗುತ್ತಿರುವುದು ಶೇಕಡ 50ರಷ್ಟು ಇದೆ. ಈ ರೀತಿಯ 50% ಶಾಲೆಗಳನ್ನು ನಾನು ಈ ರಾಜ್ಯದಲ್ಲಿ ತೋರಿಸುತ್ತೇನೆ. ಹೆಂಚುಗಳು ಕಳಚಿಕೊಂಡು ಬೀಳುತ್ತಿವೆ. ಆ ಕಟ್ಟಡದಲ್ಲಿ ಕುಳಿತುಕೊಳ್ಳುವುದಕ್ಕೆ ಭಯ ಪಡುತ್ತಿರುವುದು, ಮೇಲುಗಡೆ ಛಾವಣಿ ಸೋರುತ್ತಿರುವುದು ನಮ್ಮ ಸರ್ಕಾರಿ ಶಾಲೆಗಳ ಕಟ್ಟಡಗಳಲ್ಲಿ ಕಂಡು ಬರುತ್ತಿದೆ. ಆದೇಶ ಮತ್ತು ನಿಯಮ ಮಾಡುವಾಗ ನಮ್ಮ ಇಲಾಖಾಧಿಕಾರಿಗಳು ಗಮನ ಕೊಟ್ಟಿಲ್ಲ. ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಯವರು ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಸೌಲಭ್ಯಗಳನ್ನು ಸರ್ಕಾರಿ ಶಾಲೆಗಳು ಕೊಡುತ್ತಿಲ್ಲ. ಆದಕ್ಕೋಸ್ಕರ ಇವತ್ತು ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು ಸೇರಿಸುತ್ತಿದ್ದಾರೆ. ಬಿಲ್ಡಿಂಗ್ ಸುರಕ್ಷತೆ ಇರಬಹುದು, ಕಲಿಕೆ ಇರಬಹುದು, ಇದೆಲ್ಲವೂ ಸಹ ಖಾಸಗಿ ಶಿಕ್ಷಣ ಸಂಸ್ಥೆಗಳು ಇಂದು ಕೂಡ ನಮ್ಮ ರಾಜ್ಯದಲ್ಲಿ ಉತ್ತಮವಾದ ಶಿಕ್ಷಣ ವ್ಯವಸ್ಥೆಯನ್ನು ರೂಢಿಸಲಿಕ್ಕೆ ಕಾರಣೀಭೂತರಾಗಿದ್ದಾರೆ. ಆದರೆ ಇತ್ತೀಚೆಗೆ ಸುಪ್ರೀಂ ಕೋರ್ಟ್ ಆದೇಶ ಎಂದು ಹೇಳಿ ಕಟ್ಟಡ ಸುರಕ್ಷತೆ ಬಗ್ಗೆ ಹೇಳುತ್ತಿದ್ದಾರೆ ಇದುವರೆವಿಗೂ ಕೂಡ ಈ ಕಟ್ಟಡ ಸುರಕ್ಷತೆ ಬಗ್ಗೆ, ನವೀಕರಣದ ಬಗ್ಗೆ ಎಲ್ಲಿಯೂ ಇರಲಿಲ್ಲ. ಈಗ ಆನ್‌ಲೈನ್ ಎಂದು ಮಾಡಿದ್ದಾರೆ. ಆನ್‌ಲೈನ್ ಮಾಡಿರುವುದನ್ನು ನಾವೆಲ್ಲರೂ ಕೂಡ ಸ್ವಾಗತಿಸುತ್ತೇವೆ. ಶಿಕ್ಷಣ ಇಲಾಖೆಯಲ್ಲಿ ಈ ಮಾನ್ಯತೆ ನವೀಕರಣದ ಬಗ್ಗೆ ಆನ್‌ಲೈನ್ ವ್ಯವಸ್ಥೆ ತಂದಿದ್ದು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಈ ಮೂಲಕ ಒಂದು ವರ್ಗದ ಶೋಷಣೆಯನ್ನು ತಪ್ಪಿಸುವಂತಹ ಕೆಲಸವನ್ನು ಸರ್ಕಾರ ಮಾಡಿದೆ. ಆದರೆ, ಕಟ್ಟಡ ಸುರಕ್ಷತೆ ಬಗ್ಗೆ ಲೋಕೋಪಯೋಗಿ ಇಲಾಖೆ ಎಂಜಿನೀಯರ್‌ಗಳ ಪೈಕಿ ಯಾರನ್ನೇ ಮಾತನಾಡಿಸಿ, ಇವತ್ತು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಸಗಿ ಶಿಕ್ಷಣ ಸಂಸ್ಥೆಯವರು ಸರ್ಕಾರಿ ಶಾಲೆಗಳಿಗಿಂತ ಉತ್ತಮವಾದ ಕಟ್ಟಡಗಳನ್ನು ಕಟ್ಟಿರುವಂತಹದ್ದನ್ನು ನಾನು ಈ ಸರ್ಕಾರಕ್ಕೆ ಎಲ್ಲಿ ಬೇಕಾದರೂ ತೋರಿಸಬಲ್ಲೆ. ಅಂತಹ ಸಂಸ್ಥೆಗೂ ಕೂಡ ಇವತ್ತು ಕಟ್ಟಡ ಸುರಕ್ಷತೆ ಬಗ್ಗೆ ಲಂಚ ಕೊಡದೇ ಯಾರು ಸಹ ಕೊಡುವುದಿಲ್ಲ. ಇದು ಒಂದು ದೊಡ್ಡ ಶೋಷಣೆ. ಇದರ ಜೊತೆಗೆ ಫೈರ್ ಸೇಫ್ಟಿ ಬಗ್ಗೆ ಸುಪ್ರೀಂ ಕೋರ್ಟ್ ಹೇಳಿದೆ. ಮಕ್ಕಳ ಸುರಕ್ಷತೆ ಬಗ್ಗೆ ಹೇಳಿದೆ. ಅದನ್ನು ಮಾಡಬೇಕು. ನಾವು ಇದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಸುಮಾರು 40 -50 ವರ್ಷಗಳು ಕಳೆದು ಅವುಗಳು ಶತಮಾನೋತ್ಸವ ಆಚರಣೆ ಮಾಡಿಕೊಳ್ಳುತ್ತಿರುವ ಖಾಸಗಿ ಸಂಸ್ಥೆಗಳ ಕಟ್ಟಡ ಸುರಕ್ಷತೆ ಬಗ್ಗೆ ನಾವು ಇವತ್ತು ನೋಡುತ್ತಿದ್ದೇವೆ. ಇವತ್ತು ಈ ಸುಪ್ರೀಂ ಕೋರ್ಟ್‌ನ ಆದೇಶವನ್ನು ದಯಮಾಡಿ ಮುಂದೆ ಪ್ರಾರಂಭ ಮಾಡತಕ್ಕಂತಹ ಸಂಸ್ಥೆಗಳ ಶಾಲೆಗಳಿಗೆ ಅನ್ವಯವಾಗುವಂತೆ ಮತ್ತು ಈಗಾಗಲೇ ಚಾಲ್ತಿಯಲ್ಲಿ ಇರತಕ್ಕಂತಹ ಶಾಲೆಗಳಿಗೆ ಎಲ್ಲಿ, ಯಾವುದು ಕಟ್ಟಡ ಭದ್ರತೆ ಇಲ್ಲ, ಎನ್ನುವುದರ ಬಗ್ಗೆ ತಾಂತ್ರಿಕ ವರದಿಯನ್ನು ತರಿಸಿಕೊಂಡು ಅವುಗಳನ್ನು ಸುರಕ್ಷಿತವಾಗಿ ಮಾಡುವುದಕ್ಕೆ ಯೋಜನೆಯನ್ನು ರೂಪಿಸಿಕೊಳ್ಳುವುದಕ್ಕೆ ಬದಲಾಗಿ ಇವತ್ತು ಶತಮಾನೋತ್ಸವ ಆಚರಣೆ ಮಾಡಿಕೊಳ್ಳುವಂತಹ ಸಂಸ್ಥೆಗಳಿಗೆ ಅಂದರೆ, ಅವುಗಳು ಮಠಾಧೀಶರು ಕಟ್ಟಿರುವಂತಹ ಶಾಲೆ ಮತ್ತು ಕ್ರಿಶ್ಚಿಯನ್ಸ್ ಸಂಸ್ಥೆಗಳು ಕಟ್ಟಿರುವಂತಹ ಸಂಸ್ಥೆಗಳು ಇರಬಹುದು ಖಾಸಗಿ ಸಂಸ್ಥೆಗಳು ಕಟ್ಟಿರುವಂತಹ ಸಂಸ್ಥೆಗಳು ಇರಬಹುದು, ಇವುಗಳು ಎಷ್ಟೊಂದು ಚೆನ್ನಾಗಿವೆ ಎಂದರೆ , ಅವುಗಳನ್ನು ಯಾವ ರೀತಿಯಲ್ಲಿ ನಿರ್ವಹಣೆ ಮಾಡುತ್ತಾರೆಂದರೆ ಅವುಗಳು ಉನ್ನತ ಮಟ್ಟದಲ್ಲಿವೆ. ಆದರೆ, ಇವತ್ತು ಕನ್ನಡ ಮಾಧ್ಯಮ ಶಾಲೆಗಳು ಏನಿವೆ, ಗ್ರಾಮೀಣ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿ, ಇವುಗಳ ಅಸ್ತಿತ್ವವೇ ಉಳಿಯುತ್ತಿಲ್ಲ. ಇವುಗಳನ್ನು ನಾವು budgeted ಶಾಲೆಗಳು ಎಂದು ಹೇಳುತ್ತೇವೆ. ಇಲ್ಲಿ ಡೋನೇಷನ್ ಸಹ ಪಡೆಯಲಿಕ್ಕೆ ಆಗುವುದಿಲ್ಲ, ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಇತ್ತೀಚಿನ ದಿನಗಳಲ್ಲಿ ಅನುದಾನಿತ ಮತ್ತು ಅನುದಾನ ರಹಿತ ಸಂಸ್ಥೆಗಳಲ್ಲಿ ಮಕ್ಕಳಿಗೆ ಆಡಳಿತ ಮಂಡಳಿಯವರು ನೆರವು ಕೊಡುತ್ತಿಲ್ಲ. ಇವತ್ತು ಅಲ್ಲಿ ಕಲಿಸುವಂತಹ ಶಿಕ್ಷಕರುಗಳೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಅವರಿಗೆ ಬರತಕ್ಕಂತಹ ವೇತನದಲ್ಲಿ ಸ್ವಲ್ಪ ಭಾಗವನ್ನು ಕೊಟ್ಟು ಆ ವಿದ್ಯಾರ್ಥಿಗಳಿಗೆ ಉಡುಪುಗಳನ್ನು, ಸೈಕಲ್‌ಗಳನ್ನು, ಪುಸ್ತಕಗಳನ್ನು, ನೋಟ್ ಪುಸ್ತಕಗಳನ್ನು ಕೊಡುವಂತಹದ್ದು ವ್ಯಾಪಕವಾಗಿ ಇದೆ. ಇಲ್ಲವೆಂದರೆ, ಆ ಶಾಲೆಗಳು ಮುಚ್ಚುವಂತಹ ಪರಿಸ್ಥಿತಿಯಲ್ಲಿವೆ. ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಕ್ಕಳ ಕೊರತೆಯಾಗುತ್ತಿದೆ. ಅದಕ್ಕೋಸ್ಕರ ಇಲ್ಲಿ ಆಡಳಿತ ಮಂಡಳಿಗಳು ಸಹ ನೆರವಿಗೆ ಬರುತ್ತಿಲ್ಲ, ಅಲ್ಲಿ ಕೆಲಸ ಮಾಡುವಂತಹ ಶಿಕ್ಷಕರೆ, ಅವರ ಉದ್ಯೋಗ ಉಳಿಸಿಕೊಳ್ಳುವುದಕ್ಕೆ ಇವತ್ತು ಸಾಲ ಮಾಡಿಯಾದರೂ ಕೂಡ ಆ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಬೇಕು, ಅವರಿಗೆ ಸೈಕಲ್ ಕೊಡಬೇಕು, ಉಡುಪು ಮತ್ತು ಪುಸ್ತಕಗಳನ್ನು ಕೊಡಬೇಕು. ಇಂತಹ ವ್ಯವಸ್ಥೆ ಇವತ್ತು ನಾಡಿನಲ್ಲಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಂತಹದ್ದನ್ನು ಇಲಾಖಾಧಿಕಾರಿಗಳು ಗಮನಿಸುತ್ತಿಲ್ಲ. ಇದನ್ನು ಗಮನಿಸಿದರೆ ಇಂತಹ ಕಾರಾಳವಾದ ನಿಯಮಗಳನ್ನು ರೂಪಿಸುತ್ತಿರಲಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರವರೆ, ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ. ಸರ್ಕಾರದಲ್ಲಿ ಅದು ಯಾವ ರೀತಿಯಲ್ಲಿ ದುರಪಯೋಗವಾಗುತ್ತಿದೆ ಮತ್ತು ಅದಕ್ಕೆ ಪರಿಹಾರದ ಸಲಹೆಯನ್ನು ಕೊಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇದು ಎಂತಹ ಬರ್ನಿಂಗ್ ಸಮಸ್ಯೆ ಎಂದರೆ ಇದನ್ನು ಹೇಳಲಿಕ್ಕೆ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

**ವೈಸ್ ಛೇರ್ಮನ್:-** ಇಲ್ಲ ಮಾತನಾಡಿ, ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಇದಕ್ಕೆ ಸಲಹೆಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇಂತಹ ಒಂದು ಪರಿಸ್ಥಿತಿ ಇರುವಾಗ ಇದರ ಜೊತೆಗೆ ಇನ್ನೊಂದು ಭೂ ಪರಿವರ್ತನೆಯಾಗಬೇಕೆಂದು ಹೇಳುತ್ತಾರೆ. ತಲತಲಾಂತರದಿಂದ ನಡೆಸಿಕೊಂಡು ಬಂದಿರುವ ಶಾಲೆಗಳು, ಖಾಸಗಿ ಕಟ್ಟಡಗಳು ಲೀಸ್ ಇರಲಿ, ಸ್ವಂತದ್ದು ಇರಲಿ, ಮತ್ತೊಂದು ಇರಲಿ, ಭೂ ಪರಿವರ್ತನೆ ಮಾಡುವುದು ಕಡ್ಡಾಯ ಎಂ ದು ಹೇಳಿ ಈಗ ಇನ್ನೊಂದು ಆದೇಶವನ್ನು ಹೊರಡಿಸಿದ್ದಾರೆ. ಈ ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ 98% ಶಾಲೆಗಳು ಭೂಪರಿವರ್ತನೆ ಆಗಿರುವುದಿಲ್ಲ. ಈಗ ಭೂಪರಿವರ್ತನೆ ಆಗಿಲ್ಲವೆಂದರೆ ಮಾನ್ಯತೆಯನ್ನು ನವೀಕರಣ ಮಾಡುವುದಿಲ್ಲವೆಂದು ನಿಮ್ಮ ಇಲಾಖೆಯ ಆದೇಶಗಳು ಹೇಳುತ್ತಿವೆ. ಹಾಗಾದರೆ, ನೀವು ಈ ಎಲ್ಲಾ ಶಾಲೆಗಳನ್ನು ಬಂದ್ ಮಾಡುತ್ತೀರಾ? ಒಂದು ಶಾಲೆಗೆ ಫೈರ್ ಸೇಫ್ಟಿಯನ್ನು ಅಳವಡಿಸಬೇಕೆಂದರೆ ಕನಿಷ್ಟ 10 ಲಕ್ಷ ರೂ.ಗಳಿಂದ 25 ಲಕ್ಷಗಳವರೆಗೆ ಆಗುತ್ತದೆ. ಅದು ಕಟ್ಟಡದ ಅಂದಾಜಿನ ಮೇಲೆ ಆಗುತ್ತದೆ. ಅದನ್ನು ನೀವು ಒಂದು ವರ್ಷದೊಳಗಡೆ ಅಳವಡಿಸಬೇಕೆಂದರೆ ಇದನ್ನು ಮಾಡಲಿಕ್ಕೆ ಸಾಧ್ಯವಿದೆಯೇ? ಕಟ್ಟಡದ ಸುರಕ್ಷತೆಯ ಬಗ್ಗೆ ಈಗಾಗಲೇ ಶ್ರೀಯುತ ಭೋಜೇಗೌಡರು ಹೇಳಿದ ಹಾಗೆ ಈ ಕೋರ್ಟ್ ಆದೇಶ ಸರ್ಕಾರಿ ಶಾಲೆಗಳಿಗೆ ಬೇಡವೇ? ಹಾಗಾದರೆ, ಸರ್ಕಾರಿ ಶಾಲೆಗಳಲ್ಲಿರುವ ಮಕ್ಕಳೆಲ್ಲರೂ ಸುರಕ್ಷಿತವಾಗಿದ್ದಾರೆಯೇ ಸ್ವಾಮಿ. ಹಾಗಾದರೆ, ಸರ್ಕಾರಿ ಶಾಲೆಗಳನ್ನು ನೋಡೋಣ. ಬಹಳಷ್ಟು ಶಾಲೆಗಳು ಸೋರುತ್ತಿರುವುದು ಮತ್ತು ಮಳೆ ಬರುತ್ತಿರುವ ಸಂದರ್ಭದಲ್ಲಿ ಶಾಲೆಗಳನ್ನೇ ಬಂದ್ ಮಾಡಿರುವುದನ್ನು ಬಿಲ್ಡಿಂಗ್ ಸುರಕ್ಷಿತ ಇಲ್ಲದೇ ಮಾಡಿದ್ದಾರೆ. ಹಾಗಾದರೆ, ಸರ್ಕಾರಿ ಶಾಲೆಗಳಿಗೆ ಇದನ್ನು ಮಾಡಲಿಕ್ಕೆ ಒಂದೇ ವರ್ಷದಲ್ಲಿ ಸರ್ಕಾರಿ ಶಾಲೆಗಳನ್ನು ನಾವು ಸುರಕ್ಷತೆ ಮಾಡುವುದಕ್ಕೋಸ್ಕರ 10 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ. ನಿಮಗೆ ನಾವು ಸಹಕಾರ ಕೊಡುತ್ತೇವೆ. ಮಕ್ಕಳ ಹಿತದೃಷ್ಟಿಯಿಂದ ಬೆಂಬಲ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸೂಚಿಸುತ್ತೇವೆ. ಇದನ್ನು ಒಂದೇ ವರ್ಷದಲ್ಲಿ ಮಾಡಲಿಕ್ಕೆ ಹಣವನ್ನು ಖರ್ಚು ಮಾಡಿ. ಖಾಸಗಿಯವರಿಗೂ 3 ವರ್ಷಗಳ ಕಾಲ ಅವಕಾಶವನ್ನು ಕೊಡಿ. ಈ ರೀತಿಯಲ್ಲಿ ಮಕ್ಕಳ ಶಿಕ್ಷಣದ ದೃಷ್ಟಿಯಿಂದ ಒಳ್ಳೆಯ ಆಲೋಚನೆ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

(ಮುಂದು)

(1081) 14.12.2021 04.50 ಎಸ್‌ವಿ-ಬಿಎನ್‌ಎಸ್

(ವೈಸ್ ಛೇರ್‌ಮನ್‌ರವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಕಂದಾಯ ಇಲಾಖೆಯಲ್ಲಿ ಭೂ ಪರಿವರ್ತನೆ ಮಾಡುವ ಬಗ್ಗೆ ಮಾನ್ಯ ಈಶ್ವರಪ್ಪನವರಿಗೆ ತಿಳಿದಿದೆ. ಇಂದಿನ ದಿನಗಳಲ್ಲಿ ಕಂದಾಯ ಇಲಾಖೆಯಲ್ಲಿ ಒಂದು ತಿಂಗಳಿನಲ್ಲಿ ಅಥವಾ ಒಂದು ವರ್ಷದಲ್ಲಿ ಭೂ ಪರಿವರ್ತನೆ ಮಾಡಿಸಲು ಸಾಧ್ಯವಿದೆಯೇ? ಶೇ.98ರಷ್ಟು ಶಾಲಾ ಕಟ್ಟಡಗಳಿರುವ ಜಮೀನುಗಳು ಇಂದು ಭೂ ಪರಿವರ್ತನೆಯಾಗಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಹಾಗಾದರೆ ಈ ಎಲ್ಲಾ ಶಾಲೆಗಳನ್ನು ಬಂದ್ ಮಾಡಿ ಸರ್ಕಾರ ವಹಿಸಿಕೊಳ್ಳುತ್ತದೆಯೇ? ಮಾನ್ಯತೆ ನವೀಕರಣ ಆಗದಿರುವ ಶೇ.95ರಷ್ಟು ಶಾಲೆಗಳನ್ನು, ಭೂ ಪರಿವರ್ತನೆ ಹೊಂದದಿರುವ ಶಾಲೆಗಳನ್ನು, ಅಗ್ನಿಶಾಮಕ ಸುರಕ್ಷತೆಯನ್ನು ಅಳವಡಿಸದಿರುವ ಶಾಲೆಗಳನ್ನು ಸರ್ಕಾರ ವಹಿಸಿಕೊಳ್ಳುತ್ತದೆಯೇ? ವಿದ್ಯಾರ್ಥಿಗಳ ಭವಿಷ್ಯ ಏನಾಗಬೇಕು? ಈಗ ಪರೀಕ್ಷೆ ಬರೆಯಬೇಕಾಗಿದೆ, ಆದರೆ ಮಾನ್ಯತೆ ನವೀಕರಣವಾಗಿಲ್ಲ. ಇದರಿಂದ ಎಲ್ಲಾ ಪೋಷಕರಿಗೂ ಆತಂಕ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಇದು ಸರ್ಕಾರಿ ಶಾಲೆಗಳಿಗಿಲ್ಲ. ಕೇವಲ ಖಾಸಗಿ ಶಾಲೆಯವರಿಗಷ್ಟೇ ಇದೆ.

**ಶ್ರೀ ಮರಿತಿಬ್ಬೇಗೌಡರು:-** ಮಾನ್ಯ ಸಚಿವರೇ, ಸರ್ಕಾರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಾಡುವ ಕಾರ್ಯಗಳಿಗೆ ನಾವು ವಿರೋದ ಮಾಡುವುದಿಲ್ಲ. ಆದರೆ ನೀವು ಅಳವಡಿಸತಕ್ಕಂತಹ ವಿಧಾನದಲ್ಲಿ ಲೋಪದೋಷಗಳಿವೆ. ಇದರಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ, ಅಲ್ಲಿರತಕ್ಕಂತಹ ಶಿಕ್ಷಕರಿಗೆ ಬಹಳ ಕಿರುಕುಳವಾಗುತ್ತಿದೆ. ಹಿಂಸೆಯಾಗುತ್ತಿದೆ. ನೀವು ನಿಗದಿ ಪಡಿಸಿರುವ ಅವಧಿಯಲ್ಲಿ ಯಾವುದನ್ನೂ ಪೂರೈಸಲಿಕ್ಕೆ ಆಗದಂತಹ ಪರಿಸ್ಥಿತಿ ಇದೆ. ಇದರಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಬಹಳ ದೊಡ್ಡ ತೊಂದರೆಯಾಗಿದೆ. ಈ ಸುತ್ತೋಲೆಯನ್ವಯ ಶೇ. 95ರಷ್ಟು ಶಾಲೆಗಳನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಚ್ಚಬೇಕು. ಮುಚ್ಚುತ್ತೀರಾ? ಹಾಗಾದರೆ ಎಲ್ಲವನ್ನೂ ಸರ್ಕಾರವೇ take over ಮಾಡಲಿ. ಆಡಳಿತ ಮಂಡಳಿಯವರು ಎಲ್ಲವನ್ನೂ ಬರೆದುಕೊಡುತ್ತಾರೆ.

ಕಾಯಿದೆಯನ್ನು ಓದಿದರೆ ಏನು ಪ್ರಯೋಜನ? ಕಾಯಿದೆ ಅರ್ಥವಾಗಿಯೇ ಅವರು ಇದನ್ನೆಲ್ಲಾ ಮಾಡಿರುವುದು. ಈ ಸರ್ಕಾರಕ್ಕೆ ಕಾಯಿದೆ ಅರ್ಥವಾಗುವುದಿಲ್ಲ.

ಮಾನ್ಯ ಸಚಿವರೇ, ತಾವು ಈಗ ಮಂತ್ರಿಯಾಗಿದ್ದೀರಿ. ನಾನು ನಿಮ್ಮನ್ನು blame ಮಾಡುವುದಿಲ್ಲ. ಪ್ರತಿ ವರ್ಷ ಮಾನ್ಯತೆ ನವೀಕರಣ ಮಾಡಬೇಕೆಂದರೆ ಸಂಸ್ಥೆಯವರು ಶುಲ್ಕ ಎಷ್ಟು ಕಟ್ಟಬೇಕು? ಮಕ್ಕಳಿಗೆ ಸೈಕಲ್, ಸಮವಸ್ತ್ರ ಎಲ್ಲವನ್ನೂ ಶಿಕ್ಷಕರೇ ನೀಡಬೇಕು. ಆಡಳಿತ ಮಂಡಳಿಯವರು ಕೊಡುವುದಿಲ್ಲ. ಈ ಪರಿಸ್ಥಿತಿಯಲ್ಲಿ ಮೂರು ವರ್ಷಕ್ಕೊಮ್ಮೆ ಮಾನ್ಯತೆ ನವೀಕರಣ ಮಾಡಲಿಕ್ಕೆ ಏನು? ಯಾವ ಕಾನೂನು ಅಡ್ಡಿಯಾಗಿದೆ? ಸರ್ಕಾರಿ ಶಾಲೆಗಳಿಗೆ 10 ವರ್ಷಕ್ಕೊಮ್ಮೆ ಮಾನ್ಯತೆ ನವೀಕರಣ ಇಲ್ಲ. ಒಂದು ಶತಮಾನಕ್ಕೊಂದು ಬಾರಿ ಕೂಡ ಮಾನ್ಯತೆ ನವೀಕರಣ ಇರುವುದಿಲ್ಲ. ಸರ್ಕಾರಿ ಶಾಲೆಗಳು ಯಾವ ಪರಿಸ್ಥಿತಿಯಲ್ಲಿದೆ? ನಾವು ನೀವು ಸೇರಿ ಅವುಗಳನ್ನು ಉನ್ನತೀಕರಿಸಬೇಕು ಎನ್ನುವ ಪ್ರಯತ್ನವನ್ನು ಮಾಡಿದರೂ ಕೂಡ ಆಗುತ್ತಿಲ್ಲ. ಆದರೆ ಇಂದು ಬಹಳ ಅಚ್ಚುಕಟ್ಟಾಗಿ ಮಾಡುತ್ತಿರುವವರು ಖಾಸಗಿ ಶಿಕ್ಷಣ ಸಂಸ್ಥೆಯವರು. ಆದರೆ ಇಂದು ಅವುಗಳ ಕುತ್ತಿಗೆಗೆ ಹಗ್ಗ ಹಾಕಿದ್ದೀರಿ. ಇದರಿಂದ ನೀವು ಆಡಳಿತ ಮಂಡಳಿಯವರಿಗೆ ತೊಂದರೆ ಕೊಡುತ್ತಿಲ್ಲ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯುಂಟು ಮಾಡುವ ಕೆಲಸವನ್ನು ಸರ್ಕಾರ ಮಾಡಿದೆ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ದಯವಿಟ್ಟು ಈ ನಿಯಮಗಳನ್ನು ಸಂಪೂರ್ಣವಾಗಿ ವಾಪಸ್ ಪಡೆಯಬೇಕು. ಹಿರಿಯ ಸದಸ್ಯರಾದ ಮಾನ್ಯ ಸಂಕನೂರ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರ ಮಾಡಿದೆ. ಆ ಸಮಿತಿಯು ಒಂದು ವರದಿಯನ್ನು ನೀಡಿದೆ.

**(ಈ ಹಂತದಲ್ಲಿ ಡಾ:ವೈ.ಎ.ನಾರಾಯಣಸ್ವಾಮಿಯವರು ಇತರ ಸದಸ್ಯರೊಂದಿಗೆ ಮಾತನಾಡುತ್ತಿದ್ದರು)**

ಮಾನ್ಯ ಸಭಾಪತಿಯವರೇ, ನನಗೆ disturb ಆಗುತ್ತಿದೆ. ಮಾನ್ಯ ನಾರಾಯಣಸ್ವಾಮಿಯವರೇ, ನಿಮ್ಮ ದಮ್ಮಯ್ಯ, ದಯಮಾಡಿ ಸುಮ್ಮನಿರಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಮರಿತಿಬ್ಬೇಗೌಡರೇ, ನೀವು ನನ್ನ ಬಗ್ಗೆ ಹೇಳಬೇಡಿ. ನೀವು ಮಾನ್ಯ ಸಭಾಪತಿಯವರನ್ನು ಉದ್ದೇಶಿಸಿ ಮಾತನಾಡಿ. ನೀವು ನಮ್ಮಂತೆಯೇ ಸದಸ್ಯರೇ ವಿನಃ ಸಭಾಪತಿಯವರಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ನೀವು ನನ್ನನ್ನು ಉದ್ದೇಶಿಸಿ ಮಾತನಾಡಿ. ಅವರಿಗೆ ನೀವು ದಬಾಯಿಸಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಆಗಲಿ. ಮಾನ್ಯ ಸಭಾಪತಿಯವರೇ, ಶಾಸನಬದ್ಧವಾಗಿರುವಂತಹ ಸಮಿತಿಯು ಕೊಟ್ಟಂತಹ ವರದಿಗೆ ಈ ಸರ್ಕಾರದಲ್ಲಿ ಮೂರು ಕಾಸಿನ ಕಿಮ್ಮತ್ತಿಲ್ಲ. ಆ ಸಮಿತಿಯವರು ಬೇರೆ ರಾಜ್ಯಗಳಲ್ಲಿ ಮಾಡಿರುವ ಕ್ರಮಗಳು, ನ್ಯಾಯಾಲಯದ ತೀರ್ಪುಗಳು, ನಮ್ಮ ರಾಜ್ಯದಲ್ಲಿರುವ ಆದೇಶಗಳು, ಈ ಪರಿಸ್ಥಿತಿಯಿಂದ ಹೇಗೆ ಹೊರಬರಬೇಕು, ಮಕ್ಕಳಿಗೆ ಯಾವ ರೀತಿ ಸಹಾಯ ಮಾಡಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಹೇಗೆ ಉಳಿಸಬೇಕು ಎನ್ನುವುದಕ್ಕೆ ಉತ್ತಮವಾದ ವರದಿಯನ್ನು ಕೊಟ್ಟಿರುತ್ತದೆ. ಅದಕ್ಕೆ ಮೂರು ಕಾಸಿನ ಬೆಲೆಯಿಲ್ಲ. ಸಮಿತಿಯ ವರದಿ ಬಂದ ನಂತರ ಅದರ ಮೇಲೆ ಇಲಾಖೆಯು ಐದು ಆದೇಶಗಳನ್ನು ಹೊರಡಿಸುತ್ತದೆ. ಆ ವರದಿಯನ್ನು ತೆಗೆದುನೋಡುವುದಿಲ್ಲ. ಹಾಗಾದರೆ ಆ ಸಮಿತಿಯನ್ನು ರಚನೆ ಮಾಡಿದ್ದು ಏಕೆ? ಅದಕ್ಕೇನು ಮೂರು ಕಾಸಿನ ಕಿಮ್ಮತ್ತಿಲ್ಲವೇ? ಅದಕ್ಕಾಗಿಯೇ ಈ ಸರ್ಕಾರ ಕಾನೂನು ಗೌರವಿಸುವುದಿಲ್ಲ, ಕಾಯಿದೆ ಬಗ್ಗೆ ಗಮನವಿಲ್ಲ ಎಂದು ಹೇಳಿದ್ದು. ಇಲ್ಲವೇ ಆ ಸಮಿತಿಯ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದೇವೆ ಎಂದು ಹೇಳಲಿ. ಅದನ್ನು ನೋಡಲೇ ಇಲ್ಲ. ಭಾಗಶಃ ಒಪ್ಪಿದ್ದೇವೆ ಅಥವಾ implement ಮಾಡುತ್ತೇವೆ ಎಂದು ಕೂಡ ಹೇಳಲಿಲ್ಲ. ಸುಮ್ಮನೆ ಸಮಿತಿಯು ಕೊಟ್ಟ ವರದಿಯನ್ನು ಆಚೆಗೆ ಎಸೆದು ನಂತರ ಭೂ ಪರಿವರ್ತನೆಯಾಗಿರಬೇಕು, ಕಟ್ಟಡ ಸುರಕ್ಷತಾ ಪ್ರಮಾಣಪತ್ರ ಇರಬೇಕು ಎಂದು ಐದು ಸುತ್ತೋಲೆಗಳನ್ನು ಹೊರಡಿಸುತ್ತಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ವರದಿಯು ಏನಾಗಿದೆ ಎಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು.

**ಶ್ರೀ ಮರಿತಿಬ್ಬೇಗೌಡ:-** ಅಗ್ನಿಶಾಮಕ ದಳದ division level officer ಅವರೇ ವರದಿಯನ್ನು ಕೊಡಬೇಕು. ಜಿಲ್ಲೆಯವರು ಕೊಡುವಂತಿಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯಪಾಲಕ ಅಭಿಯಂತರರೇ ಕೊಡಬೇಕು. ಎಷ್ಟು ವಿದ್ಯಾರ್ಥಿಗಳಿದ್ದಾರೆ, ಯಾವ ಸ್ವರೂಪದ ಶಾಲೆ ಎಂಬುದಕ್ಕೆ ಇಷ್ಟು ಎಂದು ನಿಗದಿ ಪಡಿಸಿದ್ದಾರೆ. Fire Extinguisher Department ನವರು, ಲೋಕೋಪಯೋಗಿ ಇಲಾಖೆಯವರು ದೊಡ್ಡ ದಂಧೆಯನ್ನೇ ಆರಂಭಿಸಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳವರು ಸಮವಸ್ತ್ರವನ್ನು ಕೊಡಿಸುತ್ತಾರೆಯೇ, ಸೈಕಲ್ ಅನ್ನು ಕೊಡಿಸುತ್ತಾರೆಯೇ? ಅಲ್ಲಿನ ಶಿಕ್ಷಕರೇ ಎಲ್ಲವನ್ನು ಕೊಡಿಸಿ ಶಾಲೆಯನ್ನು ನಡೆಸುವಂತಾಗಿದೆ. ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುತ್ತಿವೆ. ದಯಮಾಡಿ ಸರ್ಕಾರ ಇವುಗಳನ್ನು ತೆಗೆದುಕೊಳ್ಳಲಿ. ಆಡಳಿತ ಮಂಡಳಿಯವರು, ಅಲ್ಲಿರುವ ಶಿಕ್ಷಕರು ಇಷ್ಟೆಲ್ಲಾ ಕಷ್ಟ ಪಡುವುದೇ ಬೇಡ. ಸರ್ಕಾರ ವಹಿಸಿಕೊಳ್ಳಲಿ. ನ್ಯಾಯಾಲಯದ ಆದೇಶಗಳು ಸರ್ಕಾರಿ ಶಾಲೆಗಳಿಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಅನ್ವಯಿಸುವುದಿಲ್ಲವೇ? ಇದು ಎಂತಹ ಅವೈಜ್ಞಾನಿಕ? ನಾವು ಯಾವ ಜಗತ್ತಿನಲ್ಲಿ ಬದುಕುತ್ತಿದ್ದೇವೆ? ಶಾಲಾ ಮಕ್ಕಳ ಸುರಕ್ಷತೆಯ ಬಗ್ಗೆ ಹೊರಡಿಸಿರುವ ಆದೇಶ ಸರ್ಕಾರಿ ಶಾಲಾ ಮಕ್ಕಳಿಗಿಲ್ಲ. ಖಾಸಗಿ ಶಾಲಾ ಮಕ್ಕಳಿಗೆ ಮಾತ್ರವೇ? ಇದನ್ನು ಒಬ್ಬ ಶಾಸನಸಭಾ ಸದಸ್ಯನಾಗಿ ನಾನು ಒಪ್ಪಬೇಕಾ? ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಕತ್ತು ಹಿಸುಕಿ ಕೊಲ್ಲುವಂತಹ ಕೆಲಸ ಇದಾಗಿದೆ. ಈ ನಿಯಮದಿಂದ ನನಗೆ ಅಷ್ಟೊಂದು ಬೇಸರವಾಗಿದೆ. ಇಂದು ಖಾಸಗಿ ಶಿಕ್ಷಣ ಸಂಸ್ಥೆಗಳಿಲ್ಲ ಎಂದರೆ ಸರ್ಕಾರ ಯಾವ ಸಂಸ್ಥೆಯನ್ನು ನಡೆಸಲು ಸಾಧ್ಯವಿದೆ. ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದರೂ ಸಹ ಸರ್ಕಾರಿ ಶಾಲೆಗಳನ್ನು ಉತ್ತಮ ರೀತಿಗೆ ತರಲಾಗುತ್ತಿಲ್ಲ. ಇದರ ಪರಿಜ್ಞಾನವೇ ಇಲ್ಲದೆ ಸುಮ್ಮನೆ ಅವೈಜ್ಞಾನಿಕವಾಗಿ ಏನೇನೋ ಆದೇಶಗಳನ್ನು ಹೊರಡಿಸುವುದು. ಇದು ಮಾನ್ಯತೆ ನವೀಕರಣದ ಬಗ್ಗೆ. ಹೊಸದಾಗಿ 9-10ನೇ ತರಗತಿಗಳನ್ನು ಪ್ರಾರಂಭ ಮಾಡುವ ಬಗ್ಗೆ ಅನುಮತಿ ಕೇಳಿರುವವರಿಗೆ ಶಾಲೆಯಿರುವ ಜಾಗ ಭೂಪರಿವರ್ತನೆಯಾಗಿರಬೇಕು, ಗ್ರಾಮಾಂತರ ಪ್ರದೇಶವಾಗಿದ್ದರೆ ಒಂದು ಎಕರೆ ಜಮೀನು ಇರಬೇಕು, ಬೆಂಗಳೂರಿನಲ್ಲಿ ಆದರೆ 30 ಗುಂಟೆ ಇರಬೇಕು, fire safety ಇರಬೇಕು ಎಂದು ಹೇಳಿದ್ದಾರೆ. ಇದೆಲ್ಲಾ ನಿಯಮಗಳು ಬರುವುದಕ್ಕೆ ಮುನ್ನವೇ 9-10ನೇ ತರಗತಿಗೆ ಅನುಮತಿಯನ್ನು ಕೇಳಿದವರ ಕೈಯಿಂದ ಎರಡೆರಡು ಬಾರಿ ಒಂದೊಂದು ಲಕ್ಷ ಶುಲ್ಕವನ್ನು ಕಟ್ಟಿಸಿಕೊಂಡು ಕೆಲವರಿಗೆ ಕೊಟ್ಟರು, ಕೆಲವರಿಗೆ ಕೊಡಲಿಲ್ಲ. 30-40 ವರ್ಷಗಳಿಂದ ಎಂಟನೆಯ ತರಗತಿಯವರೆಗೆ ನಡೆದಿದ್ದು, 9-10ನೇ ತರಗತಿಗಳನ್ನು ನಡೆಸಲು ಅನುಮತಿಯನ್ನು ನೀಡಿ ಎಂದರೆ ಅದು ಕೂಡ ಆಗುವುದಿಲ್ಲ. (ಮುಂದು)

(1082) 14-12-2021 (5.00) ಕೆಜಿ-ಎಸ್‌ಕೆಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು)**

ಈ ಬಾರಿ ಹೊಸದಾಗಿ 250ಕ್ಕೂ ಹೆಚ್ಚು 9 ಮತ್ತು 10ನೇ ತರಗತಿಗಳಿಗೆ ಅನುಮತಿ ಕೊಡತಕ್ಕಂತಹ ಶಾಲೆಗಳಿಗೆ ಕೊಟ್ಟಿಲ್ಲ. ಅಲ್ಲಿ ಕಲಿಯುವಂತಹ ಮಕ್ಕಳ ಪರಿಸ್ಥಿತಿ ಏನು? ಆ ಮಕ್ಕಳು ಪರೀಕ್ಷೆ ಬರೆಯುವುದಕ್ಕೆ ಆಗುವುದಿಲ್ಲ. ಪೋಷಕರ ಆತಂಕ ಏನು? ಇದರ ಬಗ್ಗೆ ಏನಾದರೂ ಸರ್ಕಾರಕ್ಕಾಗಲೀ ಅಥವಾ ಇಲಾಖೆಗಾಗಲೀ ಚಿಂತನೆ ಇದೆಯೇ? ಇದು ಅತ್ಯಂತ ಬೇಸರದ ಸಂಗತಿ. ಅದಕ್ಕೆ ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಇವೆಲ್ಲವನ್ನು ನಾಳೆಯೊಳಗೆ ಸರ್ಕಾರಕ್ಕೆ ವಹಿಸಿಕೊಳ್ಳುವಂತಹ ತೀರ್ಮಾನ ಮಾಡಿ. ಇಲ್ಲವೆಂದರೆ, ಇವರೆಲ್ಲರಿಗೂ ಶಾಸಕರ ಸಮಿತಿ ಕೊಟ್ಟಿರುವಂತಹ ವರದಿ ಏನಿದೆ, ಅದನ್ನು ಜಾರಿ ಮಾಡಿ. ಇಲ್ಲವೆಂದರೆ, ಇವರೆಲ್ಲರಿಗೂ ಕೂಡ ಮೂರು ವರ್ಷಗಳವರೆಗೆ ಸಂಪೂರ್ಣವಾಗಿ ಕಾಲವಕಾಶ ಕೊಡಿ. ಮಾನ್ಯತೆಯ ನವೀಕರಣವನ್ನು ಕನಿಷ್ಠ ಮೂರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ವರ್ಷಗಳಿಗೊಮ್ಮೆ ಮಾಡುವಂತೆ ಮಾಡಿ. ಇದರ ಬಗ್ಗೆ ಸರ್ಕಾರ ಇಂದು ಅಥವಾ ನಾಳೆಯೊಳಗೆ ಈ ಸದನದೊಳಗೆ ಬೆಳಗಾವಿ ಅಧಿವೇಶನದಲ್ಲಿ ತೀರ್ಮಾನ ಕೊಡದಿದ್ದರೆ, ಘೋಷಣೆ ಮಾಡಲಿಲ್ಲವೆಂದರೆ, ನಾನು ಖಂಡಿತವಾಗಿ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಕತ್ತು ಹಿಸುಕುವಂತಹ ಕೆಲಸವನ್ನು ಮಾಡುತ್ತಿದೆ. ಈ ಸರ್ಕಾರ ಕನ್ನಡ ಮಾಧ್ಯಮ ಶಾಲೆಗಳ ಕತ್ತನ್ನು ಹಿಸುಕುವಂತಹ ಕೆಲಸವನ್ನು ಮಾಡುತ್ತಿದೆ. ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಬಗ್ಗೆ ಕಿಂಚಿತ್ತು ಚಿಂತನೆ ಇದಿದ್ದರೆ, ಈ ಸರ್ಕಾರ ಈ ಆದೇಶಗಳನ್ನು ಹೊರಡಿಸುತ್ತಿರಲಿಲ್ಲ. ಆದ್ದರಿಂದ, ಇದರ ಬಗ್ಗೆ ಕೊಡಲೇ ನಿರ್ಧಾರ ತೆಗೆದುಕೊಳ್ಳಬೇಕು. ಒಂದು ವೇಳೆ, ಈ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲವೆಂದರೆ, ಇಡೀ ಎಲ್ಲಾ ಖಾಸಗಿ ಶಾಲೆಗಳನ್ನು including ಸರ್ಕಾರಿ ಶಾಲೆಗಳನ್ನು ಬಂದ್ ಮಾಡಿಸಿ ನಮ್ಮ ರಾಜ್ಯ ವ್ಯಾಪ್ತಿ ದೊಡ್ಡ ಆಂದೋಲನವನ್ನು ಮಾಡೇಮಾಡುತ್ತೇನೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕೆಲವರು ಎಂತಹ ಪರಿಸ್ಥಿತಿಯಲ್ಲಿ ಈ ಶಾಲೆಗಳನ್ನು ನಡೆಸುತ್ತಿದ್ದಾರೆಂದರೆ, ಅದು ಸರ್ಕಾರಕ್ಕೆ ಗೊತ್ತಾಗುವುದಿಲ್ಲ. ದಯವಿಟ್ಟು, ಅದನ್ನು ಹೋಗಿ ನೋಡಿದರೆ ಗೊತ್ತಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಸಮಾಧಾನದಿಂದ ಮಾತನಾಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, there is a limit for everything. ಸರ್ಕಾರಿ ಶಾಲೆಗಳನ್ನು ಬಂದ್ ಮಾಡಿಸುವುದಕ್ಕೆ ಸರ್ಕಾರಿ ಶಾಲೆಗಳು ಅವರ ಅಪ್ಪನವೇ? ಮಾನ್ಯ ಸದಸ್ಯರಿಗೆ ಏನು ಮಾತನಾಡಬೇಕೆಂದು ಗೊತ್ತಾಗುವುದಿಲ್ಲ. ಮಾತನಾಡುವುದಕ್ಕೂ ಒಂದು ಲಿಮಿಟ್ ಇದೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಖಾಸಗಿ ಶಾಲೆಯವರಿಗೂ ಕೇಳುವುದಕ್ಕೆ ಹಕ್ಕು ಇದೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಏನು ಕಡಲೆಪುರಿ ತಿನ್ನುತ್ತಿಲ್ಲ. ಅವರಿಗೆ ತಾಕತ್ತು ಇದ್ದರೆ ಮಾಡಿ ತೋರಿಸಲಿ. ನಾವು ಅವರಿಗೆ ಹೆದರಿಕೊಂಡು ಸರ್ಕಾರವನ್ನು ನಡೆಸುವುದಕ್ಕೆ ಆಗುತ್ತದೆಯೇ? ಅವರು ಮನಸ್ಸಿಗೆ ಬಂದಂತೆ ಮಾತನಾಡಬಾರದು. ಅವರು ಏನು ಬೇಕಾದರೂ ಮಾತನಾಡಬಹುದು ಅಂದುಕೊಂಡಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಏನು ತಪ್ಪಾಗಿ ಮಾತನಾಡಿದ್ದೇನೆ ಹೇಳಿ. ನಾನು ಮಾತನಾಡುವುದು ಹಾಗೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಮಾಡುವುದಿಲ್ಲ. We will challenge it. ನೋಡೋಣ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ಸರ್ಕಾರದಲ್ಲಿ ತಾಕತ್ತು ಇದ್ದರೆ ಮಾಡಲಿ. ನಾನು ನೋಡುತ್ತೇನೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಶಾಲೆಗಳನ್ನು ಬಂದ್ ಮಾಡಿಸಿದ ನಂತರ ಮಾತನಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮರಿತಿಬ್ಬೇಗೌಡರವರೇ, ಒಂದು ನಿಮಿಷ. ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ.

**(ಗೊಂದಲ)**

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮರಿತಿಬ್ಬೇಗೌಡರವರು ಎಲ್ಲವನ್ನು ಹಾಳು ಮಾಡುತ್ತಿದ್ದಾರೆ., ನಾವು ಇದರಲ್ಲಿ ಇದ್ದೇವೆ.

**(ಗೊಂದಲ)**

**ಸಭಾಪತಿಯವರು:-** ನಾರಾಯಣಸ್ವಾಮಿಯವರೇ, ನಾನು ಪೀಠದಿಂದ ಎಂದು ನಿಂತುಕೊಂಡಿದ್ದೇನೆ. ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಇದರ ಪರವಾಗಿ ಇದ್ದೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ನಾರಾಯಣಸ್ವಾಮಿಯವರೇ, ನಾನು ನಿಂತುಕೊಂಡಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮರಿತಿಬ್ಬೇಗೌಡರವರೇ, ತಾವು ಸಮಾಧಾನದಿಂದ ಮಾತನಾಡಿ. ತಮಗೆ ಬಿ.ಪಿ., ಹೆಚ್ಚಿಗೆ ಆಗಬಾರದು. ತಮ್ಮ ಆರೋಗ್ಯಕ್ಕೆ ತೊಂದರೆಯಾಗಬಾರದು. ತಾವು ಹೇಳುವುದು ಸರಿ ಇದೆ. ಆದರೆ, ಹೇಳುವುದನ್ನು ಸಮಾಧಾನದಿಂದ ಹೇಳಿ. ಒಂದೇ ಬಾರಿಗೆ emotional ಆಗುವುದಕ್ಕೆ ಹೋಗಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಏನಾದರೂ ತಪ್ಪು ಮಾತನಾಡಿದ್ದೇನೆಯೇ?

**(ಗೊಂದಲ)**

**ಸಭಾಪತಿಯವರು:-** ನಾರಾಯಣಸ್ವಾಮಿಯವರೇ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ. ಎಲ್ಲಾ ಸದಸ್ಯರು ಒಟ್ಟಿಗೆ ಮಾತನಾಡಬೇಡಿ. ಆ ರೀತಿ ಮಾತನಾಡಿದರೆ ಅದು ಯಾವುದು ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಎಲ್ಲಾ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

(ಗೊಂದಲ)

**ಸಭಾಪತಿಯವರು:-** ಈಗ ಮಾನ್ಯ ಸಚಿವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರೀಗ ಮಾತನಾಡುತ್ತಾರೆ. ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮುಖಾಂತರ ಅವರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ನಮಗೆ ಅವರ ಭಾವನೆಗಳು ಖಂಡಿತವಾಗಿ ಅರ್ಥವಾಗುತ್ತವೆ. ಅವರ ಕಳಕಳಿಯಂತೆ ನಮಗೂ ಸಹ ಕಳಕಳಿ ಇದೆ. ಆದರೆ, ಅವರು ಇಷ್ಟೊಂದು ಉದ್ವೇಗಗೊಂಡು ಮಾತನಾಡಿದರೆ, ಒಂದು ವೇಳೆ ಅವರು ಸತ್ತು ಹೋದರೆ ಗತಿ ಏನು? ನಾನು ಪ್ರಮಾಣಿಕವಾಗಿ ಅವರ ಅಣ್ಣ ತಮ್ಮಂದಿರು ಹೇಳಿದಂತೆ ಹೇಳುತ್ತಿದ್ದೇನೆ. ಅವರು ಉಸಿರುಗಟ್ಟಿಸಿಕೊಂಡು ಮಾತನಾಡುತ್ತಿದ್ದಾರೆ. ಇದು ಅವರ ಆರೋಗ್ಯಕ್ಕೆ ಒಳ್ಳೆಯದಲ್ಲ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸದಸ್ಯರೇ, ಕೋವಿಡ್-19 ಹೆಚ್ಚಾಗಿದ್ದ ಸಂದರ್ಭದಲ್ಲಿ ಲಕ್ಷಾಂತರ ಜನ ಸತ್ತು ಹೋಗಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಕೋವಿಡ್-19 ಹೆಚ್ಚಾಗಿದ್ದ ಸಂದರ್ಭದಲ್ಲಿ ಸತ್ತಿದ್ದಾರೆ ನಿಜ. ಆದರೆ, ಅವರು ಯಾರು ಇಲ್ಲಿ ಸತ್ತಿಲ್ಲ. ಅವರಿಗೆ ಕೈಮುಗಿಯುತ್ತೇನೆ. ಅವರ ಭಾವನೆಗಳು ಏನಿವೆ ಅವುಗಳನ್ನು ಸಮಾಧಾನದಿಂದ ಹೇಳಲಿ. ನಾವು ಅದನ್ನು ಕೇಳುತ್ತೇವೆ. ಆದರೆ, ಇಷ್ಟೊಂದು ಉಸಿರುಗಟ್ಟಿಸಿಕೊಂಡು ಮಾತನಾಡುವುದು ಅವರ ಆರೋಗ್ಯಕ್ಕೆ ಒಳ್ಳೆಯದಲ್ಲ. ಅವರು ಉಸಿರುಗಟ್ಟಿಸಿಕೊಂಡು ಮಾತನಾಡುವುದನ್ನು ನೋಡಿದರೆ ನಿಜಕ್ಕೂ ಭಯವಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ನಾನು ಅದನ್ನೇ ಹೇಳುತ್ತಿದ್ದೆನು. ಆಯಿತು. ತಾವು ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.,

**ಸಭಾಪತಿಯವರು:-** ತಾವು ಮತ್ತೆ ಗಲಾಟೆ ಮಾಡದೆ ಮಾತನಾಡಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬಾರದು ಅಂದುಕೊಂಡಿದ್ದೆ. ಆದರೆ, ಈಗ ಮಾತನಾಡುತ್ತಿದ್ದೇನೆ. ಈ ಸದನದಲ್ಲಿರುವವರು ಎಲ್ಲರೂ ದಡ್ಡ ಶಿಖಾಮಣಿಗಳು, ಇಲ್ಲಿ ಯಾರಿಗೂ ಏನೂ ಅರ್ಥವಾಗುವುದಿಲ್ಲ, ಸರ್ಕಾರ ಜೀವಂತವಾಗಿಲ್ಲ ಎನ್ನುವ ರೀತಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ಇದು ಒಂದು ಬಾರಿ ಅಲ್ಲ. ಅವರು ಅನೇಕ ಬಾರಿ ಈ ರೀತಿ ಮಾತನಾಡಿದ್ದಾರೆ. ಸರ್ಕಾರಕ್ಕೆ ಒಂದು ವೇಗ ಇದ್ದರೆ ಅದು ಕಾಂಗ್ರೆಸ್ ಸರ್ಕಾರ ಇರಬಹುದು, ಬಿಜೆಪಿ ಸರ್ಕಾರ ಇರಬಹುದು, ಇನ್ಯಾವುದೇ ಸರ್ಕಾರ ಇರಲಿ. ಒಂದು ಮಿತಿಯನ್ನು ಇಟ್ಟುಕೊಂಡು ಮಾತನಾಡಬೇಕು. ಮಾನ್ಯ ಸಚಿವರು ಸದನದಲ್ಲಿ ಅವರ ಎದುರಿಗೆ ಕುಳಿತುಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷ ಕೇಳಿ. ಅವರು ಒಂದೊಂದು ಬಾರಿ ಅವರ ಮನಸ್ಸಿನಲ್ಲಿ ಬಹಳಷ್ಟು ವಿಷಯಗಳನ್ನು ತೆಗೆದುಕೊಂಡು emotional ಆಗಿಬಿಡುತ್ತಾರೆ. ಆ ರೀತಿ ಆಗಬಾರದೆಂದು ಹೇಳುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಗುರುಗಳಿಂದ ಪಾಠ ಕಲಿತ್ತಿದ್ದೇನೆ. ಮಾನ್ಯ ಸದಸ್ಯರಾದ ರವಿಕುಮಾರ್‌ರವರಿಂದ ಕಲಿಯಬೇಕಾದ್ದು ಏನಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಅವರಿಗೆ ನನ್ನಿಂದ ಕಲಿಯಬೇಕೆಂದು ಹೇಳುತ್ತಿಲ್ಲ. ನಾನು ಇದನ್ನು ಎಲ್ಲರ ಅನುಭವದಿಂದ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ರವಿಕುಮಾರ್‌ರವರು ಈ ಕಡೆ ಕುಳಿತ್ತಿದ್ದಂತಹ ಸಂದರ್ಭದಲ್ಲಿ ಯಾವ ರೀತಿ ಮಾತನಾಡಿದ್ದಾರೆಂದು ನಮಗೆ ಗೊತ್ತಿದೆ.

**ಸಭಾಪತಿಯವರು:-** ರವಿಕುಮಾರ್‌ರವರೇ, ಸಾಕು ಬಿಡಿ. ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರು right spirit ನಲ್ಲಿ ಮಾತನಾಡಿದರೆ ಅವರಿಗೂ ಒಳ್ಳೆಯದು. ನಮಗೂ ಒಳ್ಳೆಯದು. ನಮಗೆ ಯಾರಿಗೂ ಮಾತನಾಡುವುದಕ್ಕೆ ಬರುವುದಿಲ್ಲವೆಂದು ಸುಮ್ಮನೆ ಕುಳಿತುಕೊಂಡಿಲ್ಲ. ನನಗೆ ಅವರಿಗಿಂತ ಹೆಚ್ಚಿಗೆ ಮಾತನಾಡುವುದಕ್ಕೆ ಬರುತ್ತದೆ. ಅವರಿಗಿಂತ ಚೆನ್ನಾಗಿ ಮಾತನಾಡಬಲ್ಲೆ. ಅವರಿಗಿಂತ ವಿಷಯವನ್ನು ಉತ್ತಮವಾಗಿ ಮಂಡನೆ ಮಾಡಬಲ್ಲೆ. ಅವರು taken for granted ಎಂದು ತೆಗೆದುಕೊಂಡರೆ, we will take a serious stand about you.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ರವಿಕುಮಾರ್‌ರವರು ಈ ವಿಷಯದ ಬಗ್ಗೆ ಮಾತನಾಡಲಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನಗೆ ವಿಷಯದ ಬಗ್ಗೆ ಮಾತನಾಡುವುದು ಚೆನ್ನಾಗಿ ಗೊತ್ತಿದೆ. ನನಗೆ ಯಾರು ಸಹ ಹೇಳಿಕೊಡುವುದು ಬೇಕಾಗಿಲ್ಲ.

**ಡಾ: ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ರೈಲು ಸರಿಯಾಗಿ ಬಂತು. ಅದರೆ, ಕೊನೆಯಲ್ಲಿ crash ಆಗಿಬಿಡ್ತು.

**ಸಭಾಪತಿಯವರು:-** ರವಿಕುಮಾರ್‌ರವರೇ, ಒಂದು ನಿಮಿಷ ಸಾಕು ಬಿಡಿ. ತಾವೆಲ್ಲರೂ ಪ್ರತಿ ದಿವಸ ದಿನಪತ್ರಿಕೆಯನ್ನು ಓದುತ್ತಿರೋ ಬಿಡುತ್ತೀರೂ ಗೊತ್ತಿಲ್ಲ. ಆದರೆ, ದಿನಪತ್ರಿಕೆಯಲ್ಲಿ ಮೇಲ್ಮನೆ ಬಗ್ಗೆ ಯಾವ ರೀತಿ ಟೀಕೆ ಟಿಪ್ಪಣಿ ಬರೆದಿದ್ದಾರೆಂದು ನೋಡಿ. ತಾವು ಸಹ ಈ ರೀತಿ ಮಾಡಿದರೆ ಹೇಗೆ? ನಾನು ಇದನ್ನು ಸದನದಲ್ಲಿ ಎಲ್ಲರಿಗೂ ಹೇಳುತ್ತಿದ್ದೇನೆ. ನಾನು ಮೇಲ್ಮನೆಯ ಗೌರವ ಘನತೆಯನ್ನು ಉಳಿಸಬೇಕೆಂದುಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ನೂರಾರು ಬಾರಿ long rope ಕೊಟ್ಟಿದ್ದೀರಿ. ಆ ರೀತಿ ಇನ್ಯಾರಿಗೂ ಸಹ ಕೊಟ್ಟಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅವರಿಗೆ ಮೆಚ್ಚುಗೆ ಆಗುವಂತೆ ಮಾತನಾಡಬೇಕೇ?

**(ಗೊಂದಲ)**

**ಸಭಾಪತಿಯವರು:-** ರವಿಕುಮಾರ್‌ರವರೇ, ನಾನೀಗ ಹೇಳಿದ್ದೇನೆ ಅಲ್ಲವೇ, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿದಂತೆ ಸರ್ಕಾರವನ್ನು ನಡೆಸುವುದಕ್ಕೆ ಆಗುತ್ತದೆಯೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಹೇಳಿದಂತೆ ನಾನು ಮಾತನಾಡುವುದಿಲ್ಲ.

(ಮುಂದು)

(1083) 14-12-2021 (5.10) ಎಂವಿ-ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಜೆ.ಸಿ.ಮಾಧುಸ್ವಾಮಿ:-** 2020ನೇ ಇಸವಿಯಲ್ಲಿಅಫಿಡವಿಟ್ ಹಾಕಿರುವಂತಹ ಪ್ರಕರಣ. ಇವರು 2016ನೇ ಇಸವಿಯಿಂದ ಏನು ಮಾಡುತ್ತಿದ್ದರು?

**ಸಭಾಪತಿಯವರು:-** ಅದು 2009ನೇ ಇಸವಿಯಲ್ಲಿಆಗಿರುವುದು.

**Sri J.C.MADHUSWAMY:-** Were you not living? ಇದು ಯಾವಾಗ ಆಗಿರುವಂತಹ ತೀರ್ಮಾನ?

**ಸಭಾಪತಿಯವರು:-** ಇಪ್ಪತ್ತು ವರ್ಷವಾದ ಮೇಲೆ ಬಂದಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಯಾವ ಸರ್ಕಾರವೆಂದು ಹೇಳುತ್ತಿದ್ದಾರೆ. ಅವರಿಗೆ ಕೊಟ್ಟಿರುವಂತಹ reply ಅನ್ನು ಓದಲಿ. ನಮ್ಮ ಬಳಿಯೂ ಸಹ ಮ್ಯಾನೇಜ್‌ಮೆಂಟ್ ಇದೆ. ಮಾನ್ಯ ಸದಸ್ಯರು ಕುಳಿತುಕೊಳ್ಳಲಿ. ನಾವು ಸಹ ಶಾಲೆಗಳನ್ನು ನಡೆಸುತ್ತಿರುವಂತಹವರು. ಮಾನ್ಯ ಸದಸ್ಯರು ಹೇಳುತ್ತಿದ್ದ ಹಾಗೆ ನಾವು ಬಾಗಿಲುಗಳನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿಕೊಂಡು ಹೋಗುವುದಿಲ್ಲ. ಇದನ್ನು ಮಾಡಿರುವುದು ಯಾರಿಗೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದಂತಹ ಶ್ರೀ ಬಿ.ಸಿ.ನಾಗೇಶ್‌ರವರೆ, ನೀಡಿರುವ reply ಯನ್ನು ಅವರಿಗೆ ಓದಿ ಹೇಳಿ.

**(ಗೊಂದಲ)**

**ಸಭಾಪತಿಯವರು:-** ಈಗ ಮಾನ್ಯ ಪುಟ್ಟಣ್ಣನವರನ್ನು ಬಿಟ್ಟು ಬೇರೆ ಯಾರೂ ಮಾತನಾಡುವುದು ಬೇಡ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೆ, ತಾವು ಈಗ ಮಂತ್ರಿಯಾಗಿದ್ದೀರಾ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, 2018ರಲ್ಲಿ ಒಂದು ವರ್ಷ ಸಮಯಾವಕಾಶ ನೀಡಿದ್ದು ಯಾವ ನಿಯಮಕ್ಕೆ? ಈಗ ಸುಪ್ರೀಂ ಕೋರ್ಟ್ ನೀಡಿರುವಂತಹ ತೀರ್ಮಾನಕ್ಕೆ ಅಲ್ಲವೇ ಕೊಟ್ಟಿರುವುದು.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕ್ಷಮೆ ಇರಲಿ. ಈ ವಿಷಯ diversion ತೆಗೆದುಕೊಳ್ಳುತ್ತಿದೆ. ಆದರೆ, ಈ ವಿಷಯ diversion ತೆಗೆದುಕೊಳ್ಳಬಾರದು. ಇದು ತುಂಬಾ diversion ತೆಗೆದುಕೊಳ್ಳುತ್ತಿದೆ. ಆದರೆ, ಇದು burning problem. ಈಗ ಇದು ಎಲ್ಲರಿಗೂ ಸಹ ಕುತ್ತಿಗೆಗೆ ಬಂದುಬಿಟ್ಟಿದೆ. ಅದು ಎಂತಹ ಸಮಸ್ಯೆ ಎಂದರೆ, ಈಗ ಎಸ್.ಎಸ್.ಎಲ್.ಸಿ ಮಕ್ಕಳ ಬಳಿ ಪರೀಕ್ಷಾ ಶುಲ್ಕವನ್ನು ಕಟ್ಟಿಸಿಕೊಳ್ಳುತ್ತಿಲ್ಲ. ಈಗ ಮಕ್ಕಳು ಎಸ್.ಎಸ್.ಎಲ್.ಸಿ.,ಗೆ ಬಂದಿದ್ದಾರೆ. ಈಗ ಶಾಲೆಗಳ ಮಾನ್ಯತೆಯ ನವೀಕರಣ ಆಗದೇ ಇರುವುದರಿಂದ ಪರೀಕ್ಷಾ ಶುಲ್ಕವನ್ನು ಕಟ್ಟಿಸಿಕೊಳ್ಳುತ್ತಿಲ್ಲವೆಂದು ಆ ಶಾಲೆಗಳ ಮಕ್ಕಳು ಮತ್ತು ಶಾಲೆಯವರು ಆತಂಕದಲ್ಲಿದ್ದಾರೆ. ಅದು ಒಂದೇ ಅಲ್ಲ. ಶಾಲೆಯ ಮಾನ್ಯತೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿಲ್ಲವೆಂದು ನೌಕರರ ಸಂಬಳವನ್ನು ನಿಲ್ಲಿಸಿದ್ದಾರೆ. ಅದು 2009ರಲ್ಲಿ ಆಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ, 2009ರಲ್ಲಿ ಆಗಿದ್ದರೂ ಕೂಡ ಅದು ಈಗ ಅನುಷ್ಠಾನಕ್ಕೆ ಬರುತ್ತಿದೆ. ಅದೆಲ್ಲವನ್ನು ಒಪ್ಪಿಕೊಂಡು, ಅವತ್ತಿನಿಂದ ಕೂಡ ನಾವುಗಳೆಲ್ಲಾ ಹದಿನಾಲ್ಕು ಜನರು ಮತ್ತು ಮಾನ್ಯ ಸಭಾಪತಿಯವರು ಸಹ ಸೇರಿಕೊಂಡು.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೆ, ನಾನು ಒಂದು ವಿಷಯಕ್ಕೆ ಸ್ಪಷ್ಟೀಕರಣ ನೀಡುತ್ತೇನೆ. ಈ ಪ್ರಕರಣ ಕೋರ್ಟ್‌ನಿಂದ 2009ರಲ್ಲಿ ತೀರ್ಮಾನವಾಯಿತು. ಇವರು ಆಗಲೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಈಗ 2020-21ಕ್ಕೆ ಕ್ರಮ ಕೈಗೊಳ್ಳುತ್ತಿದ್ದಾರೆ. ಅವರು ಇಲ್ಲಿಯವರೆಗೆ ಸುಮ್ಮನೆ ಇದ್ದಾರೆ. ಕಾನೂನು ಸಚಿವರು ಹೇಳಿದಂತೆ, ಅದಕ್ಕೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ, ಯಾರೂ ಸಹ ಕ್ರಮ ತೆಗೆದುಕೊಳ್ಳಲಿಲ್ಲ. ಅದಕ್ಕೆ ಈಗ ಸಮಸ್ಯೆ ಶುರುವಾಗಿದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯವನ್ನು ಹೇಳುತ್ತೇನೆ. ಇಲಾಖೆಯವರು ಸುಮಾರು 61 ದಾಖಲೆಗಳನ್ನು ಕೇಳಿದ್ದಾರೆ. ನನ್ನದು ಒಂದು ಶಿಕ್ಷಣ ಸಂಸ್ಥೆ ಇದೆ. ಈ ವರ್ಷ ಏಕೆ ಈ ರೀತಿಯ ರಗಳೆ ಬೇಕೆಂದು, ಮಾನ್ಯತೆಯನ್ನು ನವೀಕರಣ ಮಾಡಿಸುವುದಕ್ಕೆ ಹೋಗಿದ್ದೆ. ಆಗ ಅಗ್ನಿಶಾಮಕಕ್ಕೆ ಸಂಬಂಧಪಟ್ಟಂತೆ ನನಗೆ 53 ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಕೊಟ್ಟರು. ನಾವು ಅದನ್ನು ಮಾಡುವುದಕ್ಕೆ ಆಗುತ್ತದೆಯೇ? ಹಾಗಾದರೆ, ನಾನು ಏನು ಮಾಡಬೇಕೆಂದು ಹೇಳಿ. ನಾನು ಶಿಕ್ಷಣ ಸಂಸ್ಥೆಯನ್ನು ಮುಚ್ಚಿ ಆಸ್ಪತ್ರೆಯನ್ನು ನಡೆಸುವುದೇ? ಇಲ್ಲವೇ ಅಲ್ಲಿ ದನ ಕಟ್ಟಿಸಲೇ? ನಾನು ಅಲ್ಲಿ ಏನನ್ನು ಮಾಡಿಸುವುದು? ನಾನು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದೇನೆ. ಈ ರೀತಿ ಮಾಡಿ ಕುತ್ತಿಗೆಗೆ ಹಾಕಿ ಹೋಗಿದ್ದಾರೆ. ನಾನು ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೇನೆ. ನಾನೇ ಇದನ್ನು ಮಾಡುವುದಕ್ಕೆ ಆಗಲಿಲ್ಲವೆಂದರೆ, ಬೇರೆಯವರು ಯಾರು ಮಾಡುತ್ತಾರೆ? ನಾನು ಅಗ್ನಿಶಾಮಕ ದಳದ ಮುಖ್ಯಸ್ಥರನ್ನು ಕರೆದು ಮಾತನಾಡಿದ ಮೇಲೆ ಅವರು ಕೊನೆಗೆ 14 ಲಕ್ಷ ರೂಪಾಯಿಗಳಿಗೆ ಮಾಡಿಕೊಟ್ಟರು. 14 ಲಕ್ಷಕ್ಕೆ ಮಾಡಿಕೊಟ್ಟ ನಂತರ ಈಗ ನಾನು ಅದನ್ನು ಅಳವಡಿಸಿದ್ದೇನೆ. ಎಷ್ಟು ಜನರು ಆ ರೀತಿ ಮಾಡುವುದಕ್ಕೆ ಸಾಧ್ಯವಿದೆ? ಇದಾದ ನಂತರ, ಲೋಕೋಪಯೋಗಿ ಇಲಾಖೆಯವರಿಗೆ ತಿಳಿಸಿದರೆ ಅವರು ಇಂಜಿನಿಯರಿಂಗ್ ಕಾಲೇಜುಗಳಿಗೆ ಪತ್ರ ಬರೆಯುತ್ತಾರೆ. ಆಗ ನಾವು ಇಂಜಿನಿಯರಿಂಗ್ ಕಾಲೇಜ್‌ನವರಿಗೆ ಐವತ್ತು ಸಾವಿರ ಕಟ್ಟಬೇಕು. ಅವರಿಗೆ ಐವತ್ತು ಸಾವಿರ ಕಟ್ಟಿದ ಮೇಲೆ ಅವರು ನಮಗೆ ಒಂದು Certificate ಕೊಡುತ್ತಾರೆ. ಅದನ್ನು process ಮಾಡಿ ತೆಗೆದುಕೊಳ್ಳಬೇಕಾದರೆ ಅದಕ್ಕೆ ಸುಮಾರು ಎರಡು ಲಕ್ಷ ರೂಪಾಯಿ ಬೇಕು. ಈಗ ಇದು ಪುಟ್ಟಣ್ಣನವರದು ಎಂದು ನನ್ನ ಹೆಸರು ಹೇಳಿಕೊಂಡು ಹೋದರೆ Certificate ಸಿಗುವುದೇ ಇಲ್ಲ. ಆದರೆ, ಬೇರೆ ಯಾರೋ ಒಬ್ಬರನ್ನು ಬಿಟ್ಟರೆ ನಮಗೆ ಆ Certificate ಸಿಗುತ್ತದೆ. ನಾವು ಕೂಡ ಅವರಿಗೆ ಹಣವನ್ನು ನೀಡಿಯೇ ಮಾಡಿಸಿಕೊಳ್ಳಬೇಕು. ನಾವು ಅದರ ಬಗ್ಗೆ ಜೋರಾಗಿ ಮಾತನಾಡುವಂತಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಏನಾದರೂ ಜೋರಾಗಿ ಮಾತನಾಡಿದರೆ, ಅದು ಆಗದ ರೀತಿಯಲ್ಲಿ ಮಾಡಿಬಿಡುತ್ತಾರೆ. ಈ ರೀತಿ 61 ದಾಖಲೆಗಳನ್ನು ಕೇಳುತ್ತಿದ್ದಾರೆ. ಇದೆಲ್ಲವೂ ಕೂಡ ದುಡ್ಡು ಮಾಡುವಂತಹ ದಂಧೆಗೆ ಅಧಿಕಾರಿಗಳು ಮಾಡಿಕೊಂಡಿರುವುದು ಅಲ್ಲವೇ? ನಾನು ಹೇಳುವುದು ಅದು 2009ರಲ್ಲಿ ಇತ್ತೋ ಅದು ಅದಕ್ಕಿಂತ ಹಿಂದೆಯೇ ಶುರುವಾಯಿತೋ ಅಥವಾ ಈಗ ಶುರುವಾಯಿತೋ? ಆದರೆ, ಈಗ ಅದು ನಮ್ಮ ಗಮನಕ್ಕೆ ಬಂದ ಮೇಲೆ ಅದನ್ನು ಸರಿಪಡಿಸಬೇಕು ಅಲ್ಲವೇ? ಈಗ ಐ.ಸಿ.ಎಸ್.ಇ., ಮತ್ತು ಸಿ.ಬಿ.ಎಸ್.ಇ., ಬೋರ್ಡ್ ಇದೆ. ಹಾಗಾದರೆ, ಐ.ಸಿ.ಎಸ್.ಇ., ಮತ್ತು ಸಿ.ಬಿ.ಎಸ್.ಇ., ಬೋರ್ಡ್‌ನವರು ಈ ರೀತಿಯೇ ಮಾಡುತ್ತಿದ್ದಾರೆಯೇ? ಅವರು ನಮ್ಮನ್ನು ಹೀಗೆಯೇ ಕಟ್ಟಿ ಹಾಕುತ್ತಿದ್ದಾರೆಯೇ? ಈಗ ಪ್ರತಿ ವರ್ಷ ಮಾನ್ಯತೆ ನವೀಕರಣ ಮಾಡಬೇಕು ಎನ್ನುವುದು ಏಕೆ ಬೇಕು? ಈ ಹಿಂದೆ ಶಾಶ್ವತವಾದ ಮಾನ್ಯತೆಯನ್ನು ಕೊಡುತ್ತಿದ್ದರು. ಅದು ತಮಗೆ ಗೊತ್ತಿದೆ. ಈ ಹಿಂದೆ ಹತ್ತು ವರ್ಷಕ್ಕೆಂದು ಕೊಡುತ್ತಿದ್ದರು. ಅದನ್ನು ಐದು ವರ್ಷಕ್ಕೆ ಮಾಡಿದರು. ಆದರೆ, ಈಗ ಪ್ರತಿ ವರ್ಷ ನವೀಕರಣ ಮಾಡಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಮಂತ್ರಿಗಳಾಗಿದ್ದಾಗ ಅದನ್ನು ಹದಿನೈದು ವರ್ಷದವರೆಗೆ ಮಾಡಿದ್ದೀರಿ.

**ಸಭಾಪತಿಯವರು:-** ನಾನು ಈ ಹಿಂದೆ ಮಂತ್ರಿಯಾಗಿದ್ದಾಗ, ಐದು ವರ್ಷ, ಹತ್ತು ವರ್ಷ ಮತ್ತು ಹದಿನೈದು ವರ್ಷ ಎಂದು ಇತ್ತು. ಆ ನಂತರ ಹದಿನೈದು ವರ್ಷ ಆದಮೇಲೆ ಅದು permanent ಎಂದು ಕಾನೂನು ಮಾಡಲಾಗಿದೆ. ಅದಕ್ಕೆ ಕಾನೂನು ಇದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ತಾವು ಅದನ್ನು ಮಾಡಿದ್ದೀರಿ. ಆದರೆ, ಈಗ ಹೇಗೆ ಮಾಡಿದ್ದಾರೆಂದರೆ ಪ್ರತಿ ವರ್ಷ ಮಾನ್ಯತೆಯನ್ನು ನವೀಕರಣ ಮಾಡಬೇಕು. ಇದು ಯಾವ ರೀತಿ. ಈ ದಾಖಲೆಗಳನ್ನು ತರುವುದಕ್ಕೆ ಎಷ್ಟು ಕಷ್ಟವೆಂದು ಹೇಳುತ್ತೇನೆ. ಇಲಾಖೆಯವರು 61 ದಾಖಲೆಗಳು ಬೇಕೆಂದು ಪಟ್ಟಿ ಹಾಕಿ ಕೊಟ್ಟು ಬಿಡುತ್ತಾರೆ. ತಾವು ದಯಮಾಡಿ ಅದನ್ನು ಕೇಳಿ. ಸಕ್ಷಮ ಪ್ರಾಧಿಕಾರದ ಶಾಲಾ ಕಟ್ಟಡದ ಸುರಕ್ಷಾ ಪ್ರಮಾಣ ಪತ್ರ. ನಾನು ಕೆಲವೊಂದನ್ನು ಮಾತ್ರ ಓದಿ ಹೇಳುತ್ತೇನೆ. ಅವರು ನೀಡಿರುವಂತಹ 61 ಪಟ್ಟಿಗಳನ್ನು ಓದುವುದಿಲ್ಲ. ಅವುಗಳನ್ನೆಲ್ಲಾ ಓದುತ್ತಾ ಹೋದರೆ ತುಂಬಾ ಸಮಯವಾಗುತ್ತದೆ. ಸಕ್ಷಮ ಪ್ರಾಧಿಕಾರದ ಅಗ್ನಿ ಸುರಕ್ಷತಾ ಪ್ರಮಾಣ ಪತ್ರ. ಸಕ್ಷಮ ಪ್ರಾಧಿಕಾರ ವಿದ್ಯುತ್ ಸುರಕ್ಷತಾ ಪ್ರಮಾಣ ಪತ್ರ. ಈಗ ನಾವು ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿರುತ್ತೇವೆ. ಹಾಗಾಗಿ ಅದಕ್ಕೆ ಪ್ರಮಾಣ ಪತ್ರವನ್ನು ಎಲ್ಲಿಂದ ತರುವುದು. ಅದಕ್ಕೆ ಪ್ರಮಾಣ ಪತ್ರ ಕೊಡುವವರು ಯಾರು? ಸಕ್ಷಮ ಪ್ರಾಧಿಕಾರದಿಂದ ಆರೋಗ್ಯ ಮತ್ತು ನೈರ್ಮಲ್ಯ ಪ್ರಮಾಣ ಪತ್ರ. ನಾವು ಈ ಪ್ರಮಾಣ ಪತ್ರವನ್ನು ಎಲ್ಲಿಂದ ತಂದು ಇವರಿಗೆ ಕೊಡುವುದು. ಈ ದಾಖಲೆಗಳನ್ನು ಸರ್ಕಾರಿ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಾಲೆಗಳಿಂದ ತರಿಸಿಕೊಳ್ಳುವುದಕ್ಕೆ ಅಧಿಕಾರಿಗಳಿಗೆ ತಾಕತ್ತು ಇದೆಯೇ? ನಾವು ಇವರಿಗೆ ಏನು ಮಾಡಬೇಕೆಂದು ಹೇಳಿ. ನನಗೆ ಬರುವ ಆಕ್ರೋಶಕ್ಕೆ ಅವರಿಗೆ ಏನೇನೋ ಮಾಡಬೇಕು ಅನಿಸುತ್ತದೆ. ಇದೆಲ್ಲವೂ ಸಹ ದುಡ್ಡಿಗೋಸ್ಕರ ಮಾಡಿಕೊಂಡಿರುವಂಥದ್ದು. ಕ್ರೀಡೋಪಕರಣಗಳ ಪಟ್ಟಿ, ಗ್ರಂಥಾಲಯಗಳ ಒಟ್ಟು ಮೌಲ್ಯಗಳನ್ನು ಒಳಗೊಂಡಂತೆ ಒಟ್ಟು ಪುಸ್ತಕಗಳು. ವಿಜ್ಞಾನ ಉಪಕರಣಗಳ ಪಟ್ಟಿ. ಪೀಠೋಪಕರಣಗಳ ಪಟ್ಟಿ. ಈ ರೀತಿ 61 ಪಟ್ಟಿಗಳನ್ನು ಹಾಕಿದ್ದಾರೆ. ಇದು ಅಲ್ಲದೆ ಅಗ್ನಿನಿರೋಧಕ ಮತ್ತು ವಿದ್ಯುಚ್ಛಕ್ತಿ ಅಳವಡಿಕೆ ಬಗ್ಗೆ ದೃಢೀಕರಣ. ಈಗ ನಾವು ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡ ಮೇಲೆ ಮತ್ತೆ ಅದಕ್ಕೆ ದೃಢೀಕರಣ. ಇವುಗಳೆಲ್ಲವನ್ನು ಸಹ ಸುಮ್ಮನೆ ಹಾಕಿದ್ದಾರೆ. ಅದರ ಜೊತೆಗೆ ಸಿ.ಸಿ., ಟಿ.ವಿ., ಪ್ರಥಮ ಚಿಕಿತ್ಸೆ ಪೆಟ್ಟಿಗೆ ಮತ್ತು ದೂರು ಪೆಟ್ಟಿಗೆ ಇವುಗಳ ಫೋಟೋವನ್ನು ಒದಗಿಸಬೇಕೆಂದು ತಿಳಿಸಿದ್ದಾರೆ. ಕುಡಿಯುವ ನೀರಿನ ಸೌಲಭ್ಯದ ಫೋಟೋ. ಅದನ್ನು ಕೊಡದಿದ್ದರೆ ಅವರು ಒಪ್ಪುವುದಿಲ್ಲ. ಈಗ ಯಾರ ಮನೆಯದಾದರೂ ಸರಿ ಒಟ್ಟಿನಲ್ಲಿ ಅವರಿಗೆ ಫೋಟೋ ತಂದು ಕೊಡಬೇಕು. ನೀರಿನ ಟ್ಯಾಂಕ್ ಫೋಟೋ ಎಲ್ಲಿಯಾದರೂ ಸಹ ಫೋಟೋ ತೆಗೆದುಕೊಡಬೇಕು. ಅದನ್ನು ಸಹ ಕೊಡಬೇಕು. ಶೌಚಾಲಯಗಳು ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಇರುವುದರ ಬಗ್ಗೆ ಫೋಟೋ ಬೇಕು. ಈ ಪಟ್ಟಿಯನ್ನು ಹರಿದು ಹಾಕಬೇಕೇ, ಬೇಡವೇ ಎಂದು ಹೇಳಿ. ತಾವು ಇವರಿಗೆ ಏನು ಮಾಡಬೇಕೆಂದು ಹೇಳಿ. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹೊಸಬರು. ದಯವಿಟ್ಟು ಅವರು ಇದನ್ನು ಹರಿದು ಬಿಸಾಡಲಿ. ಈಗ ಸಿ.ಬಿ.ಎಸ್.ಇ., ಮತ್ತು ಐ.ಸಿ.ಎಸ್.ಇ., ಬೋರ್ಡ್‌ನವರು ಮಾಡಿದ್ದಾರೆ. ಆ ರೀತಿ ಆರಾಮವಾಗಿ ಮತ್ತು ಗೌರವಯುತವಾಗಿ ಶಾಲೆಗಳನ್ನು ನಡೆಸಿಕೊಂಡು ಹೋಗುವ ರೀತಿ ಮಾಡಲಿ ಈ ಎಲ್ಲಾ ಕೊಕ್ಕೆಗಳನ್ನು ಹಾಕಿ, ಕಂಟಕಗಳನ್ನು ಸೃಷ್ಟಿ ಮಾಡಿ, ಅವರು ಏನಾದರೂ ಕೂಡ ಖಾಸಗಿ ಶಾಲೆಗಳನ್ನು ಮುಚ್ಚಿಬಿಟ್ಟು, ಅವರೇ ನಡೆಸಿಕೊಳ್ಳುವಂತಹ ಏನಾದರೂ ಯೋಜನೆ ಇದ್ದರೆ ಅದನ್ನು ಸಹ ಹೇಳಿಬಿಡಲಿ.

**ಸಭಾಪತಿಯವರು:-** ಅಂದರೆ, ರಾಷ್ಟ್ರೀಕರಣದ ರೀತಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹೌದು. ಈಗ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ನಡೆಸುವುದಕ್ಕೆ ಸರ್ಕಾರದಿಂದ 25 ಸಾವಿರದಿಂದ 30 ಸಾವಿರ ಕೋಟಿ ಹಣ ಖರ್ಚಾಗುತ್ತಿದೆ. ಈಗ ಶೇಕಡಾ 50ರಷ್ಟು ಮಕ್ಕಳು ಖಾಸಗಿ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಆ ರೀತಿ ಮಾಡುವುದಾದರೆ, ಅಷ್ಟು ದುಡ್ಡನ್ನು ಖರ್ಚು ಮಾಡಬೇಕಲ್ಲವೇ? ಇಲ್ಲವೇ ಅವರು ಗೌರವಯುತವಾಗಿ, ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಕೊಡಬೇಕು. ತಮಗೆ ಗೊತ್ತಿರುವಂತೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರ, ಸಿಬ್ಬಂದಿ ಸೇವಾ ಭದ್ರತೆಯ ವರದಿ, ದೃಢೀಕೃತ ವೇತನ ಪಾವತಿ ಪಟ್ಟಿ ಮತ್ತು ಸೇವಾವಹಿ. ಇಲಾಖೆಯವರು ಸೇವಾಭದ್ರತೆಯನ್ನು ಕೇಳುತ್ತಿದ್ದಾರೆ. ಆದರೆ, ಈಗ ಶಾಲೆಗಳಿಗೆ ಮಕ್ಕಳೇ ಬರುತ್ತಿಲ್ಲ. ಇಲಾಖೆಯವರು ಸೇವಾ ಭದ್ರತೆಯನ್ನು ಕೊಡುತ್ತಾರೆಯೇ? ಈಗ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತಿಥಿ ಉಪನ್ಯಾಸಕರಿಗೆ ಏನು ಮಾಡಿದ್ದಾರೆ. ಹಾಗಾದರೆ, ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆಯನ್ನು ಕೊಟ್ಟಿದ್ದಾರೆಯೇ? ಹಾಗಾದರೆ ಅವರಿಗೆ ಸೇವಾ ಭದ್ರತೆಯನ್ನು ಏಕೆ ಕೊಡಬಾರದು. ಹಾಗಾದರೆ, ಸರ್ಕಾರಕ್ಕೆ ಒಂದು ರೀತಿ ಮತ್ತು ಖಾಸಗಿಯವರಿಗೆ ಒಂದು ರೀತಿಯೇ? ಈಗ ಅತಿಥಿ ಉಪನ್ಯಾಸಕರು ಪ್ರಾಥಮಿಕ ಶಾಲೆಯಲ್ಲಿ ಇದ್ದಾರೆ. ಪ್ರೌಢ ಶಾಲೆಯಲ್ಲಿದ್ದಾರೆ. ಪಿ.ಯು., ಕಾಲೇಜುಗಳಲ್ಲಿದ್ದಾರೆ. ಡಿಗ್ರಿ ಕಾಲೇಜುಗಳಲ್ಲಿದ್ದಾರೆ ಮತ್ತು ಪಿ.ಜಿ., ಕಾಲೇಜುಗಳಲ್ಲಿದ್ದಾರೆ. ಅವರುಗಳು ಸರ್ಕಾರದಲ್ಲಿಯೇ ಇದ್ದಾರೆ ಅಲ್ಲವೇ? ಆದರೆ, ಇಲಾಖೆಯವರು ಕೇಳಬೇಕಾಗಿರುವುದು ಏನೆಂದರೆ, ಅವರಿಗೆ ಸರಿಯಾಗಿ ಸಂಬಳ ಕೊಡುತ್ತಿದ್ದೀರಾ ಇಲ್ಲವೆ ಎಂದು. ಅದರ ದೃಢೀಕರಣ ಕೇಳಲಿ. ಇವರು ಕೇಳುವುದು ಏನೆಂದರೆ, ಅವರು ಏನೇನು fraud ಮಾಡಬೇಕೋ ಆ ರೀತಿಯ fraud ಸೃಷ್ಟಿ ಮಾಡುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಂದರೆ ಅವರಿಗೆ ಸೇವಾಭದ್ರತೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಇವರು ಸಹ ಸೇವಾಭದ್ರತೆಯನ್ನು ಎಲ್ಲಿ ಕೊಡುತ್ತಿದ್ದಾರೆ. ಈಗ ಸರ್ಕಾರದವರೆ ಸಂಬಳ ಕೊಡಲ್ಲಿಲ್ಲ. ಇದಕ್ಕಾಗಿ ನಾವು ಕಳೆದ ಇಪ್ಪತ್ತು ವರ್ಷಗಳಿಂದ ಹೋರಾಡುತ್ತಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯಕ್ಕೆ ನ್ಯಾಕ್ ಸಮಿತಿಯವರು ಬಂದಿದ್ದರು. ಆ ಮಹಾವಿದ್ಯಾಲಯ ನಮ್ಮ ತಂದೆಯವರ ಹೆಸರಿನಲ್ಲಿ ನಡೆಯುತ್ತಿದೆ. ನಾವು ಭೂಮಿಯನ್ನು ದಾನ ನೀಡಿರುವುದರಿಂದ ನನ್ನನ್ನು ಅಲ್ಲಿಗೆ ಕರೆಯಿಸಿದ್ದರು. ಆಗ ನ್ಯಾಕ್ ಸಮಿತಿಯವರು ನನಗೆ ಹೇಳಿದರು ಆ ವಿದ್ಯಾಲಯದಲ್ಲಿ ಒಂಬತ್ತು ಜನ regular faculties ಇದ್ದಾರೆ. ಆದರೆ, ನಲವತ್ತೆರಡು ಜನ ಅತಿಥಿ ಉಪನ್ಯಾಸಕರಿದ್ದಾರೆ.

(ಮುಂದು)

(1084) 14.12.2021 05.20 LL-MD(VK)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್. ಪಾಟೀಲ್(ಮುಂದು):-**

ಮಾನ್ಯ ಸಭಾಪತಿಯವರೇ, ಅಲ್ಲಿ 9 ಮಂದಿ regular faculty, 42 ಮಂದಿ guest faculty ಇರುತ್ತಾರೆ. ಈ ಬಗ್ಗೆ ನಾನು ವಿಚಾರಿಸಿದಾಗ ಅವರು ಅದಕ್ಕೆ, "ಇದು ಸರ್ಕಾರದ ಕೆಲಸ" ಎಂದು ಹೇಳುತ್ತಾರೆ. ಸರ್ಕಾರಿ ಸಂಸ್ಥೆ ಅದರಲ್ಲಿಯೂ ಫಸ್ಟ್ ಗ್ರೇಡ್ ಡಿಗ್ರಿ ಕಾಲೇಜಿನಲ್ಲಿ 9 ಮಂದಿ regular

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

faculty ಮತ್ತು 42 ಮಂದಿ guest faculty ಇದ್ದಾರೆ. ಇವರಿಗೆ ಹೇಳುವವರು, ಕೇಳುವವರು ಯಾರು ಇಲ್ಲವೆಂದು ಕಾಣುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ಡಿಪಾರ್ಟ್‌ಮೆಂಟ್...

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ತಾವು ಕೂಡ ನಮ್ಮ ಉತ್ತರ ಕರ್ನಾಟಕ ಭಾಗದವರಾಗಿರುತ್ತೀರಿ. ಇಲ್ಲಿ ಮಾರಿಗೊಂದು, ಮೊಳಕ್ಕೊಂದು ಸರ್ಕಾರಿ ಶಿಕ್ಷಣ ಸಂಸ್ಥೆಗಳಿವೆ. ಆದರೆ, ಇಡೀ ಉತ್ತರ ಕರ್ನಾಟಕದಲ್ಲಿ ಎಲ್ಲಾ ಕಡೆಗಳಲ್ಲಿಯೂ ಖಾಸಗಿ ಶಿಕ್ಷಣ ಸಂಸ್ಥೆಗಳಿದ್ದುದರಿಂದ ನಾವು ಇಲ್ಲಿಯವರೆಗೂ ಬಂದಿರುತ್ತೇವೆ. ಒಂದು ವೇಳೆ ಅವುಗಳು ಇಲ್ಲದೇ ಇದ್ದರೆ, ನಾವು ಊರಿನಲ್ಲಿ ದನ ಕಾಯುತ್ತಾ ಅಡ್ಡಾಡುತ್ತಿದ್ದೆವು. ಪ್ರಾಮಾಣಿಕವಾಗಿ ತಾವು ಕೂಡ ಆ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಅದೇ ರೀತಿ ನಾನು ಸಹ ಇಲ್ಲಿಗೆ ಬರುವುದಕ್ಕೆ ಆಗುತ್ತಿರಲಿಲ್ಲ. ನಮ್ಮಲ್ಲಿ ಶೇಕಡ 90 ರಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳಿರುತ್ತವೆ. ಇವುಗಳನ್ನು ಈ ರೀತಿ ಮಾಡಿದರೆ ಹೇಗೆ? ಬದಲಾಗಿ ಇರುವಂತಹ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಸುಧಾರಣೆ ಮಾಡಬೇಕು. ದೆಹಲಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಖಾಸಗಿ ಶಿಕ್ಷಣ ಸಂಸ್ಥೆಗಳಿಗಿಂತ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಅಗಾಧವಾದಂತಹ ಬದಲಾವಣೆ ಮಾಡಿದ್ದಾರೆ. ಆ ರೀತಿ ನಮ್ಮ ರಾಜ್ಯದಲ್ಲಿಯೂ ಮಾಡಬೇಕು. ಅದನ್ನು ಬಿಟ್ಟು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಗದಾಪ್ರಹಾರ ಮಾಡುವುದು ನನಗೆ ಸೂಕ್ತ ಅನಿಸುವುದಿಲ್ಲ. ತಾವು ತಮ್ಮ ಅನುಭವದ ಪ್ರಕಾರ ಹಾಗೂ ತಾವು ಕೂಡ ಉತ್ತರ ಕರ್ನಾಟಕ ಭಾಗದಿಂದ ಬಂದಿದ್ದು, ಆ ಭಾಗದವರಿಗೆ ಏನು ಉತ್ತರ ಹೇಳಬೇಕೆಂಬ ಬಗ್ಗೆ ತಾವೇ ಹೇಳಿ. ಇದರಿಂದಾಗಿ, ಆ ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಗಳ ಕೀಲಿ ಹಾಕುತ್ತಾರೆ ಹಾಗೂ ಶಿಕ್ಷಕರಿಗೆ ಸಂಬಳ ನಿಲ್ಲಿಸುತ್ತಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರತಿ ವರ್ಷ ಸರ್ಕಾರದಿಂದ ಮಾನ್ಯತೆ ಪಡೆಯಬೇಕೆಂದು ಹೇಳುತ್ತಾರೆ. ಪ್ರತಿ ವರ್ಷ ಮಾನ್ಯತೆ ಪಡೆಯುವ ಅವಶ್ಯಕತೆ ಏನಿದೆ? ಈ ಬಗ್ಗೆ ತಾವೇ ಹೇಳಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ 5 ವರ್ಷ, 10 ವರ್ಷ ಮತ್ತು 15 ವರ್ಷದ ನಂತರ ಶಾಶ್ವತವಾದ ಮಾನ್ಯತೆ ನೀಡಬೇಕು.

**ಸಭಾಪತಿಯವರು:-** ಈ ಬಗ್ಗೆ ಕಾನೂನು ಸಹ ಮಾಡಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾವುದೋ ದುರುದ್ದೇಶ ಇರಬೇಕು. ಅಂದರೆ, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಕೀಲಿ ಹಾಕಿಸಬೇಕೆಂಬ ದುರುದ್ದೇಶ ಇರಬಹುದು. ಆ ಖಾಸಗಿ ಶಿಕ್ಷಣ ಸಂಸ್ಥೆಗಳು ಇದ್ದುದರಿಂದ ನಾವು ನಾಲ್ಕು ಅಕ್ಷರ ಕಲಿತಿರುತ್ತೇವೆ. ಈಗ ಸರ್ಕಾರಿ ಶಾಲೆಗಳಿಗೆ ಮಕ್ಕಳು ಏತಕ್ಕೆ ಹೋಗುವುದಿಲ್ಲ? 2 ಮಕ್ಕಳು, 3 ಮಕ್ಕಳು ಮತ್ತು 4 ಮಕ್ಕಳು ಇರುವಂತಹ ಸುಮಾರು 5 ಸಾವಿರಕ್ಕಿಂತಲೂ ಹೆಚ್ಚು ಸರ್ಕಾರಿ ಶಾಲೆಗಳು ಇವೆ ಎಂಬ ಬಗ್ಗೆ ನಮ್ಮ ಬಳಿ ದಾಖಲೆ ಇದೆ. ಮಾನ್ಯ ಶಿಕ್ಷಣ ಸಚಿವರು ಹೊಸದಾಗಿ ಬಂದಿದ್ದು, ಅವರಿಗೆ ಆಸಕ್ತಿ ಮತ್ತು ಉತ್ಸಾಹ ಇದ್ದು, ಇದನ್ನು ಅವರು ನೋಡಿಕೊಳ್ಳಬೇಕು. ಇದರಲ್ಲಿ far reaching effects ಏನು consequences ಏನು, ಯಾರ ಮೇಲೆ ಇದರ ಗದಾಪ್ರಹಾರ ಆಗುತ್ತದೆ. Ultimately it affects the children. ಅದು ಶಾಲೆಯಲ್ಲಿ ಓದುತ್ತಿರುವಂತಹ ಮಕ್ಕಳ ಮೇಲೆ ಪರಿಣಾಮ ಆಗುತ್ತದೆ. ಇದು ಖಾಸಗಿ ಶಿಕ್ಷಣ ಸಂಸ್ಥೆಯ ಬಗ್ಗೆ ಒಂದೇ ದೃಷ್ಟಿ ಇಟ್ಟುಕೊಳ್ಳಬಾರದು. ಲಕ್ಷಾಂತರ ಮಕ್ಕಳು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಗುಣಾತ್ಮಕ ಶಿಕ್ಷಣ ಪಡೆದು ಅವರು ಅಕ್ಷರಸ್ಥ ಜನಾಂಗವಾಗಿ ನಾಡಿನ ಸತ್ಪ್ರಜೆಗಳಾಗಿದ್ದಾರೆ. ಸರ್ಕಾರ ಯಾರದ್ದೋ ಮೇಲೆ ಗದಾಪ್ರಹಾರ ಮಾಡುವುದಕ್ಕೆ ಹೋಗಿ, ಮಕ್ಕಳ ಮೇಲೆಯೇ ಗದಾಪ್ರಹಾರ ಮಾಡುತ್ತಾರೆ. Ultimately it affects the children. ಇದು ನನಗೆ ಸರಿ ಕಾಣುತ್ತಿಲ್ಲ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ನನಗಿಂತಲೂ ಹೆಚ್ಚು ಹಿರಿಯರಾಗಿದ್ದು, ಬಹಳ ವರ್ಷಗಳ ಹಿಂದಿನಿಂದಲೂ ಬಹಳಷ್ಟು ಹೋರಾಟ ಮಾಡಿದ್ದೀರಿ. ನಾನು ಬಂದಾಗಿನಿಂದಲೂ ಸಹ ತಮ್ಮ ಜೊತೆ ನಾವು ಹೋರಾಟ ಮಾಡಿದ್ದೇವೆ. ಆದರೆ, guest lecturers and guest teachers ಗಳಿಗೆ ನಾವು 12 ತಿಂಗಳು ಸಂಬಳ ಕೊಡಿಸುವುದಕ್ಕೆ ಆಗಿದೆಯೇ? ಈ ಬಗ್ಗೆ ನಾವು ಪ್ರಾಮಾಣಿಕವಾಗಿ ಚರ್ಚೆ ಮಾಡೋಣ. ಇದರಲ್ಲಿ ಆ ಸರ್ಕಾರ ಅಥವಾ ಈ ಸರ್ಕಾರ ಎಂದು ನಾನು ಹೇಳುವುದಿಲ್ಲ. ಅದನ್ನು ಕೊಡಿಸುವುದಕ್ಕೆ ಆಗಿರುವುದಿಲ್ಲ. ಸರ್ಕಾರವು ಅವರನ್ನು 9 ಅಥವಾ 10 ತಿಂಗಳಿಗೆ ಅವರನ್ನು ಬಿಡುಗಡೆ ಮಾಡಿ, 2 ಅಥವಾ 3 ತಿಂಗಳ ಸಂಬಳ ಉಳಿಸುವಂತಹ ಕೆಲಸವನ್ನು ಡಿಗ್ರಿ ಕಾಲೇಜುಗಳಲ್ಲಿ ಮತ್ತು ಪಿ.ಯು. ಕಾಲೇಜುಗಳಲ್ಲಿ ಮಾಡುತ್ತಾರೆ. ಆದರೆ, ಪ್ರಾಥಮಿಕ ಅಥವಾ ಹೈಸ್ಕೂಲ್‌ಗಳಲ್ಲಿ ಏನು ಮಾಡುತ್ತಾರೆಂದರೆ, ಅಕ್ಟೋಬರ್ ತಿಂಗಳಿನಲ್ಲಿ ಸದರಿ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿ, ನವೆಂಬರ್ ತಿಂಗಳಿನಲ್ಲಿ ಆ ಹುದ್ದೆಗಳನ್ನು ತುಂಬುತ್ತಾರೆ. ಇದರಿಂದಾಗಿ, ಅವರು ಅವರಿಗೆ ಸಂಬಳ ಕೊಡುವುದೇ ಕೇವಲ 06 ತಿಂಗಳು.

**ಸಭಾಪತಿಯವರು:-** ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳವರೆಗೆ ಯಾರು ಸಹ ಇರುವುದಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಕೇವಲ 06 ತಿಂಗಳು ಸಂಬಳ ಕೊಟ್ಟು ಸರ್ಕಾರದವರು ಹೇಗೆ ಶಾಲೆ ನಡೆಸುತ್ತಾರೆ? ಇವರು ಹೇಗೆ ಖಾಸಗಿ ಶಾಲೆಗಳವರನ್ನು ಕೇಳುತ್ತಾರೆ? ಈ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಅಧಿಕಾರಿಗಳಿಗೆ ಅದನ್ನು ಕೇಳುವುದಕ್ಕೆ ಯಾವ ಅಧಿಕಾರ ಇದೆ ಅಥವಾ ಯಾವ ಮನುಷ್ಯತ್ವ ಇದೆ? ನಾನು ಹೇಳುವುದೇನೆಂದರೆ, ಖಾಸಗಿ ಶಾಲೆಗಳವರಿಗೆ ಉತ್ತಮ ವಾತಾವರಣ ನಿರ್ಮಾಣ ಮಾಡಿ, ಅವರಿಗೆ ಪ್ರೋತ್ಸಾಹ ಕೊಡಬೇಕು. ಖಾಸಗಿ ಶಾಲೆಗಳವರಿಗೆ, "ತಾವು ಚೆನ್ನಾಗಿ ಸಂಸ್ಥೆ ನಡೆಸುತ್ತಿದ್ದೀರಿ, ಇನ್ನಷ್ಟು ಚೆನ್ನಾಗಿ ನಡೆಸಿ" ಎಂದು ಹೇಳಬೇಕು. ಆದರೆ, ಸರ್ಕಾರದವರು ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿರ್ನಾಮ ಮಾಡುತ್ತಿದ್ದಾರೆ. ಅವರಿಗೆ ಅಷ್ಟಿಷ್ಟು ತೊಂದರೆ ಕೊಡುತ್ತಿಲ್ಲ. ಬದಲಾಗಿ, ಅವರಿಗೆ ಭಯಂಕರ ತೊಂದರೆ ಕೊಡುತ್ತಿದ್ದಾರೆ. ಇದರ ಜೊತೆಗೆ, shifting ಶಾಲೆಗಳು ಅಂದರೆ, ಒಂದು ಶಾಲೆ ಒಂದು ಜಾಗದಲ್ಲಿ ನಡೆಯುತ್ತಿರುತ್ತದೆ. ಆ ಶಾಲೆಯವರು ನಮ್ಮ ಶಾಲೆಗೆ ಸ್ವಂತ ಕಟ್ಟಡ ಕಟ್ಟಬೇಕೆಂದು ಈಗಿರುವಂತಹ ಶಾಲೆಯಿಂದ 100ಮೀಟರ್ ಅಥವಾ 200ಮೀಟರ್ ಅಂತರದಲ್ಲಿ ಒಂದು ಶಾಲೆಯನ್ನು ಕಟ್ಟಿಸುತ್ತಾರೆ. ಅದರಿಂದಾಗಿ, ಶಾಲೆಯ ವಿಳಾಸ ಬದಲಾವಣೆ ಆಗುತ್ತದೆ. ಅವರಿಗೆ ಎಂತಹ ತೊಂದರೆ ಕೊಡುತ್ತಾರೆಂದರೆ, ಆ ಶಾಲೆಯವನು ನಾನು ಏತಕ್ಕೆ ಸಾಲ ಮಾಡಿ ಈ ಶಾಲೆ ಕಟ್ಟಿಸಿದೆ, ದೇವರು ನನಗೆ ಯಾವ [illegible] ಜನ್ಮ ತೆಗೆದುಕೊಂಡೆ ಎನ್ನುವಷ್ಟು ಹುಚ್ಚು ಹಿಡಿಸುತ್ತಾರೆ.

**ಸಭಾಪತಿಯವರು:-** ತಾವು ಒಂದು ಶಾಲಾ ಪ್ರಕರಣದ ಬಗ್ಗೆ ಹೇಳುತ್ತಿದ್ದೀರಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅದೊಂದೇ ಪ್ರಕರಣ ಅಲ್ಲ. ಎಲ್ಲಾ ಕಡೆಗಳಲ್ಲಿಯೂ ಕೂಡ ಈ ರೀತಿಯಾದಂತಹ ವಾತಾವರಣ ಸೃಷ್ಟಿ ಮಾಡಿದರೆ ಹೇಗೆ? ಅವರು ಏನು ಮಾಡಬೇಕು.

**ಸಭಾಪತಿಯವರು:-** ಇಷ್ಟು ರೂಲ್ಸ್ ತೆಗೆದವರು ಯಾರು? ಅಂದರೆ, ಈ ಸುತ್ತೋಲೆಯನ್ನು ಹೊರಡಿಸಿದವರು ಯಾರು?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ಸುತ್ತೋಲೆಯಲ್ಲಿ 61 ಮಾರ್ಗಸೂಚಿಗಳು ಇವೆ. Actually, ನಾನು ಇದನ್ನು ಹರಿಯಬೇಕು ಈ ಸದನದಲ್ಲಿ ಎಂದುಕೊಂಡಿದ್ದೆನು.

**ಸಭಾಪತಿಯವರು:-** ಆ ರೀತಿ ಮಾಡಬೇಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಆ ರೀತಿ ಮಾಡುವುದಿಲ್ಲ. ಏಕೆಂದರೆ, ಇದುವರೆವಿಗೂ ನಾವು ಪ್ರಾಮಾಣಿಕರೆಂದು ಬಂದಂತಹ ಅನೇಕ ಸಚಿವರನ್ನು ಇಲ್ಲಿ ನೋಡಿರುತ್ತೇವೆ. ಅವರು ಎಷ್ಟು ಪ್ರಾಮಾಣಿಕರು, ಇಲ್ಲಿ ಏನೆಲ್ಲಾ ಮಾಡಿದರೆಂದು ನಾವು ನೋಡಿರುತ್ತೇವೆ. ಆದರೆ, ಶ್ರೀ ಬಿ.ಸಿ. ನಾಗೇಶ್‌ರಂತಹ ಸಚಿವರು ಪ್ರಾಮಾಣಿಕರಾಗಿದ್ದು, ಏನೋ ಬದಲಾವಣೆ ಮಾಡಬೇಕೆಂದು ಇಲ್ಲಿಗೆ ಬಂದಿರುತ್ತಾರೆ. ಅವರಿಗೆ ಪ್ರಾಮಾಣಿಕವಾಗಿ ಬೆಂಬಲ ಕೊಡಬೇಕೆಂಬ ದೃಷ್ಟಿಯಿಂದ ನಾನು ಆ ಕೆಲಸ ಮಾಡುತ್ತಿಲ್ಲ. ಅವರಿಗೆ ಮುಖ ಮುರಿಯಬಾರದು, ಮತ್ತೊಂದು ಮಾಡಬಾರದೆಂಬ ಕಾರಣಕ್ಕೆ ಅದನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿಲ್ಲ. ಇಲ್ಲವಾಗಿದ್ದರೆ ಅಥವಾ ಆ ಜಾಗದಲ್ಲಿ ಬೇರೆ ಮಂತ್ರಿಗಳು ಇದ್ದಿದ್ದರೆ, ಆ ಸುತ್ತೋಲೆಯನ್ನು ಹರಿದು ಅವರ ಮುಖದ ಮೇಲೆ ಎಸೆಯಬೇಕೆಂದು ಅಂದುಕೊಂಡಿದ್ದೆನು. **(ಗೊಂದಲ)** ಆದರೆ, ಸಜ್ಜನ ರಾಜಕಾರಣಿ ಇರುವುದರಲ್ಲಿ ಪ್ರಾಮಾಣಿಕವಾಗಿ ಇಂತಹ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅದರಲ್ಲಿಯೂ ಉಚಿತ ಸೇವೆ ಮಾಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಮಾಧುಸ್ವಾಮಿಯವರೇ, ಒಂದು ಮಾತನ್ನು ನಾನು ಹೇಳಬೇಕು. ಆದರೆ, ಆ ಮಾತನ್ನು ಹೇಳಬೇಕೋ ಅಥವಾ ಬೇಡವೋ ನನಗೆ ಗೊತ್ತಾಗುತ್ತಿಲ್ಲ. ನಾನು ಶಿಕ್ಷಣ ಮಂತ್ರಿಯಾಗಿ ನಂತರ ಮಾಜಿ ಮಂತ್ರಿಯಾದ ಬಳಿಕ ಬಿಜಾಪುರದಲ್ಲಿ ಒಬ್ಬರು ಡಿ.ಡಿ.ಪಿ.ಐ. ಆಗಿದ್ದರು. ಅವರು ಒಂದು ಹೆಣ್ಣುಮಗಳಿಗೆ ಬೇರೆ ಕಡೆಗೆ ಟ್ರಾನ್ಸ್‌ಫರ್ ಆಗಿದ್ದು, ಅವರನ್ನು ಬಿಡುಗಡೆ ಮಾಡಿರಲಿಲ್ಲ. ಈ ಬಗ್ಗೆ ನಾನು ಸುಮಾರು ಹತ್ತು ಬಾರಿ ಹೇಳಿದ್ದೆನು. ಈ ಬಗ್ಗೆ ಆ ಹೆಣ್ಣುಮಗಳು ನನ್ನ ಬಳಿ ಬಂದು, "ನನ್ನ ವರ್ಗಾವಣೆಗಾಗಿ 5 ಸಾವಿರ ರೂಪಾಯಿ ಹಣ ನೀಡಿದ್ದು, ಪುನಃ 5 ಸಾವಿರ ರೂಪಾಯಿ ಹಣ ಕೇಳುತ್ತಿದ್ದಾರೆ" ಎಂದು ಹೇಳಿದರು. ಅದಕ್ಕೆ ನಾನು ಸಂಬಂಧಪಟ್ಟ ಅಧಿಕಾರಿಯನ್ನು, "ಏನ್ರಿ, ನಿಮಗೆ ನಾಚಿಕೆ ಬರುವುದಿಲ್ಲವಾ, ವರ್ಗಾವಣೆಗಾಗಿ 5 ಸಾವಿರ ರೂಪಾಯಿ ಹಣ ಕೇಳುತ್ತಿದ್ದೀರಿ" ಎಂದು ಕೇಳಿದೆನು. ಅದಕ್ಕೆ ಆ ಅಧಿಕಾರಿ ವಾಪಸ್ಸು ನನಗೆ ಏನು ಉತ್ತರ ನೀಡಿದನೆಂದರೆ, "ಸರ್, ನೀವು ಇಂಗ್ಲಿಷ್ ಮೀಡಿಯಂ ಸ್ಕೂಲ್ ಬಂದ್ ಮಾಡಿದ್ದೀರಿ, ವರ್ಗಾವಣೆ ಬಂದ್ ಮಾಡಿದ್ದೀರಿ. ನಿಮ್ಮಂತಹವರು ಬಂದಾಗ ನಾನು ಏನು ಖರ್ಚು ಮಾಡಲಿ" ಎಂದು ನನ್ನನ್ನೇ ಕೇಳುತ್ತಾನೆ. ಈ ವಿಷಯವನ್ನು ಇಲ್ಲಿ ಹೇಳಬೇಕೆಂದು ಇತ್ತು. ನಿಮ್ಮಂತಹವರು ಬಂದಾಗ ಏನು ಖರ್ಚು ಮಾಡಬೇಕೆಂಬ ಚಿಂತನೆಯಲ್ಲಿ ಅಧಿಕಾರಿಗಳು ಇರುತ್ತಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ. ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಬೆಂಗಳೂರು ಅಂದರೆ, ಮೆಟ್ರೋ ಪಾಲಿಟನ್ ಸಿಟಿಗಳಲ್ಲಿ, ಕಾರ್ಪೋರೇಷನ್‌ಗಳಲ್ಲಿ, ಜಿಲ್ಲಾ ಕೇಂದ್ರಸ್ಥಾನಗಳಲ್ಲಿ ಶಾಲೆಗಳು ಅಥವಾ ಕಾಲೇಜುಗಳ ಕಟ್ಟಡಗಳನ್ನು ಕಟ್ಟಿಬಿಟ್ಟಿದ್ದಾರೆ. ಆದರೆ, ಆ ಶಾಲೆಗಳಿಗೆ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕೆಂದರೆ, ಅದು ಯಾವುದೇ ಕಾರಣಕ್ಕೂ ಸಾಧ್ಯವಿರುವುದಿಲ್ಲ. ಈ ವಿಷಯದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ತನ್ನ ಆದೇಶದಲ್ಲಿ ಹೇಳಿದ್ದರೂ ಸಹ ಅಥವಾ ಸರ್ಕಾರ ಕಾಯಿದೆ ಮಾಡಿದರೂ ಕೂಡ ಅದನ್ನು ಅಳವಡಿಸುವುದಕ್ಕೆ ಸಾಧ್ಯವಿರುವುದಿಲ್ಲ. ಏಕೆಂದರೆ, ಆ ಶಾಲಾ-ಕಾಲೇಜುಗಳ ಕಟ್ಟಡದ ಸುತ್ತ ಅಗ್ನಿಶಾಮಕ ವಾಹನ ಓಡಾಡಬೇಕು. ಆ ಕಟ್ಟಡವನ್ನು ಬೇಕರಿ ಕೇಕ್ ರೀತಿ ಕಟ್ ಮಾಡುವುದಕ್ಕೆ ಆಗುತ್ತದೆಯೇ? ಈಗಾಗಲೇ ಅಲ್ಲಿ ಕಟ್ಟಡ ನಿರ್ಮಿಸಲಾಗಿರುತ್ತದೆ. ಅಲ್ಲದೇ, ಸದರಿ ಕಟ್ಟಡ ಕಟ್ಟಿ ಈಗಾಗಲೇ 30 ರಿಂದ 50 ವರ್ಷ ಆಗಿದ್ದು, ಅಲ್ಲಿ ಶಾಲೆ-ಕಾಲೇಜು ನಡೆಯುತ್ತಿರುತ್ತದೆ. ಆ ಕಟ್ಟಡಕ್ಕೆ ಇವೊತ್ತಿನ ದಿವಸ conversion copy ಕೇಳುತ್ತಾರೆ. ಅವೊತ್ತಿನ ದಿವಸದ conversion

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

copy ತಂದು ಕೊಡಿ. ಇಲ್ಲವಾದರೆ ಈಗ ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. ಒಂದು ರೀತಿಯ ಚಿತ್ರ-ವಿಚಿತ್ರವಾಗಿ ಶಿಕ್ಷಣ ಇಲಾಖೆ ಹಾಳಾಗಿ ಹೋಗುತ್ತಿದೆ. ದಯಮಾಡಿ, ನಮ್ಮ ಕಷ್ಟ ಏನಿದೆ, ಅದು ತಮಗೂ ಸಹ ಗೊತ್ತಿದೆ. ಅಂದರೆ, ಸರ್ಕಾರ ಎಷ್ಟು ಉದ್ಯೋಗ ಕೊಟ್ಟಿದೆಯೋ ಅದಕ್ಕಿಂತಲೂ ಹೆಚ್ಚಿನ ಉದ್ಯೋಗ ಖಾಸಗಿ ಶಿಕ್ಷಣ ಸಂಸ್ಥೆಗಳು ಕೊಟ್ಟಿರುತ್ತವೆ. ಇದರಿಂದಾಗಿ, ಎಷ್ಟೋ ಜನರ ಜೀವನ ನಡೆಯುತ್ತಿದೆ. ಉದಾಹರಣೆಗೆ, ಒಂದು ಕೈಗಾರಿಕೆ ಸ್ಥಾಪನೆಗೆ ಕೆ.ಐ.ಎ.ಡಿ.ಬಿ., ನಿಂದ ಅರ್ಜಿ ಆಹ್ವಾನಿಸುತ್ತಾರೆ. ಅದರಲ್ಲಿ ಅವರಿಗೆ, 3 ರಿಂದ 5 ವರ್ಷದವರೆಗೆ ಉಚಿತ ವಿದ್ಯುತ್, ಉಚಿತ ನೀರು, ತೆರಿಗೆ ವಿನಾಯಿತಿ, ಸಬ್ಸಿಡಿ ಇದೆಲ್ಲವನ್ನೂ ಕೊಡುತ್ತಾರೆ. ಇವೆಲ್ಲವನ್ನೂ ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಏತಕ್ಕೆ ಕೊಡುತ್ತಾರೆಂದರೆ, ಅವರು ಉದ್ಯೋಗ ಸೃಷ್ಟಿ ಮಾಡುತ್ತಾರೆ ಮತ್ತು ಅದರಿಂದಾಗಿ, ಸಾಕಷ್ಟು ಜನರಿಗೆ ಉದ್ಯೋಗ ಕೊಡುತ್ತಾರೆಂದು ಉಚಿತವಾಗಿ ಕೊಡುತ್ತಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳವರು ಏನು ಮಾಡುತ್ತಿದ್ದಾರೆಂದರೆ, ಲಕ್ಷಾಂತರ ಮಕ್ಕಳಿಗೆ ವಿದ್ಯೆ ಕೊಡುತ್ತಿದ್ದಾರೆ ಮತ್ತು ಸಾವಿರಾರು ಶಿಕ್ಷಕರಿಗೆ/ನಿರುದ್ಯೋಗಿಗಳಿಗೆ ಕೆಲಸ ಕೊಡುತ್ತಿದ್ದಾರೆ. ಅದನ್ನು ಸರ್ಕಾರ ಗೌರವಿಸಬೇಕೋ ಹೊರತು ಅಥವಾ ಅವರಿಗೆ ಉತ್ತೇಜನ ಕೊಡಬೇಕೇ ಹೊರತು ಅವರನ್ನು ಈ ರೀತಿಯಾಗಿ ಅವಹೇಳನ ಮಾಡುವಂಥದ್ದು ಅಥವಾ ತೊಂದರೆ ಮಾಡುವಂಥದ್ದು ಎಷ್ಟು ಸೂಕ್ತ, ಎಷ್ಟು ಸರಿ? ನಾನು ಅವರು ಮಾಡಿದರು, ಇವರು ಮಾಡಿದರೆಂದು ಹೇಳುವುದಿಲ್ಲ. ಇದು ಅತ್ಯಂತ ಕೆಟ್ಟ ವ್ಯವಸ್ಥೆ ಆಗಿರುತ್ತದೆ. ನಮ್ಮ ಕಷ್ಟಕ್ಕೆ ನಾವು ಸ್ಪಂದಿಸುತ್ತಿಲ್ಲ [illegible] ದಯಮಾಡಿ, ಈ ವಿಷಯದ ಬಗ್ಗೆ ಒಂದು ಸದನ ಸಮಿತಿ ಮಾಡಿ. (ಗೊಂದಲ) ಒಂದು ನಿಮಿಷ ಪ್ಲೀಸ್, ನನ್ನ ಸಲಹೆಯನ್ನು ನಾನು ಹೇಳುತ್ತೇನೆ. ಆ ನಂತರ ತಾವು ಹೇಳಿ, ನಾನು ಯಾರನ್ನು ಬೇಡ ಎಂದು ಹೇಳುವುದಿಲ್ಲ.

**ಸಭಾಪತಿಯವರು:-** ಪುಟ್ಟಣ್ಣನವರೇ, ಏನು ಮಾತನಾಡುತ್ತಿದ್ದೀರಿ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನನ್ನ ಸಲಹೆಯನ್ನು ನಾನು ಕೊಡುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅಲ್ಲಿಯವರೆಗೂ ಏನು ಎಂದು ನಾನು ಕೇಳುತ್ತಿದ್ದೇನೆ?

**ಸಭಾಪತಿಯವರು:-** ಅದನ್ನು ಅವರು ಹೇಳುತ್ತಾರೆ, ಅವರಿಗೆ ಅವಕಾಶ ಕೊಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅಲ್ಲಿಯವರೆಗೂ ಏನು ಮಾಡಬೇಕೆಂದು ನಾನು ನನ್ನ ಸಲಹೆಯನ್ನು ಈಗ ಹೇಳುತ್ತೇನೆ. ಅದನ್ನು ತಾವು ಕೇಳಿ. ಈ ಬಗ್ಗೆ ಒಂದು ಸದನ ಸಮಿತಿ ರಚನೆ ಮಾಡಿ. ಅಲ್ಲಿಯವರೆಗೂ ಇಲ್ಲಿ ಮಕ್ಕಳ 10ನೇ ತರಗತಿ ಪರೀಕ್ಷೆಗೆ ಹೋಗುತ್ತಿದ್ದಾರೆ. ಅಲ್ಲಿ ಒಬ್ಬರಿಗೂ ಅನ್ಯಾಯವಾಗುವುದಿಲ್ಲ. ಪ್ರತಿಯೊಂದು ಶಾಲೆಯಲ್ಲಿಯೂ ಆ ಮಕ್ಕಳು ಪರೀಕ್ಷೆಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಕುಳಿತುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಎರಡನೆಯದಾಗಿ, ಇಡೀ ರಾಜ್ಯದಲ್ಲಿ ಯಾವುದೇ ಅನುದಾನಿತ ಶಾಲೆ ಅಥವಾ ಯಾವುದೇ ಪದವಿ ಪೂರ್ವ ಕಾಲೇಜಿನಲ್ಲಿ ಸಂಬಳವನ್ನು ನಿಲ್ಲಿಸಬಾರದು. ಈ ಎರಡನ್ನೂ ಮಾಡಬೇಕು. ಶ್ರೀ ಕುಮಾರ್ ನಾಯಕ್‌ರವರು ಈ ಹಿಂದೆ ಸಿ.ಪಿ.ಐ. ಆಗಿದ್ದರು. ಅವರು ಒಂದು ಆದೇಶ ಮಾಡಿದ್ದಾರೆ. ಅದು ತಮ್ಮ ಬಳಿ ಇರಬಹುದು. ಒಂದು ವೇಳೆ ತಮ್ಮ ಬಳಿ ಇಲ್ಲದೇ ಇದ್ದರೆ, ಸದರಿ ಆದೇಶದ ಪ್ರತಿ ನನ್ನ ಬಳಿ ಇದೆ. ತಾವು ಬಯಸಿದರೆ ನಾನು ಅದನ್ನು ತಮಗೆ ತೋರಿಸುತ್ತೇನೆ.

(ಮುಂದು)

(1085) 14.12.2021 5.30 YL- MD(VK) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಮುಂದು):-**

ಯಾವುದೇ ವಿಷಯವನ್ನಿಟ್ಟುಕೊಂಡು ಮಾನ್ಯತೆ ನವೀಕರಣವಾಗಿಲ್ಲವೆಂದು ಯಾವುದೇ ಶಾಲೆಯ ಸಂಬಳವನ್ನು ನಿಲ್ಲಿಸಬಾರದೆಂದು ಆದೇಶ ಹೊರಡಿಸಲಾಗಿದೆ. ಆದರೆ, ಇವತ್ತಿನ ದಿವಸ ಪಿ.ಯು. ಬೋರ್ಡ್ ಆರ್.ಟಿ.ಓ. ಕಛೇರಿ ರೀತಿ ಆಗಿದೆ. ಅಲ್ಲಿ ಕಾಲು ಇಡಲು ಅಸಹ್ಯವಾಗುತ್ತದೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಯಾವುದನ್ನೋ ಯಾವುದಕ್ಕೋ ಸಂಪರ್ಕ ಮಾಡುವುದು ಬೇಡ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಏನು ವ್ಯವಹಾರ ಮಾಡುವುದಕ್ಕೆ ಆಗುತ್ತಿಲ್ಲ. ಮಾನ್ಯತೆ ಇರಬಹುದು, ಮತ್ಯಾವುದೋ ಇರಬಹುದು, ಉಚಿತವಾಗಿ ಹೋಗುವ ರೀತಿ ಮಾಡಬೇಕಲ್ಲವೇ? ಇವತ್ತಿನ ದಿವಸ ಅಂತಹ ವಾತಾವರಣ ಇಲ್ಲದೇ ಏಜೆಂಟ್‌ಗಳ ಮೂಲಕ ಹೋಗಬೇಕಾಗಿದೆ. ಈ ವಿಚಾರವು ನನಗೆ ಏತಕ್ಕೆ ನೇರವಾಗಿ ಗೊತ್ತಾಗುತ್ತಿದೆ ಎಂದರೆ, ನನ್ನದು ಒಂದು ಸಂಸ್ಥೆ ಇದೆ ಅಲ್ಲವೇ? ಅಲ್ಲಿ ನೋಡುತ್ತಿದ್ದೇನೆ. ಇಂತಹ ಒಂದು ಕೆಟ್ಟ ವ್ಯವಸ್ಥೆಯನ್ನು ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ ಇದನ್ನು ಸಹಿಸಬಾರದು. ದಯವಿಟ್ಟು ಒಂದು ಸದನ ಸಮಿತಿ ಮಾಡಿ. ಈಗಾಗಲೇ ಎರಡು ಸಲಹೆಯನ್ನು ನೀಡಿದ್ದು, ಅದನ್ನು consider ಮಾಡಿ, ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಅರುಣ ಶಹಾಪುರರವರೆ, ತಾವು ಮಾತನಾಡಿ. ಈಗಾಗಲೇ ಸಾಕಷ್ಟು ವಿಚಾರವನ್ನು ಮಾನ್ಯ ಪುಟ್ಟಣ್ಣನವರು ಪ್ರಸ್ತಾಪ ಮಾಡಿದ್ದು, ಸ್ವಲ್ಪವೇ ಮಾತನಾಡಿ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಬಹಳ ಸುದೀರ್ಘವಾದ ವಿಷಯವಾಗಿದೆ. ಕುಂಭಕೋಣಂನಲ್ಲಿ ನಡೆದಿರುವಂಥ ದುರ್ಘಟನೆ ಆಧಾರಿತವಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋದ ಪ್ರಯುಕ್ತ 2009ನೇ ಸಾಲಿನಲ್ಲಿ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡುತ್ತದೆ. ಅದರಂತೆ 2009ನೇ ಸಾಲಿನಿಂದ ಇಲ್ಲಿಯವರೆಗೂ ಅಧಿಕಾರಕ್ಕೆ ಬಂದಿರುವ ಸರ್ಕಾರವು ಇದರ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರಿ ತಪ್ಪು ಮಾಡಿದ್ದೆ ಅಥವಾ ಮನಬಂದಂತೆ ಆದೇಶ ಹೊರಡಿಸಿ ತಪ್ಪು ಮಾಡಿದ್ದೆ. ನನಗೆ ತಿಳಿದಿರುವ ಹಾಗೆ ಎಲ್ಲಿಯೋ ಒಂದು ಕಡೆ ನಮ್ಮ ಶಿಕ್ಷಣ ಇಲಾಖಾಧಿಕಾರಿಗಳಿಗೆ ಸರ್ಕಾರಿ ಶಾಲೆ ಎಂದರೆ, ನಮ್ಮದು. ಖಾಸಗಿ ಶಾಲೆ ಎಂದರೆ ನಮ್ಮದಲ್ಲ ಎನ್ನುವಂಥ ಭಾವನೆ ಏನಿದೆ, ಅದು ಈ ಸಮಸ್ಯೆಗೆ ಮೂಲ ಎಂದು ಅನಿಸುತ್ತದೆ. ಈ ರಾಜ್ಯದಲ್ಲಿ ಇಷ್ಟೆಲ್ಲಾ ದೊಡ್ಡ ಪ್ರಮಾಣದಲ್ಲಿ ಸರ್ಕಾರಿ ಶಾಲೆಗಳಿವೆ. ಯಾವತ್ತು ಸಹ ಇಲಾಖಾಧಿಕಾರಿಗಳು ಇದನ್ನು ಜಾರಿಗೊಳಿಸಿರುವ implication ಏನು ಎಂಬುದರ ಬಗ್ಗೆ ಯೋಚನೆ ಮಾಡಿದ್ದಾರೆ ಅದಕ್ಕೆ ಸಂಬಂಧಿಸಿದಂತೆ ಒಂದು ಸಭೆಯ ನಡವಳಿಯನ್ನು ತೋರಿಸಲಿ. ಯಾವುದು ಖಾಸಗಿ ಶಾಲೆಗೆ ಅನ್ವಯಿಸುತ್ತದೆಯೋ ಅಥವಾ ಸುಪ್ರೀಂ ಕೋರ್ಟ್ ತೀರ್ಮಾನವನ್ನು ಖಾಸಗಿ ಶಾಲೆಗೆ ಅನ್ವಯ ಮಾಡಬೇಕೆಂದು ಹೊರಟಿದ್ದೇವೆ ಅದನ್ನು ನಾಳೆ ದಿವಸ ಒಂದು ವೇಳೆ ಸರ್ಕಾರಿ ಶಾಲೆಗೆ ಅನ್ವಯಿಸಿ ಎಂದರೆ ಅದರ capital expenditure ಎಷ್ಟು? ಎರಡನೆಯದಾಗಿ, building safety and fire safety ಪ್ರಮಾಣಪತ್ರಗಳ recuring expenditure ಎಷ್ಟು? ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಬಹಳ ಜೋರು ಮಾಡುತ್ತೇವೆ. ಹಾಗೆಯೇ ಸರ್ಕಾರಿ ಶಿಕ್ಷಣ ಸಂಸ್ಥೆಯಲ್ಲಿ ಮಾಡಿ ಎಂದರೆ, ಪಿ.ಡಬ್ಲ್ಯೂ.ಡಿ. ಯಿಂದ building safety ಪ್ರಮಾಣಪತ್ರ ತರಬೇಕು, Fire Department Office, Divisional Headquarters ನಿಂದ ಪ್ರಮಾಣಪತ್ರ ತರಬೇಕು. ಈ ಹಿಂದೆ ಸರ್ಕಾರಿ ಶಾಲೆಗಳು 54,000 ಇತ್ತು. ಆದರೆ, ಈಗ ಸುಮಾರು 47 ಸಾವಿರದಿಂದ 48 ಸಾವಿರ ಉಳಿದಿರಬಹುದು ಎಂದು ನನಗೆ ಅನಿಸುತ್ತಿದೆ. ಪ್ರತಿ ಹಳ್ಳಿಯಲ್ಲಿ ಸುಮಾರು ಮೂರು-ನಾಲ್ಕು ಶಾಲೆಗಳಿವೆ. ಈ ಎಲ್ಲಾ ನಿಯಮಗಳನ್ನು ಏನಾದರೂ ಜಾರಿ ಮಾಡಲು ಸಾಧ್ಯವೇ ಎನ್ನುವಂಥ ದೊಡ್ಡ ಪ್ರಶ್ನೆ ನನ್ನ ಎದುರುಗಡೆ ಇದೆ. ಸರ್ಕಾರಕ್ಕೆ ಟೀಕೆ ಮಾಡುವುದು ಬಹಳ ಸುಲಭ. ಆದರೆ, ಅದಕ್ಕೆ ಪರಿಹಾರ ಏನು? ಈಗಾಗಲೇ ಈ ನೆಲದ ಅಪೆಕ್ಸ್ ಕೋರ್ಟ್ ಆದ ಸುಪ್ರೀಂ ಕೋರ್ಟ್ ತೀರ್ಮಾನ ನೀಡಿದ್ದೆ. ಆ ಸಂದರ್ಭದಲ್ಲಿ ಇದ್ದಂತಹ ಸರ್ಕಾರವು ಯಾವ ಅಫಿಡೇವಿಟ್ ಸಲ್ಲಿಸಿದರೋ, ಏನು stand ತೆಗೆದುಕೊಂಡರೋ, ಸರ್ಕಾರಿ ವಕೀಲರು ಅಲ್ಲಿ ಏನೆಂದು ವಾದ ಮಾಡಿದರೋ ಎನ್ನುವುದನ್ನು ನಾವೆಲ್ಲರೂ dark ನಲ್ಲಿದ್ದೇವೆ ಎನ್ನುವ ಮಾತನ್ನು ಪ್ರಾಮಾಣಿಕವಾಗಿ ಹೇಳಬಯಸುತ್ತೇನೆ. ಎಲ್ಲಿಯೋ ಒಂದು ಕಡೆ ಇದರಲ್ಲಿ ಲೋಪವಾಗಿದೆ ಎಂದು ಅನಿಸುತಿದೆ. ನಾವೆಲರೂ ಚರ್ಚೆ ಮಾಡುವ ಸಂದರ್ಭದಲಿ ಸರ್ವೋಚ್ಚ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

other States. ಎಂದರೆ, ಎತ್ತರ ಕಟ್ಟಡಗಳು ಯಾವುದು ಎನ್ನುವಂಥ definition ವ್ಯತ್ಯಾಸವು ರಾಜ್ಯದಿಂದ ರಾಜ್ಯಕ್ಕೆ ಇದ್ದು, ಆ ರೀತಿಯಾಗಿ ಸರ್ವೋಚ್ಛ ನ್ಯಾಯಾಲಯವು ಬಹಳ vague ಆಗಿರುವ ತೀರ್ಪು ನೀಡಿದ್ದೆ. ಅದನ್ನು ಅರ್ಥೈಸುವ ಸಲುವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಅಪೀಲು ಹೋದಾಗ, ಅಪೀಲಿನಲ್ಲಿ ಸಹ ಗೆಲುವು ಸಾಧಿಸಲು ಆಗಲಿಲ್ಲ. ಎಲ್ಲಿಯೋ ಒಂದು ಕಡೆ ನನಗೆ ಅನಿಸುತ್ತದೆ, ಈ building safety ಪ್ರಮಾಣಪತ್ರವನ್ನು ಯಾರು ಕೊಡಬೇಕು? ಅದನ್ನು District Headquarters ನಲ್ಲಿ ಕಾರ್ಯಪಾಲಕ ಅಭಿಯಂತರರು ನೀಡಬೇಕು. ಅದರಲ್ಲಿಯು structural engineering ಆಗಿರುವರ ಹತ್ತಿರ ಪಡೆದುಕೊಳ್ಳಬೇಕು ಎಂದರೆ, ನಮ್ಮ ಇಡೀ ವ್ಯವಸ್ಥೆಯಲ್ಲಿ ಎಷ್ಟು ಜನ structural engineer ಇದ್ದಾರೆ? ಕಾರ್ಯಸಾಧುವಲ್ಲದಂಥ ತೀರ್ಮಾನವನ್ನು ಜಾರಿಗೊಳಿಸುವಂಥ ಕರ್ಮ ಸರ್ಕಾರಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಯಾರೇ ಬಂದು ಆ ಸ್ಥಾನದಲ್ಲಿ ಕುಳಿತುಕೊಂಡರು ಸಹ ಇದನ್ನು ಏನು ಮಾಡಬೇಕು ಎನ್ನುವುದೇ ಯಕ್ಷ ಪ್ರಶ್ನೆಯಾಗಿದೆ. ಹಾಗಾಗಿ ನಾನು ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಇದಕ್ಕೆ ಅಪೀಲು ಹಾಕಬೇಕು. ನನ್ನ ಪ್ರಕಾರ ಹೇಳುವುದಾದರೆ, ಪುನರ್ ಪರಿಶೀಲನಾ ಅರ್ಜಿಯನ್ನು ಸರ್ವೋಚ್ಛ ನ್ಯಾಯಾಲಯಕ್ಕೆ ಸಲ್ಲಿಸುವುದು ದೀರ್ಘವಾದಿಯ ಪರಿಹಾರ ಅನಿಸುತ್ತದೆ. ಎರಡನೆಯದಾಗಿ, ತಾತ್ಕಾಲಿಕವಾಗಿ ತಕ್ಷಣಕ್ಕೆ ಮಾಡಬೇಕಾಗಿರುವುದೇನೆಂದರೆ, ತಾವು ಸಹ ಯೋಚನೆ ಮಾಡಿ. ಕರ್ನಾಟಕ ರಾಜ್ಯದಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಅಂದರೆ, ಪ್ರಾಥಮಿಕ, ಪ್ರೌಢ, ಪಿ.ಯು. ಕಾಲೇಜುಗಳೆಲ್ಲವೂ ಎಷ್ಟಿವೆ ಇವೆಲ್ಲದಕ್ಕೂ ಒಂದೇ ಸಲ ಸರ್ವೋಚ್ಛ ನ್ಯಾಯಾಲಯವು ತಿಳಿಸಿರುವ ಹಾಗೆ building safety ಪ್ರಮಾಣಪತ್ರ ಮತ್ತು fire safety ನಿಂದ ಪ್ರಮಾಣಪತ್ರ ತೆಗೆದುಕೊಳ್ಳಬೇಕಾದರೆ, ಆ ಇಲಾಖೆಗಳಲ್ಲಿ ಸಿಬ್ಬಂದಿಗಳು ಇದ್ದಾರೆಯೇ? ಅರ್ಜಿ ಸಲ್ಲಿಸಿದ ತಕ್ಷಣ renewal of recognition ನೇರವಾಗಿ ಲಿಂಕ್ ಮಾಡಿದ್ದೇವೆ ಆ ಸಮಯದೊಳಗೆ ನೀಡಲು ಸಾಧ್ಯವೇ? ಪ್ರಾಯೋಗಿಕವಾಗಿ ನೋಡುವುದಾದರೆ ಬಹಳಷ್ಟು ಸಮಸ್ಯೆ ಇದೆ. ಇದರಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಯವರಿಗೆ ನಮ್ಮ ಮೇಲೆ 'ಗದಾ ಪ್ರಹಾರ, ನಮ್ಮನ್ನು ಕತ್ತು ಹಿಸುಕಿ ಕೊಲ್ಲುವ ಪ್ರಯತ್ನ' ಎನ್ನುವ ಹಾಗೆ ಅವರಿಗೆ ನೋವು ಆಗುತ್ತಿದೆ. ಹಾಗಾಗಿ, ಪ್ರಾಯೋಗಿಕವಾಗಿ ಹೇಳುವುದಾದರೆ, ಇದನ್ನು ಮಾಡುವುದು ಬಹಳ ಕಷ್ಟವಾಗಿದೆ. ಆದರೆ, ನಮ್ಮ ಅಧಿಕಾರಿಗಳಿಗೆ ಏನಾಗಬೇಕಾಗಿದೆ? ಪಟ್ಟಭದ್ರಾ ಹಿತಾಸಕ್ತಿಗಳ ಮೇಲೆ ಸರ್ಕಾರ ಎಚ್ಚರಿಕೆ ವಹಿಸಬೇಕೆಂದು ಸಲಹೆಯನ್ನು ನೀಡಬಯಸುತ್ತೇನೆ. ಈ ಸಂಬಂಧ ನಾನು ಸಹ ಸಮಿತಿಯ ಸದಸ್ಯನಾಗಿದ್ದೇನು. ನಾನು ಸಮಿತಿಗೆ ಹೋಗಿ ಕುಳಿತುಕೊಂಡ ತಕ್ಷಣ, ಇನ್ನೂ first sitting ಮಾಡಿಲ್ಲ, ಯಾರೋ activist ಒಬ್ಬರು ನಮಗೆ 'ಖಾಸಗಿ ಶಿಕ್ಷಣ ಸಂಸ್ಥೆಯವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸರ್ಕಾರದ ವತಿಯಿಂದ ಸಮಿತಿ ರಚನೆ ಮಾಡಿ, ಅದರಲ್ಲಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ನನಗೆ ಅನಿಸುತ್ತಿದೆ. ಆ ಸಮಿತಿಯ ಅಧ್ಯಕ್ಷರು, ಸದಸ್ಯರು ಎಲ್ಲರಿಗೂ ಲಿಗಲ್ ನೋಟೀಸ್ ನೀಡಿದರು. ಹಾಗಾಗಿ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು. ಅವರ ಹಿತಾಸಕ್ತಿ ಏನು, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಿಸುವ ಹುನ್ನಾರ ಏನು ಎಂಬುದನ್ನು ಗಮನಿಸಬೇಕು. ಒಂದು ಸಲ ಗಮನಿಸಿದರೆ, ನಮ್ಮ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಮೂರು ವ್ಯವಸ್ಥೆಗಳಿವೆ. ಅವುಗಳು ಅನುದಾನಿತ, ಅನುದಾನ ರಹಿತ ಮತ್ತು ಸರ್ಕಾರಿ. ಈ ಮೂರು ವ್ಯವಸ್ಥೆಗಳು ತನ್ನದೇ ಆದ್ದಂತಹ ಕೊಡುಗೆಯನ್ನು ಈ ರಾಜ್ಯಕ್ಕೆ ನೀಡುತ್ತಿದೆ. ಶಿಕ್ಷಣ ಹಕ್ಕು ಕಾಯಿದೆಯನ್ನು ಈ ರಾಜ್ಯದಲ್ಲಿ ಇಟ್ಟುಕೊಂಡರು ಸಹ ಕಠೋರಾ ವಾಸ್ತವ ಏನೆಂಬುದನ್ನು ಸರ್ಕಾರ ಮತ್ತು ಅಧಿಕಾರಿಗಳು ತಿಳಿದುಕೊಳ್ಳಬೇಕಾದ ಅಂಶ ಯಾವುದೆಂದರೆ, ಕಠೋರಾ ಎಂಬುದು ಶಿಕ್ಷಣ ಹಕ್ಕು ಕಾಯಿದೆ ಮಾಡಿದ ನಂತರವೂ, ಉಚಿತ ಕಡ್ಡಾಯ ಶಿಕ್ಷಣ ನೀಡುತ್ತೇವೆ ಎಂದು ಹೇಳಿದ ಮೇಲೆಯೂ, ಸರ್ಕಾರ ಮತ್ತು ಸರ್ಕಾರಿ ಶಾಲೆಗಳಿಂದ ಮಾತ್ರ ಮಾಡುತ್ತೇವೆ ಎಂದು ಹೊರಟ್ಟರೆ ಸಾಧ್ಯವಿಲ್ಲ. ಇವತ್ತಿಗೂ ಸಹ ಲಕ್ಷಾಂತರ ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದಾರೆ ಎಂಬ ಕಾರಣಕ್ಕಾಗಿ ಸರ್ವೋಚ್ಛ ನ್ಯಾಯಾಲಯವು ನಮಗೆ ಛೀಮಾರಿ ಹಾಕಿದ್ದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಅನುದಾನಿತ ಅಥವಾ ಅನುದಾನ ರಹಿತ ಆಗಿರಬಹುದು ಅವರು contribute ಮಾಡಿದ್ದಾರೆ ಎಂಬ ಕಾರಣಕ್ಕಾಗಿ ಈ ರಾಜ್ಯದ ಶಿಕ್ಷಣ ವ್ಯವಸ್ಥೆ ಒಂದು ಹಂತದಲ್ಲಿದ್ದೆ. ನಾವು ಇದೆಲ್ಲವನ್ನೂ ಗಮನಿಸದೇ ಆರ್.ಆರ್. ಮಾಡಿಲ್ಲವೆಂದರೆ, ಮುಂದೆ ಪರೀಕ್ಷೆಗೆ ಕೂರಿಸುವುದಿಲ್ಲ, ಆರ್.ಆರ್. ಮಾಡಿಲ್ಲವೆಂದರೆ, ಅದು ಇಲ್ಲ, ಇದು ಇಲ್ಲ ಎಂದು 15 ದಿವಸಗಳು ಅಥವಾ ಒಂದು ತಿಂಗಳಿಗೆ ಸುತ್ತೋಲೆಯನ್ನು ಹೊರಡಿಸಿದರೆ, ಅದು ಸಹ ತೊಂದರೆಯಾಗುತ್ತದೆ. ಅಷ್ಟು ಶಾಲೆಗಳನ್ನು ಒಂದೇ ಸಲ ಬದಲಾದ ವ್ಯವಸ್ಥೆಗೆ ಅಳವಡಿಸಿಕೊಳ್ಳಿ ಎಂದರೆ, ಸಮಯಾವಕಾಶ ನೀಡಬೇಕು, ಅದಕ್ಕೆ capital expenditure and recuring expenditure ಇದ್ದು, ಅದ್ಯಾವುದನ್ನು ತೀರ್ಮಾನ ಮಾಡದೇ ಸುಮ್ಮನೆ ಕುಳಿತುಕೊಂಡು ಮಕ್ಕಿಕಾಮಕ್ಕಿ ಎನ್ನುವ ಹಾಗೆ ಈ ರೀತಿ ಆದೇಶ ಮಾಡಿದರೆ ತೊಂದರೆಯಾಗುತ್ತದೆ. ಒಂದು ಮಾತು ಮಾತ್ರ ಸತ್ಯ. ಯಾವುದೇ ಸರ್ಕಾರ, ಯಾವುದೇ ಸಚಿವರು ಬಂದರೂ ಸಹ ಈ ಸರ್ವೋಚ್ಛ ನ್ಯಾಯಾಲಯದ ತೀರ್ಮಾನ ಏನಿದೆ, ಅದು ಬಹಳ ದೊಡ್ಡ ಸಂಕಷ್ಟವನ್ನು ಈ ರಾಜ್ಯದ ಶಿಕ್ಷಣ ವ್ಯವಸ್ಥೆಗೆ ಆಗಿದೆ ಎನ್ನುವುದನ್ನು ಈ ಸದನದ ಮೂಲಕ ತಿಳಿಸಲು ಇಚ್ಛಿಸುತ್ತೇನೆ. ಆ ಕಾರಣಕ್ಕಾಗಿ ಆದಷ್ಟು ಬೇಗ ಸರ್ಕಾರವು ತಕ್ಷಣವೇ relief ಆಗಬೇಕು, ಸಮಯಾವಕಾಶ ಕಲ್ಪಿಸಿ, ಇದನ್ನು ಸರಳೀಕರಣಗೊಳಿಸಬೇಕು. ಈ ಆರ್.ಆರ್. ಎನ್ನುವುದು ಹಣ ಮಾಡಲು ಶಿಕ್ಷಣ ಅಧಿಕಾರಿಗಳಿಗೆ ಮಾರ್ಗವಾಗಿದೆ,... ಇವತ್ತು ನಾವು ಏನಾದರೂ ತನಿಖೆ ಮಾಡಿಸಿದರೆ, ಯಾವುದೇ ಕಾಗದ ಪತ್ರ ಇಲದೇ ಆರ್.ಆರ್. ಮಾಡಿರುವಂಥ BEO and DDPI ಗಳ ಪಟ್ಟಿ ಸಿಗುತದೆ.

ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ, ತಕ್ಷಣ ಪರಿಹಾರ ಕೊಡುವಂಥ ಕೆಲಸವನ್ನು ಈ ಸಂಸ್ಥೆಗಳು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅನುದಾನಿತ ಶಾಲೆಗಳಿಗೆ ವಿಶೇಷವಾದಂತಹ Rules and Regulations ಇದ್ದರೂ ಸಹ ನವೀಕರಣದ ಹೆಸರಿನ ಮೇಲೆ ನಿಯಮ ಇದ್ದರೂ ಸಹ ಅವರಿಗೆ ಸಂಬಳ ಬಿಡುಗಡೆ ಮಾಡಿಲ್ಲ. ದಯವಿಟ್ಟು ಮಾನ್ಯ ಸಚಿವರಲ್ಲಿ ಮೊದಲು ವಿನಂತಿಸುವುದೇನೆಂದರೆ, ತಕ್ಷಣ ಯಾವ್ಯಾವ ಸಂಸ್ಥೆಗಳಲ್ಲಿ ಸಂಬಳವನ್ನು ನಿಲ್ಲಿಸಿದ್ದಾರೆ, ಅಂತಹ ಸಂಸ್ಥೆಗಳಿಗೆ ಸಂಬಳವನ್ನು ನೀಡಬೇಕೆಂದು ಸರ್ಕಾರ ಆದೇಶ ಹೊರಡಿಸಬೇಕು. ಶಾಲಾ ನವೀಕರಣ ಕುರಿತು ಚರ್ಚೆ ನಡೆಯುತ್ತಿದ್ದು, ಅದಕ್ಕೆ ಸಂಬಂಧಿಸಿದಂತೆ shifting of the school ನಲ್ಲಿ ನಡೆಯುತ್ತಿರುವಂಥ ತೊಂದರೆಗಳನ್ನು ತಿಳಿಸಲು ಇಚ್ಛಿಸುತ್ತೇನೆ. ಕೆಲವು ಖಾಸಗಿ ಶಾಲೆಯವರು ಹೊಸದಾಗಿ ಶಾಲೆಯನ್ನು ಪ್ರಾರಂಭ ಮಾಡುವಾಗ ಬಾಡಿಗೆ ಮೇಲೆ ಕಟ್ಟಡವನ್ನು ತೆಗೆದುಕೊಂಡು, 3 ವರ್ಷಗಳಲ್ಲಿ ಶಾಲೆಯನ್ನು ಬೇರೆ ಕಡೆ ವರ್ಗಾವಣೆ ಮಾಡುತ್ತೇನೆ ಎಂದು ಷರತ್ತು ಬರೆದುಕೊಡುತ್ತಾನೆ. ಇವತ್ತು ಆ ಶಾಲೆಗಳ Managements ಬಹಳ ಕಷ್ಟದಲ್ಲಿವೆ. ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ಶಾಲೆಗಳ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಶಾಲೆಗಳವರು ಬಹಳ ಕಷ್ಟದಿಂದ ಎಲ್ಲಿಂದಲೋ ಹಣವನ್ನು ಕ್ರೋಡೀಕರಿಸಿ, ಹೊಸ ಶಾಲೆಯನ್ನು ನಿರ್ಮಾಣ ಮಾಡುತ್ತಾರೆ. ಆದರೆ, ಅವರು ಈಗಾಗಲೇ ಷರತ್ತು ಬರೆದುಕೊಟ್ಟ ಹಾಗೆ 3 ವರ್ಷಗಳು ಅಥವಾ 4 ವರ್ಷಗಳಲ್ಲಿಯೇ ಹೊಸ ಶಾಲೆಯನ್ನು ಪ್ರಾರಂಭ ಮಾಡಲು ಸಾಧ್ಯವಾಗುವುದಿಲ್ಲ. ಅದು 4 ಅಥವಾ 5 ವರ್ಷಗಳು ಆಗಬಹುದು. ತದನಂತರ, ಖಾಸಗಿ ಶಾಲೆಯವರು ಹೊಸ ಶಾಲೆ ನಿರ್ಮಾಣ ಮಾಡಿ, ಅಲ್ಲಿಗೆ ತನ್ನ ಶಾಲೆಯನ್ನು shift ಮಾಡುತ್ತಾರೆ. ಆತ ಅಲ್ಲಿಗೆ ಹೋದ ನಂತರ ಅವನಿಗೆ ಸಮಸ್ಯೆ ಬಗ್ಗೆ ಗೊತ್ತಾಗುತ್ತದೆ. ಅದೇನೆಂದರೆ, ಅಧಿಕಾರಿಗಳು, "ತಮ್ಮ ಶಾಲೆಯನ್ನು ಬೇರೆ ಕಡೆಗೆ ವರ್ಗಾವಣೆ
(ಮುಂದು)
ಮಾಡಲು ಮೊದಲೇ ಏತಕ್ಕೆ ಅನುಮತಿ ತೆಗೆದುಕೊಂಡಿರುವುದಿಲ್ಲ" ಎಂದು ಕೇಳುತ್ತಾರೆ. ಅದರಿಂದಾಗಿ, ಆತನಿಗೆ ತಾನು ಮೊದಲೇ ಅನುಮತಿ ಪಡೆದಿಲ್ಲವೆಂಬ ಕಾರಣ ನೀಡಿ, ಆತನಿಗೆ ಅನುಮತಿ ನೀಡುವುದೇ ಇಲ್ಲ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1086) 14-12-2021 /5.40 SK-AK

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ.ನಮೋಶಿ (ಮುಂದು):-**

ನಿಜವಾಗಲೂ ಯಾರು ಹೊಸ ಶಾಲೆಗಳನ್ನು ಶಿಫ್ಟ್ ಮಾಡಿಕೊಂಡಿದ್ದಾರೋ, ಅವರು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಅನುಮತಿಯೇ ಸಿಗುವುದಿಲ್ಲ. ಮೊದಲೇ ಅವನು ಅನುಮತಿಯನ್ನೇ ತೆಗೆದುಕೊಂಡಿರಲ್ಲ. ಬಹಳ ಕಷ್ಟದಿಂದ ಅವನು ಅಲ್ಲಿಗೆ ಹೋಗಿರುತ್ತಾನೆ. ಹೋದಮೇಲೆ ನಿಯಮಗಳು ಎಷ್ಟು ಕೆಟ್ಟದಾಗಿವೆ. ಇವು ಏಕೆ ಇವೆ ಎಂಬುದು ಗೊತ್ತಿಲ್ಲ. ನಾನು ಮಾನ್ಯ ಸಚಿವರಿಗೆ ಒತ್ತು ಕೊಟ್ಟು ಹೇಳುತ್ತಿದ್ದೇನೆ. The Commissioner's Office is the authority for granting permission. ಆದರೆ ಶಿಫ್ಟ್ ಮಾಡಿದ ಮೇಲೆ the papers have to go to the government. ನ್ಯಾಯ ಎಲ್ಲಿದೆ? ಶಾಲೆ ಪ್ರಾರಂಭ ಮಾಡುವಾಗ ಏನೊಂದು ಷರತ್ತುಗಳನ್ನು ಹಾಕುತ್ತೀರಿ. ಅದಕ್ಕಿಂತ ಏನು ಕಠೋರವಾಗಿ ಇರುವುದಿಲ್ಲ. ಆದರೆ ಅವನು ಶಿಫ್ಟ್ ಮಾಡಿ, ಕಷ್ಟದಿಂದ ಹೊಸ ಶಾಲೆಗಳನ್ನು ಕಟ್ಟುತ್ತಾನೆ. ಹೊಸ ಶಾಲೆ ಕಟ್ಟಿದಾದ ಮೇಲೆ, ಆ ಅನುಮತಿಯನ್ನು ಕಮಿಷನರ್ ಕೊಡುವುದಿಲ್ಲ. It has to go to the government. Why? ಬೇರೆ ಏನು ಕೆಲಸವಿಲ್ಲವೇ? ಏಕೆ ಇಷ್ಟು ಕಠೋರವಾಗಿ ನೋಡುತ್ತೀರಿ? ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ದಯವಿಟ್ಟು ಆ ಸರ್ಕಾರದ ಸಚಿವರು ಈ ಸರ್ಕಾರದ ಸಚಿವರು ಎಂದು ನಾನು ಹೇಳಲ್ಲ. ಸರ್ಕಾರಿ ಶಾಲೆ ಇದು ಎಂದು ಹೇಳಿದಂತೆ, ಸರ್ಕಾರಿ ಶಾಲೆ ನಮ್ಮದು, ಖಾಸಗಿ ಶಾಲೆ ನಮ್ಮದಲ್ಲ ಎಂದು ಯಾರು ದಯವಿಟ್ಟು ಆ ದೃಷ್ಟಿಯಿಂದ ನೋಡಕೂಡದು. ಯಾಕೆ ನೋಡಬಾರದು ಎಂದರೆ, ಇವತ್ತು ಅಂಕಿ-ಸಂಖ್ಯೆ ಏನು ಹೇಳುತ್ತದೆ ಎಂದರೆ, ಹೆಚ್ಚು ಕಡಿಮೆ 52% of the students are in private schools. ದಯವಿಟ್ಟು, ಇದರ ಬಗ್ಗೆ ವಿಚಾರ ಮಾಡಿ ನೋಡಿ. ಖಾಸಗಿ ಶಾಲೆಯಲ್ಲಿದ್ದಾರೆ. ಇದೇ ರೀತಿ ವಾತಾವರಣ ಮುಂದುವರೆಯಿತು ಎಂದರೆ, ಶಾಲೆಗಳನ್ನು ಮುಚ್ಚಿದರೆ, ಏನಪ್ಪಾ, ನನ್ನ ಗತಿ, whether the government is able to handle those students? ಆ ಶೇಕಡ 52 ರಷ್ಟು ಜನ ಮಕ್ಕಳು ಸರ್ಕಾರಿ ಶಾಲೆಗೆ ಬರುವುದಕ್ಕೆ ತಯಾರಿದ್ದರೆ, ಎರಡು ಲಕ್ಷಗಳಷ್ಟು ಉದ್ಯೋಗಾವಕಾಶವನ್ನು ಕೊಡಬೇಕಾಗುತ್ತದೆ. In a way, the private management is helping the government.

**ಸಭಾಪತಿಯವರು:-** ಶಶೀಲ್ ಜಿ ನಮೋಶಿಯವರೇ ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಶಶೀಲ್ ಜಿ.** ನಮೋಶಿ:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಇದರ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶಶೀಲ್ ಜಿ.** ನಮೋಶಿ:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಮಾನ್ಯ ಸಚಿವರಾದ ಶ್ರೀ ಜೆ.ಸಿ ಮಾಧುಸ್ವಾಮಿಯವರಿಗೆ ಕೇಳಬೇಕೆಂದಿದ್ದೇನೆ.

**ಸಭಾಪತಿಯವರು:-** ಇದರ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ.

**ಶ್ರೀ ಶಶೀಲ್ ಜಿ.** ನಮೋಶಿ:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, Education Act amend ಮಾಡಿದಾಗ, ಶಿಫ್ಟಿಂಗ್ ಬಗ್ಗೆ ಕಂಡೀಷನ್ ಏನಿದೆ ಎಂಬುದರ ಬಗ್ಗೆ ಮಾನ್ಯ ಸದಸ್ಯರು ತೆಗೆದು ಓದಲಿ. ಸರ್ಕಾರ ಅಲ್ಲ, you are all party for the enactment and amendment of the Education Act. ಅದನ್ನು shift ಮಾಡಿದರೆ 'it will be treated as a new organization' ಎಂದು ಹೇಳಿದ್ದೇನೆ.

**Sri SHASHIL G. NAMOSHI:** I agree. ಶಾಲೆಗಳನ್ನು ಶಿಫ್ಟ್ ಮಾಡಿದಾಗ ಹೊಸದಂತೆ, ಒಪ್ಪುತ್ತೇನೆ. ಆದರೆ ಹೊಸದಾಗಿ ಕೊಡುವಾಗ ಕಮಿಷನರ್ ಕೊಡುತ್ತಾರೆ. ಆದರೆ ಶಿಫ್ಟ್ ಮಾಡುವಾಗ he has to go to the government. Why?

**ಸಭಾಪತಿಯವರು:-** ಅದು ಇರಲಿ ಬಿಡಿ. ಅದೇನೂ ದೊಡ್ಡದಲ್ಲ.

**ಶ್ರೀ ಶಶೀಲ್ ಜಿ.** ನಮೋಶಿ:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ನಾನು ಹೇಳುವುದೇನೆಂದರೆ, ಈ ರೀತಿ ತೊಂದರೆಯಾಗುತ್ತಿರುವುದನ್ನು ನೋಡಿದರೆ, ಇವುಗಳನ್ನು ಬಗೆಹರಿಸುವುದಕ್ಕೆ ಒಂದು ತಿದ್ದುಪಡಿಯನ್ನು ತನ್ನಿ. ಈ ಕಾಯಿದೆಯೂ ಅದೇ ಹೇಳುವುದು. ಈ ತರಹ ತೊಂದರೆಯಾಗುತ್ತಿದೆಯಲ್ಲಾ, ಇದನ್ನು ತಾವು ಸರಳೀಕರಣ ಮಾಡಬೇಕಲ್ಲ. ಇದನ್ನು ತಾವು ಮಾಡಿಸಿ.

**ಸಭಾಪತಿಯವರು:-** ಆಯಿತು. ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಕೊನೆಯದು ಒಂದೇ ಒಂದು ಇದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**Sri S.R. PATIL:** Supreme Court ನ decision ನ್ನು nullify ಮಾಡುವ ಅಧಿಕಾರ ಇವರಿಗೆ ಎಲ್ಲಿದೆ?

**ಶ್ರೀ ಜೆ.ಸಿ. ಮಾಧುಸ್ವಾಮಿ**:- ಈ shifting issue ಗೆ ಬಂದಿದ್ದೇನೆ...

**(ಗೊಂದಲ)**

**Sri S.R. PATIL:** The government cannot nullify the decision of the Apex Court.

**Sri J.C. MADHUSWAMY:** Change in management, change in category of management...

**(ಗೊಂದಲ)**

**Sri S.R. PATIL:** I am telling about the legal aspects.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಎಸ್.ಆರ್. ಪಾಟೀಲ್‌ರವರೇ, ನಾನು ಇಪ್ಪತ್ತು-ಮೂವತ್ತು ವರ್ಷಗಳಿಂದ legislature ನಲ್ಲಿ ಇದ್ದೇನೆ. ಪರಿಶಿಷ್ಟ ಜಾತಿ ಹೆಸರಿಗೆ ತೆಗೆದುಕೊಂಡವರು, ಇನ್ನೊಬ್ಬರ ಹೆಸರಿಗೆ ತೆಗೆದುಕೊಂಡವರು ಮ್ಯಾನೇಜ್‌ಮೆಂಟ್‌ಗಳನ್ನು ಬದಲಾವಣೆ ಮಾಡಿ, ಶಾಲೆ ಶಿಫ್ಟ್ ಮಾಡುತ್ತಾರೆ ಎಂದು ಭಾವಿಸಿಕೊಂಡು, ಇದಕ್ಕೆ ಒಂದು ನಿಯಂತ್ರಣ ಹಾಕಿರುವುದು ನಿಜ. ಆಗ ನಾವು ಇರಲಿಲ್ಲ. ಇದರ ಬಗ್ಗೆ legislators ಗೆ ಗೊತ್ತಿಲ್ಲ. ಆದರೆ ಯಾರೋ ಬೆನಿಫಿಟ್ ತೆಗೆದುಕೊಳ್ಳುತ್ತಾರೆ, ಯಾರೋ ಹೆಸರಿಗೆ ಕೊಟ್ಟಿರುವುದು ದುರಪಯೋಗವಾಗುತ್ತದೆ ಎಂದು ಹೇಳಿ, ಅವತ್ತಿನ ದಿವಸ ಕಂಡೀಷನ್‌ಗಳನ್ನು ಹಾಕಿ, ಅವತ್ತು ತಾವೆಲ್ಲರೂ ಇಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ಎಂದರೆ, ಈಗಿರುವ ಸರ್ಕಾರ ಉತ್ತರ ಹೇಳುವುದಕ್ಕೆ ಆಗುತ್ತದೆಯೇ?

**ಸಭಾಪತಿಯವರು:-** ಅದು ಆಗ ಮಾಡಿದ್ದು. ತಾವು ಮಾತನಾಡುವುದನ್ನು ಬೇಗ ಮುಗಿಸಿ.

**ಶ್ರೀ ಶಶೀಲ್ ಜಿ.** ನಮೋಶಿ:- ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಕಾನೂನು ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳಬೇಕೇಂದಿದ್ದೇನೆ. ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, Public Interest Litigation ಹಾಕಿ, ಈ ಕಾನೂನನ್ನು ತಂದಿದ್ದಾರೆ. Whether it is stability or fire safety...

**ಶ್ರೀ ಎಸ್.ಆರ್. ಪಾಟೀಲ್:-** ಒಟ್ಟು litigation ಯಾವುದೇ ಇರಲಿ,

**ಶ್ರೀ ಶಶೀಲ್ ಜಿ.** ನಮೋಶಿ:- ಅದು ಇರಲಿ ಸಾರ್.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಒಟ್ಟು litigation ಯಾವುದೇ ಇದ್ದರೂ a decision is a decision.

**Sri SHASHIL G. NAMOSHI:** But that also holds good for government institutions also. ಅದು ಮಾಡುವಾಗ ಸರ್ಕಾರಿ ಸಂಸ್ಥೆಗಳಲ್ಲಿ ಈ ನಿಯಮ ಇಲ್ಲ, ಬರೀ ಖಾಸಗಿಗೆ ಇದೆ ಎಂದು ಯಾರಿಗೂ ಹೇಳಿಲ್ಲ. ಹಾಗಿದ್ದಾಗ, will the government be able to handle this? It's not a small thing? ಮೊನ್ನೆ ತಾನೇ ನಾನು ಒಂದು ಹೊಸ ಶಾಲೆಯನ್ನು ಪ್ರಾರಂಭ ಮಾಡಿದ್ದೇನೆ. Fire safety ಗೆ ಅದೇನು ಮಾಡುತ್ತಾರೆ, ಮಾಡಲಿಯಪ್ಪಾ, ನಾವು violate ಮಾಡುವುದು ಬೇಡ ಎಂದು ಸುಮಾರು ಆರು ಲಕ್ಷ ರೂಪಾಯಿಗಳಷ್ಟು ಅಂದಾಜು ಪಟ್ಟಿಯನ್ನು ತೆಗೆದುಕೊಂಡು ಬಂದೆ. ಆಗ ಆರು ಲಕ್ಷ ರೂಪಾಯಿಗಳು ಮಾಡಿ ಎಂದಾಗ, ನನ್ನ ಮೇಲಿರುವ ಒಬ್ಬ expert ಬಂದು ಏನು ಹೇಳುತ್ತಾನೆಂದರೆ, ಸಾರ್ ಆರು ಲಕ್ಷ ರೂಪಾಯಿಗಳು ಮಾಡಿದ್ದೀರಲ್ಲ, ಅದು ಸರಿಯಾಗಿ ನೀರು ಬರಲ್ಲ, ಏನೂ ಬರಲ್ಲ. ಅದು ಸುಮ್ಮನೆ ಬರಿ ತೋರಿಸುವುದಕ್ಕೆ ಸಾರ್. ಏನಾದರೂ ಅನಾಹುತವಾಯಿತು ಎಂದರೆ, ಇಷ್ಟರಲ್ಲೇ ಆಗಲ್ಲ. ನಾನು ಹನ್ನೊಂದು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ, ಆ ಕೆಲಸ ಮಾಡಬೇಕಾಯಿತು. ಅಂದರೆ, ಸರ್ಕಾರದ ಹಂತದಲ್ಲಿ ನಾವು ಕಾನೂನು ಮಾಡುತ್ತಿದ್ದಾಗ, ಇದು ಸರ್ಕಾರಿ ಶಾಲೆಗೆ ಅನ್ವಯವಾದರೆ, ನಾವು ಮಾಡಬಹುದು ಎಲ್ಲವಂತಹ ವಿಚಾರವನ್ನು ಮಾಡಿ, ನೀವು ನಿಯಮಗಳನ್ನು ತೆಗೆದುಕೊಂಡು ಬರಬೇಕು. ಅದುಬಿಟ್ಟು, ಅವರ ಮೇಲೆ ಗದಾಪ್ರಹಾರ ಮಾಡಿ, ಇದೇ ಮಾನ್ಯ ಮರಿತಿಬ್ಬೇಗೌಡರು...

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಸುಮಾರು 94 ಮಕ್ಕಳು ಇದೇ ಬೆಂಕಿ ಅವಗಢದಲ್ಲಿ ಸತ್ತಿದ್ದಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯ suo-moto ತೆಗೆದುಕೊಂಡಿರುವಂತಹ ಪ್ರಕರಣವಿದು. ಯಾರೂ ಹೋಗಿದ್ದು ಪ್ರಕರಣವಿಲ್ಲ. ಕುಂಬಕೋಣಂನಲ್ಲಿ ಸುಮಾರು 94 ಮಕ್ಕಳು ಬೆಂಕಿ ಅವಗಢದಲ್ಲಿ ಸತ್ತಾಗ, ಮಾನ್ಯ ಸರ್ವೋಚ್ಚ ನ್ಯಾಯಾಲಯ suo-moto ತೆಗೆದುಕೊಂಡು, what are all the safety measures that has to be taken to safeguard the life of children ಎಂಬುದರ ಬಗ್ಗೆ ತೀರ್ಪು ನೀಡಿತ್ತು. ಕೇವಲ ಸರ್ಕಾರಿ ಶಾಲೆ ಎಂದು ನಾವು ಹೇಳಿಲ್ಲ, ಬರೀ ಖಾಸಗಿ ಶಾಲೆಗೆ ಎಂಬುದನ್ನು ನಾನು ಒಪ್ಪುವುದಿಲ್ಲ. ಆ ಮಕ್ಕಳಿಗೆ security ಮತ್ತು safety ಇರಬೇಕೆಂದು ಹೇಳಿ ಮಾನ್ಯ ನ್ಯಾಯಾಲಯ ತೆಗೆದುಕೊಂಡಿರುವುದಕ್ಕೆ, ನಾವು ಇಲ್ಲಿ ಎಷ್ಟು ಬಾರಿ ಚರ್ಚೆ ಮಾಡುವುದಕ್ಕಾಗುತ್ತದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಪುಟ್ಟಣ್ಣ:-** ಕುಂಬಕೋಣಂನ ಸರ್ಕಾರಿ ಶಾಲೆಯಲ್ಲಿಯೇ ಬೆಂಕಿ ಅವಗಢ ನಡೆದಿದ್ದು. ಅದನ್ನೇ ತಾವು ಹೇಳಿದ್ದೀರಾ. ಆದರೆ ತಾವು bifurcate ಮಾಡಲಿಲ್ಲ. ಆದರೆ ಅಧಿಕಾರಿಗಳು ಇವತ್ತು ಖಾಸಗಿ ಶಾಲೆಯವರಿಗೆ ಮಾತ್ರ ಮಾಡುತ್ತಾರಲ್ಲ, ಅದರ ಬಗ್ಗೆ ನಮ್ಮ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ಸರಿ.

(ಗೊಂದಲ)

**Sri SHASHIL G. NAMOSHI:** 'Are we fulfilling the same condition in government schools' ಎನ್ನುವುದು ಒಂದು ಪ್ರಶ್ನೆಯಾಗಿದೆ. ಅಲ್ಲಿಯೂ ಕೂಡ ಅದನ್ನು ಮಾಡಿ ನೋಡಿ ಎಂದು ನಾನು ತಮ್ಮ ಮೂಲಕ ಹೇಳಬಯಸುತ್ತೇನೆ.

**ಸಭಾಪತಿಯವರು:-** ಆಯಿತು. ಮಾನ್ಯ ಶಶೀಲ್ ಜಿ. ನಮೋಶಿಯವರೇ ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಶಶೀಲ್ ಜಿ.** ನಮೋಶಿ:- ಮೂರು ವರ್ಷ ಅವಕಾಶ ಕೊಡಿ. ಮೂರು ವರ್ಷ ಅವಕಾಶವಾದ ಮೇಲೆ ಇದನ್ನು ಮಾಡೋಣ.

**ಸಭಾಪತಿಯವರು:-** ಶ್ರೀಮತಿ ತೇಜಸ್ವಿನಿ ಗೌಡರವರು ಮಾತನಾಡಿದ ಮೇಲೆ ಮಾನ್ಯ ನಾರಾಯಣಸ್ವಾಮಿಯವರೇ, ತಾವು ಮಾತನಾಡಿ.

**ಡಾ: ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸರಿಯಾಗಿ ಹೇಳಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ಸ್ವಯಂ ಪ್ರೇರಣೆಯಿಂದ 'Right to Life' ಅನ್ನು ಸಂವಿಧಾನ ಗ್ಯಾರಂಟಿ ಮಾಡಿದೆ. ಸಂವಿಧಾನ ನಮಗೆ ಜೀವದ ಹಕ್ಕನ್ನು ಕೊಟ್ಟಿದೆ. ಹಾಗೇ 'Right to Education' ಕೂಡ ಕೊಟ್ಟಿದೆ. ಇಲ್ಲಿ intention ಒಳ್ಳೆಯದು ಇದೆ. ಕಾನೂನು ಅಧಿಕಾರಿಗಳು, Executive ಮಾಡಿರತಕ್ಕಂತಹ intention is good. ಆದರೆ application and interpretation ತಪ್ಪಾಗಿದೆ. ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಗಳೆಲ್ಲಾ ಹಿಂದೆ ವಿಶಾಲವಾದ ಜಾಗಗಳಲ್ಲಿ ನೆಲಮಹಡಿ, ಮೊದಲನೇ ಮಹಡಿ ಇದ್ದರೆ great. ಸುತ್ತಮುತ್ತಲೂ ಕೂಡ ವಿಶಾಲವಾದ ಜಾಗ ಇದ್ದುದರಿಂದ ಆ ರೀತಿಯ ಅವಗಢಗಳು ಸಂಭವಿಸಿದಾಗ, ಬೆಂಕಿ ನಂದಿಸುವಂತಹದ್ದಕ್ಕೆ ಜಾಗ ಇತ್ತು. ಇವತ್ತೂ ತುಂಬಾ ಜಾಗ ಇದೆ. ಖಾಸಗಿ ಶಿಕ್ಷಣ ಸಂಸ್ಥೆಗಳೇನಾಗಿದೆ ಎಂದರೆ, ಇದನ್ನು ಯಾರು blame ಮಾಡಬೇಕು. ಇವತ್ತು ಸಕಾಲ ಬಂದಿದೆ. ಇದಕ್ಕೆಲ್ಲಾ ಕಾರಣ, ಶಾಲೆ ಕಟ್ಟುವಾಗ, ಯಾವ ರೀತಿ ಅಪಾರ್ಟ್‌ಮೆಂಟ್‌ಗಳು ಮತ್ತು ಮನೆಗಳನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟುವಾಗ, ಕಾನೂನುಗಳನ್ನು compromise ಮಾಡಿಕೊಳ್ಳುತ್ತಾರೆ. ಅದೇ ತರಹ ಬಿಲ್ಡಿಂಗ್‌ಗಳನ್ನು ಮತ್ತು high-rise building ಮಾಡುವಾಗ, ಕಡಿಮೆ ಜಾಗ ಇರುತ್ತದೆ. ಒಂದು ಒಳ್ಳೆಯ ಶಾಲೆ ಮಾಡುವ ಸದುದ್ದೇಶ ಇರುತ್ತದೆ. ಅಸಹಾಯಕತೆಯಿಂದ ಒಳ್ಳೆಯ ಶಾಲೆಯನ್ನು ಕಟ್ಟಿರುತ್ತಾರೆ. ಹೌದು, ಈಗ short circuit ನಿಂದ ಬೆಂಕಿ ಬರುತ್ತದೆ. ವಿದ್ಯುತ್ ಇಲಾಖೆಯಲ್ಲದೇ ಇನ್ನೂ ಎಲ್ಲಿಂದ ತೆಗೆದುಕೊಳ್ಳಬೇಕು. ನ್ಯಾಯಾಲಯದಲ್ಲಿ ವಿಚಾರಣೆಯಾದಾಗ, court of law ನಲ್ಲಿ ನಿಂತಾಗ, ಯಾವ ಅಧಿಕಾರಿಗಳು ಕೊಟ್ಟಿರುತ್ತಾರೋ, ಜೈಲಿಗೆ ಯಾರಾದರೂ ಕಳುಹಿಸಲೇಬೇಕು, ಕೊಡುತ್ತಾರೆ. ಆದರೆ intention is good. Application ಅಂತಾ ಬಂದಾಗ, harass ಮಾಡುವುದಕ್ಕೆ ಅದನ್ನು ಬಳಸಿಕೊಳ್ಳಬಾರದು. Inspection ಗೆ ಹೋದಾಗ, ಗುಣಮಟ್ಟ compromise ಮಾಡಿಕೊಳ್ಳಬಾರದು. ಸರ್ಕಾರಿ ಶಾಲೆಗಳಿಗೂ, ಎಲ್ಲದಕ್ಕೂ ಒಟ್ಟಿಗೆ application ಮಾಡುವುದು ಒಳ್ಳೆಯದು. ಮಕ್ಕಳ ಸುರಕ್ಷತೆಯ ಜೊತೆ compromise ಮಾಡಿಕೊಳ್ಳುವುದು ಸರಿಯಲ್ಲ. ಯಾವುದೇ ಕಾರಣಕ್ಕೂ ಮಕ್ಕಳಿಗೆ ಪರೀಕ್ಷೆಗೆ ಅವಕಾಶ ಕೊಡಲ್ಲ ಅನ್ನುವುದನ್ನು ಈ ತತ್‌ಕ್ಷಣದಿಂದಲೇ, ಸದನದಲ್ಲಿ ಮಾನ್ಯ ಸಚಿವರು ಒಂದು ವಾಗ್ದಾನವನ್ನು ಮಾಡಬೇಕು. ಮಕ್ಕಳಿಗೆ ಪರೀಕ್ಷೆಗೆ ಅವಕಾಶ ಕೊಡಬೇಕು. ಎರಡನೆಯದಾಗಿ, ಶಿಕ್ಷಕರಿಗೆ ಸಂಬಳವನ್ನು ಕೊಡಬೇಕು. ಅವೆರಡರಲ್ಲಿ compromise ಇಲ್ಲ. ಇಡೀ ಸದನದಲ್ಲಿ ಈ ವಿಚಾರದಲ್ಲಿ ನಾವು ಅಗ್ರಹ ಮಾಡುತ್ತಿದ್ದೇವೆ. ಅದೇ ತರಹ ಬಿಲ್ಡಿಂಗ್ ಕಾಲ ಕಾಲಕ್ಕೆ ಅವಕಾಶವನ್ನು ಕೊಟ್ಟು, ಬಿಲ್ಡಿಂಗ್‌ಗಳ ಸುರಕ್ಷತೆ ಮತ್ತು ಇವತ್ತಿನ ದಿವಸ ಬೆಂಕಿ ಸುರಕ್ಷತೆಗಳ ಬಗ್ಗೆ modern equipment ಬಂದಿದೆ. ಯಾವುದು ಸದುದ್ದೇಶದಿಂದ ಕಾನೂನು ಕೂಡಿದೆ, ಅದನ್ನು ಒಳ್ಳೆಯ ರೀತಿಯಲ್ಲಿ application ಮಾಡುವುದಕ್ಕೆ ಮತ್ತು ತಪ್ಪು ಮಾಡಿದಂತಹ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸುವುದಕ್ಕೆ ಆ ಇಲಾಖೆಗಳಲ್ಲಿ ಕಾನೂನು ತರಬೇಕು. ಖಾಸಗಿ ಶಾಲೆಯವರು ಒಂದು ಕಠಿಣ ಪರಿಸ್ಥಿತಿ ಎಂದರೆ ಕೋವಿಡ್‌ನಲ್ಲಿಯೂ ಮಕ್ಕಳು ಬಾರದೇ ತುಂಬಾ ವಿಚಿತ್ರವಾದಂತಹ ಸನ್ನಿವೇಶದಲ್ಲಿ ಅವರು ಆಸ್ತಿತ್ವಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಅವರನ್ನು discourage ಮಾಡದ ಹಾಗೇ, ಅವರಿಗೆ ಸಂಪೂರ್ಣ ರಕ್ಷಣೆಯನ್ನು ತಾವು ಈ ಪೀಠದ ಮೂಲಕ ಸರ್ಕಾರದಿಂದ ಕೊಡಿಸಬೇಕೆಂದು ನಾನು ತಮ್ಮ ಮೂಲಕ ಅಗ್ರಹ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಮಾತನಾಡಿ. ಇದೇ ಕೊನೆ ಬಾರಿ. ಯಾರೂ ಮಾತನಾಡಬೇಡಿ.

**ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನಾನು ಕೇವಲ ಐದು ನಿಮಿಷ ಮಾತ್ರ ತೆಗೆದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರೆಲ್ಲರೂ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಎಲ್ಲಾ ವಿಚಾರಗಳನ್ನು ಒಪ್ಪುತ್ತೇನೆ. ನಾನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಕುಂಬಕೋಣಂನ ಖಾಸಗಿ ಶಾಲೆಯಲ್ಲಿ ಬೆಂಕಿ ಅವಗಢ ಸಂಭವಿಸಿದ್ದು. ಆದರೆ ಸರ್ಕಾರಿ ಶಾಲೆಯಲ್ಲ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ನಾನು ಮಾಹಿತಿಯನ್ನು correction ಗೆ ಹೇಳುತ್ತಿದ್ದೇನೆ. ಎರಡನೆಯದಾಗಿ, 2009 ರಿಂದ 2019ರ ತನಕ ಏಕೆ ಸುಮ್ಮನಿದ್ದರು ಎಂಬುದರ ಬಗ್ಗೆ ನಾನು ಕೆದುಕುವುದಕ್ಕೆ ಹೋಗುವುದಿಲ್ಲ. 2019 ರಲ್ಲಿ ಅದರ ಬಗ್ಗೆ ಕೂಲಂಕಷವಾಗಿ ಆದೇಶ ಮಾಡಿಸಿ, ಸುರಕ್ಷತೆಯ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳ ಬಗ್ಗೆ ನಮ್ಮ ಸಹಮತ ಇದೆ. ಮಕ್ಕಳ ಸುರಕ್ಷತೆ ಬಹಳ ಮುಖ್ಯ. ಮೂರನೆಯದಾಗಿ, ಕರ್ನಾಟಕ ರಾಜ್ಯದಲ್ಲಿ ಒಂದು ಕೋಟಿ ಹದಿನೈದು ಲಕ್ಷ ಜನ ಮಕ್ಕಳು ಓದುತ್ತಿದ್ದಾರೆ. ಅದರಲ್ಲಿ ಐವತ್ತೈದು ಲಕ್ಷ ಜನ ಮಕ್ಕಳು ಖಾಸಗೀ ಶಾಲೆಯಲ್ಲಿ ಓದುತ್ತಿದ್ದಾರೆ. ಆರವತ್ತೈದು ಲಕ್ಷ ಜನ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರೆ.

(ಮುಂದು)

(1087)14.12.2021/5.50/ಎಂ.ಎಂ-ಎ.ಕೆ

(ಸಭಾಪತಿಯವರ ಉಪಸ್ಥಿತಿ)

**ಡಾ: ವೈ.ಎ. ನಾರಾಯಣಸ್ವಾಮಿ (ಮುಂದು):-**

ಎಲ್ಲಾ ಮಕ್ಕಳ ಸುರಕ್ಷತೆ ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಭಾವಿಸುತ್ತೇನೆ. ಆದರೆ ಕಾನೂನು ತಂದಾಗ ಖಾಸಗಿ ಶಾಲೆಗೆ ಬೇರೆ, ಸರ್ಕಾರಿ ಶಾಲೆಗೆ ಬೇರೆ ಎನ್ನುವ ವಿಚಾರ ಇಲ್ಲಿ ಅನಗತ್ಯ. ಎಲ್ಲರಿಗೂ ಸಮಾನವಾದ ವಿಚಾರವೊಂದನ್ನು ತಮಗೆ ರೂಪಿಸಬೇಕಾಗಿದೆ. ತಮಗೆ ನನ್ನದೊಂದು ಮನವಿ. ಇದನ್ನು ಏನು ಮಾನ್ಯತೆ ಮಾಡುವುದಿಲ್ಲ, fire safety, building safety ತನ್ನಿ ಎಂದು ಕಿರುಕುಳ ಕೊಡುವುದನ್ನು ತಕ್ಷಣದಿಂದಲೇ ನಿಲ್ಲಿಸಬೇಕೆಂದು ಮಾನ್ಯ ಸಚಿವರಿಗೆ ಮನವಿ ಮಾಡುತ್ತಿದ್ದೇನೆ. ಮಾನ್ಯ ಸಚಿವರು ಭಾರಿ ಪ್ರಾಮಾಣಿಕವಾಗಿ ಈ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಇಲಾಖೆಯಲ್ಲಿ ಅಷ್ಟೊಂದು ಪ್ರಾಮಾಣಿಕತೆ ಕಾಣುತ್ತಿಲ್ಲ. ಮಾನ್ಯತೆ ನವೀಕರಣ ವಿಚಾರದಲ್ಲಿ ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಹಾಗೂ ಸುಮಾರು ಜನರು ಹೇಳಿದ ಹಾಗೆ ಬಹಳಷ್ಟು ಗೊಂದಲ ಮತ್ತು ಭ್ರಷ್ಟಾಚಾರದ ವ್ಯವಸ್ಥೆ ಅವ್ಯಾಹತವಾಗಿ ನಡೆಯುತ್ತಿದೆ. ಅದರ ಬಗ್ಗೆ ಇನ್ನೊಂದು ಸಲ ಚರ್ಚೆ ಮಾಡೋಣ. ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಅದೆಲ್ಲಾ ವಿಚಾರಗಳನ್ನು ಚರ್ಚೆ ಮಾಡೋಣ. ಆದರೆ ಇವತ್ತು ನನ್ನ ವಿನಂತಿ ಇಷ್ಟೇ. ಮೊದಲನೆಯದಾಗಿ ಯಾರ್ಯಾರು ಮಾನ್ಯತೆ ನವೀಕರಣ ವ್ಯವಸ್ಥೆಯಲ್ಲಿ ಸಂಬಳವನ್ನು ನಿಲ್ಲಿಸಿದ್ದಾರೆ ಆ ಸಂಬಳವನ್ನು ತಕ್ಷಣದಿಂದಲೇ ಬಿಡುಗಡೆ ಮಾಡಬೇಕೆನ್ನುವ ವಾಗ್ದಾನವನ್ನು ನಮ್ಮ ಸಹೋದರಿಯವರು ವಿನಂತಿ ಮಾಡಿದ ಹಾಗೆ ಮಾನ್ಯ ಸಚಿವರಾದ ಬಿ.ಸಿ. ನಾಗೇಶ್‌ರವರು ಹೇಳಬೇಕು ಇದು ಮೊದಲನೆಯದು. ಮಾನ್ಯ ಸಂಕನೂರರವರ ನೇತೃತ್ವದ ಸಮಿತಿ ಕೊಟ್ಟಿರುವ ವರದಿಯನ್ನು ತಕ್ಷಣವೇ ಒಪ್ಪಿಕೊಳ್ಳಬೇಕು ಎನ್ನುವುದು ಎರಡನೇ ವಿಚಾರ. ನಾನು ಆ ಸಮಿತಿಯ ಸದಸ್ಯನಾಗಿದ್ದೇನೆ. ಬಹಳಷ್ಟು ಸಭೆಗಳನ್ನು ಮಾಡಿ ಎಲ್ಲರೂ ಸೇರಿ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಲ್ಲರೂ ಅವರ ಅನುಭವಗಳನ್ನು ಧಾರೆಯೆರೆದು ಬಹಳ ಚೆನ್ನಾಗಿ ವರದಿಯನ್ನು ತಯಾರು ಮಾಡಿದ್ದೇವೆ. ಇವತ್ತು ಮಾನ್ಯ ಸಂಕನೂರರವರು ಸದನದಲ್ಲಿಲ್ಲ. ಅವರಿದ್ದರೆ ಚೆನ್ನಾಗಿ ಹೇಳುತ್ತಿದ್ದರು. ಆದ್ದರಿಂದ ಆ ವರದಿಯನ್ನು ಒಪ್ಪಿಕೊಳ್ಳಬೇಕು. ಆ ವರದಿಯನ್ನು ಒಪ್ಪಿಕೊಳ್ಳುವವರೆಗೆ ಯಥಾಸ್ಥಿತಿಯನ್ನು ಕಾಪಾಡಬೇಕು. ಮಾನ್ಯತೆ ನವೀಕರಣ ಇರಬಹುದು, ಆದೇಶದಲ್ಲಿ ಒಂದು ವರ್ಷ ಎಂದು ಎಲ್ಲಿಯೂ ಹೇಳಿಲ್ಲ. ಆದರೆ ಇಲಾಖೆಯ ಅಧಿಕಾರಿಗಳು ತಮಗಿಷ್ಟ ಬಂದ ಹಾಗೆ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಒಂದು, ಎರಡು, ಮೂರು ವರ್ಷ ಎಂದು ಹೇಳಿಕೊಂಡು ಹೋಗುತ್ತಾರೆ. ಅದಕ್ಕೆ ಕಡಿವಾಣ ಹಾಕಬೇಕು. ಸಂಬಳವನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬಾರದು. ವರದಿಯನ್ನು ಒಪ್ಪಿಕೊಳ್ಳಬೇಕು, ಮುಂದಿನ ದಿನಮಾನಗಳಲ್ಲಿ ಸರಳೀಕರಣ ಮಾಡಿ ಸುರಕ್ಷತೆ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕು, ಮಕ್ಕಳಿಗೆ ಒಳ್ಳೆಯ ರೀತಿಯಲ್ಲಿ ಪರೀಕ್ಷೆಯನ್ನು ನಡೆಸಬೇಕೆನ್ನುವುದು ನನ್ನ ಆಗ್ರಹವಾಗಿದೆ.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಅನೇಕ ಸದಸ್ಯರು ಮಾಡಿದಂತಹ ಅವರ ಮನಸ್ಸಿನಲ್ಲಿರುವ ಆತಂಕಗಳು ಅರ್ಥವಾಗಿವೆ. ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ತಂದಂತಹ ಈ ಸುತ್ತೋಲೆಗಳು ಖಾಸಗಿ ಶಾಲೆ ಮಾತ್ರವಲ್ಲ, ಎಲ್ಲಾ ಶಾಲೆಗಳೂ ಮುಂದಿನ ದಿನಗಳಲ್ಲಿ ತೊಂದರೆಗೊಳಗಾಗುತ್ತವೆ ಎನ್ನುವುದೂ ಸಹ ನಮಗೆ ಗೊತ್ತಿದೆ. ಆದರೆ ಈ ಸುತ್ತೋಲೆ ಇವತ್ತೊಂದು ದಿನದ್ದಲ್ಲ. 2014, 2016 ಮತ್ತು 2017ರಲ್ಲಿಯೂ ಕೊಟ್ಟಿದ್ದಾರೆ. ಅದೇ ರೀತಿ ಸರ್ಕಾರ ಸುಪ್ರೀಂ ಕೋರ್ಟ್ ಮುಂದೆ ಅಫಿಡವಿಟ್ ಕೂಡ ಹಾಕಿದೆ. ಆಗ ಅದ್ಯಾವ ಸರ್ಕಾರ ಇತ್ತೋ, ಅದು ಅಫಿಡವಿಟ್ ಹಾಕಿ ತಾವು ಖಂಡಿತವಾಗಿಯೂ ಸುಪ್ರೀಂ ಕೋರ್ಟ್ ಹೇಳಿರುವಂತಹ ಎಲ್ಲಾ ಗೈಡ್‌ಲೈನ್ಸ್‌ಗಳನ್ನೂ ನಾವು ಫಾಲೋ ಮಾಡುತ್ತೇವೆ ಎಂದು ಹೇಳಿದೆ. 2005ರಲ್ಲಿ ಕಟ್ಟಡ ಹೇಗಿರಬೇಕು ಎನ್ನುವುದನ್ನು ಸಹ ಅವತ್ತಿನ ಸರ್ಕಾರ ತಂದಿತು. ಅವತ್ತೇ 2005ರ ಕಟ್ಟಡ ನಿಯಮಗಳಲ್ಲಿಯೇ ಇದನ್ನೆಲ್ಲಾ ಹೇಳಿದೆ. ಅದನ್ನು ನಾವೇ ಇಲ್ಲಿ ಒಪ್ಪಿಕೊಂಡಿದ್ದೇವೆ. ಅವತ್ತು ಯಾವ ಸರ್ಕಾರ ಇತ್ತು, ಯಾರು ಶಿಕ್ಷಣ ಸಚಿವರಾಗಿದ್ದರು ಅದನ್ನು ನಾನು ಚರ್ಚೆ ಮಾಡುತ್ತಿಲ್ಲ. 2005ರಲ್ಲಿ ಕಟ್ಟಡ ನಿಯಮಗಳ ಪ್ರಕಾರ ಶಾಲೆಗಳಲ್ಲಿ ಏನೇನಿರಬೇಕು ಎಂಬುದನ್ನು ಸ್ಪಷ್ಟವಾಗಿ ಓದುತ್ತೇನೆ. ಇವತ್ತು 2021ರಲ್ಲಿ ಕುಳಿತುಕೊಂಡು ನಾವು ಮಾತನಾಡುತ್ತಿದ್ದೇವೆ. 2005ರ ನಿಯಮದಲ್ಲಿ ಶಾಲೆಗಳಿಗೆ ಅಗತ್ಯವಾದ ಗಾಳಿ, ಬೆಳಕು ಇರುವಂತೆ ಮಾರ್ಪಡಿಸಿಕೊಳ್ಳುವುದು, National Building Code, 2005 ರಂತೆ ವಿದ್ಯಾರ್ಥಿಗಳು ತರಗತಿಯಿಂದ ಮತ್ತು ಶಾಲೆಯಿಂದ ಹೊರ ಹೋಗಲು ವಿಶಾಲವಾದ ಅವಕಾಶವನ್ನು ಹೊಂದಿರಬೇಕು. ಇದು 2021ರಲ್ಲಿ ಕೊಟ್ಟಿರುವುದಲ್ಲ. 2005ರಲ್ಲಿ ಮಾಡಿರುವಂತಹ ಕಟ್ಟಡ ನಿಯಮಗಳಲ್ಲಿ ತಂದಿದೆ, ಅದನ್ನು ಪಾಸ್ ಮಾಡಿದ್ದೇವೆ, ಅದಕ್ಕೆ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಬೇಕು. ಇದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಗಳು ಖಾಸಗಿ ಶಾಲೆಗಳ ಕತ್ತು ಹಿಡಿಯುವುದಕ್ಕೋಸ್ಕರ ತಂದಿತ್ತೇ? ಅವತ್ತಿನ ಸರ್ಕಾರಗಳು ಶಾಲೆಗಳನ್ನೆಲ್ಲಾ ಕ್ಲೋಸ್ ಮಾಡಿಸುವುದಕ್ಕೋಸ್ಕರ ತಂದಿತ್ತಾ? ಎಲ್ಲಾ ವಿದ್ಯಾರ್ಥಿಗಳು ಓದದೇ ಇರುವುದಕ್ಕೆ ಈ ನಿಯಮಗಳನ್ನು ತಂದಿತ್ತೇ? ತರುವಂತಹ ನಿಯಮಗಳನ್ನು ಆಗಿನ ಸರ್ಕಾರಗಳು ಅವತ್ತಿನ ಅವಶ್ಯಕತೆಗಳಿಗೆ; ಕೆಟ್ಟ ವಿಷಯಗಳಿಗೋಸ್ಕರ ತಂದಿದ್ದಾರೆ ಎಂದು ನಾನು ಹೇಳುವುದಿಲ್ಲ. ಒಳ್ಳೆಯ ಉದ್ದೇಶಗಳನ್ನಿಟ್ಟುಕೊಂಡೇ ತಂದಿದ್ದಾರೆ. 2005ರಲ್ಲಿ ಮಾಡಿದ್ದು, ಪ್ರತಿ ಸರ್ಕಾರ ಒಂದೊಂದು ವರ್ಷದಲ್ಲಿ ಒಂದೊಂದು ನಿಯಮವನ್ನು ಕೊಟ್ಟುಕೊಂಡು ಪಾಲಿಸಿದ್ದರೆ 2009ರಲ್ಲಿ ಸುಪ್ರೀಂ ಕೋರ್ಟ್ ಹಸ್ತಕ್ಷೇಪ ಮಾಡುತ್ತಿತ್ತೇ? 2005ರಲ್ಲಿ ನಾವೇ ತಂದಿರುವುದು, 2009ರಲ್ಲಿ ಸುಪ್ರೀಂ ಕೋರ್ಟ್ ಆದೇಶ ನೀಡಿರುವುದು. 2014ರಲ್ಲಿ ಇಲ್ಲಿಯ ಸರ್ಕಾರಗಳೇ ಸುಪ್ರೀಂ ಕೋರ್ಟ್ ಏನು ಹೇಳಿದೆಯೋ ಅವೆಲ್ಲವನ್ನೂ ನಾವು ಪಾಲಿಸುತ್ತೇವೆ ಎಂದು ಹೇಳಿವೆ. ನಂತರ 2016ರಲ್ಲಿ, 2017ರಲ್ಲಿ ಸುತ್ತೋಲೆಗಳನ್ನು ಕೊಟ್ಟಿದ್ದಾರೆ. ಅದಾದ ಮೇಲೆ ಅಫಿಡವಿಟ್‌ನಲ್ಲಿ ಒಂದು ವರ್ಷ ನಾವು ಎಲ್ಲಾ ಶಾಲೆಗಳಿಗೂ ಟೈಂ ಕೊಟ್ಟು ಇದನ್ನು ಮಾಡುತ್ತೇವೆ ಎಂದು 2018ರಲ್ಲಿ ಹೇಳಿತು. ಇವೆಲ್ಲಾ ಸುತ್ತೋಲೆಗಳೂ ನನಗೆ ಅರ್ಥವಾಗುತ್ತದೆ. ಎಲ್ಲಾ ಶಾಸಕರೂ actual ground reality ನೋಡಿದರೆ ಇದನ್ನು ಮಾಡುವುದು ತುಂಬಾ ಕಷ್ಟವಿದೆ. ನಿಜವಾಗಲೂ ಶಾಲೆಗಳನ್ನು ಕ್ಲೋಸ್ ಮಾಡಬೇಕಾದಂತಹ ಸ್ಥಿತಿ ಬರುತ್ತದೆ ಎಂದು ಹೇಳಿದರು. ಇದಕ್ಕೆ ನಾವೇ ಕುಳಿತು ಏನಾದರೂ ಪರಿಹಾರವನ್ನು ಕಂಡುಕೊಳ್ಳಬೇಕು. ಸುಪ್ರೀಂ ಕೋರ್ಟ್‌ಗಿಂತ ನಾವ್ಯಾರೂ ದೊಡ್ಡವರಲ್ಲ. ವಿರೋಧಪಕ್ಷದ ನಾಯಕರೂ ಹೇಳಿದರು. ಸುಪ್ರೀಂ ಕೋರ್ಟ್‌ನಲ್ಲಿ ಆಗಿರುವಂತಹ ನಿಯಮಗಳನ್ನು ಹೇಗೆ ನಿಯಮದೊಳಗೆ ತರಬೇಕೆಂದು ಮಾನ್ಯ ಸಂಕನೂರ ಕಮಿಟಿ ಸಹ ಮಾಡಿತ್ತು. ಸಂಕನೂರ ಕಮಿಟಿಯ ನಿಯಮಗಳನ್ನು ಇಲಾಖೆಗೆ ಕಳುಹಿಸಲಾಗಿತ್ತು. ಮುಖ್ಯಮಂತ್ರಿಯವರು ಸಹ ಎಲ್ಲರನ್ನೂ ಕರೆದು ಒಂದು ಸಭೆ ಮಾಡಿ ಇದಕ್ಕೆ ಬೇಕಾದಂತಹ ನಿಯಮಗಳನ್ನು ತರೋಣವೆಂದು ಹೇಳಿದ್ದರು. ಈ ಮಧ್ಯೆ ಚುನಾವಣೆ, ನೀತಿ ಸಂಹಿತೆ ಎಲ್ಲಾ ಬಂದು ಅದನ್ನು ಮಾಡುವುದಕ್ಕಾಗಿಲ್ಲ. ಖಂಡಿತವಾಗಿಯೂ ಸಹ ತಮ್ಮೆಲ್ಲರ ಮಾತಿಗೆ ಒತ್ತನ್ನು ಕೊಟ್ಟು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ತಕ್ಷಣವೇ ಮಾನ್ಯ

**ಸಭಾಪತಿಯವರು:-** ಬಹಳ ಕಡೆ ಸಂಬಳವನ್ನು ಹಿಡಿದಿದ್ದಾರೆ.

ಸಂಕನೂರ ಕಮಿಟಿಯ ವರದಿಯನ್ನು ತೆಗೆದುಕೊಂಡು ನಂತರ ಹೊಸ ಸುತ್ತೋಲೆಗಳನ್ನು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:- (ಗೊಂದಲ)** ಸಂಬಳ ಹಿಡಿದಿದ್ದಾರೆ. **(ಗೊಂದಲ)** ಮಾನ್ಯ ಸಚಿವರಿಂದ ಒಂದು ಸ್ಪಷ್ಟೀಕರಣ ಬೇಕು.

ಹೊರಡಿಸುವ ಪ್ರಯತ್ನ ಮಾಡುತ್ತೇವೆ. ಇದುವರೆಗೂ ನಮ್ಮ ಸರ್ಕಾರ ಯಾವುದೇ ಶಿಕ್ಷಕರ ಸಂಬಳವನ್ನು ಹಿಡಿದಿಲ್ಲ. ಇದೊಂದು ಸುಳ್ಳು ಮಾಹಿತಿಯನ್ನು ಯಾರಿಂದ ಯಾರು ಹಬ್ಬಿಸುತ್ತಿದ್ದಾರೋ ಗೊತ್ತಿಲ್ಲ. ಇವತ್ತಿನವರೆಗೂ ನಾವು ಸಂಬಳವನ್ನು ಹಿಡಿದಿಲ್ಲ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಶ್ರೀ ಬಿ.ಸಿ.ನಾಗೇಶ್**:- ಮಾನ್ಯ ಸಭಾಪತಿಯವರೇ, ಸರ್ಕಾರದ ಸುತ್ತೋಲೆಯಲ್ಲಿರುವ 61 ಮಾರ್ಗಸೂಚಿಗಳ ಬಗ್ಗೆ ತುಂಬಾ ಜನ ಸದಸ್ಯರು ಮಾತನಾಡಿದರು. ಮಾನ್ಯ ಪುಟ್ಟಣ್ಣನವರು ತುಂಬಾ ಭಾವುಕರಾಗಿ ಸದರಿ ಸುತ್ತೋಲೆಯನ್ನು ಹರಿದು ಹಾಕಬೇಕೆಂದು ಹೇಳುತ್ತಿದ್ದರು. 61 ಮಾರ್ಗಸೂಚಿಗಳ ಸುತ್ತೋಲೆ ನಮ್ಮ ಸರ್ಕಾರ ಬಂದ ಮೇಲೆ ಆಗಿರುವುದಲ್ಲ, ಎರಡು ಮಾತ್ರ ಸೇರಿಸಲಾಗಿದೆ. ಅಗ್ನಿಗೆ ಮತ್ತು ಇನ್ನೊಂದಕ್ಕೆ ಸಂಬಂಧಿಸಿದ್ದು. ಇನ್ನು ಎಲ್ಲಾ ನಿಯಮಗಳೂ ಇವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, fire safety not only for schools, ಯಾರೇ high-rise building ಕಟ್ಟಿದರೆ fire safety measures adopt ಮಾಡಿಕೊಂಡೇ ಕಟ್ಟಬೇಕು. ನಾವು ಏನನ್ನು ಚರ್ಚೆ ಮಾಡೋಣ? ಮಾನ್ಯ ಸದಸ್ಯರಾದ ತೇಜಸ್ವಿನಿಗೌಡರವರು ಸರಿಯಾಗಿ ಹೇಳಿದರು. ಸರ್ಕಾರಿ ಶಾಲೆಗಳು ಒಂದೆರಡು ಮಹಡಿಗೆ ಸೀಮಿತವಾಗುತ್ತದೆ, ಆರು ಮೀಟರ್ ಒಳಗಡೆ ಬರುತ್ತದೆ, ಅಗ್ನಿ ಸುರಕ್ಷತೆಯನ್ನು ನಾವಲ್ಲಿ fire safety measures impose ಮಾಡುವ ಅಗತ್ಯವಿಲ್ಲ, ನಿರ್ಲಕ್ಷ್ಯ ಮಾಡಿರಬಹುದು. High-rise buildings ಕಟ್ಟಿದರೆ ನಾವಲ್ಲ ಯಾವ ಮುನಿಸಿಪಾಲಿಟಿಯಲ್ಲಿಯೂ ಲೈಸೆನ್ಸ್ ಕೊಡುವುದಿಲ್ಲ. ಇಷ್ಟು ಎತ್ತರಕ್ಕೆ ಸುತ್ತಲೂ ಇಷ್ಟು ಜಾಗ ಬಿಡಲೇಬೇಕು, ಫೈರ್ ಇಂಜಿನ್ ಓಡಾಡಬೇಕು, ಆಂಬುಲೆನ್ಸ್ ಓಡಾಡಬೇಕೆನ್ನುವುದು general law ಮತ್ತು planning law ಅದು. ಇದನ್ನು ಶಾಲೆಗೆ ಮಾಡಿರುವುದಲ್ಲ. ಸಿಟಿಯೊಳಗೆ ಶಾಲೆಗಳನ್ನು ಕಟ್ಟುತ್ತಾರೆ, ಆ ಕಡೆ ಈ ಕಡೆ ಹೋಗುವುದಕ್ಕೆ ಜಾಗವಿಲ್ಲ, ಅಚಾತುರ್ಯವಾದರೆ ವಾಹನಗಳನ್ನು ಮೂವ್ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ಬಿಟ್ಟರೆ ಯಾರ ಕತ್ತು ಹಿಸುಕುವುದಕ್ಕೋಸ್ಕರ ಅಂತೆಲ್ಲಾ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. It is not only schools, every building, every commercial establishment, every hospital, ಯಾರು ಇಷ್ಟು ಫ್ಲೋರ್ ಕಟ್ಟುತ್ತಾರೆಂದರೆ ಪಕ್ಕದಲ್ಲಿ ಇಷ್ಟು ಅಡಿ ಬಿಡಬೇಕೆಂದು ನಿಯಮವಿರುವುದು ಶಾಲೆಗಳಿಗಲ್ಲ ಎಲ್ಲಾ ಕಟ್ಟಡಗಳಿಗೂ ಇದೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಚಿವರೇ, ಇಲ್ಲೊಂದು ತೊಂದರೆಯಾಗಿರುವುದು ಎಂದರೆ existing schools ಗೂ problem...

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಾವು ಹೇಳುವುದೇನೆಂದರೆ, 15 ಮೀಟರ್‌ಗಿಂತ ಎತ್ತರ ಇರುವ ಕಟ್ಟಡಗಳಿಗೆ fire safety ಕೇಳಿ. ಇದಕ್ಕೆ ಕೇಳಬೇಡಿ ಎಂದು ಕೇಳುತ್ತಿದ್ದೇವೆ ಹೊರತು ಬೇರೇನಿಲ್ಲ. ಈ ಸರ್ಕಾರ introduce ಮಾಡಿದೆ ಎಂದು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಹೇಳುತ್ತಿಲ್ಲ. ಇದು ಕಾಮನ್ ಆಗಿ ಇದೆ. ಮಾನ್ಯ ಸಚಿವರೇ, ದಯಮಾಡಿ ತಮಗೆ ಕೈ ಮುಗಿಯುತ್ತೇನೆ, it is not the time for argument. ಇದಕ್ಕೊಂದು ಪರಿಹಾರವನ್ನು ಕಂಡುಹಿಡಿದು ಇದನ್ನು ಮುಗಿಸಿ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಂಕನೂರರವರು ಕೊಟ್ಟಿರುವ ವರದಿಯನ್ನಿಟ್ಟುಕೊಂಡು ಮುಖ್ಯಮಂತ್ರಿಯವರನ್ನು ಕೂರಿಸಿಕೊಂಡು ಮಾತನಾಡಿ ಸದ್ಯದಲ್ಲಿಯೇ ಅಧಿವೇಶನ ಮುಗಿಯುವುದರೊಳಗೇ ಹೊಸ ಸುತ್ತೋಲೆಯನ್ನು ಹೊರಡಿಸುತ್ತೇವೆ. ಯಾರಾದ್ದಾದರೂ ಸಂಬಳವನ್ನು ಹಿಡಿದಿದ್ದರೆ ಸಂಬಳವನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಮಕ್ಕಳ ಪರೀಕ್ಷೆಗೆ ಏನೂ ತೊಂದರೆಯಾಗದಂತೆ ಸರ್ಕಾರ ನೋಡಿಕೊಳ್ಳುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಸ್ಪಷ್ಟೀಕರಣವಿದೆ.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ, ಸಾಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲರ ಪರವಾಗಿ ಸೂಕ್ಷ್ಮವಾಗಿ, ಸರಳವಾಗಿ ಮತ್ತು ನೇರವಾಗಿ ಪ್ರಶ್ನೆ ಕೇಳಿಬಿಡುತ್ತೇನೆ. ಧನ್ಯವಾದವನ್ನು ಕೊನೆಯಲ್ಲಿ ಹೇಳುತ್ತೇನೆ. ಆತುರ ಬೇಡ. ನಾನು ಟೆನ್ಷನ್ ತೆಗೆದುಕೊಳ್ಳುವುದಿಲ್ಲ ಮತ್ತು rise ಆಗುವುದಿಲ್ಲ.

(ಮುಂದು)

(1088) 14-12-2021 KH/RN 6-00

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಮುಂದು):-**

ತಾವು ಮಾನ್ಯ ಸಂಕನೂರ್‌ರವರ ನೇತೃತ್ವದ ಸಮಿತಿ ವರದಿ ಬಗ್ಗೆ ತಮ್ಮ ಲಿಖಿತ ಉತ್ತರದಲ್ಲಿ ಏನೂ ಹೇಳಿಲ್ಲ. ಇದರಿಂದ ನನಗೆ ನೋವಾಗಿದೆ. ಏಕೆಂದರೆ, 15 ರಿಂದ 16 ಸಭೆಗಳನ್ನು ಮಾಡಿ ಇಡೀ ರಾಜ್ಯವನ್ನು ಸುತ್ತಾಡಿ, ಇದಕ್ಕೆ ಸಂಬಂಧಪಟ್ಟ ಎಲ್ಲರನ್ನೂ ಸಂಪರ್ಕಕ್ಕೆ ತೆಗೆದುಕೊಂಡು ಸಂವಾದ ಮಾಡಿ, ಸುಪ್ರೀಂ ಕೋರ್ಟ್ ಆದೇಶವನ್ನಿಟ್ಟುಕೊಂಡು ಈ ಕಮಿಟಿ ರಿಪೋರ್ಟ್ ಕೊಟ್ಟಿದ್ದೀರಿ. ತಾವು ಲಿಖಿತವಾಗಿ ಹೇಳದೇ ಇರುವುದಕ್ಕೆ ನೋವಾಗಿದೆ. ಏಕೆಂದರೆ, ಸರ್ಕಾರ ಈ ವರದಿಯನ್ನು ಸರಿಯಾಗಿ ಗಮನಿಸಿಲ್ಲವೆಂದು ಅಧಿಕಾರಿ ವರ್ಗದವರ ಮೇಲೆ ಮತ್ತು ತಮ್ಮ ಮೇಲೆ ಆಕ್ಷೇಪಣೆ ಇದೆ. ಎರಡನೆಯದು, 15 ಮೀಟರ್‌ವರೆಗೆ ಸುಪ್ರೀಂ ಕೋರ್ಟ್ ಏನೂ ಹೇಳಿಲ್ಲ. ಈಗ ಶೇಕಡಾ 99 ರಷ್ಟು ಕಟ್ಟಡಗಳು ಸಿಂಗಲ್ ಫ್ಲೋರ್‌ನಲ್ಲಿಯೇ ಇವೆ. ಈ ಕಟ್ಟಡಗಳು 15 ಮೀಟರ್ ವ್ಯಾಪ್ತಿಯೊಳಗೆ ಇವೆ. ಈಗ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಏನಾಗಿದೆಯೆಂದರೆ, ಇಡೀ ರಾಜ್ಯದಲ್ಲಿ ಎಲ್ಲರ ಮಾನ್ಯತೆ ತಡೆಹಿಡಿದಿದ್ದು, ಇದರಲ್ಲಿ 15 ಮೀಟರ್ ಒಳಗೆ ಇರುವವರನ್ನು ತಡೆಹಿಡಿದಿದ್ದಾರೆ. ಇದು ನಮಗೆ ಆತಂಕವಾಗಿದೆ. ಕೇವಲ ಶೇಕಡಾ 4 ರಿಂದ 5 ರಷ್ಟು 15 ಮೀಟರ್ ಮೇಲೆ ಇದೆ. 15 ಮೀಟರ್ ಒಳಗೆ ಸಿಂಗಲ್ ಫ್ಲೋರ್ ಶೇಕಡಾ 80 ರಷ್ಟು ಭಾಗ ಇವೆ ಎನ್ನುವುದನ್ನು ತಾವು ಗಮನಿಸಬೇಕು. ನಂತರ ಮಾನ್ಯತೆ ನವೀಕರಣಕ್ಕೂ fire safety measures ಗೂ ಏಕೆ ಸಂಬಂಧ? ಮಾನ್ಯ ಕಾನೂನು ಸಚಿವರು . . . .

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ ಸಾಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ತಾವು ಕೋಪ ಮಾಡಿಕೊಳ್ಳುವುದು ಬೇಡ. ನಾನು ನೇರವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. Charity begins at home. ಮೊದಲು ಸರ್ಕಾರಿ ಶಾಲೆಗಳನ್ನು ಮಾಡಿ. ತಾವು ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರೋ ಮಾಡಿ. ನಾವು ಕೂಡ ಮಾಡುತ್ತೇವೆ. ಖಾಸಗಿಯವರು ಮಾಡುತ್ತಾರೆ. ತಾವು ಸರ್ಕಾರದಿಂದ ಮೊದಲು ಪ್ರಾರಂಭ ಮಾಡಿ. ಸರ್ಕಾರದ ಕೈಯಿಂದಲೇ ಆಗಲಿಲ್ಲವೆಂದ ಮೇಲೆ ಸರ್ಕಾರಿ ಶಾಲಾ ಕಾಲೇಜುಗಳನ್ನು... why you insisting this only for aided and unaided schools? First, you stop that. ನಮಗೆ ಕೋಪ ಎಂದು ತಾವು ತಿಳಿದುಕೊಳ್ಳಬೇಡಿ. ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮಾಡುವುದಕ್ಕೆ ಆಗದೇ ಇರುವಾಗ ಆ ಬಡಪಾಯಿಗಳ ಮೇಲೆ ಏಕೆ ಇಷ್ಟು ಹಿಂಸೆ ಮಾಡುತ್ತೀರಿ? ತಾವು ಮಾಡಿಸಿ. ಸೇಫ್ಟಿ ಬೇಕು. ಮಕ್ಕಳ ಭವಿಷ್ಯ ಬೇಕು. ಅವರಿಗೆ ಸ್ವಲ್ಪ ಸಮಯ ಕೊಡಿ. ಅವರಿಗೆ ಕಾಲಾವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ ಒಂದು ನಿಮಿಷ. ಮಾನ್ಯ ಸಚಿವರೇ ಹೊಸದಾಗಿ ಕಟ್ಟುವಂತಹ ಬಿಲ್ಡಿಂಗ್‌ಗಳಿಗೆ ತಾವು ಷರತ್ತುಗಳನ್ನು ಹಾಕಿ. 30 ರಿಂದ 40 ವರ್ಷಗಳ ಹಿಂದೆ ಕಟ್ಟಿರುವಂತಹ ಬಿಲ್ಡಿಂಗ್‌ಗಳ ಸೇಫ್ಟಿಯನ್ನು ಅವರು ನೋಡಿಕೊಳ್ಳುತ್ತಿರುತ್ತಾರೆ. ಆ ರೀತಿ ಮಾಡಿ. ತಾವು ಕುಳಿತುಕೊಂಡು ಇದನ್ನು ಸರಿ ಮಾಡಿ. ಇದಕ್ಕೆ ಒಂದು ಸಭೆಯನ್ನು ಮಾಡಿ ಒಂದು conclusion ಗೆ ಬನ್ನಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅಷ್ಟು ಮಾಡಿಸಿ. ಧನ್ಯವಾದಗಳು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್ ಮುಂದೆ ಅಫಿಡವಿಟ್ ಹಾಕಿ ಇಲ್ಲಿಗೆ ಬಂದು ಉತ್ತರ ಕೊಡುವುದಕ್ಕೆ ಆಗುತ್ತದೆಯೇ?

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ರೀತಿ ಅಲ್ಲ. ತಾವು ಒಂದು ಫ್ಲೋರ್ ಇರುವವರಿಗೂ ನಿಲ್ಲಿಸಿದ್ದೀರಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, what is this going on? ಯಾರು ಅಫಿಡವಿಟ್ ಹಾಕುವಾಗ ಇದ್ದರು, ಯಾರು 2014-15 ಮತ್ತು 2016-17ನೇ ಸಾಲಿನಲ್ಲಿ ತೀರ್ಮಾನ ತೆಗೆದುಕೊಂಡರು, Who made them to file an affidavit? ಇದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ತಮ್ಮನ್ನು ಸುಪ್ರೀಂ ಕೋರ್ಟ್ ಸುಮ್ಮನೆ ಬಿಟ್ಟುಬಿಡುತ್ತದೆಯೇ?

**ಸಭಾಪತಿಯವರು:-** ಮಾನ್ಯ ಸಚಿವರೇ, ಸರಿ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಚಿವರೇ, you verify that affidavit. Affidavit ಏನು ಇದೆ ಎಂದು ನೋಡಿ ಸಭೆ ಕರೆಯಿರಿ. ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರು ತಪ್ಪು ತಿಳಿದುಕೊಳ್ಳಬಾರದು. Matter is before Supreme Court of India. ಅಫಿಡವಿಟ್ ಫೈಲ್ ಮಾಡುವಾಗ ಏನಾಗಿದೆ ಎಂದು ತರಿಸಿ ನೋಡಿ, ನಂತರ ತಮಗೆ ಉತ್ತರ ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ ಅಫಿಡವಿಟ್ ತರಿಸಿ ನೋಡಿ.

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ ಸರಿ ಬಿಡಿ. ಮಾನ್ಯ ಸಭಾನಾಯಕರೇ ನಿಯಮ 68 . . .

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಮಯ ಸಂಜೆ 6 ಗಂಟೆ ಆಯಿತು.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ನಾಳೆ ತೆಗೆದುಕೊಳ್ಳೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾಳೆ ಬೇಗ ಚರ್ಚೆಗೆ ತೆಗೆದುಕೊಳ್ಳಿ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವಂತಹ ಮಹತ್ವಪೂರ್ಣವಾದಂತಹ ವಿಷಯವಾಗಿದೆ. Rule.330 and Calling Attention ಕ್ಕಿಂತ ಮೊದಲು ಹಾಕಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾಳೆ ತೆಗೆದುಕೊಳ್ಳೋಣ ಬಿಡಿ. ಈಗ ಸಭೆಯನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 6 ಗಂಟೆ 03 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 15ನೇ ಡಿಸೆಂಬರ್ ಮಾಹೆ 2021ರ ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

**<><><>**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"